ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಅಕ್ಟೋಬರ್ 16, 2013 ಪುಟ 20 ರೂ. 14/-

ಸಂದರ್ಶನ
ಜಿ.ಹೆಚ್.ನಾಯಕ್

ಮುತ್ತು ನಂಬಿ
ದಿಗಂತ್ ಕೆಟ್ಟ

ಬ್ರಾಹ್ಮಣ್ಯ ಅಂದು-ಇಂದು

ವಿಶೇಷಾಂಕ
ಜೀವವಿರೋಧಿ ಬ್ರಾಹ್ಮಣ್ಯದ ವಿವಿಧ ಮುಖಗಳ ಕುರಿತು ವೈಚಾರಿಕ
ಬರಹಗಳು



ರಂಬಾಪುರಿ ಸ್ವಾಮಿಯ
ಅಡ್ಡಪಲ್ಲಕ್ಕಿ ಕಿತಾಪತಿ

ಕರಾವಳಿ
ಲೋಕಸಭೆ ಚುನಾವಣೆ ಟಿಕೆಟ್ ಕಾದಾಟ



ಗುಜರಿ ಮಾಫಿಯಾ
ರೌಡಿ ಇಮ್ರಾನ್
ಕೈವಾಡ

ನಟಿ ಸರಿತಾ ಜೈನ್
ಕೊಲೆಯಾ? ನಾಪತ್ತೆಯಾ?
ಸಿನಿಮಾ-ಮಾಫಿಯಾ ಕನೆಕ್ಷನ್





• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

ವಿಚಾರವಾದಿಗಳಿಗೆ 'ಬ್ರಾಹ್ಮಣ್ಯ'ದ ಬಹಿರಂಗ ಪತ್ರ

ಎಲೈ ವಿಚಾರವಾದಿ,

ಕಳೆದ ಹಲವು ಶತಮಾನಗಳಿಂದಲೂ ನನ್ನ ವಿರುದ್ಧ ಹೋರಾಡುತ್ತಿರುವ ನಿನ್ನ ಬಗ್ಗೆ ನನಗೆ ಬಹಳ ಆಶ್ಚರ್ಯವೆನಿಸುತ್ತದೆ.

ಯಾಕೆ ಗೊತ್ತಾ?

ಅದು ವೇದಗಳ ಕಾಲವಿರಲಿ, ಈಗಿನ ಎಲೆಕ್ಟ್ರಾನಿಕ್ ಯುಗವಾಗಲಿ ಯಾರೂ, ಎಂದಿಗೂ ನನ್ನ ವಿರುದ್ಧ ಪೂರ್ಣ ಗೆಲುವು ಸಾಧಿಸಲಾಗಿಲ್ಲ ಅದಕ್ಕೆ, ನನಗೆ ಇಂತದ್ದೇ ಎಂಬ ಆಕಾರವಿಲ್ಲ, ಸ್ವರೂಪವೂ ಇಲ್ಲ ನೀನೂ ಬದುಕುತ್ತಿರುವ, ಬದಲಾಯಿಸಲು ಹೆಣಗುತ್ತಿರುವ ಇದೇ ಸಮಾಜದಲ್ಲೇ ನಾನೂ ಇದ್ದೇನೆ. ನಾನು ನೀರಿನ ತರ. ಗಾಳಿಯ ತರ.... ಎಲ್ಲಿ ಬೇಕಾದರೂ, ಯಾವ ಆಕಾರಕ್ಕೆ ಬೇಕಾದರೂ ಒಗ್ಗಬಲ್ಲ, ಒಳ ನುಸುಳಬಲ್ಲ ಸರ್ವಾಂತರ್ಯಾಮಿ ಎಂಬುದು ನಿನಗೆ ಗೊತ್ತಿರಲಿ.

ಈ ಸಮಾಜದಲ್ಲಿ ನಾವಿಬ್ಬರೂ ಅಲ್ಪಸಂಖ್ಯಾತರೇ ನಿಜ. ಆದರೆ ಬಹುಸಂಖ್ಯಾತ ಜನ ತಲೆ ಬಾಗುವುದು ನನ್ನ ಇಚ್ಛೆಗಳಿಗೇನೆ ಹೌದಲ್ಲವೆ?

ನಾನು ಗಮನಿಸಿರುವಂತೆ ನಿನ್ನ ಸಮಸ್ಯೆ ಏನೆಂಬುದನ್ನು ಹೇಳುತ್ತೇನೆ ಕೇಳು.

ಈ ಸಮಾಜದಲ್ಲಿರುವ ಜಾತಿ, ಕಂದಾಚಾರ, ಮೂಢನಂಬಿಕೆ, ಶಾಸ್ತ್ರ ವಾಸ್ತು ಜ್ಯೋತಿಷ್ಯ ದೈವಭಕ್ತಿ ಹರಕೆ, ಮಡೇಸ್ನಾನ ಇವೆಲ್ಲವನ್ನೂ ಪಾಲಿಯುಸುವ ಮೊದಲ ಹಂತದಲ್ಲಿ ನಮಗೊಂದಿಷ್ಟು ಕಷ್ಟವಾಗಿತ್ತು. ಆಗ ಇದನ್ನು ವಿರೋಧಿಸಿದವರನ್ನು, ಪ್ರಶ್ನಿಸಿದವರನ್ನೆಲ್ಲಾ ನಾವು ಕೊಚ್ಚಿ ಕೊಂದೆವು ಅಥವಾ ಕ್ಷತ್ರೀಯ ಅರಸರಿಗೆ 'ದೈವತ್ವ'ದ ಸ್ಥಾನಕ್ಕೇರಿಸುವ ಆಮಿಷ ತೋರಿಸಿ ಅವರು ನಿಮ್ಮ ಪೂರ್ವಿಕರ ರುಂಡ ಚೆಂಡಾಡುವಂತೆ ನೋಡಿಕೊಂಡೆವು. ಆ ಹತ್ಯೆಗಳಿಗೆ ಸಮರ್ಥನೆ ಕೊಡಲು ಅವರನ್ನೆಲ್ಲಾ ರಾಕ್ಷಸ, ಅಸುರ ಎಂದು ಬಿಂಬಿಸಿದೆವು. ನೀವೆಲ್ಲಾ ಚಿಕ್ಕಂದಿನಲ್ಲಿ ಓದುತ್ತಿದ್ದ ಚಂದಮಾಮ, ಬಾಲಮಿತ್ರದಲ್ಲಿ ಆ ಕತೆಗಳಿರುತ್ತಿದ್ದವು. ಬಹುಶಃ ಅವನ್ನೆಲ್ಲಾ ನೀನೂ ಓದಿರುತ್ತಿ, ಹಾಗೂ ನಂಬಿರುತ್ತೀಯಾ ಅಲ್ಲವೆ?

ಆದರೆ ಅಕಸ್ಮಾತ್ತಾಗಿ ನೀನು ನಮ್ಮ ಸೆರೆಮನೆಯಿಂದ ಪಾರಾಗಿ ಈಗ ವಿಚಾರವಾದಿ ಎನಿಸಿಕೊಂಡಿದ್ದೀಯಾ ಅಷ್ಟೆ. ಆದರೆ ಉಳಿದವರೆಲ್ಲಾ ಮೇಲ್ಜಾತಿ-ಕೆಳಜಾತಿ, ಬಡವ-ಶ್ರೀಮಂತ, ವಿದ್ಯಾವಂತ-ಅವಿದ್ಯಾವಂತ, ನಗರ-ಗ್ರಾಮ, ವಿಜ್ಞಾನಿ-ಅಜ್ಞಾನಿ... ಹೀಗೆ ಯಾವ ಗುಂಪಿಗೆ ಸೇರಿದವರಾಗಿದ್ದರೂ ಈಗಲೂ ನನ್ನ ಹಿಡಿತದಲ್ಲೇ ಇದ್ದಾರೆ.

ಈ ನನ್ನ ಸೆರೆಮನೆಗೆ ಗೋಡೆಗಳಿಲ್ಲ, ಕಂಬಿಗಳೂ ಇಲ್ಲ, ಕಾವಲಿದೆಯಾದರೂ ಅದು ಹೊರನೋಟಕ್ಕೆ ಕಾಣಸಿಗುವಂತಾದ್ದಲ್ಲ, ಲಿಖಿತ ಕಾನೂನು ಅಂತ ಇಲ್ಲವಾದರೂ ಎಲ್ಲರೂ ತಾವೇ ಅತೀ ವಿಧೇಯರಾಗಿ ನನ್ನ ನಿಯಮವನ್ನೇ ಪಾಲಿಸುತ್ತಾರೆ. ಕೋಳಿ ಮೊದಲೋ ಮೊಟ್ಟೆ ಮೊದಲೋ ಎಂಬಂತೆ ನನ್ನಿಂದ ಜನರೋ, ಜನರಿಂದಾಗಿ ನಾನೋ ಎಂಬ ಜಿಜ್ಞಾಸೆ ಇಂದಿಗೂ ಬಗೆಹರಿದಿಲ್ಲ, ನೀವೆಲ್ಲಾ ಸದಾಕಾಲ ಅಲ್ಪಸಂಖ್ಯಾತರಾಗಿರುವಷ್ಟೂ ದಿನ ಇದು ಬಗೆ ಹರಿಯುವುದೂ ಇಲ್ಲ.

ತಮಾಷೆ ಏನು ಗೊತ್ತಾ?


ಜನರಿಗೆಲ್ಲಾ ನಾನು ಸದಾಕಾಲ ಕಿರುಕುಳ ಕೊಡುತ್ತಲೇ ಇದ್ದರೂ ಅವರು ನೆಮ್ಮದಿಯಾಗಿ ಬದುಕದಂತೆ ಮಾಡಿದಷ್ಟು ಅವರೆಲ್ಲಾ ಮರಳಿ ನನ್ನ ಹತ್ತಿರಕ್ಕೇ ಬರುತ್ತಿರುತ್ತಾರೆ.

ಹಾಗೆ ನನ್ನ ಹತ್ತಿರ ಪರಿಹಾರ ಹುಡುಕಿ ಬರುವವರು ಶ್ರೀಮಂತರು, ಉದ್ಯಮಿಗಳಾದರೆ ಅವರನ್ನು ಆರ್ಟ್ ಆಫ್ ಲೀವಿಂಗ್, ಅಸಾರಾಂ ಬಾಪು, ಬಾಬಾ ರಾಮ್‌ದೇವ್ ತರಹದವರ ಹತ್ತಿರ ಕಳಿಸುತ್ತೇನೆ. ಮಿಡಲ್ ಕ್ಲಾಸ್ ಗೂಬೆಗಳನ್ನು ಧರ್ಮಸ್ಥಳ, ಉಡುಪಿ, ಶೃಂಗೇರಿ, ಮಂತ್ರಾಲಯಕ್ಕೆ ಕಳಿಸಿ ಜೇಬು ಖಾಲಿ ಮಾಡಿಸುತ್ತೇನೆ. ಬಡವರಿಗಾದರೆ ಅಯ್ಯಪ್ಪ ಸ್ವಾಮಿ, ಓಂ ಶಕ್ತಿ ಮಾತೆ ಎಂಬ ಸ್ಕೀಂಗಳೂ ನನ್ನ ಹತ್ತಿರ ಇದೆ.

ಇಂಡಿಯಾ ದೇಶದ ಎಕಾನಮಿ ಬೆಳೆಯಲಿ ಇಲ್ಲಾ ಕುಸಿಯಲಿ ನನ್ನ ದಂಧೆ ಯಾವತ್ತೂ ಇಳಿಮುಖವಾದದ್ದೇ ಇಲ್ಲ ಗೊತ್ತೆ?

ನಿನಗೆ ಬೇಸರವಾಗಲ್ಲ ಅಂದರೆ ಇಲ್ಲೇ ಇನ್ನೊಂದು ಸತ್ಯವನ್ನು ಹೇಳುತ್ತೇನೆ ಕೇಳು,

ನಾನು ಶೂದ್ರರ ದೇವಸ್ಥಾನಗಳಿಗೆ ಹೋಗಲ್ಲ. ಮಲೈ ಮಹದೇಶ್ವರ ಸ್ವಾಮಿ, ಮಂಟೇಸ್ವಾಮಿ, ಮೈಲಾರಲಿಂಗ ಜಾತ್ರೆ, ನಾಯಕನ ಹಟ್ಟಿ ತಿಪ್ಪೇಸ್ವಾಮಿ ತರದ ಲಕ್ಷಾಂತರ ಜನ ಸೇರುವ ಧಾರ್ಮಿಕ ಸಮಾವೇಶಗಳಿಗೂ ಯಾವ ಬ್ರಾಹ್ಮಣನೂ ಹೋಗಲ್ಲ, ನಯಾ ಪೈಸೆ ದಕ್ಷಿಣೆಯನ್ನೂ ಹಾಕಲ್ಲ. ಆದರೆ ಈ ಶೂದ್ರರು ಧರ್ಮಸ್ಥಳ, ಉಡುಪಿ, ಶೃಂಗೇರಿ, ಮಂತ್ರಾಲಯಗಳಿಗೆ ಅಲ್ಲಿರುವ



'ದೇವರು' ತಮ್ಮದಲ್ಲದಿದ್ದರೂ ಭಯಭಕ್ತಿಯಿಂದ ಹೋಗಿ ಹಣ ಖರ್ಚು ಮಾಡಿ ನನ್ನನ್ನು ಸಾಕುತ್ತಿದ್ದಾರೆ.

ಮಜಾ ಅಂದರೆ,

ಸ್ಮಾರ್ತ ಬ್ರಾಹ್ಮಣರು ಉಡುಪಿಗೆ ಹೋಗಲ್ಲ, ಮಾಧ್ವರು ಶೃಂಗೇರಿಯತ್ತ ತಿರುಗಿಯೂ ನೋಡಲ್ಲ, ಅವರಿಗೆ ಒಬ್ಬರ ತಲೆ ಕಂಡರೆ ಇನ್ನೊಬ್ಬರಿಗೆ ಆಗಲ್ಲ, ಆದರೆ ಶೂದ್ರರೆಂತಾ ಮಂಕುದಿಣ್ಣೆಗಳೆಂದರೆ ಬ್ರಾಹ್ಮಣ್ಯವೇ ತುಂಬಿಕೊಂಡಿರುವ ಈ ನನ್ನ ಎಲ್ಲಾ ಸ್ಥಳಗಳಿಗೂ ಹೋಗಿಬರುತ್ತಾರೆ.

ನಾನು ಪ್ರತಿಯೊಬ್ಬರಿಗೂ ಪಾರಮಾರ್ಥಿಕ ಬೋಧನೆ ಮಾಡುತ್ತೇನೆ. ಆದರೆ ನಾನು ಮಾತ್ರ ನಿತ್ಯ ಲೌಕಿಕದಲ್ಲೇ ಇರುತ್ತೇನೆ. ಜನರಿಗೆ ಮೋಕ್ಷ, ಸ್ವರ್ಗ, ಪಾಪ-ಪುಣ್ಯಗಳ ಭಯ ಹುಟ್ಟಿಸುತ್ತೇನೆ. ಜನರ ಪ್ರತಿ ಸಮಸ್ಯೆಗೂ ನನ್ನಲ್ಲಿ ಪರಿಹಾರವಿದೆ ಎಂದು ನಂಬಿಸಿದ್ದೇನೆ.

ನನಗೆ ಮಾನಮರ್ಯಾದೆ ಎರಡೂ ಇಲ್ಲ, ಹಾಗಾಗಿ ಯಾವ್ಯಾವ ಪೂಜೆಗೆ ಎಷ್ಟು ದುಡ್ಡು ಕೊಡಬೇಕೆಂದು ದೇವಸ್ಥಾನಗಳಲ್ಲಿ ರೇಟ್‌ಕಾರ್ಡ್ ಬರೆಸಿ ಹಾಕಿಸಿದ್ದೇನೆ. ಬರೀ ಪಾರಮಾರ್ಥಿಕ ಚಿಂತನೆ. ಮಾಡಿಕೊಂಡಿರಬೇಕಾದ ನನಗೆ ದುಡ್ಡು, ಚಿನ್ನ, ಬೆಳ್ಳಿ, ಅಡ್ಡಪಲ್ಲಕ್ಕಿ ಉತ್ಸವ ಯಾಕೆ ಬೇಕು? ಅಂತ ಯಾವ ನನ್ಮಕ್ಕಳು ಪ್ರಶ್ನಿಸದ ಹಾಗೆ ಬುಲೆಟ್ ಪ್ರೂಫ್ ಗಾಡೀಲಿ ನಾನು ಸಾಗಿ ಹೋಗುತ್ತಿದ್ದೇನೆ.

ನಾನು ಮೊದಲು ಗೋಮಾಂಸ ತಿಂದೇ ಬೆಳೆದವನಾದರೂ ಈಗ ಅದೆಲ್ಲಾ ಕಟ್ಟು ಕತೆ ಅಂತ ಹೇಳಿ ನಂಬಿಸುತ್ತೇನೆ.

ಜನರಿಗೆ ಮಾತ್ರ ಮಾಂಸ ತಿನ್ನಬೇಡಿ, ಮೊಟ್ಟೆ ನುಂಗಬೇಡಿ ಅಂತ ಧೈರ್ಯವಾಗಿ ಹೇಳಬಲ್ಲೆ, ಅಷ್ಟೇ ಅಲ್ಲ, ಅದೆಲ್ಲ ಅಸಹ್ಯ ಎಂಬ ಕೀಳರಿಮೆ ಮೂಡಿಸಿ ಜನ ತಾವು ಮಾಂಸಾಹಾರಿಗಳೆಂದು ಹೇಳಿಕೊಳ್ಳಲೂ ಆಗದ ವಾತಾವರಣ ಸೃಷ್ಟಿಸಿದ್ದೇನೆ.

ನಾನು ನನ್ನ ಸುತ್ತ ಬಲವಾದ ಸೆಕ್ಯುರಿಟಿ ವ್ಯವಸ್ಥೆ ಕಟ್ಟಿಕೊಂಡಿದ್ದೇನೆ. ಸ್ಮಗ್ಲರ್‌ಗಳು, ಸಮಾಜದ್ರೋಹಿಗಳು, ಭ್ರಷ್ಟ ರಾಜಕಾರಣಿಗಳು, ಖದೀಮ ಅಧಿಕಾರಿಗಳು, ಲೂಟಿಕೋರ ಉದ್ಯಮಿಗಳು ತಮ್ಮ ಕರಾಳಮುಖ ರಕ್ಷಿಸಿಕೊಳ್ಳಲು ಧರ್ಮ ರಕ್ಷಣೆಯ ಮಾತಾಡುವಾಗ ನಾನು ಅಂತವರನ್ನು ದೂರ ತಳ್ಳಲ್ಲ, ಬದಲಾಗಿ ಆಶ್ರಯ ನೀಡಿ ಅವರು ಕದ್ದಿರುವ ಹಣದಲ್ಲಿ ನನ್ನ ಪಾಲು ತಗೊಂಡು ತಣ್ಣಗಿರ್ತೀನಿ. ಅವರು ಕದ್ದ ದುಡ್ಡಲ್ಲೇ ನನ್ನ ಮನೆ (ದೇವಸ್ಥಾನ) ಕಟ್ಟಿಸಿಕೊಳ್ತೀನಿ. ನನಗೆ ಪಾಪ-ಪುಣ್ಯ ಅನ್ವಯಿಸಲ್ಲ,

ಪತ್ರಪುಸ್ತಕಗಳಲ್ಲಿ ಯಾರಿಗೂ ನನ್ನ ಬಗ್ಗೆ ಅನುಮಾನ ಬರದ ರೀತಿಲಿ ಸುಳ್ಳು ಬರೆಸಿಕೊಳ್ತೀನಿ. ಮುಸ್ಲಿಮರು, ದಲಿತರು, ಅಮಾಯಕರ ಮೇಲೆ ಅನುಮಾನ ಬರುವಂತೆ ಪ್ರಚಾರ ನಡೆಸಲು ಕುಮ್ಮಕ್ಕು ಕೊಡುತ್ತೀನಿ.

ನಾನು ಭೂಮಾಲಿಕ ಶ್ರೀಮಂತರು, ಬಂಡವಾಳಶಾಹಿಗಳೊಂದಿಗೆ ಇರ್ತೀನಿ. ಅದೇತರ ಬಡವ-ಕಾರ್ಮಿಕರೊಂದಿಗೂ ಇರಬಲ್ಲೆ,

ನಾನು ಸಿಡುಬು, ಆಂಥ್ರಾಕ್ಸ್, ಹಂದಿ ಜ್ವರದ ವೈರಸ್‌ಗಿಂತ ಜಾಸ್ತಿ ವ್ಯಾಪಿಸಿದ್ದೇನೆ. ಆದರೆ ನನಗೆ ಇಂತದ್ದೇ ಅನ್ನುವ ಆಕಾರವಿಲ್ಲ, ನನಗೆ ಹೇಗೆ ಆಕಾರವಿಲ್ಲವೊ ಅದೇ ರೀತಿ ದಯೆ, ಕನಿಕರ ಮಾನವೀಯತೆಯೂ ಇಲ್ಲ.

ನಾನು ನಿರ್ಭಾವುಕ.

ನಾನು 'ಬ್ರಾಹ್ಮಣ್ಯ' ನಿಜ ಆದರೆ ಬ್ರಾಹ್ಮಣರನ್ನೂ ನಾನು ಕಿತ್ತು ತಿನ್ನದೆ ಬಿಡುವುದಿಲ್ಲ, ಬ್ರಾಹ್ಮಣ ಸಮುದಾಯದ ಮಹಿಳೆಯರನ್ನೂ ನಾನು ಶತಶತಮಾನಗಳಿಂದ ಹಿಂಸಿಸುತ್ತಾ ಶೋಷಿಸುತ್ತಾ ಬಂದಿದ್ದೇನೆ. ಬ್ರಾಹ್ಮಣ ಮಕ್ಕಳಿಗೆ ವಿಶ್ವ ಮಾನವ ಪ್ರಜ್ಞೆ ಬೆಳೆಯದ ಹಾಗೆ ಮಾಡುತ್ತಾ, ತಮ್ಮ ಜಾ[illegible] ಶ್ರೇಷ್ಠತೆಯ ಅಹಂಕಾರ ಬೆಳೆಸಿಕೊಳ್ಳುವಂತೆ ಪ್ರಚೋದಿಸುತ್ತೇನೆ. ನನ್ನ ವಿರುದ್ಧ ದನಿ ಎತ್ತುವವರು ಸ್ವತಃ ಬ್ರಾಹ್ಮಣರೇ ಆಗಿದ್ದರೂ ಅಂತವರನ್ನೇ ಕೊಂದಾದರೂ ನನ್ನ ಅಸ್ತಿತ್ವ ಉಳಿಸಿಕೊಳ್ಳುತ್ತೇನೆ.

ಈ ಇಂಡಿಯಾ ದೇಶದ ಅಧಿಕಾರ, ಆಡಳಿತ, ಉದ್ಯಮ, ವ್ಯವಹಾರಗಳಲ್ಲಿ ನಾನು ಪ್ರಮುಖನಾಗಿದ್ದಾಗಲೂ ಈ ದೇಶ ಹಾಳಾಗಲು ಮೀಸಲಾತಿಯೇ ಕಾರಣ ಅಂತ ಗುಲ್ಲೆಬ್ಬಿಸಿ ಎಲ್ಲರನ್ನೂ ನಂಬಿಸಬಲ್ಲೆ,

ನಿನಗೆ ಯಾರ ರಕ್ಷಣೆಯಿಲ್ಲ, ಜನ ನಿನ್ನೊಂದಿಗಿಲ್ಲ,

ನಾನು ಈ ನೆಲದ ಕೋಟ್ಯಾಂತರ ಜನರನ್ನು ಪ್ರತಿದಿನ, ಪ್ರತಿಕ್ಷಣವೂ ಹಿಂಸಿಸಿ ಕಾಡುತ್ತಿದ್ದರೂ ನಿನ್ನ ಸಂವಿಧಾನದಲ್ಲಾಗಲಿ, ಇಂಡಿಯನ್ ಪೀನಲ್ ಕೋಡ್‌ನಲ್ಲಾಗಲಿ ನನ್ನ ಅಪರಾಧಗಳನ್ನು define ಮಾಡುವ ಪರಿಚ್ಛೇದಗಳಿ[illegible] ಎಂಬುದು ನಿನಗೆ ಗೊತ್ತೆ?

ನನ್ನ ತಪ್ಪುಗಳಿಗೆ ಎಲ್ಲಿಯೂ ಶಿಕ್ಷೆಯಾಗಿಲ್ಲ, ಯಾವ ಪೊಲೀಸ್ ಠಾಣೆಯಲ್ಲೂ ಕೋರ್ಟುಗಳಲ್ಲೂ ನನ್ನ ವಿರುದ್ಧ ಕೇಸುಗಳಿಲ್ಲ, ಅಸಲಿಗೆ ನಾನೊಬ್ಬ ಅಪರಾ[illegible] ಎಂಬ ಪ್ರಸ್ತಾಪವೇ ಎಲ್ಲಿಯೂ ಇಲ್ಲ,

ಕೇಳು ವಿಚಾರವಾದಿಯೇ,

ಎಲ್ಲಿಯತನಕ ನೀನು ಒಬ್ಬಂಟಿಯೋ ಅಲ್ಲೀವರೆಗೂ ನನಗೆ ಭಯವಿ[illegible] ಹೋಗು....

"The philosopher has never killed any priest whereas the priest has killed a great man[illegible] philosophers."

- ಎನ್ನುವ ಮಾತು ನಿನಗೆ ನೆನಪಿರಲಿ.

ಹಲವು ನೂರು ವರ್ಷಗಳಿಂದ ನನ್ನ ವಿರುದ್ಧ ನಿರ್ಣಾಯ[illegible] ಹೋರಾಟಗಳೇನೂ ನಡೆದಿಲ್ಲ.

ಹಾಗಾಗಿ ನಾನೀಗ ನಿರಾಳ.

ನಾನು ನಿರ್ಭಾವುಕ, ನಾನು ಪರಾವಲಂಬಿ, ನಾನು ಅಹಂಕಾರಿ...

ಅಷ್ಟೇ ಅಲ್ಲ, ನಾನು ಅಮರ.

ಇಂತಿ ನಿನ್ನ ವಿರೋ[illegible]


- ಬ್ರಾಹ್ಮ[illegible]

'A VOLUNTEER SHOULD ACCEPT POVERTY'

ಹಾಗೇ ಸುಮ್ಮನೆ ಯೋಚಿಸುತ್ತಾ ಹೋದರೆ, ನಮ್ಮೊಳಗಿನ 'ನಮ್ಮ'ನ್ನು ಪರೀಕ್ಷೆಗೊಳಪಡಿಸಿಕೊಂಡರೆ ಅಪಾರ ತಳಮಳ, ಸಂಕೋಚಗಳನ್ನು ಹುಟ್ಟಿಸುವ ಈ ಮಾತನ್ನು ನಮಗೆ ಹೇಳಿದ್ದು ಎಚ್.ಎಸ್.ದೊರೆಸ್ವಾಮಿ!

ನಿಮಗಿವರ ಬಗ್ಗೆ ಖಂಡಿತಾ ಗೊತ್ತಿರುತ್ತದೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಈಗಿನ್ನೂ ಕೇವಲ ತೊಂಬತ್ತಾರು ವರ್ಷದ ದೊರೆಸ್ವಾಮಿಯವರನ್ನು ಕಳೆದೊಂದು ತಿಂಗಳಿಂದ ನಾನಾ ಕಾರಣಗಳಿಂದಾಗಿ ನಮಗೆ ಮೂರ್ನಾಲ್ಕು ಸಾರಿ ಭೇಟಿಯಾಗಬೇಕಾಗಿ ಬಂದಿತ್ತು, ಹೋದ ಕೆಲಸ ಮುಗಿದ ಮೇಲೆ ಕೊಂಚ ಲೋಕಾರೂಢಿಯಾಗಿ ಅದೂ ಇದೂ ಮಾತಾಡುವಾಗ ನಾನೊಮ್ಮೆ

"ಸಾರ್, ನೀವು ಜೀವನಪೂರ್ತಿ ಹೋರಾಟಗಳಲ್ಲೇ ಕಳೆದವರು. ಒಂದು ಸಭೆಯೋ, ಪ್ರತಿಭಟನೆ ರ್‍ಯಾಲಿನೋ ಮುಗಿದನಂತರ ನಾವು ನಾವಾಗಿ ಒಬ್ಬಂಟಿಯಾಗುಳಿದಾಗ ನಮ್ಮ ಜೀವನದ ಅರ್ಥ, ಮಾಡುವ ಕೆಲಸಗಳ ಪರಿಣಾಮ, ಅದರ ಸಾಧಕ ಬಾಧಕಗಳ ಯೋಚನೆ ಬರುತ್ತದಲ್ಲವೇ? ನಿಮಗೂ ಎಂದಾದರೂ ಹಾಗನಿಸಿದ್ದುಂಟೆ?" ಅಂತ ಕೇಳಿದೆ.



"ಯಾಕಿಲ್ಲ" ಅಂದರು ಆ ಹಿರೀಕ. ಹಾಗೇ ಮುಂದುವರೆಸುತ್ತಾ "ನಾನು ಬದುಕುತ್ತಿರುವ ರೀತಿ ನನಗೆ ತೃಪ್ತಿಯಾಗಿದೆ. ನಾನು ಚಿಕ್ಕವನಾಗಿದ್ದಾಗಲೇ ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ಬದುಕಬೇಕು ಅಂತ ಯೋಚಿಸಿ ಆಗಲೇ ಗಟ್ಟಿ ನಿರ್ಧಾರ ಮಾಡಿದ್ದೆ.... ಹಾಗೇ ಬದುಕಿ ಬಂದಿದ್ದೀನಿ" ಅಂದರು.

ನಾನು ಪುನಃ

"ನಿಮಗೆ ಬಡತನ, ಕಷ್ಟಗಳು ಬರಲಿಲ್ಲವೆ. ಆಗ ಏನು ಮಾಡಿದೀರಿ?" ಅಂದೆ.

"ನಾನು ನನ್ನ ಜೀವನದಲ್ಲಿ ಬಹಳ ಕಷ್ಟ, ಬಡತನವನ್ನೆಲ್ಲಾ ಅನುಭವಿಸಿದೆ. ಮಕ್ಕಳನ್ನು ಸಾಕಲು, ಕುಟುಂಬದ ಯೋಗಕ್ಷೇಮ ನೋಡಿಕೋಳ್ಳಲು ಬಹಳ ತಾಪತ್ರಯ ಆಗ್ತಾ ಇತ್ತು, ಆದರೆ ಗಾಂಧಿ ಹೇಳಿದ್ದ ಒಂದು ಮಾತು ನನ್ನ ಬಿಟ್ಟು ಹೋಗಲಿಲ್ಲ."

"ಏನದು?"

'A volunteer should. accept poverty'

ಅಂತ ಗಾಂಧಿ ಹೇಳಿದ್ದರು. ನಾನದನ್ನು ಒಪ್ಪಿಕೊಂಡೆ. ಅ[illegible] ಪರಿಣಾಮಕ್ಕೂ ಸಿಕ್ಕಿಕೊಂಡೆ. ಆದರೂ ಸಾರ್ವಜನಿಕ ಜೀ[illegible] ಬಿಡಲಿಲ್ಲ. ಬಿಡಬೇಕು ಅಂತ ಅನಿಸಲೂ ಇಲ್ಲ.

- ಇಲ್ಲೊಂದು ಕ್ಷಣ ನಿಂತು ಯೋಚಿಸೋಣ.

ಸ್ವಾತಂತ್ರ್ಯ ಬಂದಾಗ ದೊರೆಸ್ವಾಮಿಯವ[illegible] ಮೂವತ್ತರ ವಯಸ್ಸು. ಆಗ ಅವರಿನ್ನೂ ಮದುವೆ ಆಗಿರ[illegible] ಆಗ ಗಾಂಧಿ ಜೊತೆಗಿದ್ದವರು, ಹೋರಾಟಗಾರರು, ಯ[illegible] ಹೋರಾಟ ಮಾಡದಿದ್ದರೂನು ಸ್ವಾತಂತ್ರ್ಯ ಹೋರಾ[illegible] ಮಾಡಿದವರಂತೆ ಪೋಜು ಕೊಡುತ್ತಿದ್ದವರೆಲ್ಲಾ ಬ್ರಿಟಿಷ[illegible] ಬಿಟ್ಟು ಹೋದ ಖಾಲಿ ಕುರ್ಚಿಗಳನ್ನು ಆಕ್ರಮಿಸಿಕೊಳ್ಳ[illegible] ಪೈಪೋಟಿ ನಡೆಸುತ್ತಿದ್ದಾಗ ಈ ದೊರೆಸ್ವಾಮಿಯವರು [illegible] ರೇಸಿಗೆ ಬೀಳಲಿಲ್ಲ. ಅದರ ಬದಲಾಗಿ ಗಾಂಧಿ[illegible] ಆಶಯದಂತೆ ಜನರ ಜೊತೆ ನಿಂತು ತಮ್ಮ ಕೆ[illegible] ಮುಂದುವರೆಸಿದರು. ಹಣ-ಅಧಿಕಾರವೆಲ್ಲಾ ಸುಲಭವಾ[illegible] ಸಿಗುವಂತಿದ್ದರೂ ಬಡತನವನ್ನಷ್ಟೇ ಕೊಡಬಹುದಾ[illegible]

(7ನೇ ಪುಟ[illegible]

ಅಂಬೇಡ್ಕರ್: 'ರಾಮ ಎಂಬ ಸಮಸ್ಯೆ'



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

'ಬ್ರಾಹ್ಮಣ್ಯ ಅಂದು-ಇಂದು' ಕುರಿತ ಈ ವಿಶೇಷ ...ಚಿಕೆಗೆ ನಾನು ಏನನ್ನು ಬರೆಯುವುದು ಎಂದು ...ತಿಸುತ್ತಿದ್ದಾಗ ನನಗೆ ನೆನಪಾಗಿದ್ದು ನಮ್ಮ ದೇಶದ ...ವಿಧಾನವನ್ನು ರಚಿಸಿದ ಬಾಬಾಸಾಹೇಬ್ ಅಂಬೇಡ್ಕರ್ ...ವರು ಬರೆದಿದ್ದ 'ರಿಡಲ್ಸ್ ಆಫ್ ರಾಮ ಅಂಡ್ ಕೃಷ್ಣ' ...ಬ ಲೇಖನ. ಆ ಲೇಖನವನ್ನು ನಾನು ಓದಿರಲಿಲ್ಲ. ...ಕ್ಕಾಗಿ ಇಂಟರ್‌ನೆಟ್‌ನಲ್ಲಿ ತಡಕಾಡಿದಾಗ ಅದು ಸಿಕ್ಕಿತು. ...ವನ್ನು ಓದಿ ರೋಮಾಂಚಿತಳಾದ ನಾನು ಅದನ್ನೇ ಈ ...ರದ ನನ್ನ ಅಂಕಣದಲ್ಲಿ ಅನುವಾದಿಸಿ ಪ್ರಕಟಿಸಲು ...ರ್ಧರಿಸಿದೆ. ಈ ನಿರ್ಧಾರದ ಹಿಂದೆ ಒಂದು ಸವಾಲೂ ...ಗಿತ್ತು. ಅದೇನೆಂದರೆ ಈ ಲೇಖನದಿಂದಾಗಿ ಯಾರಾದರೂ ...ಮ್ಮ ಧಾರ್ಮಿಕ ನಂಬಿಕೆಗೆ ಘಾಸಿ ಆಗಿದೆ ಎಂದು ...ರಿದರೆ ನಮ್ಮ ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ...ನ್ನು ಬಂಧಿಸುವ ಮುನ್ನ ಅಂಬೇಡ್ಕರ್ ಅವರ ...ಬನಗಳನ್ನು ನಿಷೇಧಿಸಬೇಕಾಗುತ್ತದೆ ಎಂಬ ಅರಿವು!

...ಸ್ವಯಂಘೋಷಿತ ರಾಮ ಭಕ್ತರು ಈ ದೇಶವನ್ನು ...ವ ಕನಸ್ಸು ಕಾಣುತ್ತಿರುವ ಈಗಿನ ಸಂದರ್ಭದಲ್ಲಿ ...ಬೇಡ್ಕರ್ ಅವರು ತಮ್ಮ ಲೇಖನದಲ್ಲಿ ರಾಮನ ಬಗ್ಗೆ ...ಬಿರುವುದನ್ನು ನಮ್ಮ ಓದುಗರಿಗೆ ತಿಳಿಸುವ ಅಗತ್ಯ ... ಎನಿಸಿದ್ದರಿಂದ ರಾಮನನ್ನು ಕುರಿತ ಭಾಗವನ್ನು ಮಾತ್ರ ... ಅನುವಾದಿಸಿದ್ದೇನೆ. ಆ ಮೂಲಕ ರಾಮ ನಿಜವಾಗಲೂ ...ಶಹ ವ್ಯಕ್ತಿ ಮತ್ತು ರಾಜನಾಗಿದ್ದ ಎಂಬ ಅಂಬೇಡ್ಕರ್ ...ರ ಅಭಿಪ್ರಾಯವನ್ನು ನಮ್ಮ ಓದುಗರಿಗೆ ತಿಳಿಸಲು ...ತ್ನಿಸಿದ್ದೇನೆ. ಅಂಬೇಡ್ಕರ್ ಅವರು ತಮ್ಮ ಲೇಖನಕ್ಕೆ ...ಟ್ಟಿದ್ದ ಶ್ರೀರ್ಷಿಕೆ 'ರಿಡಲ್ಸ್ ಆಫ್ ರಾಮ ಅಂಡ್ ...'. ರಿಡಲ್ ಪದಕ್ಕೆ ಒಗಟು, ಗೂಢಪ್ರಶ್ನೆ ಇತ್ಯಾದಿಗಳನ್ನು ...ಬಳಸಬಹುದು. ಹಾಗೆಯೇ 'ಸಮಸ್ಯೆ' ಎಂಬ ...ವನ್ನೂ ಸಹ. ಅಂಬೇಡ್ಕರ್ ಅವರು ರಾಮನನ್ನು ಒಂದು ...ಸೃತಿಕ ಸಮಸ್ಯೆಯಾಗಿ ಪರಿಗಣಿಸಿದ್ದರಿಂದ ಈ ಲೇಖನಕ್ಕೆ ...ಮ ಎಂಬ ಸಮಸ್ಯೆ' ಎಂಬ ಶೀರ್ಷಿಕೆಯನ್ನೇ ಇಟ್ಟಿದ್ದೇನೆ.

...ಈಗ ಓವರ್ ಟು ಅಂಬೇಡ್ಕರ್!

ರಾಮ ಎಂಬ ಸಮಸ್ಯೆ!

...ವಾಲ್ಮೀಕಿ ಬರೆದ ರಾಮಾಯಣದ ಹೀರೋ ರಾಮ. ...ಮಾಯಣದ ಕತೆ ತುಂಬಾ ಚಿಕ್ಕದ್ದು. ಜೊತೆಗೆ ಅದು ...ಬಾ ಸರಳವಾಗಿದ್ದು, ಅದರಲ್ಲಿ ಕ್ಷೋಭೆಯನ್ನು ...ಟುಮಾಡುವಂತಹದ್ದೇನೂ ಇಲ್ಲ.

...ರಾಮನು ಅಯೋಧ್ಯೆಯ (ಈಗಿನ ಬನಾರಸ್) ರಾಜ ...ಶರಥನ ಮಗ. ದಶರಥನಿಗೆ ಕೌಸಲ್ಯ, ಕೈಕೇಯಿ ಮತ್ತು ...ಮಿತ್ರ ಎಂಬ ಮೂವರು ಪಟ್ಟದರಸಿಯರಲ್ಲದೆ ನೂರಾರು ...ಪತ್ನಿಯರಿದ್ದರು. ಕೈಕೇಯಿಯು ಮುಂದೊಂದು ದಿನ ... ಒಂದು ಆಶಯವನ್ನು ವ್ಯಕ್ತಪಡಿಸಿದಾಗ ಅದನ್ನು ...ರಥ ಈಡೇರಿಸಬೇಕೆಂಬ ಷರತ್ತನ್ನು ಹಾಕಿಯೇ ...ರಥನನ್ನು ಮದುವೆಯಾಗಿದ್ದಳು. ಬಹಳ ವರ್ಷಗಳ ... ದಶರಥನಿಗೆ ಮಕ್ಕಳಾಗಲಿಲ್ಲ. ಆದರೆ ತನ್ನ ಸಿಂಹಾಸನಕ್ಕೆ ... ಉತ್ತರಾಧಿಕಾರಿಯನ್ನು ಪಡೆಯುವ ಅನಿವಾರ್ಯತೆ ...ಗಿತ್ತು. ತನ್ನ ಮೂವರು ಹೆಂಡತಿಯರಿಂದ ಮಕ್ಕಳಾಗ ...ಗ ಆತ ಋಷಿಶೃಂಗನನ್ನು ಕರೆಸಿ ಪುತ್ರೇಶಿ ಯಜ್ಞವನ್ನು ...ಡಿಸಿದ. ಯಜ್ಞದಲ್ಲಿ ಋಷಿಶೃಂಗ ತಯಾರಿಸಿದ ಪಿಂಡ ... ದಶರಥನು ತನ್ನ ಮೂವರು ಪತ್ನಿಯರಿಗೆ ತಿನ್ನಲು ...

...ಪಿಂಡವನ್ನು ತಿಂದ ಆ ಮೂವರೂ ಗರ್ಭವತಿಯರಾಗಿ ... ಮಕ್ಕಳಿಗೆ ಜನ್ಮ ನೀಡಿದರು. ಕೌಸಲ್ಯಳಿಗೆ ರಾಮ, ...ಯಿಗೆ ಭರತ ಮತ್ತು ಸುಮಿತ್ರಳಿಗೆ ಲಕ್ಷ್ಮಣ ಮತ್ತು ...ಘ್ನ ಎಂಬ ಅವಳಿಜವಳಿ ಪುತ್ರರು ಜನಿಸಿದರು. ಹಲವು ...ಗಳ ನಂತರ ರಾಮ ಸೀತೆಯನ್ನು ಮದುವೆಯಾದ. ... ದಿನ ದಶರಥನು ಸಿಂಹಾಸನದಿಂದ ಇಳಿದು ಆ ...ದಲ್ಲಿ ರಾಮನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದ. ... ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಕೈಕೇಯಿ ತನ್ನ ...ಸ ಬಗ್ಗೆ ದಶರಥನಿಗೆ ನೆನಪಿಸಿದಳು. ಅದೇನೆಂದು ...ದಾಗ ರಾಮನ ಬದಲಾಗಿ ತನ್ನ ಮಗ ಭರತನನ್ನು ...ರಾಧಿಕಾರಿ ಮಾಡಬೇಕೆಂದೂ, ರಾಮನನ್ನು 14 ವರ್ಷ ... ಕಳುಹಿಸಬೇಕೆಂದೂ ಹೇಳಿದಳು. ಕೈಕೇಯಿಗೆ ಮಾತು ...ಟ್ಟಿದ್ದರಿಂದ ವಿಧಿ ಇಲ್ಲದೆ ದಶರಥ ಅದಕ್ಕೆ ...ಗೀಕಾಯಿತು. ಪರಿಣಾಮವಾಗಿ ಭರತ ಅಯೋಧ್ಯೆಯ ...ನಾದ ಮತ್ತು ರಾಮ ತನ್ನ ಪತ್ನಿ ಸೀತೆ ಮತ್ತು ...ಹೋದರ ಲಕ್ಷ್ಮಣನೊಂದಿಗೆ ವನವಾಸಕ್ಕೆ ಹೋದ.


...ಆ ಮೂವರೂ ಕಾಡಿನಲ್ಲಿ ವಾಸಿಸುತ್ತಿದ್ದಾಗ ಲಂಕೆಯ ...ರಾವಣ ಸೀತೆಯನ್ನು ಅಪಹರಿಸಿ, ಆಕೆಯನ್ನು ಮದುವೆ ...ವ ಆಸೆಯಿಂದ ತನ್ನ ಅರಮನೆಯಲ್ಲಿ ಇಟ್ಟುಕೊಂಡ. ... ಮತ್ತು ಲಕ್ಷ್ಮಣ ಸೀತೆಗಾಗಿ ಹುಡುಕಲಾರಂಭಿಸಿದರು. ... ಅವರಿಗೆ ಪರಿಚಯವಾದವರು ವಾನರ (ಕೋತಿ) ...ರಾದ ಸುಗ್ರೀವ ಮತ್ತು ಹನುಮಂತ.

ಇವರಿಬ್ಬರ ನೆರವಿನಿಂದ ಸೀತೆ ಎಲ್ಲಿದ್ದಾಳೆಂದು ಪತ್ತೆಹಚ್ಚಿದ ನಂತರ ಲಂಕೆಯ ಮೇಲೆ ದಾಳಿ ಮಾಡಿ, ರಾವಣನನ್ನು ಸೋಲಿಸಿ ಸೀತೆಯನ್ನು ರಕ್ಷಿಸಿದರು. ಅಷ್ಟು ಹೊತ್ತಿಗೆ ಕೈಕೇಯಿ ವಿಧಿಸಿದ್ದ 14 ವರ್ಷಗಳು ಮುಗಿದಿದ್ದರಿಂದ ರಾಮ, ಸೀತೆ ಮತ್ತು ಲಕ್ಷ್ಮಣ ಅಯೋಧ್ಯೆಗೆ ಹಿಂದಿರುಗಿದರು. ಭರತ ಸಿಂಹಾಸನವನ್ನು ಬಿಟ್ಟುಕೊಟ್ಟಿದ್ದರಿಂದ ರಾಮ ಅಯೋಧ್ಯೆಯ ರಾಜನಾದ.

ಇದು ವಾಲ್ಮೀಕಿ ಬರೆದ ರಾಮಾಯಣದ ಸ್ಥೂಲ ಚಿತ್ರ.

ಈ ಕತೆಯಲ್ಲಿ ರಾಮನನ್ನು ಪೂಜಿಸುವಂತಹ ಯಾವ ಲಕ್ಷಣಗಳೂ ಕಾಣಿಸುವುದಿಲ್ಲ, ಆತ ಓರ್ವ ವಿಧೇಯ ಪುತ್ರನಾಗಿದ್ದನಷ್ಟೇ. ಆದರೂ ರಾಮನಲ್ಲಿ ವಿಶೇಷ ಗುಣಗಳು ವಾಲ್ಮೀಕಿಗೆ ಕಾಣಿಸಿದ್ದರಿಂದ ಆತ ರಾಮಾಯಣವನ್ನು ಬರೆಯಲು ನಿರ್ಧರಿಸಿದ. ಅದಕ್ಕೆ ವಿವರಣೆ ನೀಡಲೆಂಬಂತೆ ವಾಲ್ಮೀಕಿ ನಾರದನನ್ನು ಈ ಪ್ರಶ್ನೆ ಕೇಳಿದ:

"ಹೇಳು ಓ ನಾರದ, ಈಗಿನ ಕಾಲದಲ್ಲಿ ಭೂಮಿಯ ಮೇಲಿರುವ ಅತಿ ಶ್ರೇಷ್ಠ ಪುರುಷ ಯಾರು?" ಅಷ್ಟೇ ಅಲ್ಲ, 'ಶ್ರೇಷ್ಠ ಪುರುಷ'ನ ಲಕ್ಷಣಗಳೇನು ಎಂದು ವಾಲ್ಮೀಕಿ ವಿವರಿಸಿದ. "ಶ್ರೇಷ್ಠ ಪುರುಷ ಶಕ್ತಿಶಾಲಿಯಾಗಿರಬೇಕು. ಧರ್ಮದ ಗುಟ್ಟುಗಳನ್ನು ಅರಿತಿರಬೇಕು. ಕೃತಜ್ಞತೆ, ಸತ್ಯದ ಮೌಲ್ಯಗಳನ್ನು ಮೈಗೂಡಿಸಿಕೊಂಡಿರಬೇಕು. ತನ್ನ ವೈಯಕ್ತಿಕ ಹಿತಾಸಕ್ತಿಯನ್ನು ಕಡೆಗಣಿಸಿ ಧರ್ಮ ಪಾಲನೆಗೆ ಸಿದ್ಧನಿರಬೇಕು. ಸದ್ಗುಣಿಯಾಗಿರಬೇಕು, ಎಲ್ಲರ ಹಿತರಕ್ಷಣೆಗೆ ಮುಂದಾಗಬೇಕು. ನೋಡಲು ಸುಂದರನಾಗಿದ್ದು, ಸ್ವಯಂ ನಿಯಂತ್ರಣ ಶಕ್ತಿಯನ್ನು ಹೊಂದಿರಬೇಕು. ಕೋಪವನ್ನು ನಿಗ್ರಹಿಸುವುದನ್ನು ಕಲಿತಿರಬೇಕು. ಖ್ಯಾತಿವಂತನಾಗಿದ್ದು ಇತರರ ಬಗ್ಗೆ ಅಸೂಯೆ ಪಡೆಯದವನಾಗಿರಬೇಕು. ಯುದ್ಧದ ಕಾಲದಲ್ಲಿ ದೇವತೆಗಳ ಹೃದಯದಲ್ಲೂ ಭೀತಿಯನ್ನು ಹುಟ್ಟಿಸುವವನಾಗಿರಬೇಕು."



ವಾಲ್ಮೀಕಿಯ ಪ್ರಶ್ನೆಗೆ ಉತ್ತರ ಕೊಡಲು ಸಮಯಾವಕಾಶ ಕೇಳಿದ ನಾರದ ಆಳವಾಗಿ ಚಿಂತಿಸಿದ ನಂತರ "ಈ ಎಲ್ಲಾ ಗುಣಗಳೂ ಇರುವ ಏಕೈಕ ವ್ಯಕ್ತಿ ದಶರಥನ ಮಗ ರಾಮ" ಎಂದು ಉತ್ತರಿಸಿದ.

ಈ ಎಲ್ಲ ಗುಣಗಳು ರಾಮನಲ್ಲಿವೆ ಎಂಬ ಕಾರಣಕ್ಕೆ ಆತನನ್ನು ದೈವೀಕರಿಸಲಾಯಿತು. ಆದರೆ ನಿಜವಾಗಲೂ ರಾಮ ಪೂಜೆಗೆ ಯೋಗ್ಯ ವ್ಯಕ್ತಿಯೇ? ಆತನನ್ನು ದೇವತಾ ಪುರುಷ ಎಂದು ನಂಬಿ ಪೂಜಿಸುವವರು ಹಲವು ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕಿದೆ.

ಋಷಿಶೃಂಗ ತಯಾರಿಸಿದ ಪಿಂಡವನ್ನು ಸೇವಿಸಿದ್ದರಿಂದ ರಾಮನ ಜನನವಾಯಿತು ಎಂಬ ಸಾಂಕೇತಿಕ ಕತೆಯನ್ನು ಕಟ್ಟಲಾಗಿದೆ. ಆ ಕತೆಯ ಹಿಂದಿರುವ ನಗ್ನ ಸತ್ಯ ಯಾವುದೆಂದರೆ ಗಂಡ-ಹೆಂಡತಿ ಆಗಿರದಿದ್ದ ಋಷಿಶೃಂಗ ಮತ್ತು ಕೌಸಲ್ಯೆ ನಡುವಿನ ಕೂಡಿಕೆಯಿಂದ ರಾಮನ ಜನನವಾದದ್ದು. ಒಟ್ಟಾರೆ ಆತನ ಜನನ ಅವಮರ್ಯಾದೆಯಿಂದ ಕೂಡಿರದಿದ್ದರೂ ಖಂಡಿತವಾಗಿಯೂ ಅಸಹಜವಾಗಿದೆ. ರಾಮನ ಜನನವನ್ನು ಕುರಿತು ಇಷ್ಟೇ ಅಸಭ್ಯವಾದ ಇತರೆ ಕತೆಗಳೂ ಇವೆ.

ವಾಲ್ಮೀಕಿ ತನ್ನ ರಾಮಾಯಣವನ್ನು ಪ್ರಾರಂಭಿಸುವುದೇ ರಾಮ ವಿಷ್ಣುವಿನ ಅವತಾರವೆಂದೂ, ವಿಷ್ಣುವೇ ದಶರಥನ ಮಗ ರಾಮನಾಗಿ ಜನಿಸಲು ನಿರ್ಧರಿಸಿದ್ದೂ ಎಂಬ ಅಂಶಗಳೊಂದಿಗೆ. ಜೊತೆಗೆ ಈ ಸುದ್ದಿ ಬ್ರಹ್ಮನಿಗೆ ಗೊತ್ತಾಗಿ ಆತ ವಿಷ್ಣುವಿನ ರಾಮನ ಅವತಾರ ಸಂಪೂರ್ಣವಾಗಿ ಯಶಸ್ವಿಯಾಗಬೇಕೆಂದರೆ ಭೂಮಿಯ ಮೇಲೆ ಆತನ ನೆರವಿಗೆ ನಿಲ್ಲುವಂತಹ ಶಕ್ತಿಯುತ ವ್ಯಕ್ತಿಗಳನ್ನು ಸೃಷ್ಟಿಸಬೇಕೆಂದು ದೇವತೆಗಳಿಗೆ ಆದೇಶಿಸಿದ.

ಬ್ರಹ್ಮನ ಆದೇಶವನ್ನು ಪಾಲಿಸಲು ಮುಂದಾದ ದೇವತೆಗಳು ಲಂಗುಲಗಾಮಿಲ್ಲದ ಸಂಭೋಗಗಳಲ್ಲಿ ತೊಡಗಿದರು. ದೇವಲೋಕದ ವೇಶ್ಯೆಯರಾಗಿದ್ದ ಅಪ್ಸರೆಯರೊಂದಿಗಲ್ಲದೆ ಯಕ್ಷ ಮತ್ತು ನಾಗಗಳ ಅವಿವಾಹಿತ ಯುವತಿಯರೊಂದಿಗೆ, ರುಕ್ಷ, ವಿದ್ಯಾಧರ, ಗಾಂಧರ್ವ, ಕಿನ್ನರ ಮತ್ತು ವಾನರರ ಪತ್ನಿಯರನ್ನೂ ಕೂಡಿದರು. ಇಂತಹ ಕೂಡಿಕೆಗಳಿಂದ ಜನಿಸಿದ ವಾನರರೇ ಮುಂದೆ ಭೂಮಿಯ ಮೇಲೆ ರಾಮನ ನೆರವಿಗೆ ನಿಂತರು. ಅಂದರೆ ರಾಮನ ಜನನಕ್ಕೂ ಮುನ್ನವೇ ಲಂಗುಲಗಾಮಿಲ್ಲದ ವ್ಯಾಪಕ ವ್ಯಭಿಚಾರ ನಡೆದಿತ್ತು.

ಸೀತೆಯೊಂದಿಗೆ ರಾಮನ ಮದುವೆಯೂ ಸಂಶಯಾಸ್ಪದವಾಗಿದೆ. ಬುದ್ಧ ರಾಮಾಯಣದಲ್ಲಿ ಸೀತೆ ರಾಮನ ಸಹೋದರಿ ಆಗಿದ್ದಳು ಎಂದೂ, ಆಕೆಯೂ ದಶರಥನ ಪುತ್ರಿಯಾಗಿದ್ದಳು ಎಂದೂ ಹೇಳಲಾಗಿದೆ. ಆದರೆ ವಾಲ್ಮೀಕಿ ಬುದ್ಧ ರಾಮಾಯಣದಲ್ಲಿ ಉಲ್ಲೇಖಿಸಿರುವ ಅಣ್ಣ-ತಂಗಿ ಸಂಬಂಧವನ್ನು ನಿರಾಕರಿಸಿ ಸೀತೆ ವಿದೇಹದ ರಾಜ ಜನಕನ ಪುತ್ರಿಯಾಗಿದ್ದಳು ಎಂದು ಹೇಳುತ್ತಾನೆ.

ಆದರೆ ವಾಲ್ಮೀಕಿಯ ಪ್ರಕಾರವೂ ಆಕೆ ಜನಕನಿಗೆ ಜನಿಸಿದ ಮಗಳಾಗಿರಲಿಲ್ಲ. ಬದಲಾಗಿ ರೈತನೋರ್ವ ಹೊಲವನ್ನು ಉಳುವಾಗ ಆತನ ನೇಗಿಲಿಗೆ ಸಿಕ್ಕಿಹಾಕಿಕೊಂಡ ಕೂಸು ಆಕೆ. ರೈತ ಆ ಕೂಸನ್ನು ಜನಕನಿಗೆ ಕೊಟ್ಟಿದ್ದರಿಂದ ಆತ ಆಕೆಯನ್ನು ತನ್ನ ಮಗಳಾಗಿ ಬೆಳೆಸಿರುತ್ತಾನೆ. ಆದ್ದರಿಂದ ವಾಲ್ಮೀಕಿಯ ಕೃತಿಯಲ್ಲೂ ಮೇಲುನೋಟಕ್ಕಷ್ಟೇ ಸೀತೆ ಜನಕನ ಪುತ್ರಿ. ಇದಕ್ಕೆ ಹೋಲಿಸಿದರೆ ಬುದ್ಧ ರಾಮಾಯಣದಲ್ಲಿರುವುದೇ ಸರಿಯಾದದ್ದೆಂದೂ, ಮತ್ತು ಆಗಿನ ಆರ್ಯರ ನಿಯಮಗಳ ಪ್ರಕಾರ ಅಣ್ಣ-ತಂಗಿಯ ನಡುವೆ ಮದುವೆಗಳು ನಡೆಯುತ್ತಿದ್ದವೆಂದೂ ಹೇಳಬಹುದು. ಇದು ಸತ್ಯವಾದರೆ ಖಂಡಿತವಾಗಿಯೂ ರಾಮ-ಸೀತೆ ನಡುವಿನ ಸಂಬಂಧ ಯಾವ ಕಾರಣಕ್ಕೂ ಆದರ್ಶವಲ್ಲ, ರಾಮನನ್ನು ಏಕಪತ್ನೀವ್ರತಸ್ಥ ಎಂದು ಕರೆಯಲಾಗಿದೆ. ಈ ನಂಬಿಕೆ ಅದು ಹೇಗೆ ಪ್ರಚಾರ ಪಡೆಯಿತು ಎಂಬುದೇ ಅಚ್ಚರಿ ಮೂಡಿಸುತ್ತದೆ. ಯಾಕೆಂದರೆ ಇದಕ್ಕೆ ಯಾವುದೇ ಸತ್ಯಾಂಶದ ಆಧಾರವಿಲ್ಲ.

ವಾಲ್ಮೀಕಿ ಸಹ ರಾಮನಿಗೆ ಹಲವಾರು ಪತ್ನಿಯರು ಮತ್ತು ಉಪಪತ್ನಿಯರು ಇದ್ದರು ಎಂದು ಹೇಳುತ್ತಾನೆ. ಈ ವಿಷಯದಲ್ಲಿ ಮೂವರು ಪತ್ನಿಯರು ಮತ್ತು ನೂರಾರು ಉಪಪತ್ನಿಯರನ್ನು ಹೊಂದಿದ್ದ, ಹೆಸರಿನಲ್ಲಿ ಮಾತ್ರ ತಂದೆಯಾಗಿದ್ದ ದಶರಥನಿಗೆ ರಾಮ ಸೂಕ್ತ ಮಗ ಎನಿಸಿಕೊಳ್ಳುತ್ತಾನೆ.

ಈಗ ಓರ್ವ ವ್ಯಕ್ತಿಯಾಗಿಯೂ, ರಾಜನಾಗಿಯೂ ರಾಮನ ವ್ಯಕ್ತಿತ್ವ ಎಂತಹದ್ದಾಗಿತ್ತು ಎಂಬ ವಿಷಯಕ್ಕೆ ಬರೋಣ. ವ್ಯಕ್ತಿಯಾಗಿ ಆತನನ್ನು ಅಳೆಯಲು ಎರಡು ಉದಾಹರಣೆಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯದು ಆತ ವಾಲಿಯೊಂದಿಗೆ ಹೇಗೆ ನಡೆದುಕೊಂಡ ಎಂಬುದಾದರೆ ಎರಡನೆಯದು ಆತ ಸ್ವಂತ ಹೆಂಡತಿ ಸೀತೆಯೊಂದಿಗೂ ಹೇಗೆ ವರ್ತಿಸಿದ ಎಂಬುದಾಗಿದೆ. ಮೊದಲಿಗೆ ವಾಲಿಯ ಪ್ರಸಂಗ.

ವಾಲಿ ಮತ್ತು ಸುಗ್ರೀವ ಎಂಬ ಸಹೋದರರು ವಾನರ ಸಂತತಿಯವರಾಗಿದ್ದರು. ಅವರಿಬ್ಬರು ಒಂದು ರಾಜ್ಯವನ್ನು ಆಳುತ್ತಿದ್ದ ರಾಜ ಮನೆತನದವರಾಗಿದ್ದು ಕಿಷ್ಕಿಂಧ ಅವರ ರಾಜಧಾನಿಯಾಗಿತ್ತು. ರಾವಣ ಸೀತೆಯನ್ನು ಅಪಹರಿಸಿದಾಗ ವಾಲಿ ಕಿಷ್ಕಿಂಧದ ರಾಜನಾಗಿದ್ದ. ಆಗ ವಾಲಿ ಮತ್ತು ಮಾಯಾವಿ ಎಂಬ ರಾಕ್ಷಸನ ನಡುವೆ ಯುದ್ಧ ನಡೆಯಿತು. ಒಮ್ಮೆ ಅವರಿಬ್ಬರು ಪರಸ್ಪರ ಕಾದಾಡುತ್ತಿದ್ದಾಗ ಮಾಯಾವಿ ತನ್ನ ಪ್ರಾಣ ರಕ್ಷಿಸಿಕೊಳ್ಳಲು ಓಡಿಹೋದ. ವಾಲಿ ಮತ್ತು ಸುಗ್ರೀವ ಅವನನ್ನು ಅಟ್ಟಿಸಿಕೊಂಡು ಓಡಿದರು. ಮಾಯಾವಿ ಭೂಮಿಯಲ್ಲಿದ್ದ ಒಂದು ಆಳವಾದ ಕುಳಿಯನ್ನು ಪ್ರವೇಶಿಸಿದ. ಸುಗ್ರೀವನಿಗೆ ಕುಳಿಯ ಹೊರಗೆ ಕಾಯಲು ಹೇಳಿದ ವಾಲಿ ಕುಳಿಯನ್ನು ಪ್ರವೇಶಿಸಿದ. ಸ್ವಲ್ಪಹೊತ್ತಿನ ನಂತರ ಕುಳಿಯಿಂದ ರಕ್ತದ ಹೊಳೆ ಹರಿಯಿತು. ಮಾಯಾವಿ ವಾಲಿಯನ್ನು ಕೊಂದಿರಬೇಕೆಂದು ನಿರ್ಧರಿಸಿದ ಸುಗ್ರೀವ ಕಿಷ್ಕಿಂಧಕ್ಕೆ ಹಿಂದಿರುಗಿ ತಾನೇ ಸಿಂಹಾಸನವನ್ನು ಏರಿದ. ಜೊತೆಗೆ ಹನುಮಂತನನ್ನು ತನ್ನ ಪ್ರಧಾನಮಂತ್ರಿಯಾಗಿ ನೇಮಿಸಿದ.


ಆದರೆ ವಾಲಿ ಸತ್ತಿರಲಿಲ್ಲ, ಬದಲಾಗಿ ಆತ ಮಾಯಾವಿಯನ್ನು ಕೊಂದು ಹಾಕಿದ್ದ. ವಾಲಿ ಕುಳಿಯಿಂದ ಹೊರಬಂದಾಗ ಅಲ್ಲಿ ಸುಗ್ರೀವ ಇರಲಿಲ್ಲ. ಆತ ಕಿಷ್ಕಿಂಧಕ್ಕೆ ಹೋದಾಗ ತನ್ನ ರಾಜಸ್ಥಾನವನ್ನು ಸುಗ್ರೀವ ಆಕ್ರಮಿಸಿರುವ ಆಘಾತಕಾರಿ ಸುದ್ದಿ ಗೊತ್ತಾಯಿತು. ಸಹಜವಾಗಿಯೇ ಇದರಿಂದ ವಾಲಿ ಆಕ್ರೋಶಗೊಂಡ. ಸುಗ್ರೀವ ವಾಲಿ ಸತ್ತಿದ್ದಾನೆ ಎಂದು ಭ್ರಮಿಸುವ ಬದಲಾಗಿ ಆತ ನಿಜವಾಗಿಯೂ ಸತ್ತಿದ್ದಾನೆಯೇ ಎಂಬುದನ್ನು ಖಾತರಿಪಡಿಸಿ ಕೊಳ್ಳಬೇಕಿತ್ತು. ಅಷ್ಟೇ ಅಲ್ಲ ವಾಲಿಗೆ ಅಂಗದ ಎಂಬ ಪುತ್ರ ಇದ್ದಿದ್ದರಿಂದ ಆತನನ್ನೇ ರಾಜನನ್ನಾಗಿ ನೇಮಿಸಬೇಕಿತ್ತು. ಆದರೆ ಇದ್ಯಾವುದನ್ನೂ ಮಾಡದ ಸುಗ್ರೀವ ತಾನೇ ಸಿಂಹಾಸನವನ್ನು ವಶಪಡಿಸಿಕೊಂಡಿದ್ದ. ಸುಗ್ರೀವನ ವಿರುದ್ಧ ಯುದ್ಧ ಸಾರಿದ ವಾಲಿ ತನ್ನ ಸಿಂಹಾಸನವನ್ನು ವಾಪಸ್ ಪಡೆದು ಸುಗ್ರೀವನನ್ನು ಒದ್ದೋಡಿಸಿದ. ಅಂದಿನಿಂದ ಅವರಿಬ್ಬರೂ ಶತ್ರುಗಳಾದರು.

ಇದೆಲ್ಲ ಆಗಿದ್ದು ರಾವಣ ಸೀತೆಯನ್ನು ಅಪಹರಿಸಿದ ಸಂದರ್ಭದಲ್ಲೇ. ರಾಮ ಮತ್ತು ಲಕ್ಷ್ಮಣ ಸೀತೆಗಾಗಿ ಹುಡುಕುತ್ತಾ ಅಲೆಯುತ್ತಿದ್ದರು. ಅದೇ ಹೊತ್ತಿಗೆ ಸುಗ್ರೀವ ಮತ್ತು ಹನುಮಂತ ತಮ್ಮ ಅಧಿಕಾರ ಸ್ಥಾನವನ್ನು ಹಿಂಪಡೆಯಲು ಯಾರಾದರೂ ತಮ್ಮ ನೆರವಿಗೆ ಸಿಗುತ್ತಾರೆಯೇ ಎಂದು ಹುಡುಕಿಕೊಂಡು ಅಲೆಯುತ್ತಿದ್ದರು. ಈ ಎರಡೂ ಕಡೆಯವರು ಆಕಸ್ಮಿಕವಾಗಿ ಭೇಟಿಯಾದರು. ಪರಸ್ಪರರು ಎದುರಿಸುತ್ತಿದ್ದ ಸಮಸ್ಯೆಗಳನ್ನು ವಿನಿಮಯ ಮಾಡಿಕೊಂಡ ನಂತರ ಅವರೆಲ್ಲರೂ ಒಂದು ಒಪ್ಪಂದ ಮಾಡಿಕೊಂಡರು.

ಅದರಂತೆ ರಾಮ ವಾಲಿಯನ್ನು ಕೊಂದು ಸುಗ್ರೀವನನ್ನು ಕಿಷ್ಕಿಂಧದ ರಾಜನನ್ನಾಗಿಸುವುದಕ್ಕೆ ಸಹಾಯ ಮಾಡಬೇಕು. ಅದಕ್ಕೆ ಪ್ರತ್ಯುಪಕಾರವಾಗಿ ಸುಗ್ರೀವ ಮತ್ತು ಹನುಮಂತ ಸೀತೆಯನ್ನು ಪತ್ತೆಹಚ್ಚಲು ನೆರವು ನೀಡಬೇಕು. ಈ ಷಡ್ಯಂತ್ರದಲ್ಲಿ ಯಾರು ವಾಲಿ ಯಾರು ಸುಗ್ರೀವ ಎಂದು ರಾಮ ಗುರುತಿಸಿ ವಾಲಿಯನ್ನು ಸುಲಭವಾಗಿ ಕೊಲ್ಲಲು ಸುಗ್ರೀವ ತನ್ನ ಕೊರಳಲ್ಲಿ ಒಂದು ಹಾರ ಧರಿಸಬೇಕು; ಜೊತೆಗೆ ವಾಲಿ ಮತ್ತು ಸುಗ್ರೀವ ಸೆಣಸಾಡುತ್ತಿರುವಾಗ ರಾಮ ಮರಗಳ ಹಿಂದೆ ಬಚ್ಚಿಟ್ಟುಕೊಂಡು ವಾಲಿಯತ್ತ ಬಾಣವನ್ನು ಹೂಡಿ ಕೊಲ್ಲಬೇಕು ಎಂದೆಲ್ಲಾ ನಿರ್ಧರಿಸಲಾಯಿತು.

ಈ ಒಪ್ಪಂದದಂತೆ ವಾಲಿ ಮತ್ತು ಸುಗ್ರೀವನ ನಡುವೆ ಸಮರವನ್ನು ಘೋಷಿಸಲಾಯಿತು. ಮರಗಳ ಹಿಂದೆ ಬಚ್ಚಿಟ್ಟುಕೊಂಡಿದ್ದ ರಾಮ ಹಾರವನ್ನು ಧರಿಸಿರದ ವಾಲಿಯನ್ನು ಕೊಂದು ಹಾಕಿದ. ಆನಂತರ ಸುಗ್ರೀವ ಮತ್ತೆ ಕಿಷ್ಕಿಂಧದ ರಾಜನಾದ. ವಾಲಿಯ ಕೊಲೆ ರಾಮನ ವ್ಯಕ್ತಿತ್ವಕ್ಕೇ ಒಂದು ಕಪ್ಪುಚುಕ್ಕೆ. ಯಾಕೆಂದರೆ ವಾಲಿಯನ್ನು ಕೊಲ್ಲಲು ರಾಮನಿಗೆ ಯಾವ ಕಾರಣವೂ ಇರಲಿಲ್ಲ. ವಾಲಿ ನಿರಾಯುಧನಾಗಿದ್ದನಲ್ಲದೆ ರಾಮನ ವಿರುದ್ಧ ಆತನಿಗೆ ಯಾವ ಹಗೆತನವೂ ಇರಲಿಲ್ಲ. ಆದ್ದರಿಂದ ಇದೊಂದು ಪೂರ್ವಯೋಜಿತ ಕೊಲೆಯಲ್ಲದೆ ಬೇರೆ ಏನೂ ಅಲ್ಲ.

(ಮುಂದಿನ ವಾರಕ್ಕೆ)


ಕದ್ದ ಕಂಬಿ ಲಾರಿಯಲ್ಲಿ


ಸ್ಕ್ರ್ಯಾಪ್ ಖದೀಮರ ಗೋಡೌನು



ಗೋಲ್‌ಮಾಲ್ ವೇ ಬ್ರಿಡ್ಜ್

ನೀವರಿಯದ ವಿಲಕ್ಷಣ ದಂಧೆ

ಸ್ಕ್ರ್ಯಾಪ್ ಮಾಫಿಯಾ

ಸಂಪಿಗೆಹಳ್ಳಿಯ ಇನ್ಸ್‌ಪೆಕ್ಟರ್ ನಂಜುಂಡೇಗೌಡರು ಹಿಡಿದುಹಾಕಿದ ದರೋಡೆ ಗ್ಯಾಂಗಿನ ಚರ್ಯೆ, ವರ್ತನೆ, ಕಾರ್ಯಾಚರಣೆಗಳೇ ವಿಚಿತ್ರ. ಸಿಕ್ಕಿಬಿದ್ದವನು ಗೋರಿಪಾಳ್ಯದ ರಣಪಾತಕಿ ಡಿಶುಂ ಫಯಾಜ್. ಈತನ ಜೊತೆ ಕೆಜಿ ಹಳ್ಳಿ ಮತ್ತು ಡಿಜೆ ಹಳ್ಳಿಯ ಕೆಲ ಮುಸ್ಲಿಂ ಪುಡಿ ರೌಡಿಗಳೇನೋ ಸಿಕ್ಕಿಬೀಳುತ್ತಾರಾದರೂ ಗೋರಿಪಾಳ್ಯದ ಖತರ್‌ನಾಕ್ ಕಿಲ್ಲರ್ ಇಮ್ರಾನ್ ಮಾತ್ರ ತನ್ನ ಮೂವರು ಗನ್‌ಮನ್‌ಗಳ ಸಮೇತ ಎಸ್ಕೇಪಾಗುತ್ತಾನೆ.

ಆದರೆ ಪ್ರಕರಣದ ವೈಚಿತ್ರ್ಯವಿರುವುದು ಇವರ ಕಾರ್ಯಾಚರಣೆಯಲ್ಲಿ. ಗೋರಿಪಾಳ್ಯದ ಕಾಂಗ್ರೆಸ್ ನಾಯಕ ಮತ್ತು ಹಾಲಿ ಕೌನ್ಸಿಲರ್ ಸೀಮಾಖಾನಂರ ಪತಿ ಅಲ್ತಾಫ್ ಖಾನ್‌ನ ಇಬ್ಬರು ತಮ್ಮಂದಿರನ್ನು ನಡುರಸ್ತೆಯಲ್ಲಿ ಕೊಚ್ಚಿಕೊಂದ ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಪಾತಕ ಪುತ್ರ ಇಮ್ರಾನ್ ಬೆಂಗಳೂರಿನ ಯಾವುದೋ ಮೂಲೆಯ ನಾಗವಾರ ರಿಂಗ್‌ರಸ್ತೆಯಲ್ಲಿ ಅದೂ ಆ ರಾತ್ರಿಯಲ್ಲಿ ದರೋಡೆಗೆ ಹೊಂಚ ಕೂರುವಷ್ಟು ದರಿದ್ರಗೆಟ್ಟನೆ? ರಿಂಗ್ ರಸ್ತೆಯ ಯಾವುದೋ ವೇ ಬ್ರಿಡ್ಜ್ ಬಳಿ ಬಳ್ಳಾರಿಯಿಂದ ಕಬ್ಬಿಣದ ಕಂಬಿ ಸಾಗಿಸುತ್ತಿದ್ದ ಲಾರಿಯನ್ನೇ ಏಕೆ ಈ ಗ್ಯಾಂಗ್ ದರೋಡೆಗೆ ಗುರಿಯಾಗಿಸಿಕೊಂಡಿತ್ತು? ಈಗಾಗಲೇ ಮೊಬೈಲ್ ಕಳ್ಳತನ, ಲೈವ್‌ಬ್ಯಾಂಡ್ ಹುಡುಗಿಯರ ದಂಧೆ, ಕಾರುಗಳ್ಳತನ ಮತ್ತು ಸುಪಾರಿ ಕಿಲ್ಲಿಂಗ್‌ಗಳಿಂದ ಬೇಕಾಬಿಟ್ಟಿ ಖಮಾಯಿಸುತ್ತಿರುವ ಗೋರಿಪಾಳ್ಯದ ರೌಡಿ ಇಮ್ರಾನ್ ನಡುರಾತ್ರಿ ರೋಡ್ ರಾಬರಿಗಿಳಿಯುವಷ್ಟು ರಿಸ್ಕ್ ತೆಗೆದುಕೊಳ್ಳುತ್ತಿದ್ದಾನೆಂದರೆ ಅದರಲ್ಲಿ ಆ ಪಾಟಿ ಲಾಭವಿದೆಯೇ?

ಸಂಪಿಗೆಹಳ್ಳಿ ಪೊಲೀಸರು ದಾಖಲಿಸಿದ ಮೊಕದ್ದಮೆಯೂ ವಿಚಿತ್ರವಾಗಿದೆ. ಇನ್ಸ್‌ಪೆಕ್ಟರ್ ನಂಜುಂಡೇಗೌಡರೇ ಖುದ್ದಾಗಿ ದಾಖಲಿಸಿರುವಂತೆ ಮೊನ್ನೆ ಅಂದರೆ ಸೆಪ್ಟೆಂಬರ್ 13 ರ ರಾತ್ರಿ ಗಣೇಶ ವಿಸರ್ಜನೆಯ ಬಂದೋಬಸ್ತ್ ಡ್ಯೂಟಿಯಲ್ಲಿರುವಾಗ ನಾಗವಾರದ ಸರ್ವೀಸ್ ರಸ್ತೆಯ ಮ್ಯಾನ್‌ಫೋ ಕನ್‌ವೆನ್‌ಷನ್ ಹಾಲಿನ ಮುಂಭಾಗ ರೌಡಿ ಪಡೆಯೊಂದು ಮೂರು ಕಾರುಗಳಲ್ಲಿ ಡಕಾಯಿತಿಗೆ ಹೊಂಚು ಹಾಕುತ್ತಿದೆಯೆಂಬ ಮಾಹಿತಿ ಬಂದಿದೆ. ತಕ್ಷಣವೇ ಸಂಪಿಗೆಹಳ್ಳಿ ಎಸಿಪಿ ಕೆ.ಎಚ್. ಜಗದೀಶ್‌ಗೆ ಮಾಹಿತಿ ಕೊಟ್ಟದ್ದೇ ಪೊಲೀಸ್ ತಂಡದ ಸಮೇತ ನಾಗವಾರ ಸರ್ವೀಸ್ ರಸ್ತೆಗೆ ಬರುತ್ತಾರೆ. ದರೋಡೆಗೆ ಹೊಂಚು ಹಾಕುತ್ತಿದ್ದವರನ್ನು ಆ ಕತ್ತಲಲ್ಲೂ ಸುತ್ತುವರಿದಾಗ ತಂಡದ ಲೀಡರ್ ಇಮ್ರಾನ್ ಶವರ್‌ಲೆಟ್ ಕಾರಲ್ಲಿ ಕೂತು 'ಇನ್ನೇನು ಲಾರಿ ಬರುತ್ತದೆ, ಆದರ ಡ್ರೈವರ್‌ನನ್ನು ಕಟ್ಟಿ ಹಾಕಿ ಕಬ್ಬಿಣವನ್ನು ದೋಚೋಣ....' ಎಂದಿದ್ದು ಕೇಳಿಸಿದೆ!

ಬಾಯಿಬಿಟ್ಟ ಡಿಶುಂ

ಎಸಿಪಿಯವರೂ ಸ್ಥಳಕ್ಕೆ ಬಂದಿದ್ದರಿಂದ ಪೊಲೀಸ್ ತಂಡ ಪಾತಕಿಗಳನ್ನು ಸುತ್ತುವರಿದು ಕಾರಿನಲ್ಲಿದ್ದವರನ್ನು ಹಿಡಿದುಕೊಳ್ಳುತ್ತಿದ್ದಂತೆಯೇ ಗೋರಿಪಾಳ್ಯದ ಇಮ್ರಾನ್, ಸುಲ್ತಾನ್ ಮತ್ತೊಬ್ಬ ಇಮ್ರಾನ್ ತಪ್ಪಿಸಿಕೊಂಡು ಪರಾರಿಯಾಗುತ್ತಾರೆ. ಆದರೆ ಇಮ್ರಾನ್ ಬಲಗೈ ಬಂಟ ಗೋರಿಪಾಳ್ಯದ ಡಿಶುಂ ಫಯಾಜ್ ಸಿಕ್ಕಿಬೀಳುತ್ತಾನೆ. ಆತನ ಜೊತೆ ಕೆ.ಜೆ. ಹಳ್ಳಿಯ ಜಾವಿದ್, ಸುಹೇಲ್, ಡಿ.ಜೆ. ಹಳ್ಳಿ ಅಮರ್ ಲೇಔಟಿನ ಸಲೀಮ್ ಕೂಡ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಹೀಗೆ ಪೊಲೀಸರಿಗೆ ಸಿಕ್ಕಿಬಿದ್ದ ಇಮ್ರಾನ್‌ನ ಬಂಟರು ಪೊಲೀಸರೇ ಬೆಚ್ಚಿ ಬೀಳುವಂತ ವಿಲಕ್ಷಣ ಮಾಫಿಯಾ ಒಂದರ ಕರಾಳ ವಿವರಗಳನ್ನು ಬಾಯಿಬಿಡುತ್ತಾರೆ.

ಅದು ಸ್ಕ್ರ್ಯಾಪ್ ಮಾಫಿಯಾ!

ಈ ಹಿಂದೆ ಪೆಟ್ರೋಲ್ ಕಲಬೆರಕೆ ದಂಧೆಯಿತ್ತು. ಆಯಿಲ್ ಮಾಫಿಯಾ ಕಾರಣಕ್ಕೇ ಬೆಂಗಳೂರು ಪಾಪಕೂಪದಲ್ಲಿ ರಕ್ತ ಹರಿಯಿತು. ಈರೋಡ್ ಹಾಲಿನ ದಂಧೆ, ನಕಲಿ ಸೀಡಿ ದಂಧೆ, ಕ್ರಿಕೆಟ್ ಬೆಟ್ಟಿಂಗ್, ಇಸ್ಪೀಟ್ ಕ್ಲಬ್ ಜಾಲ, ಮರಳು ಮಾಫಿಯಾ ಇತ್ಯಾದಿ ಮಾಫಿಯಾಗಳಿರುವಂತೆಯೇ ಇತ್ತೀಚೆಗೆ ಚಾಲ್ತಿಗೆ ಬಂದದ್ದು ಸ್ಕ್ರ್ಯಾಪ್ ಮಾಫಿಯಾ.

ಹೆಚ್ಚೂಕಮ್ಮಿ ಇದೂ ಕೂಡ ಪೆಟ್ರೋಲ್ ಕಲಬೆರಕೆ ದಂಧೆಯ ಹಾಗೆಯೇ . ಕಬ್ಬಿಣವೇ ಇದರ ಮೂಲದ್ರವ್ಯ. ಬೆಂಗಳೂರು ಸುತ್ತಮುತ್ತ ಎಲ್ಲೆಂದರಲ್ಲಿ ತಲೆ ಎತ್ತುತ್ತಿರುವ ಗಗನಚುಂಬಿ ಅಪಾರ್ಟ್‌ಮೆಂಟುಗಳನ್ನು ಕೇಂದ್ರೀಕರಿಸಿ ಕೋಟಿಗಟ್ಟಲೆ ದೋಚುವ ವಿಲಕ್ಷಣ ಜಾಲವೊಂದು ಕಾರ್ಯನಿರ್ವಹಿಸುತ್ತಿದೆ. ಯಾವುದೇ ಅಪಾರ್ಟ್‌ಮೆಂಟ್ ಮೇಲೇಳುವುದಕ್ಕೂ ಸಿಮೆಂಟ್, ಮರಳು, ಜಲ್ಲಿ ಹೇಗೆ ಅತ್ಯಗತ್ಯವೋ ಹಾಗೇ ಟನ್ನುಗಟ್ಟಲೇ ಕಬ್ಬಿಣವೂ ಅಗತ್ಯ. ಕಬ್ಬಿಣದ ಕಂಬಿಗಳು, ಪಟ್ಟಿಗಳಿಲ್ಲದೆ ಯಾವ ಕಟ್ಟಡವೂ ತಲೆ ಎತ್ತಲು ಸಾಧ್ಯವೇ ಇಲ್ಲ.

ಬಿಲ್ಡರ್‌ಗಳಿಗೆ ದೋಖಾ


ಹೀಗೆ ನೂರಾರು ಟನ್ನುಗಳ ಲೆಕ್ಕದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆಂದು ಕಬ್ಬಿಣದ ಕಂಬಿಗಳನ್ನು ತರಿಸಿಕೊಳ್ಳುವ ಬಿಲ್ಡರ್‌ಗಳು ಅದಕ್ಕಾಗಿ ಆಶ್ರಯಿಸುವುದು ಬಳ್ಳಾರಿಯ ಐರನ್ ಫೌಂಡ್ರಿಗಳನ್ನು. ಬಳ್ಳಾರಿಯ ಐರನ್ ಫೌಂಡ್ರಿಗಳಿಂದ ಟನ್ನು ಲೆಕ್ಕದಲ್ಲಿ ಕಬ್ಬಿಣದ ಕಂಬಿಗಳನ್ನು ಬೆಂಗಳೂರಿಗೆ ಸಾಗಿಸಬೇಕೆಂದರೆ ಅದಕ್ಕೆ ಲಾರಿಗಳು ತಾನೇ ಬೇಕು. ಆಯಾ ಫೌಂಡ್ರಿಗಳಲ್ಲಿ ಇದೇ ಮಾಫಿಯಾದ ಏಜೆಂಟರಿರುವಂತೆ ಲಾರಿಗಳನ್ನು ಒದಗಿಸುವಲ್ಲೂ ಇವರದ್ದೇ ಧೂತರಿರುತ್ತಾರೆ. ಕಂಬಿ ಖರೀದಿಸುವ ಬಿಲ್ಡರ್‌ಗೆ ಗೊತ್ತೇ ಆಗದಂತೆ ಫೌಂಡ್ರಿಗಳ ಸೂಪರ್‌ವೈಜರ್ ನಿರ್ದಿಷ್ಟ ಗ್ಯಾಂಗಿನದ್ದೇ ಲಾರಿಗಳನ್ನು ಬಾಡಿಗೆಗೆ ಪಡೆಯುತ್ತಾನೆ. ಹಾಗೆ ಕಂಬಿ ಹೊತ್ತು ಬೆಂಗಳೂರಿಗೆ ಬರುವ ಲಾರಿಗಳ ಡ್ರೈವರ್ ಕೂಡ ಇದ[...] ಮಾಫಿಯಾದ ಕಮಿಷನ್‌ದಾರನಾಗಿರುತ್ತಾನೆ.

ಲಾರಿಯೊಂದರಲ್ಲಿ ಇಪ್ಪತ್ತೋ ಮೂವತ್ತೋ ಟನ್ [...] ಕಬ್ಬಿಣ ಬಂತೆಂದರೆ ಮಾರ್ಗ ಮಧ್ಯೆ ಲಾರಿ ನಿಲ್ಲಿಸಿ ಅದರ[...] ಐದೋ ಹತ್ತೋ ಟನ್ ಕಬ್ಬಿಣವನ್ನು ಕದ್ದುಬಿಡುತ್ತಾ[...] ಆದರೆ ಬಿಲ್ಡರ್ ಗಮನಕ್ಕಿದು ಬರಬಾರದಲ್ಲವೆ? ಅದಕ್ಕೆಂದ[...] ಎರಡನೇ ಹಂತದ ಗೋಲ್‌ಮಾಲ್ ನಡೆಯುತ್ತದೆ. ಅದ[...] ವೇ ಬ್ರಿಡ್ಜ್‌ಗಳ ತೂಕದ ಗೋಲ್‌ಮಾಲ್. ಅಂದರೆ 1[...] ಟನ್ ಕಂಬಿಗಳಿದ್ದರೆ ಅದನ್ನು ತೂಕ ಹಾಕುವ ವ[...] ಬ್ರಿಡ್ಜ್‌ಗಳಲ್ಲಿ ಕಂಪ್ಯೂಟರ್ ಅಡ್ಜೆಸ್ಟ್ ಮಾಡಿ 25 ಟ[...] ಇದೆಯೆಂಬಂತೆ ರಶೀದಿ ಹಾಕಿಸುವುದು.


ಇಮ್ರಾನ್


ಆರಿಫ್


ಇರ್ಫಾನ್


ಆರಿಫ್ ಅಣ್ಣ ಫಾರೂಕ್


ಸಮೀರ್

ಲಾರಿಗಳಲ್ಲಿದ್ದ ಕಂಬಿಗಳನ್ನು ಲಪಟಾಯಿಸಿದ್ದೂ ಅಲ್[...] ವೇ ಬ್ರಿಡ್ಜ್‌ಗಳಲ್ಲಿ ಕಮ್ಮಿ ತೂಕಕ್ಕೆ ಹೆಚ್ಚಿನ ತೂಕದ ರಶೀ[...] ಪಡೆದು ಬಿಲ್ಡರ್‌ಗಳನ್ನು ಯಾಮಾರಿಸುವುದು ಈ ದಂಧೆ[...] ಮರ್ಮ. ಇಲ್ಲಿ ವೇ ಬ್ರಿಡ್ಜ್‌ಗಳು, ಲಾರಿ ಚಾಲಕ ಮ[...] ಪಾತಕಿ ಗ್ಯಾಂಗ್ ಶಾಮೀಲಾಗಿಯೇ ಕಬ್[...] ಲಪಟಾಯಿಸುತ್ತವೆ. ವೇ ಬ್ರಿಡ್ಜ್‌ಗಳ ಸರ್ಟಿಫಿಕೇಟನ್ನು ನಂಬ[...] ಬಿಲ್ಡರ್‌ಗೆ ತನಗೆ ಬರಬೇಕಿದ್ದ ಕಂಬಿಗಳಲ್ಲಿ ಕಾಲುಭ[...] ಕದ್ದಿರುವುದು ಗೊತ್ತಾಗುವುದೇ ಇಲ್ಲ, ಹಾಗೇ ಬಿಲ್ಡಿ[...] ಎದ್ದ ನಂತರ ಅದರಲ್ಲಿ ಬಿದ್ದಿದ್ದ ಕಬ್ಬಿಣದ ತಗ[...] ಚೂರುಪಾರು ಕಂಬಿಗಳು, ಪಟ್ಟಿಗಳನ್ನು ಗುಜರಿ[...] ಹಾಕಲಾಗುತ್ತದೆ. ಹಾಗೇ ಗುಜರಿಗೆ ಹಾಕಬೇಕಾದ ಸ್ಕ್ರ್[...] ಅನ್ನು ಇದೇ ಮಾಫಿಯಾ ಏಜೆಂಟರೇ ಖರೀದಿಸುತ[...] ಬೇರೆಲ್ಲ ಸ್ಕ್ರ್ಯಾಪ್ ಡೀಲರುಗಳು ಕೆಜಿಗೆ ಇಪ್ಪತ[...] ಇಪ್ಪತ್ತೈದೋ ರೂಪಾಯಿಗೆ ಖರೀದಿಸಿದರೆ ಈ ಮ[...] ಏಕಾಏಕಿ ತಾವು ಕೇಜಿಗೆ 30 ರೂಪಾ[...] ಕೊಡುತ್ತೇವೆನ್ನುತ್ತಾರೆ. ಬೇರೆಲ್ಲರಿಗಿಂತ ಹೆ[...] ಕೊಡುತ್ತಾರಾದ್ದರಿಂದ ಬಿಲ್ಡರ್ ತನ್ನ ಅಪಾರ್ಟ್‌ಮೆಂ[...] ಸ್ಕ್ರ್ಯಾಪ್ ಅನ್ನು ಇವರಿಗೇ ಮಾರುತ್ತಾನೆ. ಕಟ್ಟಡದಿ[...] ಸ್ಕ್ರ್ಯಾಪ್ ಹೊತ್ತ ಲಾರಿ ಮತ್ತೆ ವೇ ಬ್ರಿಡ್ಜಿಗೇ ಬರಬೇ[...] ಅಲ್ಲಿ ತೂಕ ಹಾಕಿದ ನಂತರವೇ ಸ್ಕ್ರ್ಯಾಪ್ ಡೀಲರ್‌ನಿ[...] ಬಿಲ್ಡರ್‌ಗೆ ರೊಕ್ಕ ಪಾವತಿಯಾಗುತ್ತದೆ. ಆದರೆ ಮೊದ[...] ಶಾಮೀಲಾಗಿರುವ ವೇ ಬ್ರಿಡ್ಜ್‌ನ ಗುಮಾಸ್ತ ವ[...] ಕಂಪ್ಯೂಟರ್ ಕೈಚಳಕ ಮೆರೆದು 25 ಟನ್ ಸ್ಕ್ರ್[...] ಇದ್ದರೆ ಅದನ್ನು 10 ಟನ್ ಇದೆಯೆಂದು ರಶೀ[...] ಹರಿಯುತ್ತಾನೆ. ಇಲ್ಲಿ ಕಂಬಿಗಳಾಗಲಿ, ಸ್ಕ್ರ್ಯಾಪ್ ಆ[...] ಬಿಲ್ಡರ್‌ನ ಕಣ್ಣೆದುರೇ ತೂಗಲ್ಪಡುತ್ತದೆಯಾದ್ದರಿ[...] ತೂಕದಲ್ಲಾದ ಮೋಸ ಗೊತ್ತಾಗುವುದೇ ಇಲ್ಲ.

ಗೋರಿಪಾಳ್ಯದ ಇಮ್ರಾನ್

ಬಳ್ಳಾರಿಯಿಂದ ಕಂಬಿಗಳನ್ನು ಹೊತ್ತು ತರುವ ತಮಿ[...] ಡ್ರೈವರ್‌ಗಳು ಲಾರಿಯೊಂದಕ್ಕೆ 40 ಟನ್‌ಗಳ [...] ತುಂಬಿಸಿರುತ್ತಾರೆ. ಈ ಪೈಕಿ 15 ಟನ್ ಕದ್ದರೂ ಅದ[...] ಲಕ್ಷ ರೂಪಾಯಿಗಳ ಲಾಭವಾಗುತ್ತದೆ. ಟನ್ ಸ್ಕ್ರ್[...] ಮಾರುಕಟ್ಟೆಯಲ್ಲಿ ಕಮ್ಮಿಯೆಂದರೂ 23 ಸಾವಿರ ರೂಪಾ[...] ಬೆಲೆಯಿದೆ. ಲಾರಿಯೊಂದಕ್ಕೆ 25 ಟನ್ ತುಂಬಿಸಿ ಅ[...] 10 ಟನ್ ಎಂದು ತೋರಿಸಿಬಿಟ್ಟರೆ ಅದೇ ಮೂರೂ[...] ಲಕ್ಷವಾಗುತ್ತದೆ. ವಾರಕ್ಕೆ ಇಂಥ ಎರಡು ಕೈಚಳಕ ಮೆರೆ[...] ಕನಿಷ್ಠ 20 ಲಕ್ಷ ರೂಪಾಯಿಗಳ ಆಮದನಿ ಸದ್ದಿ[...] ಮಾಫಿಯಾ ಕೈ ಸೇರುತ್ತದೆ.

ಬೆಂಗಳೂರಿನ ನಾಲ್ಕೂ ಮೂಲೆಗಳ ವೇ ಬ್ರಿಡ್ಜ್[...] ತರಹೇವಾರಿ ಲಾರಿಗಳ ಡ್ರೈವರ್‌ಗಳು ಮತ್ತು ಬೆಂಗಳ[...] ಅಪಾಯಕಾರಿ ರೌಡಿಪಡೆಯೊಂದರ ಮಿಲಾಕತ್ತಿನ ಫಲವ[...] ಈ ಥರದ ನಿಗೂಢ ದಂಧೆಯೊಂದು ಕಳೆದ [...] ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಇದನ್ನೇ ಮ[...] ಅಂಡರ್‌ವರ್ಲ್ಡ್ ಸ್ಕ್ರ್ಯಾಪ್ ಮಾಫಿಯಾ ಅನ್ನುತ್ತದೆ. ಏಕೆ[...] ಈ ದಂಧೆಯಲ್ಲಿರುವ ಬಹುತೇಕರೆಲ್ಲ ಮುಸ್ಲಿಂ ರೌ[...]

ಗೋರಿಪಾಳ್ಯದ ಇಮ್ರಾನ್ ಎಂದರೆ....!

ಬೆಂಗಳೂರಿನ ಸ್ಕ್ರ್ಯಾಪ್ ಮಾಫಿಯಾಗೂ ಅಂತರರಾಜ್ಯ ಮೊಬೈಲ್ ಕಳ್ಳರ ಜಾಲಕ್ಕೂ ಮತ್ತು ಮುಂಬಯಿ, ಹೈದ್ರಾಬಾದ್ ಸೇರಿದಂತೆ ಬೆಂಗಳೂರಿಗೂ ವ್ಯಾಪಿಸಿದ ಕಾರುಗಳ್ಳರ ಕೂಟಕ್ಕೂ ಪರಸ್ಪರ ನೆಂಟಸ್ತಿಕೆ ಕಲ್ಪಿಸಿದವನೇ ಗೋರಿಪಾಳ್ಯದ ಇಮ್ರಾನ್.

ಅದಕ್ಕೆ ಕಾರಣರಾದ ಇಬ್ಬರು ಪಾತಕಿಗಳ ಪೈಕಿ ಒಬ್ಬ ಚೋರ್ ಆಸೀಡ್, ಮತ್ತೊಬ್ಬ ಆರ್‌ಟಿಓ ಖಲೀಲ್! ಆರಿಫ್ ಪತ್ನಿ ಜರೀನಾ ಅಂದರೆ ಇಮ್ರಾನ್‌ನ ತಾಯಿ ಗೋರಿಪಾಳ್ಯಕ್ಕೆ ಕೌನ್ಸಿಲ್ ಆಗಿದ್ದಾಗ ಪ್ರವರ್ಧಮಾನಕ್ಕೆ ಬಂದವನೇ ಚೋರ್ ಆಸಿಫ್. ಜೆ.ಜೆ.ನಗರದ 13 ನೇ ಕ್ರಾಸಿನಲ್ಲಿದ್ದ ಚೋರ್ ಆಸಿಫ್ ಹೇಳಿಕೇಳಿ ಜೆ.ಜೆ.ನಗರ ಪೊಲೀಸ್ ಠಾಣೆಯ ರೌಡಿ ಶೀಟರ್. ಏರಿಯಾದಲ್ಲಿ ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ ಚೋರ್ ಆಸಿಫ್ ಕಾಲಕ್ರಮೇಣ ನಗರ ಸಾರಿಗೆ ಬಸ್ಸುಗಳಲ್ಲಿ ಮೊಬೈಲ್ ಕಳ್ಳತನಕ್ಕೆ ಕೈಯಿಟ್ಟು ತನ್ನದೇ ಮೊಬೈಲ್ ಕಳ್ಳರ ಗ್ಯಾಂಗ್ ಒಂದನ್ನು ಕಟ್ಟಿಕೊಂಡ. ಇದಕ್ಕೆ ಗಾಡ್‌ಫಾದರ್ ಆದವನು ಇಮ್ರಾನ್. ಏಕೆಂದರೆ ಇಮ್ರಾನ್‌ನ ತಮ್ಮಂದಿರಾದ ಇರ್ಫಾನ್ ಸುಲ್ತಾನ್ ಮತ್ತು ಅಖಿಲ್ ಕೂಡ ಭೂಗತಲೋಕಕ್ಕೆ ಎಂಟ್ರಿ ಪಡೆದಿದ್ದರು. ಇಮ್ರಾನ್‌ನ ದೊಡ್ಡಪ್ಪ ಫಾರೂಕ್‌ನ ಮಗ ಶಬ್ಬೀರ್ ಈ ಹೊತ್ತಿಗಾಗಲೇ ಸ್ಕ್ರ್ಯಾಪ್ ದಂಧೆ ಆರಂಭಿಸಿದ್ದ.

ಮೊಬೈಲ್ ಕದ್ದ ಹುಡುಗರಿಗೆ ಸೆಟ್ ಒಂದಕ್ಕೆ ಐನೂರೋ ಸಾವಿರ ಕೊಟ್ಟು ಇವರು ಅದನ್ನು ಎಂಟೋ ಹತ್ತೋ ಸಾವಿರಕ್ಕೆ ಮಾರಿಸುತ್ತಿದ್ದರು. ಇದಕ್ಕೆ ಸರಿಯಾಗಿ ಇಮ್ರಾನ್ ಗ್ಯಾಂಗಿಗೆ ಸೇರ್ಪಡೆಯಾದವನು ಹಳೇ ಗುಡ್ಡದ ಹಳ್ಳಿಯ ನಿವಾಸಿ ಆರ್‌ಟಿಓ ಖಲೀಲ್. ಮಹಾರಾಷ್ಟ್ರದಿಂದ ಕದ್ದು ತರುತ್ತಿದ್ದ ಕಾರುಗಳಿಗೆ ನಕಲಿ ಆರ್‌ಟಿಓ ದಾಖಲೆಗಳನ್ನು ಸೃಷ್ಟಿಸುವುದರಲ್ಲಿ ನಿಷ್ಣಾತ. ಒಂದೆಡೆ ಕಾರುಗಳ್ಳರ ಪಡೆ ಮತ್ತೊಂದೆಡೆ ಮೊಬೈಲ್ ಕಳ್ಳರ ಗ್ಯಾಂಗನ್ನು ಬಳಸಿಕೊಂಡೇ ಇಮ್ರಾನ್ ಸ್ಕ್ರ್ಯಾಪ್ ದಂಧೆಗೆ ಕೈಯಿಟ್ಟ.

ವನ್ನು ಸದ್ಯ ಆಳುತ್ತಿರುವವನು ಗೋರಿಪಾಳ್ಯದ ಮಾಜಿ ...ನ್ಸಿಲರ್ ಆರಿಫ್ ಪಾಷಾನ ಮಗ ಇಮ್ರಾನ್ ಪಾಷಾ!!

ಇಲ್ಲಿಗೆ ಮೂರು ವರ್ಷದ ಹಿಂದೆ ಬ್ರಿಗೇಡ್ ರಸ್ತೆಯ ...್ಯಾಂಡ್ ಅಡ್ಡೆಯೊಂದರಿಂದ ಇಬ್ಬರು ಲೈವ್‌ಬ್ಯಾಂಡ್ ...ಡುಗಿಯರನ್ನು ಕಿಡ್ನಾಪ್ ಮಾಡಿದ ಪ್ರಕರಣದಲ್ಲಿ ಇಮ್ರಾನ್‌ನ ...ರು ಕೇಳಿಬಂದಾಗಲೇ ಬೆಂಗಳೂರಿನ ವೇಶ್ಯಾವಾಟಿಕೆ ಜಾಲಕ್ಕೂ ...ಮ್ರಾನ್ ಕೈಹಾಕಿದ್ದಾನೆಂಬ ಸಂಗತಿ ಬಯಲಾಗಿದ್ದು, ಅದಕ್ಕೂ ...ನ್ನ ತನ್ನ ಎದುರಾಳಿ ಮತ್ತು ಗೋರಿಪಾಳ್ಯದ ಕಾಂಗ್ರೆಸ್ ...ಯಕ ಅಲ್ತಾಫ್ ಖಾನ್‌ನ ಇಬ್ಬರು ತಮ್ಮಂದಿರನ್ನು ಅಪ್ಪ ...ರಿಫ್ ಮತ್ತು ಮಗ ಇಮ್ರಾನ್ ಸೇರಿಕೊಂಡೇ ನಡುರಸ್ತೆಯಲ್ಲಿ ...ಚ್ಚಿ ಕೊಂದಿದ್ದರು. ತದನಂತರ ಇದೇ ಇಮ್ರಾನ್‌ನ ಗ್ಯಾಂಗ್ ...ೊಬೈಲ್‌ಗಳನ್ನು ಕಳ್ಳತನ ಮಾಡಿಸಿ ಅದನ್ನು ಬರ್ಮಾ ಬಜಾರ್ ...ತ್ತು ನ್ಯಾಷನಲ್ ಮಾರ್ಕೆಟ್ಟಿನ ಹುಡುಗರ ಮೂಲಕ ...ಾರಿಸುತ್ತಿದೆಯೆಂಬ ಸುದ್ದಿ ಬಂತು.

ಮುಂಬಯಿಯಲ್ಲೂ.....!

ಇದಲ್ಲದೆ ಮುಂಬಯಿ, ಅಹ್ಮದಾಬಾದ್‌ಗಳಿಂದ ಕದ್ದ ...ಮುಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರಿನಲ್ಲಿ ಮಾರಾಟ ...ಾಡುವ ಜಾಲಕ್ಕೂ ಇದೇ ಇಮ್ರಾನ್ ನಾಯಕನೆಂಬುದನ್ನು ...ಾಸಿಪಾಳ್ಯ ಪೊಲೀಸರು ಬಹಿರಂಗಪಡಿಸಿದ್ದರು. ಬೇರೆಲ್ಲ ಮುಸ್ಲಿಂ ...ಡಿಗಳು ರಿಯಲ್ ಎಸ್ಟೇಟ್, ಸುಪಾರಿ ಕಿಲ್ಲಿಂಗ್ ಎಂದು ...ಾಡಿಕೊಂಡಿದ್ದರೆ ಗೋರಿಪಾಳ್ಯದ ಇಮ್ರಾನ್ ಮುಂಬಯಿಯ ...ತಕಿಗಳ ಸಂಪರ್ಕ ಸಾಧಿಸಿ ಅಲ್ಲಿ ಕದ್ದ ಮೊಬೈಲುಗಳು, ...ಮುಗಳನ್ನು ಬೆಂಗಳೂರಿನಲ್ಲಿ ಮಾರಿಸುವುದೂ ಅಲ್ಲದೆ ತನ್ನದೇ ...ಜೂರ್ ಹುಡುಗರನ್ನು ಬಿಟ್ಟು ಜನಸಂದಣಿಗಳಲ್ಲಿ ಮೊಬೈಲ್ ...ಸುವ ದಂಧೆಗಳಿದಿದ್ದ!

ಆದರೆ ಸ್ಕ್ರ್ಯಾಪ್ ದಂಧೆಗಿಳಿದದ್ದು ಇಲ್ಲಿಗೆ ಆರು ವರ್ಷದ ...ಂದೆ. ಆ ಹೊತ್ತಿಗಾಗಲೇ ಇಮ್ರಾನ್‌ನ ತಂದೆ ಆರಿಫ್‌ನ ...ಣ್ಣ ಫಾರೂಕ್ ಸ್ಕ್ರ್ಯಾಪ್ ದಂಧೆಗಿಳಿದಿದ್ದ. ಫಾರೂಕ್‌ನ ಅಳಿಯ ...ಾಜ್ ಎಂಬಾತ ಹೊಸಕೋಟೆ ಬಳಿ ನ್ಯಾಷನಲ್ ಗೋಡೌನ್ ...ಬ ಸ್ಕ್ರ್ಯಾಪ್ ಗೋದಾಮು ಒಂದನ್ನು ನಡೆಸುತ್ತಿದ್ದ. ಇದಕ್ಕಿಂತಲೂ ...ದೊಡ್ಡಮಟ್ಟದ ಸ್ಕ್ರ್ಯಾಪ್ ದೀಲಿಗಿಳಿದವನು ಇದೇ ಇಮ್ರಾನ್ ...ಂಗಿನ ಮನ್ನು ಎಂಬಾತ. ಒಂದಷ್ಟು ಲಾರಿಗಳನ್ನಿಟ್ಟುಕೊಂಡು ...ಣ್ಣಾ ಕದಿಸುತ್ತಿದ್ದ ಮನ್ನುಗೆ ಕೃಷ್ಣರಾಜಪುರದಲ್ಲೊಂದು ಗೋಡೌನ್ ...ತ್ತು. ಅದಕ್ಕೆ ಮನ್ನು ಸ್ಟೀಲ್ಸ್ ಎಂದೇ ಹೆಸರಿಟ್ಟಿದ್ದ. ಇದಕ್ಕೆ ...ಮ್ರಾನ್‌ನ ಏಜೆಂಟ್ ಆಗಿ ಕೈಜೋಡಿಸಿದವನೇ ಗೋರಿಪಾಳ್ಯದ ...ೇ ಕ್ರಿಮಿನಲ್ ಡಿಶುಂ ಫಯಾಜ್!

ಹಿಂದೆ ಗೋರಿಪಾಳ್ಯದಲ್ಲಿ ಗಾಂಜಾ ಅಸ್ಲಂ ಎಂಬ ರೌಡಿಯಿದ್ದ ...ೋರಿಪಾಳ್ಯದ ಸ್ಮಶಾನವನ್ನೇ ತನ್ನ ಅಡ್ಡೆ ಮಾಡಿಕೊಂಡು ಗಾಂಜಾ ...ಾರಿಸುತ್ತಿದ್ದ ಅಸ್ಲಂನ ಶಿಷ್ಯನಾದ ಡಿಶುಂ ಫಯಾಜ್ ಹೇಳಿಕೇಳಿ ...ೆನಗರ ಪೊಲೀಸ್ ಠಾಣೆಯ ರೌಡಿ ಶೀಟರ್. ಈತನ ...ದ್ಧ ಕೊಲೆಯತ್ನ, ರಾಬರಿ ಇತ್ಯಾದಿ ಕೇಸುಗಳು ಇವತ್ತಿಗೂ ... ಇದಲ್ಲದೆ ಆರಿಫ್‌ನ ಅಣ್ಣ ಫಾರೂಕ್‌ನ ಮಗ ಶಬ್ಬೀರ್ ...ಡ ಕರೀಮ್ ಸಾಬ್ ಲೇಔಟಿನಲ್ಲೊಂದು ಸ್ಕ್ರ್ಯಾಪ್ ಗೋಡೌನ್ ...ಟ್ಟುಕೊಂಡಿದ್ದ. ಎಲ್ಲೆಲ್ಲಿ ಅಪಾರ್ಟ್‌ಮೆಂಟುಗಳು ನಿರ್ಮಾಣ ...ತದಲ್ಲಿವೆಯೋ ಅದರ ವಾಚ್‌ಮನ್‌ಗಳಿಗೆ ಧಮಕಿ ಹಾಕಿ ...ಣ್ಣಾ ಕದಿಸುವುದು, ಕಟ್ಟಡದ ಮ್ಯಾನೇಜರ್‌ಗಳನ್ನು ಹೆದರಿಸಿ ...ಸ್ ದೋಚುವುದು ಇಮ್ರಾನ್ ಗ್ಯಾಂಗಿನ ನಿತ್ಯ ಕಸುಬಾಯಿತು.

ವೇ ಬ್ರಿಡ್ಜ್ ದಾಳಿ

ಈ ಮಧ್ಯೆ ಯಡವಟ್ಟಾಗಿದ್ದು ಹೆಬ್ಬಾಳದ ರಿಂಗ್ ...ಯುಲ್ಲಿರುವ ಸಿ.ಆರ್. ವೇ ಬ್ರಿಡ್ಜ್‌ನ ಇನ್‌ಚಾರ್ಜ್ ರಾಜೇಶ್ ...ರು ಬದಲಿಸಿದೆ) ಎಂಬಾತನಿಂದ. ನಾಗವಾರ ಸಮೀಪದ ...ಬಿನಿ ಗಾರ್ಡನ್ ಎದುರಿಗೇ ಇರುವ ಸಿ.ಆರ್. ವೇ ಬ್ರಿಡ್ಜ್‌ನ ...ದಲ್ಲೇ ನಿರ್ಮಾಣವಾಗುತ್ತಿದ್ದ ಅಪಾರ್ಟ್‌ಮೆಂಟ್‌ಗೆ ಸೆಪ್ಟೆಂಬರ್ ...ರ ರಾತ್ರಿ ಒಂದು ಲಾರಿ ಲೋಹದ ಕಂಬಿ ಬರಬೇಕಿತ್ತು. ...ೋಬ್ಬರಿ 40 ಟನ್ ಇದ್ದ ಕಂಬಿಯಲ್ಲಿ ಮಾರ್ಗ ಮಧ್ಯೆ ...ಟನ್ ಕಂಬಿಯನ್ನು ಇಮ್ರಾನ್ ಗ್ಯಾಂಗ್ ಇಳಿಸಿದ್ದೂ ಆಗಿತ್ತು. ...ಕೆ 25 ಟನ್ನನ್ನು 40 ಟನ್ ಇದೆಯೆಂದು ರಶೀದಿ ...ಯುವಂತೆ ಸಿ.ಆರ್. ವೇ ಬ್ರಿಡ್ಜ್‌ನ ಇನ್‌ಚಾರ್ಜ್‌ನನ್ನು ...್ರಾನ್ ಗ್ಯಾಂಗ್ ಹೆದರಿಸುತ್ತಿತ್ತು.

...ಏನೇ ಧಮಕಿ ಹಾಕಿದರೂ ವೇ ಬ್ರಿಡ್ಜ್‌ನಾತ ಡೀಲಿಗೆ ...ಲ್ಲ, ಆಗ ಶುರುವಾಗಿದೆ ಇಮ್ರಾನ್ ಗ್ಯಾಂಗಿನ ರೌಡಿ ... ವೇ ಬ್ರಿಡ್ಜಿನವನನ್ನೇ ಕಿಡ್ನಾಪ್ ಮಾಡಲು ಇಮ್ರಾನ್ ...ಗ್ ಸಜ್ಜಾಗಿದೆ. ಹೆದರಿದ ಆತ ಉಪಾಯವಾಗಿ ಸಂಪಿಗೆಹಳ್ಳಿ ... ಜಗದೀಶ್‌ಗೆ ಮಾಹಿತಿ ಕೊಟ್ಟಿದ್ದಾನೆ. ಒಂದು ಶೆವರ್‌ಲೆಟ್ ...ಜಾ, ಮತ್ತೊಂದು ಮಹೀಂದ್ರಾ ಸ್ಕಾರ್ಪಿಯೋ, ಇನ್ನೊಂದು ...ುತಿ ಓಮ್ನಿಯ ತುಂಬ ಬಂದಿಳಿದ ಇಮ್ರಾನ್ ಗ್ಯಾಂಗ್ ... ಬ್ರಿಡ್ಜ್‌ಗೆ ದಾಳಿಯಿಟ್ಟು ಇನ್ನೇನು ಇನ್‌ಚಾರ್ಜ್‌ನನ್ನು ...ದ್ದುಕೊಳ್ಳಬೇಕೆನ್ನುವಷ್ಟರಲ್ಲಿ ಇನ್ಸ್‌ಪೆಕ್ಟರ್ ನಂಜುಂಡೇಗೌಡ ಪಡೆ ...ದಾಳಿ ನಡೆಸಿದೆ. ಡಿಶುಂ ಫಯಾಜ್ ಸಿಕ್ಕುಬಿದ್ದು ಇಮ್ರಾನ್ ...ಾರಾಗಿದ್ದಾನೆ.

...ಇದು ಮೊನ್ನೆ ಸೆಪ್ಟೆಂಬರ್ 13 ರ ರಾತ್ರಿ ನಾಗವಾರದ ...ರಸ್ತೆಯಲ್ಲಿ ನಡೆದ ಪೊಲೀಸ್ ಕಾರ್ಯಾಚರಣೆಯ ಒಂದು ...ಷ್ಟೆ. ದುರಂತವೆಂದರೆ ಪರಾರಿಯಾದ ಇಮ್ರಾನ್ ...ರಿಪಾಳ್ಯದಲ್ಲೇ ರಾಜಾರೋಷವಾಗಿ ಓಡಾಡಿಕೊಂಡಿದ್ದರೂ ...ೋಲೀಸರಿಗೆ ಹಿಡಿಯುವ ಧೈರ್ಯವಿಲ್ಲ, ಏಕೆಂದರೆ ...ರಿಪಾಳ್ಯದ ಆರಿಫ್ ಮತ್ತು ಇಮ್ರಾನ್ ಪಾಲಿಗೆ ಜೆಡಿಎಸ್ ...ಾಡ್‌ಫಾದರ್. ಇನ್ನು ಸ್ಕ್ರ್ಯಾಪ್ ಮಾಫಿಯಾ ...ಯಾರ ಅದೆ, ಯಾವ ತಡೆ?


● ರಾ. ಸೋಮನಾಥ್

ಜೆಡಿಪಿ ದರ ಹಾಗೂ ಬುರುಡೆ ಮಾತು

ಅಮೆರಿಕಾ ಸರ್ಕಾರ ವೀಸಾ ನಿರಾಕರಿಸಿದರೇನಂತೆ. ಮೋದಿಯ ಪ್ರಚಾರ ಸಂಸ್ಥೆ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಮಾಡಿತು. ಅಲ್ಲೂ ಮೋದಿ ತನ್ನ ಎಂದಿನ ಚಾಳಿಯನ್ನು ಬಿಡಲಿಲ್ಲ. ಯುಪಿಎಗೆ ಹೋಲಿಸಿದರೆ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಹೆಚ್ಚಿನ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಬೂಸಿಬಿಡುತ್ತಾ ಕೆಲವು ಅಂಕಿಅಂಶಗಳನ್ನು ಹರಿಬಿಟ್ಟ. ಬಹುಶಃ ತನ್ನ ಪ್ರೇಕ್ಷಕರೆಲ್ಲ ಮುಠ್ಠಾಳರೆಂದು ಭಾವಿಸಿದ್ದಾನೋ ಏನೋ ತಿಳಿಯದು. ಭಾರತೀಯರು ಅಮೆರಿಕದಂತಹ ದೇಶಗಳಲ್ಲಿ ನೆಲೆಸಲು ಸಾಧ್ಯವಾಗಿರುವುದೇ ಅವರು ಪ್ರತಿಭಾವಂತರಾಗಿರುವ ಕಾರಣಕ್ಕೆಂದು ಹೇಳಲಾಗುತ್ತಿದೆ. ಇಂಥವರು ಮೋದಿ ಹೇಳಿಕೆಗಳ ಸತ್ಯಾಸತ್ಯತೆಯನ್ನು ಅನ್ಯ ಮೂಲಗಳಿಂದ ಖಚಿತಪಡಿಸಿಕೊಳ್ಳದೆ ಮೋದಿ ಹೇಳಿದ್ದೇ ವೇದವಾಕ್ಯವೆಂದು ಸ್ವೀಕರಿಸುವಷ್ಟು ಮೂರ್ಖರೇ? ಇಷ್ಟೆಲ್ಲ ಯಾಕೆ ಹೇಳಬೇಕಾಯಿತು ಅಂದರೆ ಅಧಿಕೃತ ಅಂಕಿಸಂಖ್ಯೆಗಳ ಪ್ರಕಾರವೆ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಸರಾಸರಿ ಜಿಡಿಪಿ ದರ 5.89% ಇದ್ದರೆ ಯುಪಿಎ 1 ಮತ್ತು 2ರ ಅವಧಿಯಲ್ಲಿ ತಲಾ 8.14% ಮತ್ತು 7.27% ದಾಖಲಾಗಿದೆ.

ವಾಸ್ತವವಾಗಿ 1999ರಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಜಿಡಿಪಿ ದರ ಶೇಕಡಾ 7.9ರಷ್ಟಿತ್ತು. ಮುಂದಿನ ವರ್ಷಕ್ಕಾಗುವಾಗ ಜರ್ರನೆ 4.3ಕ್ಕಿಳಿದು 2001-02ರಲ್ಲಿ 5.5ಕ್ಕೆ ಏರಿತು. 2002-03ರಲ್ಲಿ ಮತ್ತೆ ಕುಸಿದು 3.3% ಆಯಿತು. ಕೇವಲ 2003-04ರ ಅವಧಿಯಲ್ಲಿ ಏಕಾಏಕಿ ಏರಿಕೆಯಾಗಿ 8.03ಕ್ಕೆ ತಲುಪಿತ್ತು. ಮೋದಿ ಉಲ್ಲೇಖಿಸಿದ್ದು ಕೇವಲ ಈ ಒಂದು ವರ್ಷದ ಸಾಧನೆಯನ್ನು. ಬೇಸಾಯ, ಉದ್ಯಮ, ಸೇವೆ, ರಫ್ತು, ವಿದೇಶಿ ವಿನಿಮಯ ಗಳಿಕೆ ಮುಂತಾದ ಯಾವ ವಲಯವನ್ನು ಪರಿಗಣಿಸಿದರೂ ಯುಪಿಎ ಅಭಿವೃದ್ಧಿ ದರಗಳು ಎನ್‌ಡಿಎಗಿಂತಲೂ ಜಾಸ್ತಿ. ಪ್ರಜ್ಞಾವಂತ ಜನ ಮೋದಿಯ ಬುರುಡೆಗಳಿಗೆ ಗೊಳ್ಳೆಂದು ನಗದೆ ಇನ್ನೇನು ಮಾಡಬೇಕು?

ಇಲ್ಲಿ ಇವೆರಡು ಸರ್ಕಾರಗಳ ಸಾಧನೆಗಳನ್ನು ಹೋಲಿಸುವ ಉದ್ದೇಶ ಮೋದಿ ಸುಳ್ಳುಗಳನ್ನು ಬಯಲಿಗೆಳೆಯುವುದೇ ಹೊರತು ಖಂಡಿತಕ್ಕೂ ಯುಪಿಎ ಸರ್ಕಾರದ ಆರ್ಥಿಕನೀತಿಗಳನ್ನು ಹೊಗಳುವುದಲ್ಲ. ಏಕೆಂದರೆ ಜಿಡಿಪಿ ದರದಲ್ಲಿ ಹೆಚ್ಚಳವಾಗಿರುವುದಕ್ಕೆ ಬೇಸಾಯ ಮತ್ತು ಉದ್ಯಮ ವಲಯಗಳು ಕಾರಣವಲ್ಲ. ಅದಕ್ಕೆ ಪ್ರಮುಖವಾಗಿ ವಿದೇಶಿ ನೇರ ಹೂಡಿಕೆಗಳೇ ಕಾರಣ. ಭಾರತದ ಆರ್ಥಿಕತೆ ಇಂದು ವಿಶ್ವ ಆರ್ಥಿಕತೆ ಜೊತೆ ಲಿಂಕ್ ಆಗಿದೆ. ಹಾಗಾಗಿ ಬಿಜೆಪಿ ಅಧಿಕಾರಕ್ಕೆ ಬಂದಾಕ್ಷಣ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ ಎಂದು ನಂಬುವವರು ಭ್ರಮಾಲೋಕದಲ್ಲಿ ತೇಲುತ್ತಿದ್ದಾರೆ. (ಆಧಾರ: ಮುಕುಲ್ ಸಿನ್ಹಾ hhttp://www.truthofgujarat.com)





ಕರ್ನಾಟಕದವರೇ ಆದ ಕಲಾವಿದ ಸತೀಶ್ ಆಚಾರ್ಯ ಅವರು ಬೂಸಿ ಬಸ್ಯ ಮೋದಿ ಕುರಿತು ರಚಿಸಿದ ಈ ವ್ಯಂಗ್ಯ ಚಿತ್ರ ಇಂಟರ್‌ನೆಟ್‌ನಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಆಚಾರ್ಯ ಅವರಿಗೆ ಹ್ಯಾಟ್ಸ್ ಆಫ್!

ಮೋದಿಯ ದೆಹಲಿ ರ್‍ಯಾಲಿ, ಎಷ್ಟು ಜನ ಸೇರಿದ್ದರು?

ದಿನಪತ್ರಿಕೆಗಳು ಸುಳ್ಳು ಹೇಳುವದನ್ನೇ ಕೆಲಸ ಮಾಡಿಕೊಂಡುಬಿಟ್ಟರೆ ಕಿರಿಕಿರಿ ಅನಿಸುತ್ತದೆ ಅಲ್ಲವೆ...?

ಈಗ ಮುಖ್ಯವಾಹಿನಿಯ ಮೀಡಿಯಾಗಳಲ್ಲೆಲ್ಲಾ ನರೇಂದ್ರ ಮೋದಿಯ ಭಜನೆ ಸಾಗುತ್ತಿದೆ. ಅಂತಾ ಭಜನೆಗಳಲ್ಲಿ ಸುಳ್ಳು-ಉತ್ಪ್ರೇಕ್ಷೆ, ವೈಭವೀಕರಣಗಳೆಲ್ಲಾ ಎದ್ದು ಕಾಣುತ್ತಿರುತ್ತದೆ.

ಉದಾಹರಣೆಗೆ ಮೊನ್ನೆ ಸೆಪ್ಟೆಂಬರ್ 29 ರಂದು ದೆಹಲಿಯಲ್ಲಿ ಒಂದು ದೊಡ್ಡ ಬಿಜೆಪಿ ರ್‍ಯಾಲಿ ಆಯಿತು. ಅಲ್ಲಿ ಮೋದಿಯೇ ಮುಖ್ಯ ಭಾಷಣಕಾರನಾಗಿದ್ದ.

ಅದರ ಬಗ್ಗೆ ಕನ್ನಡ ದಿನಪತ್ರಿಕೆಗಳಲ್ಲಿ ವರದಿ ಬಂದವು. ಬರಲಿ. ಆದರೆ, ಜೊತೆಗೆ ರ್‍ಯಾಲಿಯಲ್ಲಿ ಎಷ್ಟು ಜನ ಭಾಗವಹಿಸಿದ್ದರೆಂಬ ಸಂಖ್ಯೆ ಬಗ್ಗೆ ಯಾವ್ಯಾವ ಪತ್ರಿಕೆ ಏನೇನು ಬರೆಯಿತೆಂಬುದನ್ನು ನೋಡೋಣ.

ಪತ್ರಿಕೆ	ಬಿಂಬಿಸಿದ ಸಂಖ್ಯೆ
ಕನ್ನಡಪ್ರಭ	8 ಲಕ್ಷ ಜನ
ಪ್ರಜಾವಾಣಿ	ಬೃಹತ್ ರ್‍ಯಾಲಿ
ವಿಜಯ ಕರ್ನಾಟಕ	ದೊಡ್ಡ ರ್‍ಯಾಲಿ
ಉದಯವಾಣಿ	7 ಲಕ್ಷ ಜನ
ವಿಜಯವಾಣಿ	4 ಲಕ್ಷ ಜನ
ವಾರ್ತಾಭಾರತಿ	ರ್‍ಯಾಲಿ
ದಿ ಹಿಂದೂ	1 ಲಕ್ಷಕ್ಕಿಂತ ಹೆಚ್ಚು

ಇದರಲ್ಲಿ ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕ ಹಾಗೂ ಹಿಂದೂ ಪತ್ರಿಕೆಗಳು ಸಮತೋಲನ ಕಾಯ್ದುಕೊಂಡಿರುವುದು ಕಾಣುತ್ತದೆ.

ಹೇಗೆ ಗೊತ್ತೆ?

ದೆಹಲಿ ರ್‍ಯಾಲಿಗೆ ಬಿಜೆಪಿಗಳು ಐದು ಲಕ್ಷ ಜನರನ್ನು ನಿರೀಕ್ಷಿಸಿದ್ದರು. ಆದರೆ ಬಂದದ್ದು ಒಂದು ಲಕ್ಷ ಹಾಗೂ ಕೊಂಚ ಹೆಚ್ಚು ಮಂದಿ ಮಾತ್ರ!

ಈ ಅಂಕಿಅಂಶವನ್ನು ನೀಡಿರುವುದು ನೈಲೇಶ್ ಮಿಶ್ರಾ ಎಂಬಾತ. ಈತ ಗುಜರಾತ್ ಸರ್ಕಾರದ ವಾರ್ತಾ ಇಲಾಖೆಯ ಉನ್ನತಾಧಿಕಾರಿ. ನೈಲೇಶ್ ಎಲ್ಲಾ ಸುದ್ದಿಸಂಸ್ಥೆಗಳಿಗೂ ಇದೇ ಅಧಿಕೃತ ಮಾಹಿತಿ ನೀಡಿದ್ದಾಗಲೂ ಉದಯವಾಣಿ, ಕನ್ನಡ ಪ್ರಭ ಹಾಗೂ ವಿಜಯವಾಣಿ ಪತ್ರಿಕೆಗಳು ಸುಳ್ಳು ವರದಿ ಪ್ರಕಟಿಸಿದ್ದೇಕೆ?

ಇದು ಮೋದಿ ಭಜನೆ ಅಲ್ಲವೆ?

ಬೆಂಗಳೂರು ರ್‍ಯಾಲಿಗೆ 10 ಲಕ್ಷ ಜನ ಬರ್ತಾರಂತೆ

ಹೀಗೆಂದು ನಮೋ ಬ್ರಿಗೇಡ್‌ನ ಜನ ಈಗಾಗಲೇ ಅಬ್ಬರದ ಪ್ರಚಾರ ಶುರು ಮಾಡಿದ್ದಾರೆ.

ಇಲ್ಲಿ ನಾವು ಕೇಳಬೇಕಾದ ಮೊದಲ ಪ್ರಶ್ನೆ ಏನೆಂದರೆ ಬೆಂಗಳೂರಿನಲ್ಲಿ 10 ಲಕ್ಷ ಜನ ಕೂರಬಹುದಾದ ದೊಡ್ಡ ಸ್ಥಳ ಎಲ್ಲಿದೆ ಎಂಬುದು?

ಕನ್ನಡಪ್ರಭ

ಉದಯವಾಣಿ

ಕನ್ನಡ ದಿನಪತ್ರಿಕೆ

ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ 25 ಸಾವಿರಕ್ಕಿಂತ ಹೆಚ್ಚು ಜನ ಹಿಡಿಸಲ್ಲ. ಜಕ್ಕರಾಯನಕೆರೆ, ಮಲ್ಲೇಶ್ವರಂ ಮೈದಾನದ ಸಾಮರ್ಥ್ಯ ಹತ್ತು ಸಾವಿರವಷ್ಟೆ. ಇನ್ನು ಅರಮನೆ ಮೈದಾನವಿಡೀ ತುಂಬಿಸಿದರೂ 1 ಲಕ್ಷ ಜನ ತುಂಬಬಹುದಷ್ಟೆ.

ಹಾಗಿದ್ದಾಗ ಮೋದಿ ರ್‍ಯಾಲಿಗೆ ಹತ್ತು ಲಕ್ಷ ಜನ ಎಲ್ಲಿಂದ ಬರುತ್ತಾರೆ? ಹೇಗೆ ಬರುತ್ತಾರೆ? ಎಲ್ಲಿ ಸೇರುತ್ತಾರೆ.

ಮೋದಿ ಶಿಷ್ಯರು ಉತ್ತರಿಸಲಿ.

ಒಂದು ರ್‍ಯಾಲಿಗೆ 15 ಕೋಟಿ ರೂ. ಖರ್ಚು!

ಮೋದಿಯ ದೆಹಲಿ ವಿಕಾಸ ರ್‍ಯಾಲಿಗೆ ಖರ್ಚಾದ ಹಣ 15 ಕೋಟಿ ರೂಪಾಯಿ ಎಂದು ಬಿಜೆಪಿ ವಕ್ತಾರರೇ ಹೇಳಿರುವ ಬಗ್ಗೆ ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ. ಅದೇ ವರದಿಯಲ್ಲಿ ಈ ರ್‍ಯಾಲಿಗೆ ಬಂದವರ ಸಂಖ್ಯೆ ಒಂದೂವರೆ ಲಕ್ಷ ಜನ ಎಂತಲೂ ದಾಖಲಿಸಲಾಗಿದೆ. ಅಂದಹಾಗೆ ರ್‍ಯಾಲಿಗಾಗಿ ಹಾಕಲಾಗಿದ್ದ ವಾಟರ್‌ಪ್ರೂಫ್ ಪೆಂಡಲ್‌ನ ಸಾಮರ್ಥ್ಯ ಕೇವಲ ಒಂದು ಲಕ್ಷ ಜನರಿಗಾಗಿ ಮಾತ್ರ ಎಂಬುದು ಈ ವರದಿಯಲ್ಲಿದೆ ಗಮನಿಸಿ. ■

ಸಿಖ್ ರೈತರ ವಿರುದ್ಧ ಪಿತೂರಿ




ಮೋದಿಯ ಚರ್ಯೆಯನ್ನು ಗಮನಿಸಿದರೆ ಆತ ಕೇವಲ ಗುಜರಾತಿಗಳ ಬಗ್ಗೆ ಅಲ್ಲೂ ಕೇವಲ ಹಿಂದೂಗಳ ಬಗ್ಗೆ ಚಿಂತಿಸುತ್ತಿರುವಂತಿಲ್ಲವೇ? ಉತ್ತರಾಂಚಲದಲ್ಲಿ ನೆರೆಗೆ ಸಿಕ್ಕಿಹಾಕಿಕೊಂಡ ಸಾವಿರಾರು ಗುಜರಾತಿಗಳನ್ನು ಕ್ಷಣಾರ್ಧದಲ್ಲಿ ಪಾರುಮಾಡಿದ ರ್‍ಯಾಂಬೊ ಕತೆ ಯಾರಿಗೆ ತಾನೆ ಗೊತ್ತಿಲ್ಲ! ಇಂಥಾ ಮೋದಿಯ ಸರ್ಕಾರವೀಗ ಸುಮಾರು 40 ವರ್ಷಗಳಿಂದಲೂ ಗುಜರಾತ್‌ನಲ್ಲಿ ನೆಲೆಸಿರುವ ಸಿಖ್ಖರನ್ನು ಹೊರಗಿನವರೆನ್ನುವುದರಲ್ಲಿ ಆಶ್ಚರ್ಯವೇನು ಬಂತು? ಇದರ ಹಿನ್ನೆಲೆ ತಿಳಿಯಲು ನಾಲ್ಕು ದಶಕಗಳಷ್ಟು ಹಿಂದೆ ಹೋಗಬೇಕಾಗುತ್ತದೆ. ಲಾಲ್ ಬಹಾದೂರ್ ಶಾಸ್ತ್ರಿಯವರು ಭಾರತದ ಪ್ರಧಾನಮಂತ್ರಿ ಆಗಿದ್ದ ಕಾಲವದು. ಆಗೊಮ್ಮೆ ಗುಜರಾತ್‌ನ ಕಚ್‌ನಲ್ಲಿ ಪಾಕಿಸ್ತಾನದ ಗಡಿಗೆ ತಾಗಿಕೊಂಡಿರುವ ಬಂಜರು ಪ್ರದೇಶಗಳನ್ನು ಬೇಸಾಯಯೋಗ್ಯವಾಗಿ ಪರಿವರ್ತಿಸಲು ನಿರ್ಧರಿಸಲಾಯಿತು. ಪಂಜಾಬಿನಿಂದ ಸಿಖ್ ರೈತರನ್ನು ಕರೆತಂದು ಜಮೀನುಗಳನ್ನು ಅವರ ವಶಕ್ಕೆ ನೀಡಲಾಯಿತು. ಅವರು ಪಾಪ ಹಗಲುರಾತ್ರಿಯೆನ್ನದೆ ದುಡಿದು, ಬಣಭೂಮಿಗಳನ್ನು ಅಭಿವೃದ್ಧಿಪಡಿಸಿದರಲ್ಲದೆ ಅಲ್ಲಿ ಬೇಸಾಯ ಮಾಡಿಕೊಂಡು ಬದುಕುತ್ತಾ ಬಂದಿದ್ದರು. ಆದರೆ ಈಗ ಅಚಾನಕ್ ಆಗಿ ಮೋದಿ ಸರ್ಕಾರ ಇವರಿಗೆಲ್ಲ ದೊಡ್ಡದೊಂದು ಷಾಕ್ ಕೊಟ್ಟಿದೆ. ಗುಜರಾತ್‌ನಲ್ಲಿ ಕೃಷಿ ಭೂಮಿ ಖರೀದಿಸುವ ಹಕ್ಕಿರುವುದು ಕೇವಲ ಗುಜರಾತಿಗಳಿಗೆ ಎಂಬ ವಾದವನ್ನು ಮುಂದಿಟ್ಟು ಅವರನ್ನೆಲ್ಲ ಒಕ್ಕಲೆಬ್ಬಿಸಲು ಹೊರಟಿದೆ. ಸಿಖ್ ರೈತರು ಮೋದಿಯನ್ನು ಭೇಟಿ ಮಾಡಲು 5 ಬಾರಿ ಪ್ರಯತ್ನಿಸಿ ವಿಫಲರಾಗಿದ್ದಾರೆ. ಈ ಮಧ್ಯೆ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿರುವ ಗುಜರಾತ್ ಸರ್ಕಾರ ಆ ಜಮೀನುಗಳೆಲ್ಲ ತನಗೆ ಸೇರಿದ್ದೆಂದು ವಾದಿಸುತ್ತಿದೆ. ಇನ್ನಷ್ಟು ವಿವರಗಳಿಗೆ ನೋಡಿ:

hhttp://www.ndtv.com/video/player/ndtv-special-ndtv-india/video-story/289000 ■

ಸಂಸದನಾಗಿ ಜೀವನ ಪಾವನ ಮಾಡಿಕೊಳ್ಳುವ ಚಟಕ್ಕೆ ಬಿದ್ದವರ ಹಠದ ಹಾರಾಟ ದಿನಕ್ಕೊಂದು ಆಯಾಮ ಪಡೆದುಕೊಂಡು ಕೆನರಾ, ಉಡುಪಿ ಮತ್ತು ಮಂಗಳೂರು ಈ ಮೂರು ಪಾರ್ಲಿಮೆಂಟ್ ಕ್ಷೇತ್ರವಾಸಿಗಳಿಗೆ ನಾನಾ ನಮೂನೆ ಮನರಂಜನೆ ಒದಗಿಸುತ್ತಿದೆ. ಕಡಲತಡಿಯ ಈ ಮೂರೂ ಕ್ಷೇತ್ರದಲ್ಲಿ ಮುಖಾಮುಖಿ ಗುದುಮುರಿಗೆ ಏನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯದಲ್ಲಷ್ಟೇ!

ಕರಾವಳಿ

ಲೋಕಸಭೆ ಚುನಾವಣೆ ಗುಂಗು; ಟಿಕೆಟ್ ಹಂಗು!

ಕರಾವಳಿಯ ರಾಜಕಾರಣದ ಜಗುಲಿಯಲ್ಲೀಗ ಲೋಕಸಭೆ ಎಲೆಕ್ಷನ್ ಗುಂಗೇರಿಬಿಟ್ಟಿದೆ!

ಸಂಸದನಾಗಿ ಜೀವನ ಪಾವನ ಮಾಡಿಕೊಳ್ಳುವ ಚಟಕ್ಕೆ ಬಿದ್ದವರ ಹಠದ ಹಾರಾಟ ದಿನಕ್ಕೊಂದು ಆಯಾಮ ಪಡೆದುಕೊಂಡು ಕೆನರಾ, ಉಡುಪಿ ಮತ್ತು ಮಂಗಳೂರು ಈ ಮೂರು ಪಾರ್ಲಿಮೆಂಟ್ ಕ್ಷೇತ್ರವಾಸಿಗಳಿಗೆ ನಾನಾ ನಮೂನೆ ಮನರಂಜನೆ ಒದಗಿಸುತ್ತಿದೆ. ಕಡಲ ತಡಿಯ ಈ ಮೂರೂ ಕ್ಷೇತ್ರದಲ್ಲಿ ಮುಖಾಮುಖಿ ಗುದುಮುರಿಗೆ ಏನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯದಲ್ಲಷ್ಟೇ! ಎಡಬಿಡಂಗಿ ಯಡ್ಡಿ ಮಹಾತ್ಮ ತನ್ನ ಕೆಜೆಪಿ ಪ್ರೈ.ಲಿ.ಗೆ ಕೆನರಾ ಮತ್ತು ಮಂಗಳೂರು ಕ್ಷೇತ್ರ ಹದವಾಗಿದೆಯೆಂಬ ಲೆಕ್ಕಾಚಾರ ಹಾಕಿಕೊಂಡಿದ್ದಾರೆ. ಬಿಜೆಪಿ ಜತೆ ಮೈತ್ರಿಯಾದರೆ ಆರೆಸೆಸ್ ಅಡಂಬೋಲವಾದ ಈ ಕ್ಷೇತ್ರದಲ್ಲಿ ಆರಾಮಾಗಿ ಗೆಲ್ಲಬಹುದೆಂಬ ಭ್ರಮೆ ಯಡ್ಡೀಜಿಗೆ. ಜೆಡಿಎಸ್‌ನ ಅಪ್ಪ-ಮಗ ಸ್ವರ್ಗದಿಂದಲೇ 'ಬಂ'ನಡೆಸುವ ಜಾದೂದಿಂದ ಕೆನರಾ ಕ್ಷೇತ್ರ ಕಬಳಿಸಬಹುದೆಂದು ಭಾವಿಸಿದ್ದಾರೆ. ಕರಾವಳಿಯಲ್ಲಿ ಅಭ್ಯರ್ಥಿ ಹೂಡುವ ಯೋಗ ಯಡ್ಡಿಗೆ ಇದೆಯೋ ಇಲ್ಲವೋ ಹೇಳಲಾಗದು. ಆದರೆ ಜೆಡಿಎಸ್ ಉತ್ತರ ಕನ್ನಡದಲ್ಲಿ ಮಾತ್ರ ಒಂದು ಕೈ ನೋಡೋದು ಖಂಡಿತ!

ಉತ್ತರ ಕನ್ನಡ: ಅಡ್ಡ ಕಸುಬಿನ ಅನಂತಕುಮಾರ್ ಹೆಗಡೆ

ಕೆನರಾ ಕ್ಷೇತ್ರ ಹೊಸ ಎಂಪಿಗಾಗಿ ಹಾತೊರೆಯುತ್ತಿದೆ. ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಖಾನಾಪುರ ಮತ್ತು ಉತ್ತರ ಕನ್ನಡದ ಅಷ್ಟೂ ತಾಲ್ಲೂಕು ಸೇರಿಸಿ ರಚಿಸಲಾಗಿರುವ ಕೆನರಾಕ್ಕೆ ಬಿಜೆಪಿಯ ಜನದ್ರೋಹಿ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿಯ ಮತಾಂಧ ಮುಸುಕು ನೋಡಿ-ನೋಡಿ ಅಸಹ್ಯ ಆಗಿದೆ! ಈ ಅನಂತ್ಮಾಣಿ ಎಷ್ಟು ಕೊಳಕು ಕೋಮುವಾದಿಯೋ ಅಷ್ಟೇ ಬ್ರಾಹ್ಮಣಿಕೆ ಭೂಪ! ನಿರಂತರ ಹತ್ತು ವರ್ಷ ಎಂಪಿಯಾಗಿರುವ ಈ ದಂಡಪಿಂಡ ಜಿಲ್ಲೆಯ ಒಂದೇ ಒಂದು ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನವೇ ಮಾಡಿಲ್ಲ; ಜನಸಾಮಾನ್ಯರು ಅದೆಂಥ ಕಷ್ಟದಲ್ಲಿದ್ದರೂ ಈತ ಸ್ಪಂದಿಸಿದ ಉದಾಹರಣೆಯಿಲ್ಲ. ಒಂದು ಕಾಲದಲ್ಲಿ ಬುತ್ತಿ ಕಟ್ಟಿಕೊಂಡು ಹಳ್ಳಿಹಳ್ಳಿಗೆ ಹೋಗಿ 'ಬೆಂಕಿ ಬೈಠಕ್' ಮಾಡುತ್ತಿದ್ದ ಈ ಚೆಡ್ಡಿ ಅಬ್ಬೇಪಾರಿ ಇವತ್ತು ಅಡ್ಡಕಸುಬಿನಿಂದಲೇ ಕೋಟ್ಯಾಧೀಶನಾಗಿ ಹೋಗಿದ್ದಾನೆ.

ಕಾಡು ಅತಿಕ್ರಮಿಸಿ ಭರ್ಜರಿ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಮತ್ತೀ ಘಟ್ಟದ ತನ್ನ ಎಸ್ಟೇಟ್‌ಗೆ ಹೋಗಲು ಎಂಪಿ ಫಂಡಿಂದ ರಸ್ತೆ ಮಾಡಿಸಿಕೊಂಡಿದ್ದಾನೆ. ಹೆಂಡತಿಗೊಂದು 'ಕದಂಬ' ಎಂಬ ದೋಖಾ ಟ್ರಸ್ಟ್ ಮಾಡಿಕೊಟ್ಟು ಸರ್ಕಾರದ ಸವಲತ್ತು ಸ್ವಾಹಾ ಮಾಡಿದ್ದಾನೆ. ಈತ ಅದೆಂಥ ಬಕಾಸುರನೆಂದರೆ, ಹೆಂಡತಿಯನ್ನೇ ಆಪ್ತ ಸಹಾಯಕಿ ಎಂದು ನೇಮಿಸಿಕೊಂಡು ಸರ್ಕಾರಿ ಸಂಬಳ ತಿನ್ನುತ್ತಿದ್ದಾನೆ. ದೇಶೋದ್ಧಾರ-ಹಿಂದೂ ರಾಷ್ಟ್ರ-ಪ್ರಾಮಾಣಿಕತೆ ಗುತ್ತಿಗೆ ಹಿಡಿದಂತೆ ಉದ್ದುದ್ದ ಭಾಷಣ ಬಿಗಿಯುವ ಅನಂತ್ಮಾಣಿಯ ಅವಾಂತರ-ಅವ್ಯವಹಾರ-ಅಧಿಕಪ್ರಸಂಗ ಒಂದೆರಡಲ್ಲ; ಆತನ ಪರ್ಸೆಂಟೇಜ್ ಪುರಾಣವಂತೂ ಹೇಳತೀರದು. ಜಿಲ್ಲಾ ಬಿಜೆಪಿ ಮೇಲೆ ಹಿಡಿತ ಸಾಧಿಸಿ ಹಿತಶತ್ರು ಕಾಗೇರಿ ಮಾಣಿಯ ಹಣಿಯುವುದು, ಸ್ವ-ಜೀರ್ಣೋದ್ಧಾರ ಮಾಡಿಕೊಂಡು ರಂಗೀಲಾ ಜೀವನ ಸಾಗಿಸುವುದಷ್ಟೇ ಎಂಪಿಗಿರಿ ಕರ್ತವ್ಯ ತಿಂದು ಭಾವಿಸಿರುವ ಅನಂತ್ಮಾಣಿ ಕ್ಷೇತ್ರವಾಸಿಗಳ ಕೈಗೆ ಎಟುಕಿದ್ದೇ ಇಲ್ಲ...

ಇಂಥ ಇತಿಹಾಸ-ಭೂಗೋಳದ ಅನಂತ್ಮಾಣಿ ಮತ್ತೆ ಬಿಜೆಪಿಯಿಂದ ಎಂಪಿಯಾಗುವ ಚಟಕ್ಕೆ ಬಿದ್ದು ಜನರಿಗೆ ಮಂಕುಬೂದಿ ಎರಚತೊಡಗಿದ್ದಾನೆ. ಆತನಿಗೆ ಟಾಂಗ್ ಕೊಡಲು ಮಾಜಿ ಮಂತ್ರಿ- ಮೃದು ಚೆಡ್ಡಿ ಕಾಗೇರಿ ಹವಣಿಸುತ್ತಿದ್ದಾನೆ. ಜಿಲ್ಲಾ ಬಿಜೆಪಿಯಲ್ಲಿ ತಾನೊಬ್ಬನೇ ಸಂಸದಗಿರಿ ಹುರಿಯಾಳೆಂಬ ಅನಂತ್ಮಾಣಿಯ ಅಹಂಕಾರ ಮುರಿಯಲು ಸ್ಕೆಚ್ ಹಾಕಿರುವ ಕಾಗೇರಿ ಈ ಬಾರಿ ತಾನು ಬಿಜೆಪಿ ಎಂಪಿ ಕ್ಯಾಂಡಿಡೇಟ್ ಎಂಬ ಸಂದೇಶ ರವಾನಿಸುತ್ತಿದ್ದಾನೆ.

ಹಾಗೆ ನೋಡಿದರೆ ಕಾಗೇರಿ-ಅನಂತ್ಮಾಣಿ ಇಬ್ಬರೂ ಎಂಪಿಯಾಗುವ ಅರ್ಹತೆಯವರೇನಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದ ಕಾಗೇರಿ ತಾನೆಂಥ ನಾಲಾಯಕ್ ಎಂಬುದನ್ನು ಸ್ವಯಂ ಸಾಬೀತುಪಡಿಸಿಕೊಂಡಿದ್ದಾನೆ. ಅನಂತ್ಮಾಣಿ ಒಂದು ದಶಕದಿಂದ ನಿದ್ದೆ ಬಡುಕ ಎಂಪಿ ತಾನೆಂದು ಇಡೀ ಕ್ಷೇತ್ರಕ್ಕೆ ಪರಿಚಯಿಸಿಕೊಂಡಿರುವಾತ. ಅನಂತ್ಮಾಣಿ ಹಿಂದೂತ್ವದ ಗ್ಯಾಂಗ್ ಮೂಲಕ ಟಿಕೆಟ್ ತಂತ್ರಗಾರಿಕೆ ನಡೆಸಿದರೆ, ಕಾಗೇರಿ ಪಕ್ಕಾ ಚೆಡ್ಡಿ ಪಡೆಯಿಂದ ಲಾಬಿ ಮಾಡಿಸುತ್ತಿದ್ದಾನೆ. ಇವರಿಬ್ಬರ ಬಿಟ್ಟರೆ ಉತ್ತರ ಕನ್ನಡ ಬಿಜೆಪಿಯಲ್ಲಿ ಸಂಸದಗಿರಿಗೆ ಸ್ಪರ್ಧಿಸುವ ತಾಕತ್ತಿನವರಿಲ್ಲ! ಅನಂತ್ಮಾಣಿ ಈ ಬಾರಿ ಗೆಲ್ಲೋದು ಕಷ್ಟವೆಂಬ 'ವರದಿ' ನೋಡಿರುವ ಬಿಜೆಪಿಯ ದೊಡ್ಡೋರು ಕಾಗೇರಿಗೆ ಛಾನ್ಸ್ ಕೊಟ್ಟರೆ ಹೇಗೆಂದು ಯೋಚಿಸುತ್ತಿದ್ದಾರೆ.

ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ಉದ್ದೋಉದ್ದ ಕ್ಯೂ ನೆರೆದಿದೆ. ಈ ಸಂತೆಯಲ್ಲಿ ಎದ್ದು ಕಾಣೋದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಮತ್ತು ಮಂತ್ರಿ ದೇಶಪಾಂಡೆಯ ಕುಮಾರ ಕಂಠೀರನೂ- ಕೇಂದ್ರದ ಎನ್‌ಸಿಪಿ ಮಂತ್ರಿ ಪ್ರಫುಲ್ ಪಟೇಲ್ ಅಳಿಮಯ್ಯನೂ ಆಗಿರುವ ಪ್ರಶಾಂತ್ ದೇಶಪಾಂಡೆ ಎಂಬ ಚಾಕಲೇಟ್ ಪೋರ. ಇವರಿಬ್ಬರೂ ಜಾತಿ, ಹಣ, ಅಧಿಕಾರ ಬಲ ಮುಂತಾದ ವಿವಿಧ ಕಾರಣದಿಂದ ಸಂಘ ಪರಿವಾರದ ಕೋಮು ರಾಜಕಾರಣಕ್ಕೆ ಬಲವಾದ ಪೈಪೋಟಿ ಒಡ್ಡಬಲ್ಲರು.

ದೇಶಪಾಂಡೆಗೆ ಜಿಲ್ಲೆಯಲ್ಲಿ ಹಿಂಬಾಲಕರ ಪಡೆಯಿದೆ. ಜತೆಗೆ ಕೋಪ್ಪರಿಗೆಗಟ್ಟಲೆ ಕಳ್ಳ-ಕಾಸಿದೆ. ಮಂತ್ರಿತ್ವದ ಅಧಿಕಾರವಿದೆ. ಇದೆಲ್ಲ ಆತನ ಮಗನನ್ನು ಪ್ರಬಲ ಅಭ್ಯರ್ಥಿಯಾಗಿ ಮಾಡುವ ಸಾಧ್ಯತೆಯಿದೆ. ಪ್ರಶಾಂತ್ ದೇಶಪಾಂಡೆ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಕಟ್ಟರ್ ಆರೆಸೆಸ್‌ನ ಕೊಂಕಣಿಗರು ಬಿಜೆಪಿಗೆ ಕೈಕೊಡುವುದು ಗ್ಯಾರಂಟಿ. ಅನಂತ್ಮಾಣಿ ಬಗ್ಗೆ ಬೇಸರದಲ್ಲಿರುವ ಹೈಗರೂ ಕಾಂಗ್ರೆಸ್ ಕಡೆ ಒಲಿಯುತ್ತಾರೆ. ಆದರೆ ಇವರೆಲ್ಲರಿಗಿಂತ ಬಿ.ಕೆ. ಹರಿಪ್ರಸಾದ್ ಒಬ್ಬರೇ ಗೆದ್ದೇ ಗೆಲ್ಲುತ್ತಾರೆಂದು ಹೇಳಬಹುದಾದ ಅಭ್ಯರ್ಥಿ.

ಕೆನರಾದಲ್ಲಿ ದೀವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹರಿಪ್ರಸಾದ್ ಅದೇ ಜಾತಿಗೆ ಸೇರಿದ ಹಿರಿಯ ರಾಜಕಾರಣಿ. ಜಿಲ್ಲೆಯಲ್ಲಿರುವ ದೇಶಪಾಂಡೆ V/s ಮ್ಯಾಗಿ ರಾಜಕಾರಣದ ಮೇಲಾಟ ಸಾಮರ್ಥವಾಗಿ ನಿಭಾಯಿಸುವ ಚಾಕಚಕ್ಯತೆ ಇರುವಾತ. ಇವರು ಕ್ಯಾಂಡಿಡೇಟಾದರೆ ಮ್ಯಾಗಿ ಮತ್ತು ದೇಶಪಾಂಡೆಯ ಪಕ್ಷ ವಿರೋಧಿ ಕಳ್ಳಾಟ ನಡೆಯದು. ಹಾಗೆಯೇ ಅಲ್ಪಸಂಖ್ಯಾತರು-ಹಾಲಕ್ಕಿ ಒಕ್ಕಲಿಗರು, ಕೋಮಾರ ಪಂಥರು, ಮೀನುಗಾರರು ಹರಿ ವರ್ಚಸ್ಸಿನಿಂದ ಕಾಂಗ್ರೆಸ್ ಕಡೆ ವಾಲುವ ಸಾಧ್ಯತೆಯೇ ಹೆಚ್ಚು. ಮ್ಯಾಗಿ ಮಗ ನಿವೇದಿತ್ ಆಳ್ವಾಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೆ, ದೇಶಪಾಂಡೆ ಯಾವ 'ತ್ಯಾಗ' ಮಾಡಿಯಾದರೂ ಆತನ ಸೋಲಿಸಲೆತ್ನಿಸುತ್ತಾರೆ. ಬಿಜೆಪಿಯ ಎಂಪಿ ಅನಂತ್ಮಾಣಿಯನ್ನು ಮನೆಗೆ ಕಳಿಸುವ ಮೂಡ್‌ನಲ್ಲಿರುವ ಕೆನರಾದ ಜನರ ಭಾವನೆಯನ್ನು ಕಾಂಗ್ರೆಸ್ ಕಿಂಗ್‌ಗಳು ಅರ್ಥಮಾಡಿಕೊಂಡು ಭಿನ್ನಮತಕ್ಕೆ ಆಸ್ಪದ ಆಗದಂತೆ ಟಿಕೆಟ್ ಕೊಡಬೇಕಿದೆ. ಪ್ರಶಾಂತ್ ದೇಶಪಾಂಡೆ, ನಿವೇದಿತ್ ಆಳ್ವನಿಗಿಂತ ಹರಿಯೇ ಬೆಟರ್ ಎಂಬುದು ಅರಿಯಬೇಕಿದೆ. ಅನಾಯಾಸವಾಗಿ ಗೆಲ್ಲುವ ಛಾನ್ಸ್ ಈ ಬಾರಿ ಕಾಂಗ್ರೆಸ್‌ಗೆ ಇದೆ ನಿಜ.

ದೇವೇಗೌಡ-ಕುಮಾರಸ್ವಾಮಿ ಕೆನರಾದಲ್ಲಿರುವ ದೀವರ ಮತ ಬ್ಯಾಂಕ್ ಆಧಾರದ ಮೇಲೆ ಕ್ಯಾಂಡಿಡೇಟ್ ನಿಲ್ಲಿಸುವ ಸ್ಕೆಚ್ ಹಾಕುತ್ತಿದ್ದಾರೆ. ಉತ್ತರ ಕನ್ನಡದ ದೀವರ ಸಮುದಾಯದಲ್ಲಿ 'ಬಂ' ಪ್ರಭಾವ ಈಗಲೂ ಒಂದಿಷ್ಟಿದೆ. 'ಬಂ' ಮಗ ಮಧುರನ್ನು ಮುಂದಿಟ್ಟುಕೊಂಡರೆ ಆ ಜಾತಿಯ ಮತ ಪಡೆಯಬಹುದು. ಹಾಗೆಯೇ ರಾಮಕೃಷ್ಣ ಹೆಗಡೆ ಜಾದೂ ಈಗಲೂ ಜಿಲ್ಲೆಯ ಬ್ರಾಹ್ಮಣರ ಕೇರಿಯಲ್ಲಿ ನಡೆಯುತ್ತದೆ. ಹಾಗಾಗಿ ರಾಮಕೃಷ್ಣ ಹೆಗಡೆಯ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆ ಎಂಬ ಸರಳ-ಸಜ್ಜನ-ಜಾಣ ಹುಡುಗ ಅಭ್ಯರ್ಥಿಯಾದರೆ ಗೆಲ್ಲಬಹುದೆಂದು ದೇವೇಗೌಡ ಹೇಳುತ್ತಿದ್ದಾರೆ. ಆದರೆ ಎಲ್ಲೂ ಸಲ್ಲದ, ಔಟ್‌ಡೇಟೆಡ್ ಮಾಜಿ ಮಂತ್ರಿ-ಕಾರವಾರದ ಪ್ರಭಾಕರ ರಾಣೆ ತಾನೇ ಜೆಡಿಎಸ್ ಕ್ಯಾಂಡಿಡೇಟೆಂದು ಘೋಷಿಸಿಕೊಂಡು ಓಡಾಡುತ್ತಿದ್ದಾರೆ. ಎಲ್ಲ ಪಕ್ಷಕ್ಕೆ ಎರಡೆರಡು ಬಾರಿ ಹೋಗಿಬಂದಿರುವ ರಾಣೆ ಠೇವಣಿ ಇಟ್ಟುಕೊಳ್ಳುವುದೇ ಕಷ್ಟ. ಹಾಗೆಯೇ ಹಳಿಯಾಳದ ಮಾಜಿ ಶಾಸಕ ಸುನಿಲ್ ಹೆಗಡೆ ಎಂಬ ಕೊಂಕಣಿ ಪೋರನ ಹೆಸರೂ ಜೆಡಿಎಸ್ ಡೇರೆಯಲ್ಲಿ ಸುಳಿದಾಡುತ್ತಿದೆ. ಸ್ವತಃ ಸುನಿಲ್‌ಗೆ ಅಭ್ಯರ್ಥಿಯಾಗುವ ಮನಸ್ಸಿಲ್ಲ.

ಕೆನರಾ ಯಡ್ಡಿಯ ಫೇವರಿಟ್ ಲಿಸ್ಟ್‌ನಲ್ಲಿದೆ. ಇದಕ್ಕೆ ಕಾರಣ ಖಾನಾಪುರ, ಕಿತ್ತೂರು, ಹಳಿಯಾಳ, ಮುಂಡಗೋಡ ಭಾಗದಲ್ಲಿ ಗಣನೀಯವಾಗಿರುವ ಆತನ ಜಾತಿಬಾಂಧವರಾದ ಲಿಂಗಾಯತರ ಬಾಹುಳ್ಯ. ಹಾಗಾಗಿ ಕೆನರಾ ತನಗೆ ಬಿಟ್ಟುಕೊಡುವಂತೆ ಆತ ಬಿಜೆಪಿ ಜತೆ ಚೌಕಾಸಿಗೆ ಇಳಿಯಲಿದ್ದಾರಂತೆ. ಸಿದ್ದಾಪುರದ ರವಿ ಹೆಗಡೆ ಹೂವಿನಮನೆ ಎಂಬ ಕಾಗೇರಿ ವೈರಿ ತಾನೇ ಕೆಜೆಪಿ ಕ್ಯಾಂಡಿಡೇಟ್ ಎಂದು ಮನಸ್ಸಲ್ಲೇ ಮಂಡಿಗೆ ಮೆಲ್ಲುತ್ತಿರುವ ಸಮಾಚಾರ ಹೊರಬಿದ್ದಿದೆ.

ಉಡುಪಿ-ಚಿಕ್ಕಮಗಳೂರು: ಬಿಜೆಪಿಯಲ್ಲಿ ಬರ

ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿಗೆ ಸರಿಯಾದ ಹುರಿಯಾಳೇ ಸಿಗದಾಗಿದೆ. ಮಾಜಿ ಸಿಎಂ ಸದಾನಂದ ಗೌಡರೇ ಇಲ್ಲಿ ಎದುಸಿರು ಬಿಡುತ್ತ ಕೂದಲೆಳೆ ಅಂತರದಿಂದ ಗೆದ್ದಿದ್ದರು. ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಎದುರು ಗೆಲ್ಲಲು ಸಾಕ್ಷಾತ್ ಸದಾನಂದ ಗೌಡನೆಂಬ ಸಂಘ ಪರಿವಾರದ ಬೆಂಕಿ ನವಾಬನೇ ತಿಡುಕಾಡಬೇಕಾದ ಕ್ಷೇತ್ರವಿದು. ಹಾಗಾಗಿ ಬಿಜೆಪಿಯಲ್ಲಿ ಕ್ಯಾಂಡಿಡೇಟ್‌ಗಳೇ ಇಲ್ಲದಾಗಿದೆ. ಸದಾನಂದ ಗೌಡ ಸಿಎಂ ಆಗಿದ್ದಾಗ ನಡೆದ ಬೈ-ಎಲೆಕ್ಷನ್‌ನಲ್ಲಿ ಬಿಜೆಪಿ ನೆಗೆದೇ ಬಿದ್ದಿತ್ತು. ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆ ಸಂಸದರಾದ ಬಳಿಕ ಕ್ಷೇತ್ರದ ಸಂಪರ್ಕ ನಿರಂತರವಾಗಿ ಇಟ್ಟುಕೊಂಡಿದ್ದಾರೆ. ಹಳ್ಳಿಹಳ್ಳಿಗೆ ಹೋಗಿ ಜನರ ಸಮಸ್ಯೆಗೆ ಸ್ಪಂದಿಸುತ್ತ ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದು ಆತನನ್ನು ಜನ ನಾಯಕನಾಗಿ ರೂಪಿಸಿದೆ. ಮತ್ತೆ ಕಾಂಗ್ರೆಸ್‌ನಿಂದ ಹೆಗ್ಡೆಯೇ ಕ್ಯಾಂಡಿಡೇಟ್.

ಹೆಗ್ಡೆ ಎದುರು ಬಿಜೆಪಿಯಿಂದ ತಾನು ನಿಲ್ಲುತ್ತೇನೆಂದು ಹೇಳುತ್ತಿರುವಾತ ಭಾನ್ಗಡಿ ಭೂಪ ಸಿ.ಟಿ. ರವಿ. ಈತನ ಬಿಟ್ಟರೆ ಮತ್ತ್ಯಾರೂ ಬಿಜೆಪಿ ಟಿಕೆಟ್ ಕೇಳುತ್ತಿಲ್ಲ. ರವಿಗೆ ತಾನು ಮಂತ್ರಿ-ಶಾಸಕನಾಗಿದ್ದಾಗ ಮಾಡಿದ ಕಳ್ಳದುಡ್ಡು, ಬಾಬಾ ಬುಡನ್ ಗಿರಿಯ ಕಮ್ಯುನಲ್ ಈಶ್ಯೂ ಮತ್ತು ಚಿಕ್ಕಮಗಳೂರು ಭಾಗದಲ್ಲಿರುವ ಸ್ವಜಾತಿ ಒಕ್ಕಲಿಗರ ಓಟು ಎಂಪಿ ಮಾಡಲಿದೆ ಎಂಬ ಹುಂಬ ಧೈರ್ಯ. ಆದರೆ ಆತ ಅದೆಷ್ಟೇ ಮೋದಿ ಕಾರ್ಡ್ ಎಸೆದು ಮತಾಂಧ ಮಾತಾಡಿದರೂ ಜನಪರ ಹೆಗ್ಡೆ ವಿರುದ್ಧ ಗೆಲ್ಲುವುದು ಕಷ್ಟ. ಜನರಿಗೆ ಆತನ ಬೊಗಳೆ ಬೂಟಾಟಿಕೆ ಅರ್ಥವಾಗಿದೆ. ಹಾಗೆಯೇ ಉಡುಪಿ ಜಿಲ್ಲೆಯಲ್ಲಿ ಆತ ತುಂಬ ವೀಕ್ ಆಗಿದ್ದಾನೆ! ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯಕುಮಾರ್ ಹೆಸರೂ ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿದೆಯಾದರೂ ಅಂತಿಮವಾಗಿ ರವಿಯ ಕಮ್ಯುನಲ್ ಕ್ಯಾಲಿಬರ್ ಆತನಿಗೇ ಬಿಜೆಪಿ ಟಿಕೆಟ್ ಕೊಡಿಸಲಿದೆ ಎಂದು ಚೆಡ್ಡಿಗಳೇ ಹೇಳುತ್ತಿದ್ದಾರೆ. ಸದಾನಂದ ಗೌಡರಿಗೆ ಈ ಕ್ಷೇತ್ರದಲ್ಲಿ ತಾನು ಗೆಲ್ಲೋದಿಲ್ಲ ಎಂಬುದು ಖಾತ್ರಿಯಾದ್ದರಿಂದ ಆತ ಆದೆಂದೋ ಬೆನ್ನು ಹಾಕಿ ಹೋಗಿದ್ದಾರೆ.

ಮಂಗಳೂರು: ನಳಿನ್‌ಗೆ ನಾಮ!

ಮಂಗಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳನ್ನು ಖುದ್ದು ನೋಡಿ ಹೋಗಲೆಂದು ಬಂದಿದ್ದ ಎಐಸಿಸಿ ವೀಕ್ಷಕರು ಕೊಂಡೊಯ್ದು ಎರಡು ಹೆಸರೆಂದರೆ, ಒಂದು, ಹಳೆ ಹುಲಿ-ಸೋಲಿನ ಸರದಾರ ಜನಾರ್ದನ ಪೂಜಾರಿ; ಮತ್ತೊಂದು ಎಐಸಿಸಿ ಸದಸ್ಯ ಪಿ.ವಿ. ಮೋಹನ್. ಇವರಲ್ಲಿ ಜನಾರ್ದನ ಪೂಜಾರಿಗೇ ಬಹುತೇಕ ಟಿಕೆಟ್ ಖಾತ್ರಿಯಾಗಿದೆ. ದೊಡ್ಡ ಗಂಟಲಿನ ಜನಾರ್ದನ ಪೂಜಾರಿ ಜನಪರ; ಕಠೋರ ಸೆಕ್ಯುಲರ್, ನೊಂದವರ ಪಕ್ಷಪಾತಿ; ಸನಾತನ ಸಂಸ್ಕೃತಿ ವಿರುದ್ಧ ಬಂಡೇಳುವ ಛಾತಿವಂತ... ಎಲ್ಲ ನಿಜ. ಆದರೆ ಆತ ಸಂಘಟಕನಲ್ಲ, ಕಾರ್ಯಕರ್ತರ ಪಡೆ ಅಣಿಗೊಳಿಸುವ ಜಾಣ್ಮೆ ಆತನಿಗಿಲ್ಲ, ಎಲ್ಲ ಬಣ್ಣ ಮಸಿ ನುಂಗಿತು ಎಂಬಂತೆ ಹರಕು ಬಾಯಿಯೇ ಆತನ ಪ್ರಥಮ ಶತ್ರು!

ಆದರೆ ಪೂಜಾರಿ ಸಮರ್ಥ ಪಾರ್ಲಿಮೆಂಟರಿಯನ್. ಅಭಿವೃದ್ಧಿ ರಾಜಕಾರಣ ಮಾಡುವ ದೂರದೃಷ್ಟವಂತ. ಭ್ರಷ್ಟರೊಂದಿಗೆಂದೂ ರಾಜಿ ಆಗದ ಪೂಜಾರಿ ಸಂಸದನಾದರೆ ಕ್ಷೇತ್ರಕ್ಕೆ ಕೇಡೆಂದೂ ಆಗದು.

ಈ ಬಾರಿ ಪೂಜಾರಿಗೆ ಗೆಲ್ಲುವ ಅವಕಾಶ ಹೆಚ್ಚಿದೆ. ಕ್ಷೇತ್ರದಲ್ಲಿ ಕಲ್ಲಡ್ಕ ಭಟ್ಟರ ಚಿತಾವಣೆಯ ಸಂಘ ಪರಿವಾರದ ಕುತಂತ್ರಗಾರಿಕೆ ನಡುವೆಯೂ ಏಳು ಅಸೆಂಬ್ಲಿ ಕ್ಷೇತ್ರದಲ್ಲಿರುವ ಕಾಂಗ್ರೆಸ್ ಶಾಸಕರು ಪೂಜಾರಿಗೆ 'ಪಾರು' ಮಾಡಲು ದುಡಿಯುತ್ತಿದ್ದಾರೆ. ಇದು ಪೂಜಾರಿಯ ಶಾಪ ವಿಮೋಚನೆ ಮಾಡಲಿದೆ. ಹಾಗೆಯೇ ಕಲ್ಲಡ್ಕರ ಶಿಷ್ಯ ನಳೀನ್ ಕುಮಾರ್ ಕಟೀಲು ಎಂಪಿಯಾಗಿ ಮಾಡಿದ 'ಶೂನ್ಯ ಸಾಧನೆ' ಕಾಂಗ್ರೆಸ್‌ಗೆ ಅನುಕೂಲ ಪರಿಸ್ಥಿತಿ ಸೃಷ್ಟಿಸಿದೆ.

ನಳೀನ್‌ಗೆ ಈ ಬಾರಿ ಬಿಜೆಪಿ ಟಿಕೆಟ್ ಕೊಡಕೂಡದೆಂದು ಆ ಪಾರ್ಟಿಯ ಕಾರ್ಯಕರ್ತರೇ ಬೊಬ್ಬೆ ಹೊಡೆಯುತ್ತಿದ್ದಾರೆ. ಈತ ಎಂಪಿಯಾಗಿ ಐದು ವರ್ಷ ವ್ಯರ್ಥ ಕಳೆದಿದ್ದಾರೆ. ಹಿಂದಿ-ಇಂಗ್ಲಿಷ್ ಎರಡೂ ಸರಿಯಾಗಿ ಮಾತಾಡಲು ಬರದ ನಳಿನ್ ಕನ್ನಡದಲ್ಲಿ ಬೊಗಳಿದ್ದು ಬರೀ ಕೋಮು ವೈಷಮ್ಯದ ಶಬ್ಧಗಳೇ! ಕ್ಷೇತ್ರಕ್ಕೆ ಏನು ಬೇಕು- ಏನು ಬೇಡ ಎಂಬುದೇ ಗೊತ್ತಿಲ್ಲದ ಈ ದಗಲುಬಾಜಿ ಸಂಸದ ಭಾಷೆ ಕೊರತೆಯಿಂದ ಏನೂ ಕೆಲಸ ಮಾಡಲಾಗಲಿಲ್ಲ ಎಂದು ಚೆಡ್ಡಿಗಳೇ ಪ್ರಚಾರ ಮಾಡುತ್ತಿದ್ದಾರೆ. ಈತ ಬರೀ ಬ್ರಹ್ಮಕಲಶೋತ್ಸವ, ಭೂತ, ಕೋಲ, ಭಜನೆ, ಕಲ್ಲಡ್ಕ ಭಟ್ಟನ ಪಾದಸೇವೆಯಲ್ಲೇ ಕಾಲಹರಣ ಮಾಡಿರುವುದು ಈಗಾತನಿಗೆ ಮುಳುವಾಗಿದೆ.

ಬಿಜೆಪಿಯೊಳಗೇ ನಳಿನ್ ವಿರೋಧಿ ಕೂಗೆದ್ದಿದ್ದರೂ ಕಲ್ಲಡ್ಕ ಮಾತ್ರ ಶಿಷ್ಯನ ಪರವೇ ಇದ್ದಾನೆ. ಇಷ್ಟು ವಿಧೇಯ ಪರಿಚಾರಕ ಆತನಿಗೆ ಮತ್ತೊಬ್ಬ ಸಿಗಲಾರ. ಮಾಜಿ ಸಿಎಂ ಸದಾನಂದ ಗೌಡರ ಕಣ್ಣು ಮಂಗಳೂರು ಕ್ಷೇತ್ರದ ಮೇಲಿದೆಯಾದರೂ ಕಲ್ಲಡ್ಕನಿಗೆ ಆತ ಮರಳಿ ಬರುವುದು ಬೇಕಾಗಿಲ್ಲ, ಸ್ಥಳೀಯ ಎಂಪಿಯಾಗಿದ್ದಾಗ ಗೌಡ್ರು-ಭಟ್ರು ಸಂಬಂಧ ಅಷ್ಟಕ್ಕಷ್ಟೇ ಆಗಿತ್ತು. ಸಿಎಂ ಆಗಿದ್ದಾಗಲೂ ಗೌಡರಿಂದ ಭಟ್ಟರ ಆರೆಸ್ಸೆಸ್ ಸಂಸ್ಥಾನಕ್ಕೆ 'ವಿಶೇಷ' ಪ್ರಯೋಜನ ಏನೂ ಆಗಿರಲಿಲ್ಲ, ಈತ 'ಉದ್ಧಟ'ನೆಂಬ ಭಾವನೆ ಭಟ್ಟರದು. ಹಾಗಾಗಿ ಆತನನ್ನು ಉಪಾಯವಾಗಿ ಮೈಸೂರು-ಕೊಡಗು ಕ್ಷೇತ್ರಕ್ಕೆ ಸಾಗಹಾಕಲು ಭಟ್ರು ಪ್ಲಾನ್ ಹಾಕಿದ್ದಾರೆ. ಮಂಗಳೂರಲ್ಲಿ ಭಟ್ಟರ ಕಾಟ ಮತ್ತು ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿ ಮಕಾಡೆ ಮಲಗಿರುವುದು ಗೌಡರನ್ನು ಹತಾಶರಾಗಿಸಿದೆ. ಹಾಗಾಗಿ ಆತ ಒಲ್ಲದ ಮನಸ್ಸಿನಿಂದಲೇ ಮೈಸೂರತ್ತ ಪಲಾಯನ ಮಾಡುತ್ತಿದ್ದಾರೆಂದು ಸಂಘ ಪರಿವಾರದ ಸರದಾರರೇ ಪಿಸುಗುಡುತ್ತಿದ್ದಾರೆ.

ಬಿಜೆಪಿ ಟಿಕೆಟ್‌ಗಾಗಿ ಬೆಳ್ತಂಗಡಿಯ ಪ್ರತಾಪಸಿಂಹ ನಾಯಕ್ ಎಂಬ ಕೊಂಕಣಿ ಹಠ ಹಿಡಿದು ಕೂತಿದ್ದಾನೆ. ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿರುವ ನಾಯಕ್ ಅಳಿದಿರುವ ಜಿಲ್ಲಾ ಚೆಡ್ಡಿಗಳಲ್ಲಿ ಉಳಿದಿರುವ ತಾನೇ ಗ್ರೇಟ್ ಎಂದು ವಾದಿಸುತ್ತಿದ್ದಾರೆ. ಕಳೆದ ಅಸೆಂಬ್ಲಿ ಎಲೆಕ್ಷನ್ ವೇಳೆ ಬೆಳ್ತಂಗಡಿ ಬಿಜೆಪಿ ಟಿಕೆಟ್ ಕೇಳಿದ್ದ ನಾಯಕ್‌ಗೆ ನಿರಾಶೆಯಾಗಿತ್ತು. ರಂಜನ್ ಗೌಡನ ಜಾತಿ (ಗೌಡ) ಬಲ ಪರಿಗಣಿಸಿ ಅತಿ ಅಲ್ಪಸಂಖ್ಯಾತ ಕೊಂಕಣಿ ಕಮ್ಯುನಿಟಿಯ ನಾಯಕ್‌ಗೆ ಟಿಕೆಟ್ ಕೊಟ್ಟಿರಲಿಲ್ಲ, ಆಗ ಆಗಿರುವ ಹಾನಿ ಈಗ ತುಂಬಿಕೊಡುವಂತೆ ನಾಯಕ್ ಟಿಕೆಟ್ ಹಂಚಿಕೆದಾರ ಕಲ್ಲಡ್ಕ ಭಟ್ಟನ ದುಂಬಾಲು ಬಿದ್ದಿದ್ದಾರೆ. ವಿಧಾನ ಸಭೆ ಚುನಾವಣೆಯಲ್ಲಿ ಪತನವಾದ ಆರೆಸ್ಸೆಸ್ ಸಾಮ್ರಾಜ್ಯ ಮತ್ತೆ ಕಟ್ಟುವುದು ಕಷ್ಟವೆಂದು ಕಂಗಾಲಾಗಿರುವ ಕಲ್ಲಡ್ಕ ಯಾರಿಗೆ ಟಿಕೆಟ್ ಕೊಡುವುದೆಂದೇ ಅರ್ಥವಾಗದೇ ಒದ್ದಾಡುತ್ತಿದ್ದಾರೆ.

ಬಿಜೆಪಿಯ ದುರ್ಗತಿ, ಹಿತಶತ್ರುಗಳಾದ ಸೊರಕೆ ಮತ್ತು ಮೊಯ್ಲಿ ಜಿಲ್ಲೆಯಿಂದ ಹೋಗಿರುವುದು ಕಾಂಗ್ರೆಸ್ ಪೂಜಾರಿಗೆ ಅನುಕೂಲಕರ ವಾತಾವರಣ ಸೃಷ್ಟಿಸಿದೆ. ಹಾಗಂತ ಮಂಗಳೂರು ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಸಂಘ ಪರಿವಾರ ಸೋತಿದೆಯೇ ಹೊರತು ಸತ್ತಿಲ್ಲ ಎಂದು ಎಚ್ಚರ ಕಾಂಗ್ರೆಸಿಗರಿಗಿದ್ದರಷ್ಟೇ ಗೆಲ್ಲಲು ಸಾಧ್ಯ!!

'ಧುಂಢಿ' ವಿಷಯ ಮಾತಾಡಕ್ಕೋಗಬ್ಯಾಡಿ ಸಾರ್


ಧೂತ್ತೇರಿ

• ಯಾಹು

ಗಾಂಧೀಜಿಯವರ ಸಿದ್ಧಾಂತಗಳನ್ನು ಗಟಾರಕ್ಕೆ ...ಸೆದಿರುವ ಕಾಂಗ್ರೆಸ್ಸಿನವರು, ಗಾಂಧಿಯನ್ನು ಕೊಂದೇ ...ಹಾಕಿದ ಮತಾಂಧರು ಎಲ್ಲರೂ ಒಂದು ದಿನದ ಮಟ್ಟಿಗೆ ...ಗಾಂಧೀಜಿಯನ್ನ ನೆನೆದು ಹಾಡಿ ಹೊಗಳಿ ಬೂಂದಿ ...ಂದು ಬಾಯಿ ಒರೆಸಿಕೊಂಡರಂತಲ್ಲಾ. ಈ ಪೈಕಿ ...ಗಾಂಧಿ ಕೊಂದವರ ವಿಷಯವನ್ನು ಕೇಳಿದ ಕಟ್ಟೆ ...ಪ್ರರಾಣದ ಕಾಳಮಾವ "ಅಲ್ಲಾ ಅಂಥಾ ಗಾಂಧಿ ಮಾತ್ರನ್ನ ...ಹಡು ಹಗಲೇ ಜನಗಳೆದ್ರಿಗೇ ಗುಂಡಿಕ್ಕಿ ಕೊಂದಾಕಿದ ...ಜನ ಯಾರಿಗೂ ಗೊತ್ತಿಲ್ಲದಂಗೆ ಇನ್ನೆಷ್ಟು ಜನ ...ಕೊಂದಾಕಿರಬಹುದು?'' ಎಂಬ ಉದ್ಗಾರ ...ಗೆದಿದ್ದಾನಂತಲ್ಲಾ! ಕಾಳಮಾವನ ಇಂತಹ ಮುಗ್ಧ ...ಉದ್ಗಾರಕ್ಕೆ ಉತ್ತರ ಕೊಡುವುದಾದರೆ, ಈ ಗೋಡ್ಸೆ ...ಸಂತತಿಯ ಮೋದಿ ಎಂಬ ನರಹಂತಕ ಹಗಲುರಾತ್ರಿ ...ಮುಸ್ಲಿಮರ ಮಾರಣಹೋಮ ಮಾಡಿ, ಈಗ ಇಂತಹ ...ಕೃತ್ಯವನ್ನು ರಾಷ್ಟ್ರಮಟ್ಟದಲ್ಲಿ ಮಾಡಲು ತಯಾರಿ ...ಡೆಸಿದ್ದಾನಂತಲ್ಲಾ. ಇಂತಹ ಮೋದಿಯನ್ನು ...ಮುಂಚೂಣಿಗೆ ತಂದು ಹಸಿರಕ್ತದ ವಾಸನೆ ಹೀರಲು ...ಹಾತೊರೆಯುತ್ತಿರುವ ಚೆಡ್ಡಿಗಳು, ಗಾಂಧಿ ಜಯಂತಿಯ ...ದಿವಸ ಅಲ್ಲಲ್ಲಿ ಸಭೆ ಸೇರಿ ಗೋಡ್ಸೆ ವಿಷಯವನ್ನು ...ಕೊಂಡಾಡಿದವಂತಲ್ಲಾ. ಅಷ್ಟೇ ಅಲ್ಲದೆ ಮಸೀಯ ಗಲಭೆ ...ಹುಟ್ಟು ಹಾಕಿ, ಮುಸ್ಲಿಮರನ್ನ ಅಗಚಿ, ಹಿಂದೂಗಳನ್ನು ...ಒಗ್ಗೂಡಿಸುವ ತಂತ್ರ ರೂಪಿಸುತ್ತಿರುವ ಚೆಡ್ಡಿ ಪಡೆ ಗಾಂಧಿ ...ಜಯಂತಿಯಂದು ಗೋಡ್ಸೆ ನೆನಪಿಸದೆ ಇನ್ನೇನು ಮಾಡಲು ...ಸಾಧ್ಯ, ಧೂತ್ತೇರಿ!

* * *

ಗಣಪತಿ ಮೆರವಣಿಗೆಯಂದು ಮಸೀಯ ಗಲಭೆ ...ಹುಟ್ಟು ಹಾಕಿ ತಮ್ಮ ಅಜೆಂಡಾಗಳನ್ನು ಪುಷ್ಟೀಕರಿಸುತ್ತಿದ್ದ ...ಚೆಡ್ಡಿಗಳಿಗೆ ಚಿಕ್ಕಮಗಳೂರು ಜಿಲ್ಲೆ ಆಲ್ದೂರಿನಲ್ಲಿ ಪೊಲೀಸರು ...ಭರಿಯಾದ ಲಾತಾ ಕೊಟ್ಟಿದ್ದಾರಂತಲ್ಲಾ. ಚೆಡ್ಡಿಗಳೆಂದೂ ...ನಿರೀಕ್ಷಿಸದೇ ಇದ್ದ ಬೆತ್ತದ ಹೊಡೆತದ ಬಾಸುಂಡೆಗಳನ್ನು ...ತನ್ನ ಲ್ಯಾಪ್‌ಟಾಪಿನಲ್ಲಿ ಸಂಗ್ರಹಿಸಿಕೊಂಡು, ಅಪೂರ್ವ ಚಿತ್ರ ...ಸೆರೆಹಿಡಿದಂತೆ ಹಾದಿಬೀದಿಯಲ್ಲಿ ತೋರಿಸುತ್ತಿರುವ ಸಿ.ಟಿ. ...ರವಿ ಎಂಬ ಶಾಸಕ ಬೆತ್ತದ ಬಾಸುಂಡೆ ನೋಡಿ ಒಳಗೊಳಗೇ ನಕ್ಕಿದ್ದು ಗಾಯಾಳುಗಳ ಗಮನಕ್ಕೆ ಬರಲಿಲ್ಲವಂತಲ್ಲಾ, ಧೂತ್ತೇರಿ!



* * *

ಈ ಗಣಪತಿ ಚೆಡ್ಡಿಗಳಿಗೆ ವರವಾದರೆ, ಮುಸ್ಲಿಮರಿಗೆ ಶಾಪ. ಆದರೂ ಮುಸ್ಲಿಮರಿಗೆ ಗಣಪತಿ ಎಂದರೆ ಇಷ್ಟವಂತಲ್ಲಾ, ಏಕೆಂದರೆ, ಗಣಪತಿ ಹಬ್ಬದಲ್ಲಿ ನಡೆಯುವ ವ್ಯಾಪಾರ ವ್ಯವಹಾರದ ಬಹುಪಾಲು ಫಲಾನುಭವಿಗಳು ಮುಸ್ಲಿಮರಂತಲ್ಲಾ, ಇದೆಲ್ಲಕ್ಕಿಂತಲೂ 'ಧುಂಢಿ' ಎಂಬ ಕಾದಂಬರಿ ನಮ್ಮ ರಾಮನಗರದ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರನ್ನ ಶಾನೆ ಘಾಸಿಗೊಳಿಸಿ, ಅವರೂ ಕೂಡ ಧಾರ್ಮಿಕ ಭಾವನೆಗಳನ್ನು ಆಡಿಕೊಂಡವರನ್ನು ಸಹಿಸಲು ಸಾಧ್ಯವಿಲ್ಲ ಎಂಬ ಮಾತನಾಡಿರುವುದರಿಂದ ಅವರನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ, ರಿಂಗಾಯ್ತು;

ರಿಂಗ್ ಟೋನ್: ಗಣೇಶ ನಿನ್ನ ಮಹಿಮೆ ಅಪಾರ ಭಕ್ತವತ್ಸಲಾ....

"ಹಲೋ ಯಾರು...?"

"ನಮಸ್ಕಾರ ರಾಮನಗರದ ಮುಖ್ಯಮಂತ್ರಿಗಳಿಗೆ."

"ಯಾರ್ರಿ ನೀವು?"

"ನಾನು ಸಾರ್ ಯಾಹು."

"ಏನ್ರಿ ಯಾಹು, ಎಲ್ಲಿದ್ದೀರಿ?"

" 'ಧುಂಢಿ' ಕಾದಂಬರಿ ಓದ್ತಾಯಿದ್ದೆ ಸಾರ್."

"ನಾನೂ ಓದಬೇಕಾಗಿತ್ತು ಕಂಡ್ರಿ, ಆಗಲಿಲ್ಲ."

"ಮತ್ತೆ ಅದನ್ನ ಖಂಡಿಸಿ ಮಾತನಾಡಿದ್ದೀರಲ್ಲಾ ಸಾರ್."

"ನಮ್ಮ ಗೆಳೆಯರು ಒಂದು ಹೇಳಿಕೆ ಕೊಡಿ ಅಂದ್ರು, ಕೊಟ್ಟೆ ಕಂಡ್ರಿ. ನಮ್ಮ ನಮ್ಮ ಧಾರ್ಮಿಕ ಭಾವನೆಗಳನ್ನ ವ್ಯಕ್ತ ಮಾಡ್ತ ಕಂಡ ಪೂಜೆ, ಹರಕೆ, ಎಡೆ, ಇವನ್ನೆಲ್ಲಾ ಧಿಕ್ಕರಿಸಿ ಖಂಡಿಸಿ ಬರೀಬಾರ್ದು ಎಂಬತಕ್ಕಂತ ಒಂದು ತೀರ್ಮಾನವನ್ನ ನಾವು ಮಾಡದೆ ಇನ್ಯಾರು ಮಾಡ್ತರೆ, ಅದ್ಕೆ ಹೇಳಿಕೆ ಕೊಟ್ಟೆ."

"ಸಾರ್ ನಿಮಗೊಂದು ರಿಕ್ವೆಸ್ಟು. ನಿಮಗೆ ಧಾರ್ಮಿಕ ಸಲಹೆ ಕೊಡೊ ಮುಂಡೆ ಮಕ್ಕಳ ಸರಿಯಾಗಿ ಇಟ್ಟುಕೊಳ್ಳಿ."

"ಯಾಕ್ರಿ ಅಂಗಂತಿರಿ."

"ನಮ್ಮ ದೇಶ ಪುರಾಣಗಳ ದೇಶ. ಪುರಾಣ ಮತ್ತು ಇತಿಹಾಸ ಎರಡು ಸೇರಿಕೊಂಡು ಭಾಳ ಸಮಸ್ಯೆ ಎದುರುಸ್ತಾಯಿದ್ದಿವಿ. ಗಣೇಶ ಒಂದು ಪುರಾಣ. ಅದು ಇತಿಹಾಸ ಅಲ್ಲ, ಶೈವ ಪರಂಪರೆಯ ಅದ್ಭುತ ಕಲ್ಪನೆ ಅದು. ಅವುನ ಬಗ್ಗೆ ನೀವ್ಯಾಕೆ ಅಷ್ಟೊಂದು ಸಿಟ್ಟಾಗಿ ಭಾವನೆಗೀವನೆ ಅಂತ ಮಾತಾಡ್ತಿರಿ. ನಮ್ಮ ಪುರೋಹಿತರ ನರಸಿಂಹನಂಗೆ ಇವುನೂ ಪುರಾಣ ಸಾರ್."

"ನರಸಿಂಹನೂ ಪುರಾಣ ಅಂತಿರ?"

"ನರಸಿಂಹನ ಅಣೆಗೂ ಅವನೊಂದು ಪುರಾಣ ಸಾರ್. ಯಾರೊ ನಮ್ಮ ಬಸ್ವಂಜಿ ಗೋವಿಂದಾಚಾರಿ ಅಂಥೋರು, ಪುಷ್ಕಳವಾಗಿ ಊಟ ಮಾಡಿ, ಸಣ್ಣ ನಿದ್ದೆ ತೆಗೆದು, ಜಗಲಿ ಮೇಲೆ ಕುಳಿತುಕೊಂಡು ಹೊಸೆದ ಕತೆ ಅದು. ಅದೂ ಶೈವ ಸಂಪ್ರದಾಯವನ್ನ ಹತ್ತಿಕ್ಕಿ ಪುರೋಹಿತರ ವಿಷ್ಣು ಪುರಾಣ ಮೆರಸೊ ಕತೆ ಅದು."

"ಅಂಗಂತಿರಾ?"

"ನಿಜ ಸಾರ್. ಹಿರಣ್ಯ ಶಿವನ ಆರಾಧಕ. ಅವನನ್ನ ಮುಗಸೋದಕ್ಕೆ ನರಸಿಂಹಾವತಾರ ಬರಿತರೆ. ಅದೂ ಯಂಗೆ. ಹಿರಣ್ಯನ ವರ ನೋಡಿ, ಅವನಿಗೆ ಆಯುಧ, ಬೆಂಕಿ, ಕಲ್ಲು, ಮಣ್ಣಿನಿಂದ ಸಾವಿಲ್ಲ, ಹೆಂಗಸಿನಿಂದ ಇಲ್ಲ, ಗಂಡಸಿನಿಂದ ಇಲ್ಲ, ಹಗಲು ಸಾವಿಲ್ಲ, ರಾತ್ರಿ ಸಾವಿಲ್ಲ, ಮನೆಯಿಂದ ಹೊರಗೆ ಸಾವಿಲ್ಲ, ಒಳಗೂ ಇಲ್ಲ, ಮನುಷ್ಯನಿಂದ ಇಲ್ಲ, ಪ್ರಾಣಿಯಿಂದ ಇಲ್ಲ, ಅದ್ಕೆ ಅರ್ಧ ರಾತ್ರಿಲಿ ಕಂಬದಿಂದ ನರಸಿಂಹ ಬಂದು ಹಿರಣ್ಯನ ಹಿಡಕೊಂಡು ಹೊಸಲ ಮೇಲೆ ಮಡಿಕೊಂಡು ಉಗುರಲ್ಲಿ ಹೊಟ್ಟೆ ಭಗದ. ಈ ಕತೆ ಹರಿಕತೆಯಾಯ್ತು, ಕೂಡಲೇ ದೇಶದ ನಾನಾ ಮೂಲೇಲಿ ನರಸಿಂಹನ ದೇವಸ್ಥಾನಗಳು ಸ್ಥಾಪನೆಯಾದೊ. ಪೂಜಾರಿಗಳು ಹುಟ್ಟಿಕೊಂಡ್ರು ಅವರಿಗಾಗಿ ಫಲವತ್ತಾದ ದೇವರ ಕೊಡಗಿ ಜಮೀನು ದೇವಸ್ಥಾನದ ಪಾಲಾದೊ. ದೇವರಗುಡಿಯೊಳಗೆ ಪಾಕಶಾಲೆಗಳೂ ತಯಾರಾದೊ, ಧಾರ್ಮಿಕವಾಗಿ ಪ್ರಭುತ್ವ ಸ್ಥಾಪಿಸಿಕೊಂಡ ಪೂಜಾರಿ ಮಕ್ಕಳು, ಮರಿಗಳು ಈಗ ಬಿಜೆಪಿ, ಆರೆಸೆಸ್, ವಿಶ್ವ ಹಿಂದೂ ಅಂತ ಮಾಡಿಕೊಂಡು ಯಾವ ರೂಪದಲ್ಲಾದ್ರು ಅಧಿಕಾರ ಹಿಡಿಬೇಕು ಅಂತ ಬಂದವ್ರರೆ. ಅಂಥವರಿಗೆ ಸಹಾಯವಾಗೊ ತರ ನೀವು ಮಾತಾಡಬಾರ್ದು. ನೀವೇನಿದ್ರೂ ಬೈರವನಪರ ಮಾತಾಡಿ ಒಕ್ಕಲಿಗರನ್ನ ವಿಶ್ವ ಮಾನವರನ್ನಾಗಿ ಮಾಡಿ."

"ಯಂಗೆ ಮಾಡದ್ರಿ?"

"ಧೂತ್ತೇರಿ!!!" ■

...ಬಿಡಿ ಚಿತ್ರಗಳು

...ನೇ ಪುಟದಿಂದ

...ಸಾಮಾಜಿಕ ಕೆಲಸಗಳನ್ನೇ ಆರಿಸಿಕೊಂಡರು.

"ನಿಮ್ಮ ಜೀವನ ಹೇಗೆ ನಡೀತಿತ್ತು ಆಗ?" ಅಂತ ...ನಾನೊಂದು ಪ್ರಶ್ನೆ ಕೇಳಿದೆ.

"ಪುಸ್ತಕ ಪ್ರಕಟಣೆಯ ಮೂಲಕ. ಅದು ನನ್ನನ್ನು ...ಐವತ್ತು ವರ್ಷ ಸಾಕಿತು" ಅಂದರು ಅವರು.

ಈ ಮಾತು ನಡೆಯುತ್ತಿದ್ದಾಗ 'ಬಡತನ' ...ಒಪ್ಪಿಕೊಳ್ಳುವ ಮಾತು ಮತ್ತು ಅದಕ್ಕೆ ಬೇಕಾದ ಇಚ್ಛಾಶಕ್ತಿಯ ...ಬಗ್ಗೆ ನಾನು ಯೋಚಿಸುತ್ತಿದ್ದೆ. ದೊರೆಸ್ವಾಮಿ ಕನಕಪುರದ ...ಹಾರೋಹಳ್ಳಿಯವರು. ನನ್ನ ತಾಯಿಯ ಊರದು. ಆ ...ಬಗ್ಗೆ ಹೇಳಿದಾಗ, ಕರಿ (ಇದ್ದಿಲು) ವ್ಯಾಪಾರ ಮಾಡುತ್ತಿದ್ದ ...ನನ್ನ ತಾತನ ವಿಚಾರ ಅವರಿಗೆ ನೆನಪಾಯಿತು. ಆ ನಮ್ಮ ...ಕುಟುಂಬ ನಂತರ ದಿವಾಳಿಯಾಗಿ ಬೆಂಗಳೂರಿನ ಭೈರಸಂದ್ರ ...ದಲ್ಲಿ ಜೀವನ ಕಳೆದ ಎರಡನೇ ಅಧ್ಯಾಯ ಅವರಿಗೆ ...ಗೊತ್ತಿರಲಿಲ್ಲ. ಗೊತ್ತಾಗಲು ದೊರೆಸ್ವಾಮಿಯವರು ತಾನೆ ...ಹಾರೋಹಳ್ಳಿಯಲ್ಲಿ ಎಲ್ಲಿದ್ದರು. ಅವರಾಗಲೇ ಲೋಕ ...ಸಂಚಾರಿ!

'ನಮ್ಮ ಪೂರ್ವಿಕರು ಮುನ್ನೂರು ವರ್ಷದ ...ಹಿಂದಿನಿಂದಲೂ ಹಾರೋಹಳ್ಳಿ ಶ್ಯಾನುಭೋಗರಾಗಿದ್ದರು' ...ಅಂತ ದೊರೆಸ್ವಾಮಿಯವರು ಹೇಳಿದಾಗ ನನಗೆ ಥ್ರಿಲ್ ...ಅನಿಸಿ

"ಸಾರ್ ಹಾಗಾದ್ರೆ ನಿಮ್ಮ ಪೂರ್ವಿಕರು ಹೈದರಾಲಿಯ ...ಪ್ರಾಣ ಉಳಿಸಿದವರಲ್ಲಿ ಒಬ್ಬರು" ಅಂದೆ.

ಅಲ್ಲಿಂದ ನಮ್ಮ ಮಾತು ಇತಿಹಾಸಕ್ಕೆ ಹೊರಳಿತು. ...ನಾನು ಮಾತು ಮುಂದುವರೆಸಿ ಹೇಳಿದ ಕತೆಯ ...ಸಾರಾಂಶವಿದು:

ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ...ಹೈದರಾಲಿಯ ಆಳ್ವಿಕೆ ನಡೆಯುತ್ತಿದ್ದಾಗ ಮೈಸೂರಿನ ...ಒಡೆಯರ್ ಕುಟುಂಬವು ಕೆಲವರನ್ನು ಒಗ್ಗೂಡಿಸಿ ಹೈದರ್‌ನ ...ವಿರುದ್ಧ ಒಂದು ಸಂಚು ಮಾಡಿತ್ತು. ಖಂಡೇರಾಯ ಎನ್ನುವ ...ಹೈದರನ ಹಿಂಬಾಲಕ ಯೋಧನೇ ಅದರ ...ನಾಯಕನಾಗಿದ್ದ. ಆದರೆ ಹೈದರ್ ಈ ಹುನ್ನಾರದಿಂದ ...ಪಾರಾಗಿ ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ...ರಹಸ್ಯವಾಗಿ ಬೆಂಗಳೂರಿಗೆ ಹೊರಟು ಬರುವಾಗ ...ಹಾರೋಹಳ್ಳಿ ಮಾರ್ಗವಾಗಿ ಬರುತ್ತಾನೆ. ಆಗ ಅಲ್ಲಿನ ...ಶ್ಯಾನುಭೋಗರಾಗಿದ್ದ ದೊರೆಸ್ವಾಮಿಯವರ ಹಿರೀಕ ವೆಂಕಟಪತಯ್ಯನವರು ಹೈದರನನ್ನು ಕಂಡು ಉಪಚರಿಸಿ, ದಾರಿಯ ಖರ್ಚಿಗೆಂದು ವಸೂಲಾಗಿದ್ದ ಇರಸಾಲಿನ ಹಣವನ್ನೇ ಕೊಟ್ಟು ಕಳುಹಿಸಿರುತ್ತಾರೆ.

'ಹೈದರ್ ನಾಮ' ಪುಸ್ತಕದಲ್ಲಿ ಈ ಘಟನೆಯ ರೋಮಾಂಚಕ ವಿವರಗಳಿವೆ. ನಾನೀ ಪ್ರಸಂಗದ ಬಗ್ಗೆ ಹೇಳಿದಾಗ ದೊರೆಸ್ವಾಮಿಯವರು

"ಹೌದು, ನಮ್ಮ ತಾತನವರು. ಖಂಡೇರಾಯನ ಬಗ್ಗೆ ಹೇಳುತ್ತಿದ್ದುದು ನೆನಪಿದೆ" ಅಂದರು. ನಾನು ಆ ಪುಸ್ತಕದ ಒಂದು ಪ್ರತಿ ತಂದು ಕೊಡುವುದಾಗಿ ಮಾತು ಕೊಟ್ಟೆ.

ನಮ್ಮ ಮಾತು ಹೀಗೆ ಸಾಗಿ ಕೊನೆಗೆ ಮತ್ತೆ ಹೋರಾಟಗಾರರ ಬದುಕಿನ ಹಾದಿ ಹಾಗೂ ಬರಬಹುದಾದ ಕಷ್ಟಗಳೆತ್ತ ಹೊರಳಿತು. ಪುಸ್ತಕ ಪ್ರಕಟಿಸುತ್ತಾ, ಮಾರಾಟ ಮಾಡಿ ಜೀವನ ನಡೆಸಿದ ದೊರೆಸ್ವಾಮಿಯವರು "ಕೈಲಿ ಕಡಿಮೆ ಹಣವಿದ್ದಾಗ ರಾಗಿ ಮುದ್ದೆ ಮತ್ತೆ ಯಾವತ್ತಾದರೂ ಸ್ವಲ್ಪ ಹೆಚ್ಚು ದುಡ್ಡಿದ್ದಾಗ ಊಟದಲ್ಲಿ ಪಾಯಸ ಇರುತ್ತಿತ್ತು. ಆದರೆ ಊಟದ ರುಚಿ, ಸಿಹಿ ಎಂಬುದೆಲ್ಲಾ ಬರಿ ನಾಲಿಗೆಗೆ ಸಂಬಂಧಿಸಿದೆಂಬುದನ್ನು ನಾನು ಬೇಗ ತಿಳಿದುಕೊಂಡೆ" ಅಂದರು.

"ನಾವು ತಿನ್ನುವ ಆಹಾರ ನಾಲಿಗೆಯ ಹಂತ ದಾಟಿ ಒಳಗಿಳಿದ ಮೇಲೆ ಅದು ಮುದ್ದೇನಾ... ಇಲ್ಲಾ ಚಿರೋಟಿಯಾ ಅನ್ನೋದು ಗಣನೆಗೆ ಬರೋಲ್ಲ, ಹೊಟ್ಟೆಗೆ ಊಟ ಬೇಕಿರುತ್ತೆ ಅಷ್ಟೆ. ಇದು ನನಗರ್ಥವಾದ ಮೇಲೆ ನನ್ನ ಬಡತನದ ಬದುಕು ಇನ್ನೂ ಸರಾಗವಾಯಿತು. ನನ್ನ ಹೆಂಡತಿ ಲಲಿತ ಕೂಡ ಇದನ್ನು ತಣ್ಣಗೆ ಒಪ್ಪಿಕೊಂಡರು. ಜೊತೆಗೆ ಸಾಗಿ ಬಂದರು" ಅಂದರು.

ಈ ಇಚ್ಛಾಶಕ್ತಿ, consistency ಹೊಂದಿರುವುದು ಹುಡುಗಾಟದ ವಿಚಾರವಲ್ಲ, ದೊರೆಸ್ವಾಮಿಯವರ ಎತ್ತರದ ನಿಲುವು, ಗಾಂಭೀರ್ಯ, ಬದ್ಧತೆ ಜೀವನ ಪ್ರೀತಿಯನ್ನೆಲ್ಲಾ ಗಮನಿಸುವಾಗ ಎಂತವರ ಮನಸ್ಸೂ ಕರಗಬೇಕು.

ನಾನೊಮ್ಮೆ ಹುಡುಗಾಟದಿಂದ "ನೀವು ಯುವಕರಾಗಿದ್ದಾಗ ಬಹಳ ಹ್ಯಾಂಡ್‌ಸಮ್ ಇದ್ದಿರಬೇಕು" ಅಂದೆ.

"ಹ್ಞಾಂ.... ಎಲ್ರೂ ಆಗ ನನ್ನ 'ದೊರೆ' ಅಂತ ಕರಿತಿದ್ರು" ಅಂತ ಹೇಳಿ ಅವರು ಜೋರಾಗಿ ನಕ್ಕರು. ನಮ್ಮನ್ನೂ ನಗಿಸಿ ತಮ್ಮ ಮದುವೆ, ಸಹಧರ್ಮಿಣಿ ಲಲಿತಮ್ಮನವರ ಬಗ್ಗೆ ಹೇಳುತ್ತಾ ಹೋದರು.

ಅವರ ಈ ನೆನಪುಗಳೆಲ್ಲಾ ಈಗ ಬರಹವಾಗುತ್ತಿವೆ. ಅವೆಲ್ಲಾ ಬೇಗ ಪ್ರಕಟವಾಗುವಂತಾಗಲಿ ಅನಿಸಿತು.

• ಈಶ

ಲಂಕೇಶ್ ಬಳಗದ ವಿಚಾರಗೋಷ್ಠಿ-ಸಮಾವೇಶ

'ಬ್ರಾಹ್ಮಣ್ಯ ಅಂದು-ಇಂದು'

ಇದೊಂದು ಜೀವವಿರೋಧಿ ಸಿದ್ಧಾಂತವಾಗಿ, ಆಚರಣೆಯಾಗಿ ನಮ್ಮ ನಾಡಿನ ಜನಸಮುದಾಯವನ್ನು ಯಾವೆಲ್ಲಾ ರೀತಿ ಬಾಧಿಸುತ್ತಿದೆ ಎಂಬ ಬಗ್ಗೆ ಚರ್ಚಿಸಲು ಹಾಗೂ ಬ್ರಾಹ್ಮಣ್ಯದ ವಿರುದ್ಧ ಒಂದು ಸಂಘಟಿತ ಅಭಿಪ್ರಾಯ-ಪ್ರತಿರೋಧವನ್ನು ರೂಪಿಸಲು ವಿಚಾರಗೋಷ್ಠಿ ಏರ್ಪಡಿಸಲಾಗುತ್ತಿದೆ.

ಉದ್ಘಾಟನೆ : ಕುಂ. ವೀರಭದ್ರಪ್ಪ

ಮೌಢ್ಯ ಮತ್ತು ಬ್ರಾಹ್ಮಣ್ಯ : ಪ್ರೊ. ವಿ.ಎಸ್. ಶ್ರೀಧರ

ಬ್ರಾಹ್ಮಣ್ಯ ಹಾಗೂ ಬಂಡವಾಳಶಾಹಿ : ಪಾರ್ವತೀಶ

ದಲಿತ ಶೂದ್ರರ ದಮನದಲ್ಲಿ ಬ್ರಾಹ್ಮಣ್ಯದ ಪಾತ್ರ : ಸಿ.ಕೆ. ಮಹೇಶ್

ಬ್ರಾಹ್ಮಣ್ಯ ಹಾಗೂ ಸ್ತ್ರೀ ಶೋಷಣೆ : ತಾರಿಣಿ ಶುಭದಾಯಿನಿ

ನವಬ್ರಾಹ್ಮಣ್ಯದ ಸ್ವರೂಪಗಳು : ಬಂಜಗೆರೆ ಜಯಪ್ರಕಾಶ್


ಕೋಮುವಾದಿ ರಾಜಕೀಯದಲ್ಲಿ ಬ್ರಾಹ್ಮಣ್ಯದ ಪಾತ್ರ : ಕೆ.ಎಲ್. ಅಶೋಕ್

ಅಧ್ಯಕ್ಷತೆ : ಗೌರಿ ಲಂಕೇಶ್

ದಿನಾಂಕ: ಅಕ್ಟೋಬರ್ 6, 2013 ಭಾನುವಾರ ಸಮಯ: ಮಧ್ಯಾಹ್ನ 3ರಿಂದ


ಸ್ಥಳ : ಜಿಲ್ಲಾ ಪತ್ರಕರ್ತರ ಭವನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಚಿತ್ರದುರ್ಗ

ದಯಮಾಡಿ ಬನ್ನಿ, ಇತರರನ್ನೂ ಕರೆತನ್ನಿ.



ಬ್ರಾಹ್ಮಣ್ಯಕ್ಕೊಂದು ಪತ್ರ

ಪ್ರಿಯ ಸನಾತನಿ ಮಿತ್ರನೇ,



ನಿನ್ನನ್ನು ಬ್ರಾಹ್ಮಣ್ಯವೆಂದು ಆನಂತರ ಮಿತ್ರನೆಂದು ಸಂಬೋಧಿಸಿರುವ ಔಚಿತ್ಯವನ್ನು ನೀನು ತಪ್ಪಾಗಿ ತಿಳಿಯುವುದಿಲ್ಲವೆಂದು ಭಾವಿಸುತ್ತೇನೆ. ನಿನ್ನ ಬಳಿ ಹಂಚಿಕೊಳ್ಳಲು ಸಾವಿರಾರು ವಿಷಯಗಳಿವೆ. ಎಲ್ಲದಕ್ಕಿಂತ ಮೊದಲು ನಿನಗೆ ದೊರಕಿರುವ ನವಬ್ರಾಹ್ಮಣ ಗುಲಾಮ ಹೇಗಿದ್ದಾನೆ? ಅವನ ಗಲಾಟೆ ಮುಗಿಲು ಮುಟ್ಟುತ್ತಿದೆ. ತಾನು ಪ್ರಧಾನ ಮಂತ್ರಿಯಾಗುತ್ತೇನೆಂದು ಆತ ದಿಕ್ಕೆಟ್ಟು ಊರೂರು ಅಲೆಯುತ್ತಿದ್ದಾನೆ. ನಿನ್ನಿಂದ ತರಬೇತಿ ಪಡೆದ ನಿನ್ನ ಗುಲಾಮನ ಮೆರೆದಾಟ ಅತಿಯಾಯಿತು. ಅರುಣ್ ಜೇಟ್ಲಿಯಂತೂ ಅವನ ನಾಮಾರ್ಚನೆ ಮಾಡಿಕೊಂಡು ತನಗೆ ಗೊತ್ತಿರುವ ಶ್ಲೋಕಗಳನ್ನೆಲ್ಲಾ ಉಚ್ಚರಿಸಿಕೊಂಡು ಜಾಗಟೆ ಬಾರಿಸುತ್ತಿದ್ದಾನೆ.

ಪ್ರಿಯ ಮಿತ್ರನೇ, ನಿನ್ನ ಮಾನಸಿಕ ಆರೋಗ್ಯ ಹೇಗಿದೆ? ಯಾಕೆ ಕೇಳುತಿದ್ದೇನೆಂದರೆ ನಿನಗೆ ಶಾಂತ ಮನಸ್ಥಿತಿ ಎಂಬುದೇ ಇಲ್ಲ, ಯಾವಾಗ ಬ್ರಾಹ್ಮಣೇತರರು ನಿನಗಿಂತ ಮೇಲುಗೈ ಸಾಧಿಸಿಬಿಡುತ್ತಾರೇನೋ ಎಂದು ಹಪಹಪಿಸುತ್ತಿರುತ್ತೀಯ. ನಿನ್ನ ಸ್ಥಾನಮಾನವನ್ನು ಸ್ವಲ್ಪ ಬಿಟ್ಟುಕೊಡುವಾಗಲೂ ನೀನು ಅಸ್ವಸ್ಥನಾಗುತ್ತೀಯ. ಮೂರು ಸಾವಿರ ವರ್ಷಗಳಿಂದಲೂ ಇಂತಹ ಸವಾಲುಗಳನ್ನು ಎದುರಿಸುತ್ತಿರುವ ನೀನು ಮಾನಸಿಕವಾಗಿ ಕ್ಷುದ್ರಗೊಂಡಿರುವ ಬಗ್ಗೆ ನನಗೆ ಗೊತ್ತಿದೆ.

ನಿನ್ನದು ಎಷ್ಟು ಕ್ರಿಯಾಶೀಲ ಜನಾಂಗ. ನೀನು ನಮ್ಮನ್ನೆಲ್ಲ ಹೇಗೆಲ್ಲ ದಂಡಿಸಿದ್ದೀಯ. ನೀನು ಮನುಸ್ಮೃತಿಯನ್ನು ಬರೆದೆ, ಹೆಜ್ಜೆಹೆಜ್ಜೆಗೂ ನಮ್ಮ ಸಮಾಜವನ್ನು ನಿಯಂತ್ರಿಸಿದೆ, ತಾಲಿಬಾನಿಗಳು ಈಗ ಮಹಿಳೆಯರ ವಿರುದ್ಧ ಮಾಡಿರಬಹುದಾದ ಕಾನೂನುಗಳನ್ನು ನೀನು ಎಂದೋ ಇಲ್ಲಿ ಜಾರಿಗೆ ತಂದೆ. ನೀನು ಸದಾ ಇತರರಿಗಿಂತ ಸಾವಿರಾರು ವರ್ಷ ಮುಂದೆ ಇದ್ದೀಯ. ನೀನು ಕಟ್ಟಡ ಕಟ್ಟಲಿಲ್ಲ, ರಸ್ತೆ ಮಾಡಲಿಲ್ಲ, ಸೇತುವೆ ನಿರ್ಮಿಸಲಿಲ್ಲ ಆದರೂ ಅವಕ್ಕೆಲ್ಲ ನಿನ್ನದೇ ಹೆಸರು.

ಒಂದು ವಿಚಾರ ನೆನಪಿಗೆ ಬರುತ್ತಿದೆ. ನೀನು ಚೀನಾವನ್ನು ಬೈಯುವ ಹೆಸರಿನಲ್ಲಿ ಮಾರ್ಕ್ಸಿಸ್ಟರನ್ನು ಬೈಯುತ್ತೀಯ. ಪಾಕಿಸ್ತಾನವನ್ನು ಬೈಯ್ದರಂತೂ ಭಾರತದ ಮುಸ್ಲಿಮರನ್ನು ಬೈಯುವಂತೆ ಬೈಯುತ್ತೀಯ ಎಂಬುದು ಮುಗ್ಧ ಮಗುವಿಗೂ ತಿಳಿಯುತ್ತದೆ. ಮೀಸಲಾತಿಯನ್ನು ದಕ್ಷತೆಯ ಹೆಸರಿನಲ್ಲಿ ವಿರೋಧಿಸುವ ಮೂಲಕ ದಲಿತರನ್ನು ಬಾಗಿಲಲ್ಲೇ ಇರುವಂತೆ ಮಾಡಿದ್ದೀಯ. ನಿಜವಾಗಿಯೂ ಹೇಳು, ಮುಸಲ್ಮಾನರು ನಿನಗೆ ಮಾಡಿರುವ ತೊಂದರೆಯಾದರೂ ಏನು? ಮೊಘಲ್ ದರ್ಬಾರಿನಲ್ಲಿ ನೀನೇ ಅವರ ಗುಲಾಮಗಿರಿ ಮಾಡುತ್ತಾ 'ಜೀ ಹುಜೂರ್' ಎಂದು ಹಲ್ಲು ಕಿರಿಯುತ್ತಿದ್ದೆ ಮೊಘಲ್ ರಾಜರಿಗಿಂತ ನಿನ್ನ ದರ್ಬಾರು ಕಡಿಮೆ ಇರಲಿಲ್ಲ, ನಿನ್ನ ಪ್ರತಿಭೆ ಅನಾವರಣಗೊಂಡಿದ್ದು ಟಿಪ್ಪು ಸುಲ್ತಾನನ ಕಾಲದಲ್ಲಿ, ನೆನೆಸಿಕೊಂಡರೆ ಈಗಲೂ ಮೈ ಝುಂ ಎನ್ನುತ್ತದೆ. ಮೀರ್‌ಸಾದಕ್ ಪೂರ್ಣಯ್ಯನ ಮುಂದೆ ಪಳ್ಳಿ ಹೊಡೆಯಬೇಕು. ನೀನು ಮೈಸೂರು ರಾಜರ ಆಸ್ಥಾನದಲ್ಲೂ ಮಂತ್ರಿ, ಟಿಪ್ಪುವಿನ ಸಾಮ್ರಾಜ್ಯದಲ್ಲೂ ಮಂತ್ರಿ, ಕೊನೆಗೆ ಬ್ರಿಟಿಷರಿಗೂ ನೀನೇ ಮಂತ್ರಿ! ಯಾರ ಜೊತೆ ಯಾವಾಗ ಬೇಕಾದರೂ ವಿದ್ರೋಹದ ಮಂತ್ರವನ್ನು ಪಠಿಸಬಲ್ಲೆ.

ಸ್ವಾತಂತ್ರ್ಯ ಪೂರ್ವದಿಂದಲೂ ಮುಸಲ್ಮಾನರ ಮೇಲೆ ಎಂಥ ಯುದ್ಧವನ್ನು ಸಾರುತ್ತಿದ್ದೆ ನೀನು? ನೀನು ನೇಮಿಸಿರುವ ಗುಜರಾತಿನ ಗುಲಾಮ 2002ರಲ್ಲಿ ಎಂದೂ ಮರೆಯದಂತ ದ್ವೇಷ ತೀರಿಸಿಕೊಂಡ. ಆದರೆ ನೀನು ಗರ್ಭಿಣಿಯರ ಹೊಟ್ಟೆಯಲ್ಲಿದ್ದ ಭ್ರೂಣವನ್ನು ತ್ರಿಶೂಲಕ್ಕೆ ಸಿಕ್ಕಿಸಿಕೊಂಡು ತಿರುಗಬಾರದಿತ್ತು.

ಅದು ಹೋಗಲಿ, ದಲಿತರ ಬಗ್ಗೆ ಹೇಳು. ಅವರು ಎಂದೂ ನಿನ್ನ ವಿರುದ್ಧ ತಿರುಗಿ ಬಿದ್ದವರಲ್ಲ, ಬಾಬಾಸಾಹೇಬರನ್ನು ಬಿಟ್ಟು. ಅಂಬೇಡ್ಕರ್ ಇಂಗ್ಲೆಂಡಿಗೆ ಹೋದರು, ನಿನ್ನಂತೆಯೇ ಕಲಿತು ಬಂದರು, ನಿನ್ನ ತಂತ್ರವನ್ನು ಅರಿತರು, ಅದನ್ನು ಬರೆದು ಬಿಚ್ಚಿಟ್ಟರು. ಅಷ್ಟಕ್ಕೆ ನೀನು ದಲಿತರ ವಿರುದ್ಧ ಅಷ್ಟು ದ್ವೇಷ ಇಟ್ಟುಕೊಳ್ಳುವುದೇ?


ಗೋಹತ್ಯೆ ನಿಷೇಧ ಮಾಡಬೇಕು ಅಂತ ಹೇಳುತ್ತೀಯ. ಆದರೆ ವೇದಗಳ ಕಾಲದಲ್ಲಿ ನಿನ್ನ ಪೂರ್ವಿಕ ಮಹರ್ಷಿ ಎಳೆಗರುಗಳನ್ನು ನೋಡಿದರೆ ಜೊಲ್ಲು ಸುರಿಸುತ್ತಿದ್ದ, ದನಕರುಗಳ ಮಾಂಸದ ಪ್ರತಿ ಭಾಗವನ್ನೂ ಆಸ್ವಾದಿಸುತ್ತಿದ್ದ. ರುಚಿಯಲ್ಲಿ ನಿನ್ನನ್ನು ಮೀರಿಸುವವರೇ ಇಲ್ಲಬಿಡು. ಆ ಕಾರಣಕ್ಕೇ ಇರಬೇಕು ಈಗಲೂ ನಿಮ್ಮ ಹುಡುಗರು, ಹುಡುಗಿಯರು ಕದ್ದುಮುಚ್ಚಿ ದೇಶದಲ್ಲೂ ವಿದೇಶಗಳಲ್ಲೂ ಹೇರಳವಾಗಿ ದನದ ಮಾಂಸದಿಂದ ಮಾಡಿದ ಪಿಜ್ಜಾ ಬರ್ಗರ್‌ಗಳನ್ನು ತಿನ್ನುತ್ತಿದ್ದಾರೆ. ಅಷ್ಟು ರುಚಿಯಾದ ಖಾದ್ಯವನ್ನು ದಲಿತರಿಗೆ, ಕ್ರಿಶ್ಚಿಯನ್ನರಿಗೆ, ಮುಸಲ್ಮಾನರಿಗೆ ತಿನ್ನಲು ಬಿಡಪ್ಪಾ, ಗೋಹತ್ಯೆ ಮಾಡಿದರೆ ನಿನ್ನನ್ನೇ ಹತ್ಯೆ ಮಾಡಿದಂತೆ ಬೊಬ್ಬೆ ಹೊಡೆಯುತ್ತೀಯ. ನಿನ್ನನ್ನು ಯಾರಾದರೂ ಹತ್ಯೆ ಮಾಡಲು ಸಾಧ್ಯವೇ?

ಗಾಂಧಿಯನ್ನು ನಿನ್ನ ಚಿತ್‌ಪಾವನ್ ಬ್ರಾಹ್ಮಣ ನಾಯಕ ಸಾವರ್ಕರ್ ಎಷ್ಟು ಯೋಜನಾಬದ್ಧವಾಗಿ ಹತ್ಯೆ ಮಾಡಿಸಿದ. ಅಲ್ಲಿಯತನಕ ಅಂಥಾ ಭಯಂಕರ ಕೊಲೆಯನ್ನು ಭಾರತ ಕಂಡಿರಲೇ ಇಲ್ಲ, ಇದ್ದರೆ ನಿನ್ನ ತರಹ ಇರಬೇಕಪ್ಪ ಕೊಲೆ ಮಾಡುವುದು, ಜೊತೆಗೆ ಅದರ ಬಗ್ಗೆ ಒಂದು ಪುಸ್ತಕ ಬರೆದು ನಾನು ಕೊಲೆ ಮಾಡಿದ್ದು ಸರಿ ಎಂದು ಹೇಳಿಕೊಂಡು ಊರು ತುಂಬಾ ತಿರುಗುವುದು - ಯಾವ ಕೊಲೆಗಡುಕನೂ ಇಷ್ಟು ಬಹಿರಂಗವಾಗಿ ತಾನು ಮಾಡಿದ ಕೊಲೆಯನ್ನು ಒಪ್ಪಿಕೊಂಡಿದ್ದನ್ನು, ಹೀಗೆ ಸಮರ್ಥಿಸಿಕೊಂಡಿದ್ದನ್ನು ನಾನಂತೂ ಕಂಡಿಲ್ಲ.



ಕೊಲೆ ಎಂದರೆ ದೈಹಿಕವಾಗಿ ಮಾತ್ರವಲ್ಲ, ವ್ಯಕ್ತಿಗಳ ತೇಜೋವಧೆ ಮಾಡುವುದರಲ್ಲಿಯೂ ನೀನು ಎತ್ತಿದ ಕೈ. ನಿನ್ನ ಅರುಣ್ ಶೌರಿ ಬಾಬಾ ಸಾಹೇಬರನ್ನು ತನ್ನ 'ವರ್‌ಶಿಪಿಂಗ್ ಫಾಲ್ಸ್ ಗಾಡ್ಸ್' ಪುಸ್ತಕದಲ್ಲಿ ಹೇಗೆ ಖಂಡಿಸಿದ್ದಾನೆ ನೋಡು. ಸುಳ್ಳುಗಳನ್ನು ಹೇಳುವುದರಲ್ಲಿ ನೀನು ಎತ್ತಿದ ಕೈ, ಸುಳ್ಳನ್ನು ಹೇಗೆ ನಿಜವಾಗಿಸಬೇಕು ಎಂಬುದನ್ನು ನಿನ್ನನ್ನು ನೋಡಿ ಕಲಿಯಬೇಕು.

ನೀನು ಮಾಡಿರುವ ಅಪಪ್ರಚಾರಗಳು ಒಂದೇ ಎರಡೇ? ಸುಳ್ಳು ಮತ್ತು ಸತ್ಯದ ನಡುವಿನ ಗೆರೆಯನ್ನು ಭಾರತದ ಚರಿತ್ರೆಯಿಂದ ಒಂದಲ್ಲ ಒಂದು ದಿನ ಅಳಿಸಿಹಾಕುತ್ತೀಯ ನೀನು. ಅದು ನಿನಗೆ ಸುಲಭ. ಏಕೆಂದರೆ ನಮ್ಮ ನೆನಪುಗಳು, ಚಹರೆ, ಕುಲದೇವತೆ, ಆಚರಣೆಗಳನ್ನೆಲ್ಲಾ ನೀನು ಕಬ್ಜಾ ಮಾಡಿಬಿಟ್ಟಿದ್ದೀಯ. ನಮ್ಮ ದೇವತೆಗಳನ್ನು ನಿನಗೆ ಬೇಕಾದಂತೆ ರೂಪಿಸಿಕೊಂಡಿದ್ದೀಯ.



ದೇವರು ಮತ್ತು ಧರ್ಮವನ್ನು ಹೇಗೆ ಹಣವನ್ನಾಗಿ ಪರಿವರ್ತಿಸಬೇಕೆಂಬುದನ್ನು ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ನಿನ್ನಿಂದ ಕಲಿಯಬೇಕು. ನೀನು ನಿಮ್ಮವರಿಗೆ ಉದ್ಯೋಗಗಳನ್ನು ಸೃಷ್ಟಿ ಮಾಡಿರುವುದನ್ನೇ ಉದಾಹರಣೆಯಾಗಿ ನೋಡು. ಯಾವುದೋ ಪಾರ್ಕು, ಖಾಲಿ ಸೈಟು, ಕೊನೆಗೆ ಫುಟ್ ಪಾತ್‌ಗಳ ಮೇಲೂ ದೇವಸ್ಥಾನಗಳನ್ನು ಕಟ್ಟಿದ್ದೀಯ. ಅಲ್ಲಿಗೆ ಬರುವ ಶೂದ್ರ ಶಿಖಾಮಣಿಗಳಿಂದ ದುಡ್ಡು ಕಸಿಯುತ್ತೀಯ.

ಆದರೆ ಬಾಯಿಮಾತಿಗೆ 'ಬಡ ಬ್ರಾಹ್ಮಣ' ಎನ್ನುತ್ತೀಯ.

ಹಳೆಯ ಕತೆಗಳಲ್ಲಿದ್ದಂತೆ ಬ್ರಾಹ್ಮಣರು ಬಡವರೇನೂ ಆಗಿರಲಿಲ್ಲ, ಕತೆ ಬರೆದವನು ನೀನೇ ತಾನೇ? ನೀನು ವಿನಯ ತೋರಿಸಿ ಕೊಳ್ಳಲು ಬಡ ಬ್ರಾಹ್ಮಣ ಎಂದು ಬರೆದುಕೊಂಡೆಯಷ್ಟೇ.

ನಿನ್ನ ಉದ್ಯೋಗಗಳನ್ನು ದಲಿತರು, ಬ್ರಾಹ್ಮಣೇತರರು ಮೀಸಲಾತಿಯ ಮೂಲಕ ಕಿತ್ತುಕೊಳ್ಳುತ್ತಾರೆ ಎಂದು ಹೆದರಬೇಡ. ಅಖಂಡ ಭಾರತವೇ ನಿನ್ನ ಭೋಜನದ ಬಾಳೆಎಲೆ. ಅದರ ಮೇಲೆ ಉಂಡು ತೇಗುವಷ್ಟು ಉದ್ಯೋಗದ ಅವಕಾಶವನ್ನು ಪಡೆದಿದ್ದೀಯ. ವಿಪ್ರೋ, ಇನ್‌ಫೋಸಿಸ್‌ಗಳಂಥ ಸಂಸ್ಥೆಗಳು ನಿನ್ನಿಂದ, ನಿನಗಾಗಿ, ನಿನಗೋಸ್ಕರವೇ ಮಾಡಲ್ಪಟ್ಟಿದೆ. ಸರ್ಕಾರದಲ್ಲೂ ನೀನೇನು ಕಡಿಮೆ ಇಲ್ಲ, ಆಯಕಟ್ಟಿನ ಸ್ಥಾನಗಳಲ್ಲಿ ನೀನೇ ಇದ್ದೀಯ. ಗುಪ್ತಚರ ಸಂಸ್ಥೆಗಳಲ್ಲಿದ್ದೀಯ. ನಿನ್ನ ಕಡೆಯವರು ಏನಾದರೂ ಅಪರಾಧ ಮಾಡಿದರೆ ಅಲ್ಲಿಯೇ ಫೈಲ್‌ಗಳನ್ನು ನಾಶ ಮಾಡುತ್ತೀಯ. ಪಾಪ, ನಕ್ಸಲೈಟ್ ಹುಡುಗರು, ಪ್ರಗತಿಪರರು, ಸ್ವಲ್ಪ ಬುದ್ಧಿ ಇರುವ ಮೇಷ್ಟ್ರುಗಳು ಇಂಥವರ ವಿರುದ್ಧ ವ್ಯವಸ್ಥಿತವಾಗಿ ಫೈಲ್‌ಗಳನ್ನು ಬಿಲ್ಡ್ ಅಪ್ ಮಾಡುತ್ತೀಯ.

ಮೊದಲು ಅಕ್ಷರ ಕಲಿತವನು ನೀನಲ್ಲವೇ. ನಿನ್ನಿಂದಲ್ಲದೆ ಇಂತಹ ಕೃತ್ಯಗಳು ಬೇರೆ ಯಾರಿಂದ ಸಾಧ್ಯ ಹೇಳು?

ಕಲೆ, ಸಾಹಿತ್ಯ, ಸಿನಿಮಾ, ಸಂಸ್ಕೃತಿ ಕ್ಷೇತ್ರಗಳಲ್ಲಿ ಎಷ್ಟೇ ಕಡಿಮೆ ಪ್ರತಿಭೆ ಇದ್ದರೂ ವೇದಿಕೆಗಳ ಮೇಲೆ ಮಿಂಚುವ ಕಲೆ ನಿನಗೆ ಚೆನ್ನಾಗಿ ಗೊತ್ತು, ಯಾವುದೇ ದಿನಪತ್ರಿಕೆಯನ್ನು ತೆಗೆದು ನೋಡಿದರೂ, ನಿನ್ನ ಮನಸ್ಸು ಸಂತೋಷದಿಂದ ಕುಣಿದಾಡಬೇಕು. ನಿನ್ನ ಮುದ್ದು ಹೆಸರುಗಳನ್ನು ಹೊತ್ತ ವೆಂಕ, ನಾಣಿ, ಸೀನರ ಫೋಟೋಗಳೇ ರಾರಾಜಿಸುತ್ತಿರುತ್ತವೆ. ನಿನ್ನ ಪುಸ್ತಕ ಬಿಡುಗಡೆಯ ಸಮಾರಂಭಗಳಂತೂ ನನಗೆ ತುಂಬಾ ಖುಷಿ ಕೊಡುತ್ತವೆ. ಯಾಕೆಂದರೆ ಅಪ್ಪಿತಪ್ಪಿಯೂ ನೀನು ಒಬ್ಬ ಶೂದ್ರನನ್ನೂ ಅತಿಥಿಯಾಗಿ ಕರೆಯುವುದಿಲ್ಲ, ಕರೆದರೂ ವ್ಯರ್ಥ ಗಿರಾಕಿಯೊಬ್ಬನನ್ನು ಹಿಡಿದು ತಂದು ಕೂರಿಸಿರುತ್ತೀಯ. ಭಟ್ಟನನ್ನು ಜುಟ್ಟು ಹೊಗಳುತ್ತಿರುತ್ತಾನೆ, ಜುಟ್ಟನ ಬೆನ್ನನ್ನು ಭಟ್ಟ ಸವರುತ್ತಿರುತ್ತಾನೆ. ಅಂದಹಾಗೆ ಪರಸ್ಪರ ಬೆನ್ನು ಸವರಿಕೊಳ್ಳಲು ಬೆಣ್ಣೆ ಎಲ್ಲಿಂದ ತರುತ್ತೀರಿ? ದಯವಿಟ್ಟು ವಿಳಾಸ ಕೊಡು.

ಶಾಲಾಕಾಲೇಜುಗಳಲ್ಲಿ ಸರಸ್ವತಿ, ಶಾರದೆ, ಗಣೇಶನನ್ನು ತಂದು ಕೂರಿಸುತ್ತೀಯ. ಪ್ರತಿಕ್ಷಣವೂ ಭಾರತೀಯ ಸಂವಿಧಾನವನ್ನು ಉಲ್ಲಂಘಿಸಿ ವಂದೇ ಮಾತರಂ ಹಾಡುವ ನಿನ್ನಿಂದ ಅಪರಾಧ ಮಾಡುವ ಬಗೆಯನ್ನು ಕಲಿಯಬೇಕು. ಎಲ್ಲ ಮಕ್ಕಳನ್ನು ನಿನ್ನ ದೇವಸ್ಥಾನಗಳಿಗೆ ತೀರ್ಥಯಾತ್ರೆಗೆ ಕರೆದುಕೊಂಡು ಹೋಗುವಂತೆ ಮೇಷ್ಟ್ರುಗಳ ಮೆದುಳನ್ನು ಸಾಫ್ಟ್‌ವೇರ್ ಪ್ರೋಗ್ರಾಮಿಂಗ್‌ಗೆ ಒಳಪಡಿಸಿದ್ದೀಯ. ಎಲ್ಲ ಶೂದ್ರ ಮಕ್ಕಳು ನಿನ್ನ ದೇವಸ್ಥಾನಗಳಿಗೆ ಹೋಗಿ ಗಂಟೆ ಬಾರಿಸಲೇಬೇಕು.

ಶಾಲಾ ಕಾಲೇಜು ಪುಸ್ತಕಗಳಲ್ಲಿ ಎಚ್ಚರಿಕೆಯಿಂದ ನಿನ್ನದೇ ಚರಿತ್ರೆಯನ್ನು ಬರೆಸುತ್ತೀಯ. ನಿನ್ನ ವಿರುದ್ಧ ಒಂದು ಸಣ್ಣ ಸೊಲ್ಲೂ ಏಳದಂತೆ ನೋಡಿಕೊಳ್ಳುವುದರಲ್ಲಿ ನೀನು ನಿಸ್ಸೀಮರು. ಅಬ್ರಾಹ್ಮಣ ನಾಯಕ ವಿವೇಕಾನಂದರನ್ನು ಭಾರತದ ಎಷ್ಟೋ ಜನ ನಿನ್ನ ಜಾತಿಯವರೇ ಅಂದುಕೊಂಡಿದ್ದಾರೆ. ಅಷ್ಟರಮಟ್ಟಿಗೆ ವಿವೇಕಾನಂದರನ್ನೂ ಬ್ರಾಹ್ಮಣೀಕರಿಸಿದ್ದೀಯ.

ಇವೆಲ್ಲಾ ತುಂಬಾ ತಾತ್ವಿಕ ವಿಚಾರಗಳಾದವು. ಸ್ವಲ್ಪ ಆಟೋಟದ ಬಗ್ಗೆ ಮಾತಾಡಿ ಹಗುರಾಗೋಣ್ವೇ? ನೀನು ಕ್ರಿಕೆಟ್ ಅನ್ನೇ ಆಯ್ಕೆ ಮಾಡಿಕೊಂಡಿದ್ದೀಯ. ಸ್ವಲ್ಪವೂ ಮೈಕೈ ನೋಯುವುದಿಲ್ಲ, ನಿನ್ನ ಹುಡುಗರಂತೂ ಕ್ಯಾಪ್ಟನ್‌ಶಿಪ್ ಮತ್ತು ಬ್ಯಾಟಿಂಗ್ ಮಾಡುವುದರಲ್ಲಿ ಎತ್ತಿದ ಕೈ. ನಿಂತ ಕಡೆಯಿಂದಲೇ ಸಿಕ್ಸರ್, ಫೋರ್‌ಗಳನ್ನು ಹೊಡೆಯಬಹುದು, ಈ ಆಟವೂ ನಿನ್ನ ಆಲೋಚನೆಗೆ ತಕ್ಕ ಹಾಗೆಯೇ ಇದೆ. ಒಬ್ಬರನ್ನೊಬ್ಬರು ಮುಟ್ಟುವ ಅವಶ್ಯಕತೆಯೇ ಇಲ್ಲಪ್ಪಾ, ಮಡಿ ಹಾಳಾಗುವುದೇ ಇಲ್ಲ, ಈ ಸಿಖ್ಖ, ಮುಸ್ಲಿಮ್, ಕ್ರಿಶ್ಚಿಯನ್, ಶೂದ್ರ ಹುಡುಗರು ಕಬಡ್ಡಿ ಕೊಕ್ಕೋ, ಫುಟ್‌ಬಾಲ್, ಹಾಕಿ ಆಡುತ್ತಾರೆ. ಸುಮ್ಮನೆ ಸಮಯ ದಂಡ. ಯಾಕೆಂದರೆ ಇವುಗಳಲ್ಲಿ ದುಡ್ಡೂ ಇಲ್ಲ, ಕೀರ್ತಿಯೂ ಇಲ್ಲ. ಮೈಕೈ ನೋಯಿಸಿಕೊಳ್ಳದೆ ನಿನ್ನ ರೀತಿ ಕ್ರಿಕೆಟ್ ಆಡುವುದು ಹೇಗಿದೆ, ಕೈಕಾಲು ಮುರಿದುಕೊಳ್ಳುವುದು ಹೇಗಿದೆ?

ಕೈಕಾಲು ಮುರಿದುಕೊಳ್ಳುವುದು ಅಂದಿದ್ದಕ್ಕೆ ನೆನಪಿಗೆ ಬಂತು ನೋಡು. ಇತ್ತೀಚೆಗೆ ನೀನು ಅದನ್ನೇ ಕಾರ್ಯಕ್ರಮ ಮಾಡಿಕೊಂಡಿದ್ದೀಯಾ. ನಿನ್ನ ಚಡ್ಡಿ ಪ್ರಮುಖರು ಎಂತೆಂಥಾ ಹೊಸ ಹೊಸ ಆಟಗಳನ್ನು ಕಂಡುಹಿಡಿದಿದ್ದಾರೆ ನೋಡು. ನೀನು ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬಂದರೆ ಆ ಆಟಗಳನ್ನೇ ರಾಷ್ಟ್ರೀಯ ಕ್ರೀಡೆಗಳನ್ನಾಗಿಸಿಬಿಡುತ್ತೀಯಾ. ಮಧ್ಯೆ ಗೆರೆ ಹಾಕಿ ಪಾಕಿಸ್ತಾನ-ಭಾರತ ಟೀಮ್‌ಗಳನ್ನು ಮಾಡಿ, ಧ್ವಜ ನೆಡುವ ಆಟ ಆಡಿಸುತ್ತಿದ್ದೀಯಾ. ಆ ಮಕ್ಕಳು ದೊಡ್ಡವರಾದ ಮೇಲೆ ನಿನ್ನ ನಿರೀಕ್ಷೆಯಂತೆ ಪಾಕಿಸ್ತಾನ-ಭಾರತವನ್ನು ಮುಸ್ಲಿಮ್-ಹಿಂದೂ ಎಂದು ತಿಳಿದುಕೊಳ್ಳುತ್ತಾರೆ. ಕೊಲ್ಲುವ ಆಟ ಆರಂಭಿಸುತ್ತಾರೆ. ಒಂದು ಆಟವನ್ನು ಹೀಗೆ ಕೊಲ್ಲಲು ಬಳಸಿದವರು ಜಗತ್ತಿನ ಚರಿತ್ರೆಯಲ್ಲಿ ಇಲ್ಲವೇ ಇಲ್ಲ, ಮಕ್ಕಳನ್ನು ನೀನು ಬಳಸುತ್ತಿರುವ ರೀತಿ ನೋಡಿ ತಾಲಿಬಾನಿಗಳು ಮತ್ತು ಎಲ್‌ಟಿಟಿಇಗಳು ನಾಚಿ ತಲೆತಗ್ಗಿಸಬೇಕು ಮಾರಾಯ.

ಪತ್ರ ಮುಗಿಸುವ ಮೊದಲು ಕೊನೆಯ ವಿಚಾರ. ನಿನ್ನ ಸಚಿನ್ ತೆಂಡೂಲ್ಕರ್ ಸೆಂಚುರಿಯನ್ನು ಹೊಡೆಯದಿದ್ದಾಗಲೆಲ್ಲಾ ನನ್ನ ಮಗ ಬಿಕ್ಕಿಬಿಕ್ಕಿ ಅಳುತ್ತಾನೆ. ನಮ್ಮ ಮಂಡ್ಯದ ರೈತರೆಲ್ಲ ಅರಮನೆಯ ಒಡವೆಗಳನ್ನೆಲ್ಲ ಅಡವಿಟ್ಟು ಕೆಆರ್‌ಎಸ್ ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್‌ರನ್ನು ಬಿಟ್ಟು ಒಬ್ಬ ಯಕಶ್ಚಿತ್ ಇಂಜಿನಿಯರ್ ವಿಶ್ವೇಶ್ವರಯ್ಯನ ಫೋಟೋ ಹಾಕಿಕೊಂಡಿದ್ದಾರೆ. ಡಿವಿಜಿಯ ಪದ್ಯಗಳನ್ನು ನಮ್ಮ ಸರ್ಕಾರಿ ಬಸ್ ಮೇಲೆಲ್ಲ ಬರೆದುಕೊಂಡಿದ್ದಾರೆ.

ಅಂದರೆ ಎಲ್ಲಿ ನೋಡಿದರೂ ನೀನೇ ಇರುತ್ತೀಯ.

ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಧಾರ್ಮಿಕ ಮತ್ತು ಮಾನಸಿಕ ಪಲ್ಲಕ್ಕಿಯಲ್ಲಿ ಕೂತಿರುವ ನಿನ್ನನ್ನು ಅದು ಹೇಗೆ ಕೆಳಗಿಳಿಸುವುದೋ ಮಾರಾಯ?

ನಿನ್ನ ಮಿತ್ರ,

ಡಾ.ಸಿ.ಜಿ. ಲಕ್ಷ್ಮೀಪತಿ



ಚೋರ ಚಂದ್ರಾಚಾರಿ ಗಂಟಿನ ಸಮೇತ ಪರಾರಿ!

ಶ್ರುತಿ-ಚಂದ್ರಾಚಾರಿಯ ಮೋಸದ ಮದುವೆಯನ್ನು ಕೋರ್ಟು ರದ್ದು ಮಾಡಿದ್ದೇನೋ ಸರಿ. ಆದರೆ ಕ್ಯಾಕರಿಸಿ ಉಗಿದಿದ್ದಕ್ಕೂ, ಸನ್ಮಾನದ ಬಣ್ಣ ಕಟ್ಟುವ ಘಟಿಂಗ ಚಂದ್ರಾಚಾರಿ ಈಗ ಬೇರೆಯದೇ ವರಸೆ ಶುರುವಿಟ್ಟಿದ್ದಾನೆ.




'ಸುಮ್ಮನೆ ಕೋರ್ಟು, ಜೈಲು ಎಂದೆಲ್ಲ ಶ್ರುತಿ ಏಕೆ ಓಡಾಡಿ ಮರ್ಯಾದೆ ಕಳಕೋಬೇಕು ಅಂತಲೇ ನಾನೇ ಐಡಿಯಾ ಮಾಡಿ ಮದುವೆ ಕ್ಯಾನ್ಸಲ್ ಮಾಡಿಸಿಬಿಟ್ಟೆ. ಇದರಿಂದ ನಮಗೇ ಲಾಭ. ಏಕೆಂದರೆ ಕೋರ್ಟಿಗೆ ಶ್ರುತಿ ಓಡಾಡುವುದೂ ತಪ್ಪಿತು ನಾನು ಜೈಲಿಗೆ ಹೋಗೋದೂ ಅವಾಯ್ಡ್ ಆಯ್ತು! ಕೋರ್ಟ್ ದಾಖಲೆಗಳಲ್ಲಿ ನಾವಿಬ್ಬರೂ ಗಂಡಹೆಂಡತಿ ಅಲ್ಲದಿದ್ದರೇನಂತೆ, ಮಾನಸಿಕವಾಗಿ ನಮ್ಮಿಬ್ಬರನ್ನು ಆ ದೇವರಿಂದಲೂ ಅಗಲಿಸಲು ಸಾಧ್ಯನಾ? ಮದುವೆಯ ಉದ್ದೇಶವನ್ನು ಮದುವೆ ರದ್ದಾದ ನಂತರವೂ ಮುಂದುವರಿಸಬಹುದಲ್ಲವೇ? ಕೋರ್ಟಾಗಲಿ, ಪೊಲೀಸರಾಗಲಿ ನಮ್ಮನ್ನೇನು ದುರ್ಬೀನು ಹಾಕಿ ಕಾವಲು ಕಾಯ್ತಾರಾ? ಹಾಗೊಮ್ಮೆ ನಾವಿಬ್ಬರೂ ಲಿವಿಂಗ್ ಟುಗೆದರ್ ಥರಾ ಸಂಸಾರ ಶುರು ಹಚ್ಚಿಕೊಂಡ್ರೆ ಯಾರು ತಾನೇ ಏನು ಮಾಡಲು ಸಾಧ್ಯ?'

ಇದು ಶ್ರುತಿ ಅನೂರ್ಜಿತ ಪತಿ ಚಂದ್ರಾಚಾರಿಯ ಲೇಟೆಸ್ಟ್ ವರಸೆ. ಹಾಗಂತ ಬಸವೇಶ್ವರನಗರದ ಶ್ರುತಿ ಮನೆಯಲ್ಲೇನಾದರೂ ಚಂದ್ರಾಚಾರಿ ಸಿಕ್ಕಾನೆಯೇ ಎಂದು ಎಕ್ಕಡ ಕೈಗೆತ್ತಿಕೊಂಡು ಡ್ಯೂಟಿಗಿಳಿದವರ ಸಂಖ್ಯೆಯೇನೂ ಕಮ್ಮಿಯಿಲ್ಲ. 'ಬಿಜೆಪಿ ನಾಯಕಿ ಮಂಗಳಾ ಶ್ರೀಧರ್ ನನಗೆ ಕ್ಲೋಸ್ ಫ್ರೆಂಡು. ಕೆಪಿಎಸ್‌ಸಿ ವಿಷಯದಲ್ಲಿ ನನ್ನ ಮಾತನ್ನು ಆಕೆ ಮೀರಲು ಸಾಧ್ಯವೇ ಇಲ್ಲ' ಎಂದು ಅನೇಕರಿಂದ ಲಕ್ಷಗಟ್ಟಲೇ ದುಡ್ಡು ಕಿತ್ತಿದ್ದು ಈಗ ಶ್ರುತಿ ಪಾಲಿಗೆ ತಾಪತ್ರಯವಾಗಿದೆ. ಚಂದ್ರಾಚಾರಿಗೆ ಕೊಟ್ಟ ದುಡ್ಡು ಕೊಡಿಸುವಂತೆ ದಿನಕ್ಕೊಬ್ಬರು ಶ್ರುತಿ ಮನೆಯ ಬಾಗಿಲು ಬಡಿಯುತ್ತಿದ್ದಾರೆ. ಇದಲ್ಲದೆ ಶ್ರುತಿಯ ಕಾಲ್‌ಶೀಟ್ ಕೊಡಿಸ್ತೀನಿ ಎಂದು 'ಸಿಂಪಲ್ಲಾಗ್ ಒಂದು ಲವ್ ಸ್ಟೋರಿ'ಯ ಡೈರೆಕ್ಟರ್ ಸುನೀಲ್‌ನಿಂದ ಒಂದೂವರೆ ಲಕ್ಷ ಕಿತ್ತು ನಾಪತ್ತೆಯಾಗಿದ್ದಾನೆ.

ಚಂದ್ರಾಚಾರಿ ಹೇಳಿಕೇಳಿ ಹುಟ್ಟಾ ವಂಚಕ. ಜೆಡಿಎಸ್ ನಾಯಕ ಮತ್ತು ಕುಮಾರಣ್ಣನ ಪರಮಾಪ್ತ ಕಬಡ್ಡಿ ಬಾಬುಗೆ ಶ್ರುತಿ ಮೂಲಕ ಬಿಜೆಪಿ ನಾಯಕ ಅನಂತಕುಮಾರ್‌ಗೆ ಹೇಳಿಸಿ ಆದೇನೋ ಕೆಲಸ ಮಾಡಿಸಿಕೊಡ್ತೀನಿ ಎಂದು ನಾಲ್ಕು ಲಕ್ಷ ಜೇಬಿಗಿಳಿಸಿ ಪರಾರಿಯಾಗಿದ್ದಾನೆ. ಶ್ರುತಿಯನ್ನು ಹಾಕ್ಕೊಂಡು ಆರ್ಟ್ ಸಿನಿಮಾ ಮಾಡ್ತಿದ್ದೀನಿ ಎಂದು ಗಾಂಧಿನಗರದ ಮತ್ತೊಬ್ಬ ವಂಚಕ ಬಾ.ಮಾ. ಹರೀಶ್‌ನಿಂದ ಎರಡು ಲಕ್ಷ ಕಿತ್ತಿದ್ದಾನೆ. ಓರ್ವ ಪೊಲೀಸ್ ಅಧಿಕಾರಿ, ಇನ್ನಿಬ್ಬರು ಬಿಬಿಎಂಪಿ ಇಂಜಿನಿಯರ್‌ಗಳಿಂದ ಫಲವತ್ತಾದ ಜಾಗಕ್ಕೆ ಟ್ರಾನ್ಸ್‌ಫರ್ ಮಾಡಿಸ್ತೀನಿ ಎಂದೂ ವಂಚಿಸಿದ್ದಾನೆ.

ಈ ರೀತಿ ಯಾರೆಲ್ಲ ಚಂದ್ರಾಚಾರಿಯಿಂದ ಮೋಸ ಹೋಗಿದ್ದಾರೋ ಅವರೆಲ್ಲ ಸದ್ಯ ಶ್ರುತಿ ಮನೆ ಬಾಗಿಲನ್ನಲ್ಲದೆ ಬಡಿಯಲು ಆತನ ಬೇರೆ ಅಡ್ರೆಸ್ಸಾದರೂ ಇದ್ದರೆ ತಾನೆ? ನಾಚಿಕೆಗೇಡೆಂದರೆ ಆತನಿಗೆ ನೆಟ್ಟಗೊಂದು ಹೆಸರಿಗೂ ಗತಿಯಿದ್ದಂತಿಲ್ಲ, ಕೆಲವರ ಬಳಿ ತನ್ನ ಹೆಸರನ್ನು ಚಂದ್ರಕಾಂತ್ ಎಂದು ಇನ್ನೂ ಕೆಲವರಿಗೆ ತಾನು ಚಂದ್ರಶೇಖರ್ ಎಂದೂ ಮತ್ತೆ ಕೆಲವರಿಗೆ ಚಂದ್ರಚೂಡ ಚಕ್ರವರ್ತಿ, ಡಿಜೆಸಿ ಚಕ್ರವರ್ತಿ; ಹೀಗೆ ಕಾಲಕ್ಕೆ ತಕ್ಕಂತೆ ವಂಚನೆಗೆ ತಕ್ಕಂತೆ ತನ್ನ ಹೆಸರು, ವೃತ್ತಿ ಜಾತಿಯನ್ನು ಬದಲಾಯಿಸುತ್ತಾನೆ ಚಂದ್ರಾಚಾರಿ. ದುರಂತವೆಂದರೆ ತಾನೊಬ್ಬ ಫಿಲ್ಮ್ ಡೈರೆಕ್ಟರ್ ನಿಮ್ಮನ್ನು ಹೀರೋಯಿನ್ ಮಾಡ್ತೀನಿ ಎಂದು ವಂಚಿಸಿದ ಇಬ್ಬರು ಯುವತಿಯರ ಪೈಕಿ ಒಬ್ಬಾಕೆ ಶ್ರುತಿ ಮನೆ ಬಾಗಿಲ ಬಳಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಕಣ್ಣೀರಿಡುತ್ತಿದ್ದಾಳೆ. ಶ್ರುತಿಗೆ ಬೇಕಿತ್ತಾ ಇದು?


ಭಾರತದ ಕುಬೇರರು, ಕುಬೇರರಾದದ್ದು ಹೇಗೆ?



ಅಂಚಿನಿಂದ....

ಡಾ.ವಾಸು ಎಚ್.ವಿ.

ಈ ದೇಶದಲ್ಲಿ ಕಳೆದ ಎರಡು ದಶಕಗಳಲ್ಲಿ ಹಲವರು ಭಾರೀ ದೊಡ್ಡ ಶ್ರೀಮಂತರಾದ 'ಪವಾಡ' ಸಂಭವಿಸಿದ್ದು ಎಲ್ಲರಿಗೂ ಗೊತ್ತಿದೆ. ಜಗತ್ತಿನ ದೊಡ್ಡ ಶ್ರೀಮಂತರಲ್ಲಿ ಈ ದೇಶದವರು ಎಷ್ಟು ಜನ ಎಂಬ 'ಫೋರ್ಬ್ಸ್' ಪಟ್ಟಿಯನ್ನು ಜನರು ಕುತೂಹಲದಿಂದ ಗಮನಿಸುತ್ತಾರೆ. ಈ ರೀತಿಯ ಪಟ್ಟಿ ನೋಡಿದಾಗ, ಇದು ದೇಶದ ಹೆಮ್ಮೆಯನ್ನು ಹೆಚ್ಚಿಸಿದೆ ಎಂದು ತಿಳಿಯುವವರು ಎಷ್ಟು ಜನ ಮತ್ತು ಯಾರು, ಹಾಗೆಯೇ ಇದು ನಮ್ಮ ದೇಶಕ್ಕೆ



ಎಸ್.ಎಂ.ಕೃಷ್ಣರ ಅಳಿಯ ಸಿದ್ಧಾರ್ಥ

ಕಂಟಕ ಎಂದು ಬಗೆಯುವವರು ಯಾರು ಮತ್ತು ಎಷ್ಟು ಜನ ಎಂಬುದೂ ಮುಖ್ಯ. ಬಹುಶಃ ಹೆಚ್ಚಿನ ಜನರು ಈ ಎರಡೂ ವಿಭಾಗಕ್ಕೆ ಸೇರದೆ, ಕುತೂಹಲದಿಂದಷ್ಟೇ ನೋಡಿ ಪುಟ ತಿರುವುತ್ತಾರೆ. ಆದರೆ ಈಗೊಂದೆರಡು ವರ್ಷಗಳ ಹಿಂದೆ, ಮಂಡ್ಯ ನಗರದ ಮುಖ್ಯ ವೃತ್ತದಲ್ಲಿ ಒಂದು ಫ್ಲೆಕ್ಸ್ ಕಟೌಟ್ ಹಾಕಲಾಗಿತ್ತು. ಅದರಲ್ಲಿ ದೇಶದ 20 ಶ್ರೀಮಂತರಲ್ಲಿ ಒಬ್ಬರೆಂದು 'ಖ್ಯಾತಿವೆತ್ತ ಸಿದ್ಧಾರ್ಥ ಅವರನ್ನು ಸಿದ್ಧಾರ್ಥರ ಮಾವ ಎಸ್.ಎಂ.ಕೃಷ್ಣರ ಅಭಿಮಾನಿಯೊಬ್ಬರು ಅಭಿನಂದಿಸಿದ್ದರು.

ಆದರೆ ಈ ರೀತಿ ಇದ್ದಕ್ಕಿದ್ದಂತೆ ಸಿರಿವಂತರಾದರೆಂದರೆ, ಅತೀ ಕೆಟ್ಟ ಹಾದಿಯನ್ನು ಅವರು ಹಿಡಿದಿರಬಹುದು ಎಂದೇ ಅನುಮಾನಿಸಬೇಕು ಎಂದೇಕೆ ಅನಿಸುವುದಿಲ್ಲ. ಲಂಕೇಶರು ಮರೆಯುವ ಮುನ್ನದ ಒಂದು ಟಿಪ್ಪಣಿಯಲ್ಲಿ ಇದರ ಕುರಿತು ಬರೆಯುತ್ತಾರೆ. ಮಾಸ್ತಿಯವರು ತಮ್ಮ ಕಥೆಗಳಲ್ಲಿ ಶ್ರೀಮಂತರನ್ನು 'ಪುಣ್ಯವಂತರು' ಎಂದು ಸಂಬೋಧಿಸುವುದು ಲಂಕೇಶರಲ್ಲಿ ಆಶ್ಚರ್ಯ ಮೂಡಿಸುತ್ತದೆ. All wealt? is stealt? ಎಂಬ ಇಂಗ್ಲಿಷ್ ಗಾದೆಯನ್ನು ಸ್ವಲ್ಪ ಅತಿ ಎನ್ನಬಹುದಾದರೂ, ಎಲ್ಲಾ ಶ್ರೀಮಂತರನ್ನು ಪುಣ್ಯವಂತರು ಎಂದು ಕರೆಯುವುದು ಮಾತ್ರ ಸರಿಯಲ್ಲ ಎಂಬುದು ಲಂಕೇಶರ ಅನಿಸಿಕೆ.


ಅದೇನೇ ಇರಲಿ, ಈಗ ಸದ್ಯ ಭಾರತದಲ್ಲಿ ಇರುವ 46 ಬಿಲಿಯನೇರ್‌ಗಳ ಎಲ್ಲಾ ಸಂಪತ್ತೂ ಸಹ ಕೊಳ್ಳೆ ಹೊಡೆದದ್ದೇ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಇಲ್ಲಿ ಬಿಲಿಯನೇರ್ ಎಂದಾಗ, 100 ಕೋಟಿ ಡಾಲರ್ (ಸುಮಾರು 6,000 ಕೋಟಿ ರೂ.ಗಳೆಂದು ಇಟ್ಟುಕೊಳ್ಳೋಣ) ಸಂಪತ್ತನ್ನು ಹೊಂದಿರುವ ವ್ಯಕ್ತಿ ಅಥವಾ ಕುಟುಂಬ ಎಂದರ್ಥ. ಇದರ ಕುರಿತು ಅಧ್ಯಯನ ಮಾಡಿರುವ ಆದಿತಿ ಗಾಂಧಿ ಮತ್ತು ಮೈಕೇಲ್ ವಾಲ್ಟನ್ ಎಂಬಿಬ್ಬರು ತಜ್ಞರು ಹಲವು ಕುತೂಹಲಕಾರಿ ಸಂಗತಿಗಳನ್ನು ಮುಂದಿಟ್ಟಿದ್ದಾರೆ.

90ರ ದಶಕದ ಮಧ್ಯಭಾಗದಲ್ಲಿ ಒಟ್ಟು 3.2 ಬಿಲಿಯನ್ ಡಾಲರ್‌ಗಳಷ್ಟು ಸಂಪತ್ತನ್ನು ಹೊಂದಿದ್ದ ಇಬ್ಬರೇ ಇಬ್ಬರು ಬಿಲಿಯನೇರ್‌ಗಳು ಈ ದೇಶದಲ್ಲಿದ್ದರು. 2012ರ ಹೊತ್ತಿಗೆ ಒಟ್ಟು 176.3 ಬಿಲಿಯನ್ ಡಾಲರ್ ಸಂಪತ್ತನ್ನು ಹೊಂದಿರುವ 46 ಬಿಲಿಯನೇರ್‌ಗಳು ಸೃಷ್ಟಿಯಾಗಿದ್ದಾರೆ. ಅದರಲ್ಲಿ ಮುಖೇಶ್ ಅಂಬಾನಿ ಒಬ್ಬನೇ 22.3 ಬಿಲಿಯನ್ ಡಾಲರ್‌ಗಳನ್ನು ಹೊಂದಿದ್ದು ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದಾನೆ.

ಅದನ್ನು ಬಿಟ್ಟರೆ ಇಬ್ಬರು ಕುಬೇರರು 10 ಬಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ಸಂಪತ್ತು ಹೊಂದಿದ್ದರೆ, 8 ಜನರು 5 ರಿಂದ 10 ಬಿಲಿಯನ್ ಡಾಲರ್ ಹೊಂದಿದ್ದಾರೆ. ಉಳಿದವರು 5 ಬಿಲಿಯನ್ ಡಾಲರ್‌ಗಳಿಗಿಂತ ಕಡಿಮೆ ಹೊಂದಿದ್ದಾರೆ. ಈ 46 ಜನರಲ್ಲಿ 20 ಜನರು ಪ್ರಧಾನವಾಗಿ ರಿಯಲ್ ಎಸ್ಟೇಟ್, ನಿರ್ಮಾಣ ಕಾಮಗಾರಿ, ಮೂಲಭೂತ ಸೌಕರ್ಯ ನಿರ್ಮಾಣ, ಮಾಧ್ಯಮ, ಸಿಮೆಂಟ್ ಮತ್ತು ಗಣಿ ಉದ್ದಿಮೆಗಳಲ್ಲಿ ತೊಡಗಿರುವವರಾಗಿದ್ದಾರೆ. ಉಳಿದ 26 ಜನರು ಐಟಿ-ಸಾಫ್ಟ್‌ವೇರ್, ಬಿಟಿ-ಜೈವಿಕ ತಂತ್ರಜ್ಞಾನ, ಔಷಧಿ ಉದ್ದಿಮೆ, ಹಣಕಾಸು ವ್ಯವಹಾರ, ಮದ್ಯ ಮೋಟಾರು ವಾಹನ ಇತ್ಯಾದಿಗಳಲ್ಲಿದ್ದಾರೆ.

ಇದರಲ್ಲಿ ಗಮನಿಸಬೇಕಾದುದೇನೆಂದರೆ, ಮೊದಲು ಹೇಳಿದ 20 ಜನರ ಬಳಿಯೇ ಕುಬೇರರ ಒಟ್ಟು ಸಂಪತ್ತಿನ (ಒಟ್ಟು ದೇಶದ ಸಂಪತ್ತಲ್ಲ) ಶೇ. 60ರಷ್ಟಿದೆ. ಇದರರ್ಥವೇನು? ದೇಶದ ನೈಸರ್ಗಿಕ ಸಂಪತ್ತಿನ (ಭೂಮಿ, ಅದಿರು, ತೈಲ ಇತ್ಯಾದಿ) ಮೇಲೆ ಆಧರಿಸಿರುವ ಮತ್ತು ಸರ್ಕಾರದ ಜೊತೆ ಹಲವು ರೀತಿಯ ಸಂಬಂಧಗಳನ್ನು ಹೊಂದಿರುವಂತಹ ಕಂಪೆನಿಗಳೇ ಹೆಚ್ಚಿನ ಸಂಪತ್ತನ್ನು ತಮ್ಮದಾಗಿಸಿಕೊಂಡಿವೆ. ಅಂದರೆ ಎಲ್ಲಾ ವಿಷಯಗಳಲ್ಲೂ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕಾದ, ಸರ್ಕಾರಕ್ಕೆ ರಾಯಲ್ಟಿ ಕಟ್ಟಬೇಕಾದ ಅಥವಾ ಸರ್ಕಾರದ್ದೇ ಕಾಮಗಾರಿಗಳನ್ನು ಮಾಡಬೇಕಾದಂತಹ ಕಂಪೆನಿಗಳು ಇವಾಗಿವೆ. ಅಂದರೆ ಇವರು ಸಿಕ್ಕಾಪಟ್ಟೆ ಹಣವಂತರಾಗಲು ಸರ್ಕಾರವು ನೇರವಾಗಿ ಕಾರಣವಾಗಿದೆ.

1990ರ ನಂತರ ಈ ದೇಶದಲ್ಲಿ ಅತಿ ಸಿರಿವಂತಿಕೆಯ ಪ್ರಮಾಣ ವಿಪರೀತವಾಗಿ ಹೆಚ್ಚಿದೆ. ದೇಶದ ಒಟ್ಟು ಸಂಪತ್ತು 'ಅಭಿವೃದ್ಧಿ'ಯ ಹೆಚ್ಚಳದ ಜೊತೆಗೆ ದೇಶದ ಒಟ್ಟೂ ಜನರ ಆರ್ಥಿಕ ಸ್ಥಿತಿಗತಿ ಹೆಚ್ಚಾಗುವುದು ಬೇರೆ. ಕೆಲವೇ ವ್ಯಕ್ತಿಯಾ ಕುಟುಂಬಗಳ ಸಿರಿವಂತಿಕೆ ಯದ್ವಾತದ್ವಾ ಹೆಚ್ಚಾಗಿ, ಉಳಿದ ಇಡೀ ಜನಸಮುದಾಯದ ಬದುಕಿನಲ್ಲಿ ಸಣ್ಣ ಪುಟ್ಟ ಏರಿಕೆ ಮಾತ್ರ ಕಂಡುಬರುವುದು ಬೇರೆ. ನಮ್ಮ ದೇಶದಲ್ಲಿ ಆಗಿರುವುದು ಎರಡನೆಯ ರೀತಿಯದ್ದು. ಇದನ್ನು



ಈ ರೀತಿಯಲ್ಲೂ ವಿವರಿಸಬಹುದು. 90ರ ದಶಕದ ಮಧ್ಯಭಾಗದವರೆಗೂ ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ದಲ್ಲಿ ಕುಬೇರರ ಪಾಲು ಶೇ. 1 ಆಗಿತ್ತು, 2008ರ ಹೊತ್ತಿಗೆ ಒಟ್ಟು ಜಿಡಿಪಿಯಲ್ಲಿ ಕುಬೇರರ (ಅಂದರೆ ಕೇವಲ 46 ಜನರ) ಪಾಲು ಶೇ.22 ಆಗಿತ್ತು, ಆ ನಂತರ ಷೇರು ಮಾರುಕಟ್ಟೆಯಲ್ಲಿ ಈ ಕಂಪೆನಿಗಳ ಷೇರು ಮೌಲ್ಯ ತೀವ್ರವಾಗಿ ಕುಸಿದಿದೆ. ಆದರೂ ಈಗಲೂ (2012) ಈ ದೇಶದ ಒಟ್ಟು ಜಿಡಿಪಿಯಲ್ಲಿ 46 ಜನರ ಪಾಲು ಶೇ.10 ಆಗಿದೆ.


ಇದೆಲ್ಲವೂ ಕಂಪೆನಿಗಳ ಅಧಿಕೃತ ಲೆಕ್ಕ ಎನ್ನುವುದನ್ನು ಮರೆಯಬಾರದು. ಇದೇ ಕಂಪೆನಿಗಳ ಅನಧಿಕೃತ ಲೆಕ್ಕ ಮತ್ತು ದೊಡ್ಡ ರಾಜಕಾರಣಿಗಳಲ್ಲಿ ಕೆಲವರು 6,000 ಕೋಟಿ ರೂ.ಗಳ ಗೆರೆಯನ್ನು ದಾಟಿರುವವರಲ್ಲಿ ಇದ್ದಾರೆ ಎಂಬುದು ಸ್ಪಷ್ಟ. ಅದೇ ರೀತಿ 1000 ಕೋಟಿ ರೂ.ಗಳ ಸಂಪತ್ತನ್ನು ಹೊಂದಿರುವ ಶ್ರೀಮಂತರ (ಇವರಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ದಿಮೆಪತಿಗಳು ಎಲ್ಲರೂ ಸೇರುತ್ತಾರೆ) ಸಂಖ್ಯೆ ಕೆಲವು ನೂರನ್ನು ದಾಟುತ್ತವೆ. ಇವರೆಲ್ಲರದ್ದೂ ಸೇರಿದರೆ ಅದು ದೇಶದ ಶೇ.50ರಷ್ಟು ಸಂಪತ್ತಿಗೆ ಸಮವಾಗುತ್ತದೆ. ಇನ್ನು ಕೆಲವು ಸಾವಿರದಿಂದ ಲಕ್ಷದತನಕ ಇರುವ ನೂರು ಕೋಟಿ ಒಡೆಯರನ್ನು ಸೇರಿಸಿದರೆ ಅಲ್ಲಿಗೆ ಬರೋಬ್ಬರಿ ದೇಶದ ಶೇ.95ರಷ್ಟು ಸಂಪತ್ತಿನ ಲೆಕ್ಕ ಚುಕ್ತಾ ಆಗುತ್ತದೆ. ಉಳಿದ ಶೇ.99ಕ್ಕೂ ಹೆಚ್ಚು ಜನರು ಶೇ.5ರಷ್ಟು ಸಂಪತ್ತನ್ನೂ ಹೊಂದಿಲ್ಲ!

ಕಳೆದ 23 ವರ್ಷಗಳ ದೇಶದ 'ಅಭಿವೃದ್ಧಿ' ಸ್ವತಂತ್ರ ಭಾರತದ ನಾಗರಿಕರಿಗೆ ಕೊಟ್ಟಿರುವುದು ಏನನ್ನು? ಕೊಡದೇ ಇರುವುದು ಏನನ್ನು ಎಂಬುದನ್ನು ಇವೆಲ್ಲವೂ ತೋರಿಸುತ್ತದೆ. ಜಾತಿಯ ವಿಚಾರಕ್ಕೆ ಬರುವುದಾದರೆ, 46 ಕುಬೇರರ ಪೈಕಿ 28 ಜನರು ನೂರಾರು ವರ್ಷಗಳಿಂದಲೂ ವ್ಯಾಪಾರ ವಹಿವಾಟು ಮಾಡಿಕೊಂಡು ಬರುತ್ತಿರುವ ಅವೇ ಜಾತಿಗಳಿಗೆ ಸೇರಿದ್ದಾರೆ. ಅಂದರೆ ಬನಿಯಾ, ಮಾರ್ವಾಡಿ, ಪಾರ್ಸಿ ಮತ್ತು ಸಿಂಧಿಗಳು. ಅದಾದ ನಂತರದ್ದು ಉಳಿದ ಮೇಲ್ಜಾತಿಗಳದ್ದು (ಬ್ರಾಹ್ಮಣ - ಮಲ್ಯ, ನಾರಾಯಣಮೂರ್ತಿ, ಖತ್ರಿ - ಥಾಪರ್, ಮುಂಜಾಲ್, ಮಹೀಂದ್ರಾ). ಕೆಲವರು 'ಹಿಂದುಳಿದ' ಜಾತಿಗಳಿಂದ ಬಂದವರಿದ್ದಾರೆ (ನಾಡಾರ್, ಜಾಟ್ ಮತ್ತು ರೆಡ್ಡಿಗಳು). ಒಬ್ಬ ಮುಸ್ಲಿಂ ಕುಬೇರನೂ ಇದ್ದರೆ, ಯಾವೊಬ್ಬ ದಲಿತನೂ, ಆದಿವಾಸಿಯೂ ಬಿಲಿಯನೇರ್ ಆಗಿಲ್ಲ.

ಮೇಲೆ ಹೇಳಲಾದ ಕ್ಷೇತ್ರಗಳಲ್ಲಿ ಈ ಪ್ರಮಾಣದ ಸಿರಿವಂತಿಕೆ ಸೃಷ್ಟಿಯಾಗುವಲ್ಲಿ, ಕೆಲವೇ ಕಂಪೆನಿಗಳು ಮಾರುಕಟ್ಟೆಯಲ್ಲೂ ಮತ್ತು ಸರ್ಕಾರದ ನೀತಿಗಳ ಮೇಲೂ ಏಕಸ್ವಾಮ್ಯ ಹೊಂದಿರುವುದರ ಪಾತ್ರ ಬಹಳ ಮುಖ್ಯವಾಗಿದೆ. ಸರ್ಕಾರದ ಕಾಮಗಾರಿಗಳು, ಗಣಿ ಲೈಸೆನ್ಸ್ ಪಡೆಯುವುದರಲ್ಲೂ, ಲೈಸೆನ್ಸ್ ಇಲ್ಲದೆಯೂ ಗಣಿಗಳನ್ನು ನಡೆಸಲು ಶಕ್ತರಾಗಿರುವುದರಲ್ಲೂ, ಇಂಧನ ಕ್ಷೇತ್ರದಲ್ಲಿ ಸರ್ಕಾರದಿಂದ ಅನುಮತಿ ಪಡೆಯುವುದರಲ್ಲೂ, 2ಜಿ, 3ಜಿ ತರಂಗಾಂತರಗಳನ್ನು ಪಡೆದುಕೊಳ್ಳುವುದರಲ್ಲೂ, ರಿಯಲ್ ಎಸ್ಟೇಟ್ ಉದ್ದಿಮೆಯನ್ನು ನಡೆಸಲು ಬೇಕಾದ ವಿವಿಧ ರೀತಿಯ ಅನುಕೂಲಗಳನ್ನು ಸರ್ಕಾರದಿಂದ ಪಡೆದುಕೊಳ್ಳುವುದರಲ್ಲೂ ಇವರು ಮಿಕ್ಕೆಲ್ಲರನ್ನೂ ಹಿಂದಿಕ್ಕಿದ್ದಾರೆ.

ಇದರಾಚೆಗೆ ವಿವಿಧ ರೀತಿಯ ಉತ್ಪಾದನೆಗಳಲ್ಲೂ ಸಹ ಸರ್ಕಾರದ ನೀತಿಗಳು ಇಂತಹ ಕಂಪೆನಿಗಳ ಪರವಾಗಿದೆ. ಆಯಾ ಕಂಪೆನಿಗಳು ಶೇ.80ರಷ್ಟು ಗುತ್ತಿಗೆ ಕಾರ್ಮಿಕರನ್ನು ಇಟ್ಟುಕೊಂಡು ದುಡಿಸಿದರೂ, ಸಂವಿಧಾನ ಮತ್ತು ಕಾನೂನುಗಳು ಅವರನ್ನು ಯಾವ ರೀತಿಯಲ್ಲೂ ಕಟ್ಟಿ ಹಾಕಿಲ್ಲ, ಬದಲಿಗೆ ಕಾರ್ಮಿಕ ಇಲಾಖೆಯನ್ನು ಕಾರ್ಪೊರೇಟ್ ಹಿತಾಸಕ್ತಿಗಳ ಪರವಾಗಿ ಕೆಲಸ ಮಾಡಲು, ಹೆಚ್ಚೆಂದರೆ ಕಾರ್ಮಿಕರ ಆಕ್ರೋಶ ಸಿಡಿಯದೇ ಇರುವಂತೆ ನೋಡಿಕೊಳ್ಳುವ ಪಾಕ್ ಅಬ್ಸರ್ವರ್ ಆಗಿರಲು ಏನು ಬೇಕೋ ಅದನ್ನು ಮಾಡಿದ್ದಾರೆ.

ಜಗತ್ತಿನಾದ್ಯಂತ ಬಂಡವಾಳಶಾಹಿಯ ತೀವ್ರ ಬೆಳವಣಿಗೆಯ ಜೊತೆಗೆ ಇದೇ ಆಗಿದೆ. ಅಮೆರಿಕಾ, 1990ರ ನಂತರದ ರಷ್ಯಾ, ಮೆಕ್ಸಿಕೋ, ಪೂರ್ವ ಐರೋಪ್ಯದ ರಾಷ್ಟ್ರಗಳು, ಸೌದಿ ರಾಷ್ಟ್ರಗಳು ಇಲ್ಲೆಲ್ಲಾ ಇದೇ ರೀತಿ ಕೆಲವು ಕುಬೇರರು ಹೆಚ್ಚಿನ ಸಂಪತ್ತನ್ನು ಹೊಂದಿರುವುದು ನಡೆದೇ ಇದೆ. ಕೆಲವು ಕಡೆ ಮಾತ್ರ ಈ ಮಟ್ಟದಲ್ಲಿ ಕಾರ್ಪೊರೇಟ್ ಬೆಳವಣಿಗೆಗೆ ಮತ್ತು ಭ್ರಷ್ಟಾಚಾರಕ್ಕೆ ಸರ್ಕಾರಗಳು ಅನುವು ಮಾಡಿಕೊಡುವುದರ ವಿರುದ್ಧ ದೊಡ್ಡ ಜನಾಂದೋಲನಗಳು ನಡೆದು, ಸರ್ಕಾರಗಳು ಹಲವು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕಾಗಿ ಬಂದಿದೆ. ಆದರೆ ಭಾರತದಲ್ಲಿ ಭ್ರಷ್ಟಾಚಾರದ ವಿರುದ್ಧದ ಹೋರಾಟವೆಂದರೆ ಅದು ಕೇವಲ ಆಳುವ



ಮುಖೇಶ್ ಅಂಬಾನಿ

ಸರ್ಕಾರದ ಕೆಲವರು ಲಂಚ ಪಡೆಯುವುದನ್ನು ಮಾತ್ರ ಗುರಿಯಾಗಿಟ್ಟುಕೊಳ್ಳುವಂತೆ ಮಾಡುವಲ್ಲಿ ಕಾರ್ಪೊರೇಟ್ ಕಂಪೆನಿಗಳು ಮತ್ತು ಅವುಗಳ ಕೈಯ್ಯಲ್ಲಿರುವ ಕಾರ್ಪೊರೇಟ್ ಮಾಧ್ಯಮಗಳು ಯಶಸ್ವಿಯಾಗಿವೆ. ಇಲ್ಲದಿದ್ದರೆ ಅಣ್ಣಾ ಹಜಾರೆಯವರ ಹೋರಾಟಕ್ಕೆ ಅಧಿಕೃತವಾಗಿ ದೊಡ್ಡ ಪ್ರಮಾಣದಲ್ಲಿ ಹಣ ನೀಡಿದವರ ಪಟ್ಟಿಯಲ್ಲಿ ಜಿಂದಾಲ್ ಕಂಪೆನಿ ಇರುವುದು ಹೇಗೆ ಸಾಧ್ಯವಾಗುತ್ತಿತ್ತು? ಈ ಹೋರಾಟ ಕಾರ್ಪೊರೇಟ್ ಕಂಪೆನಿಗಳನ್ನು ಎಲ್ಲೂ ಗುರಿ ಮಾಡದೇ ಇರಲು ಹೇಗೆ ಸಾಧ್ಯವಿತ್ತು?

ಇದೀಗ ಹೆಚ್ಚುತ್ತಿರುವ ಕಾರ್ಪೊರೇಟ್‌ಗಳ ದಾಹವನ್ನು ತಣಿಸಲು ಈಗಿರುವ ಸರ್ಕಾರದಿಂದ ಸಾಧ್ಯವಿಲ್ಲವೆಂದು 'ಬದಲಾವಣೆ'ಯ ಗಾಳಿಯನ್ನು ಬೀಸಲಾಗುತ್ತಿದೆ. ಅದಕ್ಕಾಗಿ ಮಾಧ್ಯಮಗಳೆಂಬ ಬೀಸಣಿಗೆಗಳನ್ನು ಚೆನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ವಾಸ್ತವದಲ್ಲಿ ಕಳೆದ 15 ವರ್ಷಗಳಲ್ಲಿ ಮಹಾರಾಷ್ಟ್ರಕ್ಕಿಂತ ಸಾಪೇಕ್ಷವಾಗಿ ಕಡಿಮೆ 'ಅಭಿವೃದ್ಧಿ'ಯ ದರವನ್ನು ಸಾಧಿಸಿರುವ, ದೇಶದ ಹಲವು ರಾಜ್ಯಗಳಿಗಿಂತ ಮಾನವ ಅಭಿವೃದ್ಧಿ ಬೆಳವಣಿಗೆ ದರದಲ್ಲಿ ಕೆಳಗಿರುವ ಗುಜರಾತ್ ರಾಜ್ಯದ ನರಹಂತಕ ಮುಖ್ಯಮಂತ್ರಿಯನ್ನು ದೆಹಲಿಯ ಸಿಂಹಾಸನದಲ್ಲಿ ಕೂಡಿಸುವ ಹುನ್ನಾರ ನಡೆಯುತ್ತಿದೆ. 46 ಕುಬೇರರನ್ನು ಸೃಷ್ಟಿಸುವಲ್ಲಿ ಎನ್‌ಡಿಎ ಮತ್ತು ಯುಪಿಎಗಳೆರಡೂ ಪಾಲುದಾರರು. ದೇಶದ ಎಲ್ಲಾ ರಾಜಕೀಯ ಪಕ್ಷಗಳೂ ಇವಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಬೆಂಬಲ ಕೊಟ್ಟಿದ್ದವೇ ಆಗಿದ್ದವು. ಈಗ ಇನ್ನೊಂದು 10 ಮಂದಿ ಹೊಸ ಕುಬೇರರು ಮತ್ತು ಅವರೆಲ್ಲರ ಕೈಲಿ ದೇಶದ ಶೇ.75ರಷ್ಟು ಸಂಪತ್ತು ಎಂಬ 'ಗುಜರಾತ್ ಮಾದರಿ' ಅಭಿವೃದ್ಧಿಗೆ ಓಟು ಕೊಡುತ್ತೀರೋ, ಅಥವಾ ಯಥಾಸ್ಥಿತಿ ಸರ್ಕಾರಕ್ಕೋ ಎಂಬ ಎರಡೇ ಆಯ್ಕೆಗಳನ್ನು ಜನರ ಮುಂದೆ ಬಲವಂತವಾಗಿ ಇಡಲಾಗುತ್ತಿದೆ. ಮೂರನೇ ದಾರಿ ಪರ್ಯಾಯ ರಾಜಕೀಯ ಪಕ್ಷಗಳದ್ದಲ್ಲ, ಪರ್ಯಾಯ ಆರ್ಥಿಕತೆಯನ್ನು ಪ್ರತಿಪಾದಿಸುವ ಪರ್ಯಾಯ ಜನಪರ ರಾಜಕಾರಣದ್ದು. ಅದು ಸಾಧ್ಯವಿಲ್ಲವೇ? ■

ಸಂವಿಧಾನದ ರಾಜ್ಯ ನಿರ್ದೇಶಕ ತತ್ವದಿಂದ

ಕಲಂ 38 (2): ದೇಶದ ಜನರ ಆದಾಯದಲ್ಲಿನ ಅಸಮಾನತೆಯನ್ನು ಅತ್ಯಂತ ಕಡಿಮೆಗೆ ಇಳಿಸಲು ಮತ್ತು ಜನರ ಹಾಗೂ ಜನಸಮುದಾಯಗಳ ಬದುಕಿನ ಸ್ಥಿತಿಗತಿ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಪ್ರಭುತ್ವವು ಪ್ರಯತ್ನ ಹಾಕಬೇಕು.

ಕಲಂ 39 ಬಿ: ದೇಶದ ಸಂಪತ್ತಿನ ಮೇಲಿನ ಮಾಲೀಕತ್ವ ಮತ್ತು ಹಿಡಿತ ಯಾವ ರೀತಿಯಲ್ಲಿ ಇರಬೇಕೆಂದರೆ, ಅದು ಎಲ್ಲಾ ಜನರಿಗೂ ಒಳಿತು ಮಾಡುವಂತಿರಬೇಕು.

ಕಲಂ 39 ಸಿ: ದೇಶದ ಸಂಪತ್ತು ಕೆಲವರ ಕೈಲೇ ಕೇಂದ್ರೀತವಾಗದಂತೆ ಆರ್ಥಿಕ ವ್ಯವಸ್ಥೆಯನ್ನು ನಡೆಸಬೇಕು.



ನಟಿ ಸರಿತಾ ಜೈನ್
ಕೊಲೆಯಾ? ನಾಪತ್ತೆಯಾ?

ನಿವೇದಿತಾ ಜೈನ್ ಎಂಬ ಮೋಹಕ ನಟಿಯ ದುರಂತದ ದಾರಿಯಲ್ಲೇ ಕನ್ನಡದ ಮತ್ತೊಬ್ಬಳು 'ಮುದ್ದು ಹೀರೋಯಿನ್' ಸರಿತಾ ಜೈನ್ ಬದುಕೂ ಗ್ಲಾಮರ್ ಕ್ರೌರ್ಯಕ್ಕೆ ಬಲಿಯಾಗಿದೆ!

ಗಾಂಧಿನಗರದ ಥಳಕು ಬಳುಕಿನಲ್ಲಿ ಹೆಪ್ಪುಗಟ್ಟಿದ ದಾರುಣ, ಸಿನಿಮಾ ಮಾಯೆಯ ಸೆರಗಿನ ಕ್ರೌರ್ಯ ಮತ್ತು ಗ್ಲಾಮರ್ ಗರ್ಭದಲ್ಲಿ ಅವಿತು ಕೂತ ವಿಕಟಗಳು ಒಂದೆರಡಲ್ಲ. ಪ್ರತಿವರ್ಷ ಕಾಲೇಜು ತೊರೆದು ಗಾಂಧಿನಗರದ ಗ್ಲಾಮರ್ ಸೆಳೆತಕ್ಕೆ ಬಲಿಯಾದ ಹೆಣ್ಣುಮಕ್ಕಳ ಸಂಖ್ಯೆ ಸಣ್ಣದೇನಲ್ಲ. ಅದೇರೀತಿ ಹೀರೋ ಕನಸು ಹೊತ್ತು ಬೀದಿಪಾಲಾದ ಹುಡುಗರ ಸಂಖ್ಯೆಯೂ ಕಮ್ಮಿಯೇನಿಲ್ಲ. ಯಾರೋ ಯುವಕನೊಬ್ಬನನ್ನು ಹೀರೋ ಮಾಡ್ತೀನಿ ಎಂದು ಆತ ಕೂಡಿಟ್ಟ ಚೂರುಪಾರು ಕಾಸನ್ನೂ ಲಪಟಾಯಿಸುವ ಖದೀಮ ಡೈರೆಕ್ಟರ್‌ಗಳು, ಹುಡುಗಿಯರನ್ನು ಪಟಾಯಿಸಲೆಂದೇ ಮುಹೂರ್ತದ ನಾಟಕವಾಡುವ ದಗಲುಬಾಜಿ ಪ್ರೊಡ್ಯೂಸರ್‌ಗಳು, ಇಂಥವನ ಬಳಿ ದುಡ್ಡಿದೆಯೆಂದು ಗೊತ್ತಾಗಿದ್ದೇ ಆತನಿಗೆ ಸಿನಿಮಾ ಹುಚ್ಚೆಬ್ಬಿಸಿ ಬೆಳಗಾಗುವ ಮೊದಲೇ ಬರಿಗೈದಾಸನನ್ನಾಗಿಸುವ ಪ್ರಳಯಾಂತಕರು, ವಂಚಕರು, ತಲೆಹಿಡುಕರು, ಹೆಣ್ಣುಬಾಕರೆಲ್ಲ ಇವತ್ತು ಗಾಂಧಿನಗರದ ತಿಪ್ಪೆಗುಂಡಿಯಲ್ಲಿ ಪುತುಗಟ್ಟದಿದ್ದರೆ ಕನ್ನಡ ಚಿತ್ರರಂಗ ವಂಚಕರ ಅಡ್ಡೆಯಾಗುತ್ತಿರಲಿಲ್ಲ.

ಸರಿತಾ ಜೈನ್ ಬದುಕೂ ಕಣ್ಣೀರ ಕತೆಯಾಗುತ್ತಿರಲಿಲ್ಲ.

ನಿವೇದಿತಾ ಜೈನ್ ಮಟ್ಟಕ್ಕಲ್ಲದಿದ್ದರೂ ಆಕೆಯ ನಿಗೂಢ ಸಾವಿನ ನಂತರ 'ಜೈನ್' ಎಂಬ ಮತ್ತೊಂದು ಹೆಸರು ಗಾಂಧಿನಗರದಲ್ಲಿ ಕೇಳಿಬಂದಿದ್ದೇ ಸರಿತಾ ಜೈನ್ ಎಂಬ ಬೆಡಗಿಯಿಂದಾಗಿ. ಒಂದು ಕೋನದಿಂದ ಹಿಂದಿಯ ಶಿಲ್ಪಾ ಶೆಟ್ಟಿಯಂತೆ, ಮತ್ತೊಂದು ಮೂಲೆಯಿಂದ ಐಶ್ವರ್ಯಾಳ ತಂಗಿಯಂತೆ ಕಾಣುತ್ತಿದ್ದ ಸರಿತಾ ಜೈನ್ 2008-09ರ ಹೊತ್ತಿಗೆ ಗಾಂಧಿನಗರದಲ್ಲಿ ಸಂಚಲನ ಮೂಡಿಸಿದ್ದಂತೂ ಸತ್ಯ.

ಮಚ್ಚಾ

ಪ್ರೇಮಾ ನಿರ್ಗಮನದ ನಂತರ ಆಕೆಯ ಸ್ಥಾನ ತುಂಬಬಲ್ಲ ವರ್ಚಸ್ಸಿರುವ ಹುಡುಗಿಯೆಂದೇ ಇಡೀ ಗಾಂಧಿನಗರ ತಿರುಗಿ ನೋಡುತ್ತಿದ್ದಾಗಲೇ ಸರಿತಾ ಜೈನ್ ನಾಪತ್ತೆಯಾದಳು. 'ಮಚ್ಚಾ' ಎಂಬ ಅಷ್ಟೇನೂ ಹೆಸರು ಮಾಡದ ಚಿತ್ರ ಆಕೆಯ ಮೊದಲ ಚಿತ್ರವಾಗಿತ್ತಾದರೂ ಅದಕ್ಕೂ ಮುನ್ನ ಮೂರ್‍ನಾಲ್ಕು ಚಿತ್ರಗಳಲ್ಲಿ ಆಕೆ ನಟಿಸಿದ್ದಳು. 'ಹೇ ಸರಸು' ಎಂಬ ಇನ್ನೊಂದು ಕನ್ನಡ ಚಿತ್ರವೂ ಅಷ್ಟರಲ್ಲೇ ತೆರೆಕಾಣಬೇಕಿತ್ತು. 'ಮಚ್ಚಾ' ಬಿಡುಗಡೆಯಾಗಿದ್ದು 2009 ರಲ್ಲಾದರೆ ಅದಕ್ಕೂ ಮುನ್ನ ಅಂದರೆ 2008 ರಲ್ಲಿ ಆಕೆ ತುಳುವಿನಲ್ಲಿ ಬಿಜೆಪಿ ಸರ್ಕಾರದ ಮಂತ್ರಿಯಾಗಿದ್ದ ನಾಗರಾಜಶೆಟ್ಟಿ ಮೊಗವೀರರನ್ನು ಕುರಿತು ನಿರ್ಮಿಸಿದ್ದ 'ಕಡಲ ಮಗೆ' ಎಂಬ ಚಿತ್ರಕ್ಕೂ ಹೀರೋಯಿನ್ನಾಗಿದ್ದಳು. ಆದರೆ ವಿಪರ್ಯಾಸವೆಂದರೆ ಇನ್ನೇನು ರಕ್ಷಿತಾ, ರಮ್ಯಾ, ರಾಧಿಕಾ ಥರದವರನ್ನೇ ಮೀರಿಸುತ್ತಾಳೆಂಬ ನಿರೀಕ್ಷೆಯಿದ್ದ ಸರಿತಾ ಜೈನ್ ಇದ್ದಕ್ಕಿದ್ದಂತೆ ಗಾಂಧಿನಗರದಿಂದ ಕಣ್ಮರೆಯಾದಳು!

ಕೇವಲ ಆಕೆ ಮಾತ್ರವೇ ನಾಪತ್ತೆಯಾಗಿದ್ದರೆ ಗಾಂಧಿನಗರದ ಮಂದಿ ಈ ಪಾಟಿ ತಲೆ ಕೆಡಿಸಿಕೊಳ್ಳಲು ಕಾರಣವಿರುತ್ತಿರಲಿಲ್ಲ. ಆಕೆಯ ಜೊತೆಗೇ ಇನ್ನೂ ಒಬ್ಬ ಕಣ್ಮರೆಯಾಗಿದ್ದ. ಆತ ಆಕೆಯೇ ಹೀರೋಯಿನ್ನಾಗಿದ್ದ 'ಮಚ್ಚಾ' ಚಿತ್ರದ ಖತರ್‌ನಾಕ್ ಡೈರೆಕ್ಟರ್ ಧನಂಜಯ ಕುಂದಾಪುರ ಉರ್ಫ್ ದತ್ತು-

ಚೆಂದುಳ್ಳಿ ಚೆಲುವೆಯೊಬ್ಬಳು ಹುಟ್ಟಾ ಹರಾಮಿಯ ಜೊತೆ ಕಣ್ಮರೆಯಾದಳೆಂದರೆ ಅದಕ್ಕೆ ಬೇರೆಯದೇ ಅರ್ಥವಿರುತ್ತದೆ. ಹಾಗೊಮ್ಮೆ ಡೈರೆಕ್ಟರ್ ದತ್ತು ಜೊತೆ ಆಕೆಗೆ ಪ್ರೀತಿ-ಪ್ರೇಮ ಅಂತಾಗಿ ಅದು ಮದುವೆಯಲ್ಲಿ ಅಂತ್ಯ ಕಂಡಿದ್ದೇ ಆಗಿದ್ದರೆ ಅದನ್ನು ಅಷ್ಟೊಂದು ರಹಸ್ಯವಾಗಿಡಬೇಕಾದ ಅನಿವಾರ್ಯತೆಯೇನಿತ್ತು? ನಿಜಕ್ಕೂ ಡೈರೆಕ್ಟರ್ ದತ್ತು ಆಕೆಯನ್ನು ಮದುವೆಯಾಗಿದ್ದಾನಾ? ಹಾಗಿದ್ದರೆ ತನ್ನ ಸಿನಿಮಾ ಕೆರಿಯರನ್ನೇ ತೊರೆದು ಧನಂಜಯ ಕೂಡ ನಾಪತ್ತೆಯಾಗಿರುವುದೇಕೆ? ಅಥವಾ ಸರಿತಾ ಜೈನ್‌ಳನ್ನು ಡೈರೆಕ್ಟರ್ ದತ್ತು ಕೊಂದು ಹಾಕಿದ್ದಾನಾ? ಆಕೆಯ ಕೋಟಿಗಟ್ಟಲೇ ಆಸ್ತಿಯನ್ನು ಲಪಟಾಯಿಸಿ ಆಕೆಯನ್ನು ಮುಂಬಯಿಯ ಯಾವುದೋ ದಂಧೆಯೊಂದಕ್ಕೆ ಆತ ಮಾರಿರಬಹುದ್ದೆ?

ಖತರ್‌ನಾಕ್ ದತ್ತು!

ಇಂಥ ಹಲವಾರು ಅನುಮಾನ, ಗುಮಾನಿಗಳ ಪರಿಣಾಮವೇ ಸದ್ಯ ಗಾಂಧಿನಗರದಲ್ಲಿ ಸರಿತಾ ಜೈನ್ ನಾಪತ್ತೆ ಕುರಿತಂತೆ ಎದ್ದು ನಿಂತ ಪ್ರಶ್ನೆಗಳು. ಈ ರೀತಿ ಗಾಂಧಿನಗರದ ಮಂದಿ ನಟಿಯೊಬ್ಬಳ ಕಣ್ಮರೆಯ ಕುರಿತಂತೆ ಕಾಳಜಿ ತೋರಿಸುತ್ತಿರುವುದಕ್ಕೂ ಕಾರಣವಿದೆ. ಅದು ವಂಚಕ ಡೈರೆಕ್ಟರ್ ಧನಂಜಯನ ನಟೋರಿಟಿ ಮತ್ತು ಅಂಡರ್‌ವರ್ಲ್ಡ್ ನೆಂಟಸ್ತಿಕೆ!

ಇಲ್ಲಿಗೆ ಮೂರು ವರ್ಷದ ಹಿಂದೆ ಅಂದರೆ 2009 ರ ಮೇ 1 ರಂದು ತೆರೆಕಂಡ 'ಮಚ್ಚಾ' ಚಿತ್ರ ಡೈರೆಕ್ಟರ್ ದತ್ತು ಅಲಿಯಾಸ್ ಧನಂಜಯ್ ಕುಂದಾಪುರ ಎಂಬಾತನ ಮೊದಲ ಚಿತ್ರವೂ ಹೌದು ಕೊನೆಯದ್ದು ಕೂಡ. ರೆಬೆಲ್ ಸ್ಟಾರ್ ಅಂಬರೀಷ್ ಅರ್ಪಿಸುವ ಚಿತ್ರವೆಂದೇ ಹೆಗ್ಗಳಿಕೆಯಿದ್ದ ಅದಕ್ಕೆ ಹೀರೋ ಆಗಿದ್ದದ್ದು ಜೀವನ್ ಎಂಬ ಮುಂಬಯಿ ರಿಟರ್ನ್ಡ್ ಹುಡುಗ. ಹೆಸರಿಗೆ ದೀಪಕ್ ಶೆಟ್ಟಿ ಎಂಬಾತ ಇದರ ಸಹನಿರ್ಮಾಣನಾದರೂ ಬಂಡವಾಳಪೂರ್ತಿ ಸುನೀಲ್ ಪಾರಿಖ್ ಎಂಬ ಗಾಂಧಿನಗರದ ಮಾರ್ವಾಡಿಯದಾಗಿತ್ತು. ನತದೃಷ್ಟೆ ಸರಿತಾ ಜೈನ್‌ಳೇ ಇದರ ಹೀರೋಯಿನ್. ವಿಶೇಷವೆಂದರೆ ನೈಸ್ ಖದೀಮ ಅಶೋಕ್ ಖೇಣಿ ಕೂಡ ಪ್ರಚಾರದ ಚಪಲಕ್ಕೆ ಬಿದ್ದು ಇದರಲ್ಲಿ 'ಬಫೂನ್' ಪಾತ್ರ ಮಾಡಿದ್ದ.

ಬರೋಬ್ಬರಿ ಎರಡು ಕೋಟಿ ಸುರಿದು ನಿರ್ಮಿಸಿದ್ದ, ಅಂಬರೀಷ್ ಆಶೀರ್ವಾದವಿದ್ದ 'ಮಚ್ಚಾ' ಒಂದೇ ವಾರಕ್ಕೆ ನೆಗೆದುಬಿತ್ತು. ಬೆನ್ನಲ್ಲೇ ಹೀರೋ ಜೀವನ್ ಸೇರಿದಂತೆ ಹೀರೋಯಿನ್ ಸರಿತಾ ಜೈನ್, ಡೈರೆಕ್ಟರ್ ಧನಂಜಯ, ಪ್ರೊಡ್ಯೂಸರ್ ಸುನೀಲ್ ಪಾರಿಖ್ ಇತ್ಯಾದಿಗಳೆಲ್ಲರೂ ಶಾಶ್ವತವಾಗಿ ಗಾಂಧಿನಗರದಿಂದ ನಾಪತ್ತೆಯಾದರು.

ಒದೆ ತಿಂದ

ಈ ಮಧ್ಯೆ ಹೀರೋ ಜೀವನ್ ಮತ್ತು ನಿರ್ಮಾಪಕ ಪಾರಿಖ್ ಬಗ್ಗೆ ಸಿನಿಮಾ ಪತ್ರಕರ್ತರಿಗೆ ಆಗಾಗ ಮಾಹಿತಿ ಸಿಗುತ್ತಿತ್ತಾದರೂ ಡೈರೆಕ್ಟರ್ ದತ್ತು ಮತ್ತು ಹೀರೋಯಿನ್ ಸರಿತಾ ಜೈನ್ ಮಾತ್ರ ಏನಾದರು, ಎಲ್ಲಿಗೆ ಹೋದರೆಂಬುದೇ ಪತ್ತೆಯಿರಲಿಲ್ಲ. ಈ ಬಗ್ಗೆ ದಿನೇದಿನೇ ಕುತೂಹಲ ಬೆಳೆಯಲು ಕಾರಣವಾದ ಮತ್ತೂ ಒಂದು ಸಂಗತಿಯಿತ್ತು. ಅದು ಸರಿತಾ ಜೈನ್‌ಳ ಹಿನ್ನೆಲೆ. ಮೂಲತಃ ಮೂಡಬಿದಿರೆಯ ಸರಿತಾ ಜೈನ್ ದೂರದಿಂದ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಸಂಬಂಧಿಯಾಗಬೇಕೆಂಬ ವದಂತಿಯೇ ಗಾಂಧಿನಗರದಲ್ಲಿ ಆಕೆಯ ಕಣ್ಮರೆ ಬಗ್ಗೆ ಕುತೂಹಲವೆಬ್ಬಿಸಿತ್ತು.

ಪರಸೆಯುಲ್ಲಿ ವೀರೇಂದ್ರ ಹೆಗ್ಗಡೆಯವರಿಗೆ ತಂಗಿಯಾಗಬೇಕಿದ್ದ ಮಹಿಳೆಯ ಮಗಳೇ ಸರಿತಾ ಜೈನ್. ಮೂಡಬಿದ್ರಿಯ ಜೈನ್ ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿ, ತದನಂತರ ಅದೇ ಮೂಡಬಿದ್ರಿಯ ಧವಳ ಕಾಲೇಜಿನಲ್ಲಿ ಡಿಗ್ರಿ ಓದುತ್ತಿದ್ದ ಸರಿತಾ ಜೈನ್ 2007 ರ ಹೊತ್ತಿಗೆ ಮಾಡೆಲಿಂಗ್ ಸೆಳೆತಕ್ಕೆ ಬಿದ್ದಳು. ಅದೇ ಹೊತ್ತಿಗೆ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ನಾಗರಾಜ ಶೆಟ್ಟಿ ಕಡಲ ಮಗೆ ಎಂಬ ತುಳು ಚಿತ್ರ ನಿರ್ಮಿಸುತ್ತಿದ್ದರಿಂದ ಸರಿತಾ ಅದಕ್ಕೆ ಹೀರೋಯಿನ್ನಾಗಿ ಆಯ್ಕೆಯಾದಳು. ಈ ಕಡಲ ಮಗೆ ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ಬಂದವನೇ ಧನಂಜಯ್ ಕುಂದಾಪುರ.

ಆ ಹೊತ್ತಿಗಾಗಲೇ ಧನಂಜಯ್ ಕನ್ನಡದ ವಿವಾದಾಸ್ಪದ ಡೈರೆಕ್ಟರ್ ಓಂಪ್ರಕಾಶ್ ರಾವ್‌ಗೆ ಅಸಿಸ್ಟೆಂಟಾಗಿದ್ದು ಆತನ ಎಲ್ಲಾ ತಿಕ್ಕಲುತನಗಳನ್ನೂ ಮೈಗೂಡಿಸಿಕೊಂಡಿದ್ದ. ದರ್ಶನ್-ರಕ್ಷಿತಾ ತಾರಾಗಣವಿದ್ದ 'ಕಲಾಸಿಪಾಳ್ಯ' ಚಿತ್ರದ ಶೂಟಿಂಗ್ ವೇಳೆ ಹೀರೋಯಿನ್ ರಕ್ಷಿತಾ ವಿರುದ್ಧ ಅದೇನೋ ಚೇಷ್ಟೆ ಮಾಡಲು ಹೋಗಿ



ವಂಚಕ ಧನಂಜಯ, ಅಶೋಕ್ ಖೇಣಿ ಜೊತೆ.

ಡೈರೆಕ್ಟರ್ ಓಂಪ್ರಕಾಶ್ ಕೈಯಲ್ಲಿ ಒದೆಯನ್ನೂ ತಿಂದ. ಹಾಗೆ ಓಂಪ್ರಕಾಶ್ ಅಟ್ಟಾಡಿಸಿ ಬಡಿದದ್ದಕ್ಕೆ ನೇರವಾಗಿ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ನುಗ್ಗಿದ್ದೇ ಆಗ ಇನ್ಸ್‌ಪೆಕ್ಟರ್‌ರಾಗಿದ್ದ ಬಿ.ಕೆ. ಶಿವರಾಮ್‌ರಿಗೆ ದೂರು ಕೊಟ್ಟು ರಂಪ ಮಾಡಿಬಿಟ್ಟ.

ಓಂಪ್ರಕಾಶ್ ಜೊತೆ ಕಿರಿಕ್ಕಾಗಿದ್ದನ್ನೇ ಬಂಡವಾಳ ಮಾಡಿಕೊಂಡ ಧನಂಜಯ್ ಆನಂತರ ವಕ್ಕರಿಸಿದ್ದು ಚೆಕ್ಕಿನಕಡ್ ರಾಜೇಂದ್ರನ ಹಂತಕ ಸೈಲೆಂಟ್ ಸುನೀಲನ ರಾಶಿಗೆ. ಸೈಲೆಂಟ್ ಸುನೀಲನ ಜೀವನ ಚರಿತ್ರೆಯ ಸ್ಟೋರಿ ಮಾಡ್ತೀನಿ ಎಂದು ಒಂದಷ್ಟು ದಿನಗಳ ಕಾಲ ಪರಪ್ಪನ ಅಗ್ರಹಾರ ಜೈಲು ಸುತ್ತಿದ. ಆತನ ಬುಟ್ಟಿಗೆ ಬಿದ್ದವರು ಗೋರಿಪಾಳ್ಯದ ಪುಡಿ ರೌಡಿ ಗಜ ಮತ್ತು ವಂಚಕ ಪ್ರೊಡ್ಯೂಸರ್ ಜಗನ್ನಾಥ್. ಯಾರೋ ಹೊಸ ನಟನೊಬ್ಬನನ್ನು ಹಾಕಿಕೊಂಡು 'ಸೈಲೆಂಟ್' ಚಿತ್ರ ನಿರ್ದೇಶಿಸಬೇಕಿದ್ದ ಧನಂಜಯನ ವರಸೆ ಕಂಡೇ ಅರ್ಧ ಶೂಟಿಂಗ್‌ಗೆ ಆತನನ್ನು ಎತ್ತಂಗಡಿ ಮಾಡಿ ಬೇರೊಬ್ಬ ನಿರ್ದೇಶಕನ ಮೂಲಕ ಚಿತ್ರ ಮುಗಿಸಬೇಕಾಯ್ತು.

ಸೈಲೆಂಟ್ ಸುನೀಲ!

ಹಾಗಂತ ಈತ ಬಿಡಬೇಕಲ್ಲ. ತನ್ನದೇ ಸ್ಟೋರಿ, ಚಿತ್ರಕತೆ. ತಾನೇ ಜೈಲಲ್ಲಿ ಸೈಲೆಂಟ್ ಸುನೀಲನಿಂದ ಕತೆ ಕೇಳಿದ್ದು ಎಂದೆಲ್ಲ ರಾದ್ಧಾಂತ ಮಾಡಿದ ಧನಂಜಯ್



ದತ್ತು (ಧನಂಜಯ)-ಸರಿತಾ ಜೈನ್ ಮದುವೆ ಫೋಟೋ

ಫಿಲ್ಮ್ ಛೇಂಬರ್‌ಗೆ ದೂರು ಕೊಟ್ಟಿದ್ದೂ ಅಲ್ಲದೆ ಸುನೀಲನ ಗ್ಯಾಂಗ್ ಮೂಲಕ ಧಮಕಿ ಹಾಕಿಸಿ ಐದು ಲಕ್ಷ ಕಿತ್ತಿದ್ದ. ಇದಾದ ಮೇಲೆ ಈತನ ಬುಟ್ಟಿಗೆ ಬಿದ್ದವನು ರೊಕ್ಕಸ್ಥ ಮಾರ್ವಾಡಿ ಸುನಿಲ್ ಪಾರಿಖ್. ಆ ಕಾಲಕ್ಕೇ ಹೀರೋ ಹೋಂಡಾ ಬೈಕ್‌ಗಳ ಡೀಲರ್‌ಶಿಪ್ ಮಾಡಿಕೊಂಡಿದ್ದು ಸೈಕಲ್, ಹೀರೋಹೋಂಡಾ ಬೈಕ್‌ಗಳ ಡೀಟರ್‌ಶಿಪ್ ಮಾಡಿಕೊಂಡಿದ್ದು ಕೋಟಿಗಟ್ಟಲೇ ಖಮಾಯಿಸಿದ್ದ ಮಾರ್ವಾಡಿಯ ಮಗ ಸುನಿಲ್ ಪಾರಿಖ್‌ಗೆ ಧನಂಜಯ್ ಪರಿಚಯಿಸಿದ್ದು ತುಳು ಹೀರೋಯಿನ್ ಸರಿತಾ ಜೈನ್‌ಳನ್ನು!

ಜಾತಿಯಲ್ಲಿ ನೀವೂ ಜೈನರಾದ್ದರಿಂದ ಕನ್ನಡ ಜೈನಳಾದ ಈಕೆಯನ್ನು ಹೀರೋಯಿನ್ ಮಾಡಿದರೆ ನಿಮಗೆ ಲಾಭ. ಮುಂದೆ ಈಕೆ ನಿಮಗೆ ನಿಯತ್ತಾಗಿರುತ್ತಾಳೆ... ಎಂದೆಲ್ಲ ರೈಲು ಬಿಟ್ಟ ಧನಂಜಯ್ ಪಕ್ಕಾ ಸರಬರಾಜುದಾರನ ವರಸೆಯಲ್ಲೇ ಪಾರಿಖ್‌ಗೆ ಪಿತ್ಥ ಕೆರಳಿಸಿದ್ದ.

ಮಾರ್ವಾಡಿ ಪಾರಿಖ್ ಒಂದು ಕೋಟಿ ಸುರಿದು ಸಿನಿಮಾ ಮಾಡಲು ಒಪ್ಪಿದ್ದ. ಆದರೆ ಅರ್ಧ ಸಿನಿಮಾ ಮುಗಿಯುವ ಹೊತ್ತಿಗೇ ಧನಂಜಯನ ವಿಶ್ವರೂಪ ಬಯಲಾಯಿತು. ತಾನೇ ಸರಿತಾ ಜೈನ್‌ಗೆ ಗಾಳ ಹಾಕಿದ್ದ ಡೈರೆಕ್ಟರಾಗಿದ್ದ 50 ಸಾವಿರ ರೂಪಾಯಿಗಳ ಕಂತು ಕಟ್ಟಿದ್ದೇ ಹೊಚ್ಚ ಹೊಸ ಐಕಾನ್ ಫೋರ್ಡ್ ಕಾರೊಂದನ್ನು ಕೊಂಡುಕೊಂಡ. ಹೀರೋಯಿನ್‌ಗೆಂದು 5 ಲಕ್ಷದ ಸಂಭಾವನೆಯನ್ನೂ ಕೊಡಿಸಿದ್ದ.

ಬೆತ್ತಲೆ ಫೋಟೋ....!

ಅದೇನಾಯಿತೋ ಒಂದು ಕೋಟಿಗೆ ಮುಗಿಯಬೇಕಿದ್ದ 'ಮಚ್ಚಾ'ದ ಬಜೆಟ್ ಅದು ಮುಗಿಯುವ ಹೊತ್ತಿಗೆ ಎರಡು ಕೋಟಿಗೇರಿತ್ತು. ಮ್ಯೂಜಿಕ್ ಡೈರೆಕ್ಟರ್, ಕ್ಯಾಮರಾಮನ್, ಫೈಟ್ ಮಾಸ್ಟರ್ಸ್, ಡ್ಯಾನ್ಸ್‌ಮಾಸ್ಟರ್ ಎಲ್ಲರಿಂದಲೂ ಕಮಿಷನ್ ಕಿತ್ತಿದ್ದ ಧನಂಜಯ ಬರೋಬ್ಬರಿ 50 ಲಕ್ಷವನ್ನು ನಿರ್ಮಾಪಕನಿಗೆ ವಂಚಿಸಿದ್ದ. ಅರ್ಧಕ್ಕೆ ಕೈ ಬಿಟ್ಟರೆ ಹಾಕಿದ ದುಡ್ಡೂ ಗೋತಾ, ಪೂರ್ತಿ ಮುಗಿಸದೆ ಹೋದರೆ ಅದೂ ಅನಾಹುತ ಎಂಬಂತೆ ಪ್ರೊಡ್ಯೂಸರ್ ಫಜೀತಿಗೆ ಬಿದ್ದು ಧನಂಜಯನನ್ನೇ ಹಿಡಿದು ಬಾರಿಸಿಬಿಟ್ಟ. ಅತ್ತ ಹೀರೋಯಿನ್ನೂ ಇಲ್ಲ, ಹಾಕಿದ ದುಡ್ಡೂ ದಕ್ಕಲಿಲ್ಲ ಎಂಬಂತಾಗಿ ಬಿಡುಗಡೆಯಾದ ಒಂದೇ ವಾರಕ್ಕೇ 'ಮಚ್ಚಾ' ಎತ್ತಂಗಡಿಯಾಯಿತು. ಹೆಸರಾಂತ ಹೀರೋ ಆಗಲಿ, ಹೀರೋಯಿನ್ನಾಗಲಿ ಇಲ್ಲದ್ದರಿಂದ ಟೀವಿ ರೈಟ್ಸ್ ಕೂಡ ಗಿಟ್ಟದೆ ಎರಡು ಕೋಟಿ ಸಾಲ ಹೊತ್ತ ಪಾರಿಖ್ ಗಾಂಧಿನಗರಕ್ಕೇ ಗುಡ್‌ಬೈ ಹೇಳಿ ತಲೆಮರೆಸಿಕೊಂಡ.

ಇದು 'ಮಚ್ಚಾ' ಎಂಬ ರೌಡಿಯೊಬ್ಬನ ತಮಿಳು ಬಿರುದಾಧರಿಸಿ ತೆಗೆದ ಚಿತ್ರದ ದುರಂತವಾದರೆ ಇದಕ್ಕೆ ಹೊಂದಿಕೊಂಡಂತೆಯೇ ಶುರುವಾಗಿದ್ದು ಸರಿತಾ ಜೈನ್‌ಳ ದುರಂತ. ಈ ಹೊತ್ತಿಗಾಗಲೇ ಆಕೆ ಧನಂಜಯನ ಬುಟ್ಟಿಗೆ ಬಿದ್ದಾಗಿತ್ತು. ಅರ್ಧ ಕಾಫಿಗೂ ಇಟ್ಟಾಡುತ್ತಿದ್ದ ಧನಂಜಯ ತನ್ನ ಹೆಸರನ್ನು ದತ್ತು ಎಂದು ಬದಲಿಸಿಕೊಂಡಿದ್ದ. ಸಿನಿಮಾ ಬಿಡುಗಡೆಗೆ ದುಡ್ಡು ಸಾಲುತ್ತಿಲ್ಲ ಎಂದು ನೈಸ್ ಖೇಣಿಯಿಂದಲೂ ಐದು ಲಕ್ಷ ಕಿತ್ತಿದ್ದ. ರೇಷ್ಮೆ ಇಲಾಖೆಯ ಅಧಿಕಾರಿಯೊಬ್ಬರಿಂದ 5 ಲಕ್ಷ, ರಾಜಾಜಿನಗರದ ಕಾಂಗ್ರೆಸ್ ಪುಢಾರಿಯೊಬ್ಬನಿಂದ 7 ಲಕ್ಷ, ಬಸವೇಶ್ವರ ನಗರದ ಕೇಬಲ್ ಧಣಿಯೊಬ್ಬನಿಂದ 5 ಲಕ್ಷ; ಹೀಗೆ ಸಿಕ್ಕಸಿಕ್ಕವರಿಂದೆಲ್ಲ 'ಮಚ್ಚಾ' ರಿಲೀಜಿಗೆಂದು ರೊಕ್ಕ ಪೀಕಿದ್ದ.

ಇದ್ಯಾವುದರ ಪರಿವೆಯಿಲ್ಲದ ಸರಿತಾ ಜೈನ್ ದತ್ತುನನ್ನು ನಂಬಿಬಿಟ್ಟಳು. ದುರಂತವೆಂದರೆ ಈತನೇ ಆಕೆಯ ಪಾಲಿಗೆ ಪಿಆರ್‌ಓ ಕೂಡ ಆಗಿದ್ದ. ತನಗೆ ಮುಂಬಯಿ ಅಂಡರ್‌ವರ್ಲ್ಡ್ ಡಾನ್ ರವಿಪೂಜಾರಿ ಸಂಬಂಧಿಯೆಂದೂ, ತಾನು ಕೋಟ್ಯಾಧಿಪತಿಯೆಂದೂ, ತನಗೆ ಬೆಂಗಳೂರಿನಲ್ಲಿ ಬೇಕಾಬಿಟ್ಟಿ ಬಾರು ರೆಸ್ಟೋರೆಂಟುಗಳಿವೆಯೆಂದು ನಂಬಿಸಿದ್ದ.

ಒಂದೆಡೆ ಹೊಸ ಅವಕಾಶಗಳಿಲ್ಲ. ಇನ್ನೊಂದೆಡೆ ವಕ್ಕರಿಸಿದ್ದ ಧನಂಜಯನಿಂದಲೂ ಮುಕ್ತಿಯಿಲ್ಲ. ಮರ್ಯಾದಸ್ಥ ಜೈನರ ಹುಡುಗಿ ಸರಿತಾ ಜೈನ್ ಅಂತಿಮವಾಗಿ ದತ್ತೂ ಪಾಲಾಗಿದ್ದೇ ಈ ರೀತಿ.

ನಿಗೂಢ ಕಣ್ಮರೆ

2009 ರ ಮೇ 1 ರಂದು ಚಿತ್ರದ ಪ್ರೀಮಿಯರ್‌ನಲ್ಲಿ ಆಕೆ ಪ್ರತ್ಯಕ್ಷಳಾಗಿದ್ದೇ ಕೊನೆ. ಅದಕ್ಕೆ ತಕ್ಕಂತೆ ಧನಂಜಯನಿಂದ ವಂಚಿತರಾದ ಸಾಲಗಾರರ ಹಿಂಡೇ ಆತನಿಗಾಗಿ ಹುಡುಕಾಡತೊಡಗಿತ್ತು. ಗೋರಿಪಾಳ್ಯದ ಮುಸ್ಲಿಂ ಲ್ಯಾಂಡ್ ಡೀಲರ್ ಒಬ್ಬನಿಗೆ ಯಾವುದೋ ನಕಲಿ ದಾಖಲೆ ಕೊಟ್ಟು ದತ್ತು 20 ಲಕ್ಷ ವಂಚಿಸಿದ್ದ. ಯಲಹಂಕದ ಸಾದಿಕ್ ಎಂಬ ಬ್ರೋಕರ್‌ಗೆ ಯಾರದೋ ಮನೆ ತೋರಿಸಿ 10 ಲಕ್ಷಕ್ಕೆ ಕೈ ಎತ್ತಿದ್ದ. ಸಹಕಾರನಗರ, ವಿದ್ಯಾರಣ್ಯಪುರ, ಯಶವಂತಪುರ ಇತ್ಯಾದಿ ಏರಿಯಾಗಳಲ್ಲಿ ಯಾರ್‍ಯಾರದ್ದೋ ಆಸ್ತಿಗೆ ವಕ್ಕರಿಸಿ ಯಾಮಾರಿಸಿದ್ದ. ಕೊಟ್ಟ ದುಡ್ಡಿನ ವಸೂಲಿಗೆ ಬಿದ್ದವರನ್ನು ರವಿ ಪೂಜಾರಿ ಹೆಸರಲ್ಲಿ ಬೆದರಿಸುತ್ತಿದ್ದ.

ಇಂಥ ಕೇಡಿ ಹಿನ್ನೆಲೆಯ ಧನಂಜಯ 'ಮಚ್ಚಾ' ಬಿಡುಗಡೆಯಾದ ಒಂದೇ ವಾರಕ್ಕೆ ಯಲಹಂಕ ಉಪನಗರದಲ್ಲಿದ್ದ ತನ್ನ ಮನೆ ಖಾಲಿ ಮಾಡಿಕೊಂಡು ಪರಾರಿಯಾಗಿದ್ದ. ಅದಕ್ಕೆ ಸರಿಯಾಗಿ ಸಹಕಾರ ನಗರದಲ್ಲಿ ತನ್ನ ತಾಯಿ ಜೊತೆ ವಾಸಿಸುತ್ತಿದ್ದ ಸರಿತಾ ಜೈನ್ ಕೂಡ ನಾಪತ್ತೆಯಾಗಿದ್ದಳು. ಆನಂತರ ಅವರಿಬ್ಬರನ್ನೂ ಕಂಡವರಿಲ್ಲ. ಧನಂಜಯನ ವಿರುದ್ಧ ಬೆಂಗಳೂರಿನ ಹಲವಾರು ಪೊಲೀಸ್ ಠಾಣೆಗಳಲ್ಲಿ ವಂಚನೆ ದೂರು ದಾಖಲಾಗಿದೆ. ಆತನ ವಿರುದ್ಧ ಕೋರ್ಟ್ ವಾರಂಟ್ ಹೊರಡಿಸಿದೆ. ಇದು ಗೊತ್ತಿದ್ದೂ ಸರಿತಾ ಜೈನ್ ಆತನನ್ನು ಮದುವೆಯಾದಳೆ?

ವಿಚಿತ್ರವೆಂದರೆ ಸರಿತಾ ಜೈನ್‌ಳ ಫೇಸ್‌ಬುಕ್ ಖಾತೆಯಲ್ಲಿ ಇಲ್ಲಿಗೆ ಎರಡು ವರ್ಷದ ಹಿಂದೆ ಆಕೆ ಧನಂಜಯನ ಜೊತೆ ಮದುವೆಯಾದ ಫೋಟೋ ಒಂದನ್ನು ಹಾಕಲಾಗಿತ್ತು. ಮದುವೆಯಾಗಿದ್ದೇ ಆಗಿದ್ದರೆ ಕನಿಷ್ಠ ಆಕೆಯ ಸಂಬಂಧಿಗಳಿಗಾದರೂ ಗೊತ್ತಾಗಬೇಕಿತ್ತು. ಆದರೆ ಆಕೆಯ ಯಾರೊಬ್ಬ ಸಂಬಂಧಿಕರಿಗೂ ಮದುವೆ ಸಂಗತಿಯೇ ಗೊತ್ತಿಲ್ಲ. ಅಷ್ಟೊಂದು ನಿಗೂಢವಾಗಿ ಮದುವೆಯಾಗಬೇಕಾದ ಹರಕತ್ತೇನೂ ಆಕೆಗಿರಲಿಲ್ಲ. ಆಕೆಯ ಪಾಲಿಗೆ ಸರ್ವಸ್ವವೂ ಆಗಿದ್ದ ಆಕೆಯ ತಾಯಿಯ ಬಗ್ಗೆಯೂ ಯಾವುದೇ ಮಾಹಿತಿಯಿಲ್ಲ. ಕೆಲವರ ಪ್ರಕಾರ ದುಷ್ಟ ಧನಂಜಯ ಆಕೆಯನ್ನೂ ಆಕೆಯ ತಾಯಿಯ ಸಮೇತ ಮುಗಿಸಿದ್ದಾನೆ. ಇನ್ನೂ ಕೆಲವರು ಹೇಳುವಂತೆ ಆಕೆಯನ್ನು ಮುಂಬಯಿಯ ಯಾವುದೋ ಅಡ್ಡೆಗೆ ಮಾರಿದ್ದಾನೆ.

ಇದು ಸದ್ಯ ಗಾಂಧಿನಗರದಲ್ಲಿ ಕೇಳಿಬರುತ್ತಿರುವ ವದಂತಿಗಳು. ಮತ್ತೆ ಕೆಲವರು ಹೇಳುವಂತೆ ಧನಂಜಯ ಆಕೆಯ ಆಸ್ತಿ ದೋಚಿ ದುಬೈ ಸೇರಿಕೊಂಡಿದ್ದಾನೆ. ಅಲ್ಲಿನ ಮುಂಬಯಿ ಕ್ರಿಮಿಯೊಬ್ಬನ ಕ್ಯಾಬರೆ ಅಡ್ಡೆಯಲ್ಲಿ ಧನಂಜಯನೇ ಕ್ಯಾಷಿಯರ್ ಅಂತೆ. ಇದೇನೇ ಇರಲಿ, ಕನ್ನಡದ ನಟಿಯೊಬ್ಬಳ ನಿಗೂಢ ಕಣ್ಮರೆಯ ಕುರಿತಂತೆ ಮಹಿಳಾ ಸಂಘಟನೆಗಳಾಗಲಿ, ಪೊಲೀಸರಾಗಲಿ, ರಾಜ್ಯ ಮಹಿಳಾ ಆಯೋಗಕ್ಕಾಗಲಿ ಯಾರಿಗೂ ಕಾಳಜಿಯಿಲ್ಲವೆ?

ಕನಿಷ್ಠ ಸರಿತಾ ಜೈನ್ ಬದುಕಿದ್ದಾಳಾ, ಕೊಲೆಯಾಗಿದ್ದಾಳಾ ಎಂಬ ಪ್ರಶ್ನೆಗೆ ಉತ್ತರಿಸುವವರ್‍ಯಾರು?

● ರಾ.ಸೋಮನಾಥ್

...ೇವರ್ಗಿಯಲ್ಲಿ ಜಾತಿಜಂಗಮರ ಅಡ್ಡಪಲ್ಲಕ್ಕಿ ಕಿತಾಪತಿ



ಮಹಾಂತ ಸ್ವಾಮೀಜಿ   ಸಿದ್ದಲಿಂಗ ಸ್ವಾಮೀಜಿ   ನಿಜಗುಣ ಶಿವಯೋಗಿ   ತೋಂಟದಾರ್ಯ ಸ್ವಾಮಿ

...ಲ್ಬರ್ಗಾ ಜಿಲ್ಲೆಯ ಜೇವರ್ಗಿ ಈಗ ಕೆಂಡದ ...ಗಿ ಪರಿವರ್ತಿತವಾಗಿದೆ. ಯಾವಾಗ ಇದು ಸ್ಫೋಟ ...ದೊ ಗೊತ್ತಿಲ್ಲ. ಜಾತಿಜಂಗಮರ ದಳ್ಳುರಿಯಲ್ಲಿ ...ಣ್ಣನವರು ಕನಸಿದ ಸಮಾಜ ಸುಟ್ಟು ಹೋಗಿ ...ಶನ ಮೇಲುಗೈ ಆಗುತ್ತದೊ? ಬಸವಾದಿ ಶರಣರ ... ಮತ್ತೆ ಚಿಗುರೊಡೆಯುತ್ತದೊ? ಎಂಬುದು ...ನ ದಿನಗಳೆ ನಿರ್ಧರಿಸಲಿವೆ.

...ಚಪೀಠಗಳಲ್ಲಿ ಒಂದಾದ ರಂಭಾಪುರಿಯ ...ಗಳ ದಸರಾ ದರ್ಬಾರ ಹಾಗೂ ಅಡ್ಡಪಲ್ಲಕ್ಕಿ ...ನ್ನು ಆಚರಿಸಲು ಇಲ್ಲಿನ ಕೆಲ ರಾಜಕೀಯ ಹಾಗೂ ...ದು ಯಾವಾಗ ಮುಂದಾದರೂ ಆ ತರುವಾಯವೇ ...ನೆಯ ಕಿಚ್ಚು ಹೊತ್ತಿಕೊಳ್ಳಲು ಪ್ರಾರಂಭವಾಯಿತು. ...ನೋಡಿದರೆ ಒಂದೆರಡು ವರ್ಷಗಳ ಹಿಂದೆಯೆ ...೦ ಆಗಿ ಇಲ್ಲಿ ಅಡ್ಡಪಲ್ಲಕ್ಕಿಯ ಉತ್ಸವ ...ಹೋಗಿದೆ. ಆಗಲೂ ಸಾಂಕೇತಿಕವಾದ ಪ್ರತಿಭಟನೆ ... ಸ್ಥಳೀಯ ಬಸವ ಕೇಂದ್ರದ ಪದಾಧಿಕಾರಿಗಳು ...ಮಾತ್ರ ಕಡವರ ಹುಳದ ತಟ್ಟೆಗೆ ಕೈಹಾಕಿ, ಈ ತಟ್ಟೆಯನ್ನೆ ಇಲ್ಲಿಂದ ಕಿತ್ತಿ ಬಿಸಾಡಬೇಕೆಂದು ತೀರ್ಮಾನಿಸಿದ್ದಂತೂ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಸಮನ್ವಯ, ಸಂಯಮಕ್ಕಾಗಿ ಶರಣರ ಬಸವೇಶ್ವರರು ಹೇಗೆ ಪ್ರೇರಣೆಯೊ ವ್ಯವಸ್ಥೆಯ ವಿರುದ್ಧ ಬಂಡಾಯದ ಕಹಳೆಯೂದಲು ಕಡಕೋಳದ ಮಡಿವಾಳಪ್ಪನೂ ಅಷ್ಟೇ ಕಾರಣನಾಗಿದ್ದಾನೆ. ಇಲ್ಲಿನ ಜನಗಳಿಗೆ ಶರಣಬಸವೇಶ್ವರ - ಮಡಿವಾಳಪ್ಪ ಮತ್ತು ಷಣ್ಮುಖ ಶಿವಯೋಗಿಗಳ ವಿಚಾರಧಾರೆಗಳು ಅವರನ್ನು ಹುರಿಗೊಳಿಸಿವೆ.

ಬಸವ ಕೇಂದ್ರದ ಪದಾಧಿಕಾರಿಗಳು ಬೆಳಗಾಂವ ಜಿಲ್ಲೆಯ ಬೈಲಹೊಂಗಲ ನಿಷ್ಕಲಮಂಟಪದ ನಿಜಗುಣ ಶಿವಯೋಗಿಗಳಿಂದ ಅನುಭಾವ ದರ್ಶನ ಹಾಗೂ ಷಣ್ಮುಖ ಶಿವಯೋಗಿಗಳ 300 ಜಯಂತೋತ್ಸವದ ನಿಮಿತ್ತ 25 ದಿನಗಳ ಪ್ರವಚನ ಕಾರ್ಯಕ್ರಮ ನಿಗದಿಗೊಳಿಸಿದೆ. ಕೊನೆಯ ಮೂರು ದಿನಗಳಲ್ಲಿ ಕಲ್ಯಾಣನಾಡಿನ ಶರಣ ಪರಿಷತ್ತಿನ ವತಿಯಿಂದ ರಾಜ್ಯ ಮಟ್ಟದ ವೈಚಾರಿಕ ಸಮ್ಮೇಳನವನ್ನೂ ಆಯೋಜಿಸಲು ಸಿದ್ಧತೆ ಮಾಡಿಕೊಂಡಿದೆ. ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ. ಎಂ.ಎಂ.ಕಲಬುರ್ಗಿ ಈಗಾಗಲೇ ಆಯ್ಕೆಯಾಗಿದ್ದಾರೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡು, ಸತ್ಯದ ಬಲದಿಂದ ಅಸತ್ಯದ ಕೇಡು ಎನ್ನುವಂತೆ ಅಡ್ಡಪಲ್ಲಕ್ಕಿಯ ಅಯ್ಯಪ್ಪಗಳ ಒಂದೊಂದೆ ನಾಟಕಗಳು ಹಾಗೂ ದುಡ್ಡು ದೋಚುವ ಹುನ್ನಾರಗಳು ಬಯಲಿಗೆ ಬಿದ್ದು ಜನಸಾಮಾನ್ಯ ಥೀ.... ಥೂ... ಎಂದು ಕ್ಯಾಕರಿಸುತ್ತಿದ್ದಾನೆ. ಆದರೆ ತಮ್ಮ ಅಸ್ತಿತ್ವದ ಪ್ರಶ್ನೆಯಾಗಿಸಿಕೊಂಡ ಪಂಚಪೀಠಗಳು, ಮಠೀಯ ವ್ಯವಸ್ಥೆ ಹಾಗೂ ಜಾತಿ ಜಂಗಮರು ಕೆಲವು ಮೂಢಭಕ್ತರುಗಳನ್ನು ಹಿಡಿದುಕೊಂಡು ಹೇಗಾದರೂ ಸೈ ಅಡ್ಡಪಲ್ಲಕ್ಕಿ ನಡೆಸಿಯೇ ತೀರಬೇಕೆಂದು ಪ್ರತಿಜ್ಞೆ ಮಾಡಿವೆ. ಜೇವರ್ಗಿಯ ಮುಖ್ಯ ರಸ್ತೆಯ ಕೇವಲ ನೂರು ಅಡಿಗಳ ಅಂತರದಲ್ಲಿ ಇವೆರಡೂ ಕಾರ್ಯಕ್ರಮಗಳು ಜರುಗುವುದರಿಂದ ಸಹಜವಾಗಿಯೆ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಿವೆ.

ರಂಭಾಪುರಿ ಜಗದ್ಗುರು(?)ಗಳ ದಸರಾ ದರ್ಬಾರಕ್ಕೆ ಕನಿಷ್ಠ ಪಕ್ಷ ಏನಿಲ್ಲವೆಂದರೂ ಒಂದೂವರೆ ಕೋಟಿಗೂ ಹೆಚ್ಚು ಹಣ ಖರ್ಚಾಗುತ್ತದೆ. ದರ್ಬಾರ ಎಂದು ಕರೆದಿರುವುದರಿಂದ ಅಕ್ಷರಶಃ ರಾಜಶಾಹಿಯ ಆಡಳಿತದಲ್ಲಿ ನಡೆಯುತ್ತಿದ್ದ ಎಲ್ಲಾ ವೈಭವಗಳು ಇಲ್ಲಿ ಕಾಣಸುತ್ತವೆ. ಆನೆಗಳಿಂದ ಸ್ವಾಮಿಗಳಿಗೆ ಸಲಾಮು ಹೊಡೆಸುವುದು. ವಂದಿಮಾಗಧರು ಸ್ವಾಮಿಗಳಿಗೆ ಮುಜುರೆ ಸಲ್ಲಿಸುವುದು, ಜಯಘೋಷಗಳನ್ನು ಕೂಗುವುದು, ಕಾಣಿಕೆಗಳನ್ನು ಸಲ್ಲಿಸುವುದು ಸಹಜವಾಗಿ ಏರ್ಪಾಡಾಗುತ್ತವೆ. ಮತ್ತೊಂದು ವಿವೇಕರಹಿತ ಸಂಗತಿಯೆಂದರೆ ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಅಲ್ಲಮಪ್ರಭು, ಮಾದಾರ ಚೆನ್ನಯ್ಯ ಮುಂತಾದವರ ಪೋಷಾಕುಗಳನ್ನು ಹಾಕಿ ಅವರೆಲ್ಲರು ಸ್ವಾಮಿಗಳ ಸಾಷ್ಟಾಂಗಗಳಿಗೆ ಎರಗುವ ಪ್ರದರ್ಶನವೂ ಜರುಗುತ್ತದೆ. ಸಭೆಯಲ್ಲಿ ರಾಜ್ಯದ, ಕೇಂದ್ರದ ಯಾವುದೇ ಮಂತ್ರಿಗಳು ಭಾಗವಹಿಸಿದರೂ ಅವರೆಲ್ಲರೂ ಜಗದ್ಗುರು ಆಸೀನರಾದ ಖುರ್ಚಿಯ ಕೆಳಗಡೆ ಕುಳಿತುಕೊಳ್ಳಬೇಕು. ಆತ ಬಸವಾದಿ ಶರಣರ ಗುರುವಷ್ಟೆ ಅಲ್ಲ, ಆತ ಪ್ರಜಾಪ್ರಭುತ್ವದ ಗುರುವೂ ಹೌದು ಎಂಬಂತೆ ಬಿಂಬಿಸಲಾಗುತ್ತದೆ. ಸಭಾ ಮಂಟಪದ ಮುಂಭಾಗದಿಂದ ಸನ್ನಿಧಿಯವರೆಗೆ ಬಂದು ಗೌರವ ಸಲ್ಲಿಸಿ, ಮರಳಿ ಪೀಠದ ಕಡೆಗೆ ಬೆನ್ನು ತೋರಿಸದೆ, ಹಿಮ್ಮುಖವಾಗಿಯೇ ಮಂಟಪದ ಹೊರಗೆ ಬರಬೇಕಾಗುತ್ತದೆ. ಇಂಥ ಅರ್ಥವಿಲ್ಲದ ಸಭೆಗೆ ಖರ್ಚಾಗುವ ಹಣ, ರಂಭಾಪುರಿ ಸ್ವಾಮಿಗಳು ಹೊಡಕೊಂಡು ಹೋಗುವ ಹಣ ಜೇವರ್ಗಿಯ ಜನತೆಯದು.

ಈ ಹಣ ಯಾವುದೊ ಪಂಚಪೀಠ ಕೊಟ್ಟು ಖರ್ಚು ಮಾಡುತ್ತಿದ್ದರೆ ಜನರದ್ದೇನೂ ತಕರಾರಿಲ್ಲ. ಇದೆಲ್ಲ ದುಡ್ಡು ಜೇವರ್ಗಿಯ ಜನತೆಯದು. ಸಾರ್ವಜನಿಕ ದುಡ್ಡನ್ನು ಧಾರ್ಮಿಕತೆಯ ಹೆಸರಿನಲ್ಲಿ ಸಂಗ್ರಹಿಸಿ, ದುಂದುವೆಚ್ಚ ಮಾಡುವ ಅಧಿಕಾರ ನಿಮಗೆ ಯಾರು ಕೊಟ್ಟರು ಎಂದು ಇಲ್ಲಿನ ಬಸವ ಕೇಂದ್ರದ ಜನ ಕೇಳುತ್ತಿದ್ದಾರೆ. ಇಷ್ಟಕ್ಕೂ ಅಡ್ಡಪಲ್ಲಕ್ಕಿಯನ್ನು ಹೊರುವವರು ಹಿಂದುಳಿದವರು, ದೀನ-ದಲಿತರು. ಯಾವುದೋ ಒಬ್ಬ ವ್ಯಕ್ತಿಯು ಮೇಲೆ ಕುಳಿತುಕೊಂಡರೆ ಧರ್ಮ ಉದ್ಧಾರವಾಗುತ್ತದೆಂದು ಬೊಗಳೆ ಹೊಡೆಯುವುದು ಯಾವ ಧರ್ಮ? ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಘೋಷವಾಕ್ಯ ಕೂಗುವ ನೈತಿಕ ಹಕ್ಕು ನಿಮಗಿಲ್ಲ. ಮಿರಿಮಿರಿ ಮಿಂಚುವ ರಾಜಪೋಷಾಕು ಧರಿಸಿಕೊಂಡು ದರ್ಬಾರ್ ನಡೆಸುವುದು ವಚನಕಾರರು ಒಪ್ಪುವುದಿಲ್ಲ.

ಚುನಾಯಿತ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸುವುದೆಂದರೆ ಅದು ಪ್ರಜಾಪ್ರಭುತ್ವದ ಅಣಕವ... ಎಂದು ಬಸವಕೇಂದ್ರದ ಶರಣಬಸವ ಕಲ್ಲಾ, ಶಿವಶರಣಪ್ಪ ಕಲಬರ್ಗಿಗರಗಿ, ಷಣ್ಮುಖಪ್ಪ ಹಿರೇಗೌಡ ಮುಂತಾದವರು ಬಸವತತ್ವದ ಸ್ವಾಮಿಗಳಾದ ಸುಲಫಲಮಠದ ಡಾ. ಮಹಾಂತ ಶಿವಾಚಾರ್ಯರು, ಪಂಚಮಸಾಲಿ ಪೀಠದ ಜಗದ್ಗುರು ಸಿದ್ಧಲಿಂಗಸ್ವಾಮಿಗಳು, ಕೊಪ್ಪಳದ [illegible] ಸ್ವಾಮಿಗಳು, ... [illegible] ಸ್ವಾಮೀಜಿಗಳು, ಗುರುಮಿಠಕಲ್ [illegible] [illegible] [illegible]

ಷಣ್ಮುಖ ಶಿವಯೋಗಿಗಳು

ಜೇಳಿಕೇಳಿ ಜೇವರ್ಗಿ ಕೊನೆಯ ವಚನಕಾರ ಷಣ್ಮುಖ ಶಿವಯೋಗಿಗಳ ನೆಲ. ಭಕ್ತವರ್ಗದ ಮನೆತನದಲ್ಲಿ ಹುಟ್ಟಿದ ಷಣ್ಮುಖ ಶಿವಯೋಗಿಗಳು ಬದುಕಿದ್ದು, ಕನಸಿದ್ದು ಬಸವಾದಿ ಶರಣರ ಆಶಯಗಳಿಗೆ ಪೂರಕವಾಗಿ. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಕುಯುಕ್ತಿಯಿಂದ ಷಣ್ಮುಖ ಶಿವಯೋಗಿಗಳ ವಚನಗಳ ಅಂಕಿತನಾಮವಾದ ಅಖಂಡೇಶ್ವರ ಎಂಬ ಹೆಸರು ಮೇಲುಗೈಯಾಗಿ, ಷಣ್ಮುಖ ಶಿವಯೋಗಿಗಳ ಹೆಸರು ಮರೆಮಾಚಲಾಗುತ್ತಿದೆ. ಅಖಂಡೇಶ್ವರ ಎಂಬುದು ಷಣ್ಮುಖ ಶಿವಯೋಗಿಗಳ ಗುರುಗಳ ಹೆಸರು. ಜಾತಿಯಿಂದ ಅವರು ಜಂಗಮರು. ಜಂಗಮತನವೆಂಬುದು ಅಖಂಡೇಶ್ವರಿಗೂ ಎಂದಿಗೂ ದೊಡ್ಡದಾಗಿ ಕಾಡಿಲ್ಲ. ಆದರೆ ಷಣ್ಮುಖ ಶಿವಯೋಗಿಗಳ ತರುವಾಯ ವಚನಗಳನ್ನು ರಚಿಸಿದ ವಚನಕಾರ ಮರೆಯಾಗಿ ಅವರ ಅಂಕಿತವಾದ ಅಖಂಡೇಶ್ವರ ವಚನಗಳು ಎಂದು ಪ್ರಚುರಪಡಿಸುವಲ್ಲಿ ಪುರೋಹಿತಶಾಹಿಯ ಹುನ್ನಾರಗಳು ಸ್ಪಷ್ಟವಾಗಿ ಎದ್ದು ಕಾಣುತ್ತವೆ.

ಕರೆಯಲ್ಪಡುವ ಇಳಕಲ್ಲಿನ ಮಹಾಂತ ಶಿವಯೋಗಿಗಳು, ಗದಗಿನ ತೋಂಟದಾರ್ಯ ಸಿದ್ದಲಿಂಗಸ್ವಾಮಿಗಳು ಸಾಥ್ ನೀಡಿದ್ದಾರೆ. ನಾಡಿನ ಹಲವಾರು ಜನ ಪ್ರಗತಿಪರರು ಚಿಂತಕರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಆದರೆ ಪ್ರಭುತ್ವ ವಿರೋಧಿಗಳಾದ, ದರ್ಬಾರ್ ನಡೆಸುವ ಪ್ರಮುಖರಲ್ಲಿ ಮುಂಚೂಣಿಯಲ್ಲಿರುವ ಶಿವಶರಣಪ್ಪ ಸಿರಿ, ಅಶೋಕ ಸಾಹು, ಕೇದಾರಲಿಂಗಯ್ಯ ಹಿರೇಮಠ, ಸುರೇಶ ಸಜ್ಜನ, ಚೌದಾಪುರಿ ಸ್ವಾಮಿ ಮುಂತಾದವರೆಲ್ಲ ಪಂಚಪೀಠಗಳ ಸ್ವಾಮಿಗಳನ್ನು ಮೆರೆಸುವುದರಿಂದ ಧರ್ಮ ಉದ್ಧಾರವಾಗುತ್ತದೆಂಬ ಭ್ರಮೆಯಲ್ಲಿದ್ದಾರೆ. ಹೇಗೂ ದಸರಾ ದರ್ಬಾರ್ ಉತ್ಸವ ನಡೆಯುವಲ್ಲಿ ಜನ ಸೇರುತ್ತಾರೆ. ಜನ ಸೇರುವ ಈ ಸಭೆಯಲ್ಲಿ ಭಾಗವಹಿಸಿದರೆ ನಮ್ಮದೇನು ಗಂಟುಹೋಗುತ್ತದೆ? ಎಂದು ಜನಪ್ರತಿನಿಧಿಗಳೂ ಸಜ್ಜಾಗಿ ಕುಳಿತಿದ್ದಾರೆ. ಜನರನ್ನು ವಂಚಿಸುವಲ್ಲಿ ಎತ್ತಿದ ಕೈ ಎಂದೆ ಕುಖ್ಯಾತರಾದ ಧರ್ಮಸಿಂಗ್ ಇತ್ತ ಬಸವಾದಿಗಳಿಗೂ ಅಭಯ ನೀಡುತ್ತ, ಅತ್ತ ಅಡ್ಡಪಲ್ಲಕ್ಕಿ ಅಯ್ಯಪ್ಪಗಳ ಕಡೆಗೂ ನಿಗಾ ಇಡುತ್ತ ತನ್ನ ಚೇಲಾ ಅಲ್ಲಮಪ್ರಭು ಪಾಟೀಲರನ್ನು ಜಗದ್ಗುರುಗಳ ಅಂಗಳದಲ್ಲಿ ಬಿಟ್ಟಿದ್ದಾರೆ. ಯಾವುದೇ ಊರಲ್ಲಿ ದಸರಾ ದರ್ಬಾರ್ / ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತದೋ ಅಲ್ಲಿ ಸಂಗ್ರಹವಾದ ಕಾಣಿಕೆಯಲ್ಲಿ ಶೇಕಡಾ ಇಂತಿಷ್ಟು ಹಣವನ್ನು ಅಲ್ಲಿಯ ಕಾರ್ಯಕಾರಿಯ ಕೆಲವು ಪ್ರಮುಖರಿಗೆ ಭಕ್ಷೀಸಾಗಿ ನೀಡಲಾಗುತ್ತದೆ ಎಂಬ ವದಂತಿಗಳಿವೆ. ಅಂದಂತೆ ಪಂಚಾಚಾರ್ಯರ ಪಲ್ಲಕ್ಕಿ ಹೊತ್ತೇ ತೀರಬೇಕೆಂದು ಪಣತೊಟ್ಟಿರುವ ಕೆಲವರು ಈಗಾಗಲೇ ಜಗದ್ಗುರುಗಳ ಹತ್ತಿರ ಕಡಿಮೆ ಬಡ್ಡಿಗೆ ದುಡ್ಡು ತಂದು ಹೆಚ್ಚಿನ ಬಡ್ಡಿಗೆ ದುಡ್ಡನ್ನು ದುಡಿಸಿಕೊಳ್ಳುವ ದಂಧೆಗೆ ನಿಂತದ್ದು ಬಟಾಬಯಲಾದ ಸಂಗತಿ.

ಲಿಂಗಾಯತರಲ್ಲಿ ಮೂಲತಃ ಇಲ್ಲದ ಕರ್ಮಠತನವನ್ನು ತುಂಬಿದ ಪಂಚಾಚಾರ್ಯರು ತಾವು ಕಟ್ಟದೆ ಇರುವ ಸಮಾಜಕ್ಕೆ ಗುರುಗಳಾಗಿ ನಿಂತಿದ್ದಾರೆ. ವಚನಸಾಹಿತ್ಯವನ್ನು ಆಪೋಶನ ಮಾಡಿಕೊಂಡು ತಮ್ಮ ವೈಭವ ಪ್ರದರ್ಶನ ನಡೆಸಿದ್ದಾರೆ.

ಇಂಥ ದೈನೇಸಿ ಸ್ಥಿತಿಗೆ ಇಳಿದ ಪಂಚಪೀಠಗಳು ಲಿಂಗಾಯತರಿಗೆ ಅಂಟಿಕೊಂಡ ಶನಿಗಳು. ಇವು ಎಷ್ಟು ಬೇಗ ತೊಲಗಿ ಹೋಗುತ್ತವೋ ಅಷ್ಟು ಲಿಂಗಾತರ ನಡಾವಳಿಗಳು ಉತ್ತಮಗೊಳ್ಳಲು ಸಾಧ್ಯವಾಗುತ್ತದೆ.

● ವಿಶ್ವಾರಾಧ್ಯ ಸತ್ಯಂಪೇಟೆ

...ಪುರಿ ಪೀಠವೇ ನಾಥ ಸಂಪ್ರದಾಯಕ್ಕೆ ಸೇರಿದ್ದು!

...ರು ವರ್ಷಗಳ ಹಿಂದೆ ಹಾನಗಲ್ ಕುಮಾರಸ್ವಾಮಿಗಳು ಸಂಸ್ಥಾಪಿಸಿದ ಶಿವಯೋಗ ಮಂದಿರ ಜಾತಿ ...ರನ್ನು ತಯಾರು ಮಾಡುವ ಕೇಂದ್ರವಾದುದೆ ಪಂಚಾಚಾರ್ಯರ ಆರ್ಭಟಕ್ಕೆ ಸಾಕ್ಷಿಯಾಗಿದೆ.

...ಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿರುವ ರಂಭಾಪುರಿ ಪೀಠವೇ ನಾಥ ಸಂಪ್ರದಾಯದ ಪೀಠ. ಇದು ... ಜನಾಂಗದವರಿಗೆ ಸೇರಿದ್ದು. ಇಂದಿಗೂ ಕೂಡ ಕುರುಬ ಜನಾಂಗದವರು ಡೊಳ್ಳು ಬಾರಿಸುವಾಗ ಮೊದಲು ...ರೇವಣಸಿದ್ಧ ಬಂದಾನು ಬನ್ನಿರೋ... ಎಂದೆ ಹಾಡು ಶುರುಮಾಡುತ್ತಾರೆ. 16ನೇ ಶತಮಾನದಲ್ಲಿ ರಚಿತವಾದ ...ಪುರಿ ಪೀಠದ ಸ್ವಾಮಿ ಕುಮಾರ ಚೆನ್ನಬಸವ ಬರೆದಿರುವ ಬಸವ ಪುರಾಣದ ಪುರಾತನರ ಕಥೆಯಲ್ಲಿ ಅಷ್ಟಿ ...ಆ ಪಂಚಾಚಾರ್ಯರು ಒತ್ತಟ್ಟಿಗೆ ಇರಲಿ, ರಂಭಾಪುರಿ ಪೀಠದ ರೇವಣಸಿದ್ಧರ ಪ್ರಸ್ತಾಪವೂ ಬರುವುದಿಲ್ಲ. ...ಗಿ ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸೊನ್ನಲಿಗೆ ಸಿದ್ಧರಾಮ ಮುಂತಾದವರ ಪ್ರಸ್ತಾಪ ...ಯಲ್ಲಿ ಬರುತ್ತದೆ.

...ತಿಹಾಸವನ್ನು ಅರಿಯದೆ ರಂಭಾಪುರಿ ಸ್ವಾಮಿಗಳು ಪಲ್ಲಕ್ಕಿಯಲ್ಲಿ ಮೆರೆಯುವುದು ಧರ್ಮವನ್ನು ತುಳಿದು ... ದಾಷ್ಟ್ಯವನ್ನು ತೋರಿದಂತೆ, ಇದು ಷಣ್ಮುಖ ಶಿವಯೋಗಿಗಳ ನೆಲದಲ್ಲಿ ಸಾಧ್ಯವಿಲ್ಲವೆಂದು ಪಂಚಮಸಾಲಿ ... ಜಗದ್ಗುರು ನೆಲೋಗಿಯ ಸಿದ್ಧಲಿಂಗಸ್ವಾಮಿ ಸವಾಲು ಹಾಕುತ್ತಾರೆ.

[illegible]

...ಡ್ಡಪಲ್ಲಕ್ಕಿ ಉದ್ದ ಪಲ್ಲಕ್ಕಿ ಉತ್ಸವಗಳು ಲಿಂಗಾಯತ ಧರ್ಮದಲ್ಲಿ ಇಲ್ಲವೇ ಇಲ್ಲ. ದಯವೇ ಧರ್ಮದ ...ವಯ್ಯ ಎಂದು ಸಾರಿದ ಧರ್ಮ ಇದು. ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ಎಂದು ಹೇಳಿದ ಧರ್ಮ ...ದರೂ ಗುರುಗಳ ಅಡ್ಡ ಪಲ್ಲಕ್ಕಿಯನ್ನು ಹೊತ್ತು ಮೆರೆಸಿ ಎಂದು ಹೇಳಿರಬಹುದೆ? ಎಂದು ನಮ್ಮನ್ನೇ ಪ್ರಶ್ನೆ ...ವ ಎಡೆಯೂರು ಸಂಸ್ಥಾನದ ಗದುಗಿನ ಜಗದ್ಗುರುಗಳು ಅಡ್ಡಪಲ್ಲಕ್ಕಿ ಉತ್ಸವವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

...ಸವಣ್ಣ ಕಟ್ಟಿದ ಧರ್ಮದಲ್ಲಿ ಪಂಚಾಚಾರರಿಗೆ ಏನು ಕೆಲಸ?

...ಂಗಾಯತವೆಂಬುದು ಜಾತಿ ಸಂಕರಗೊಂಡ ಗುಂಪು. ಅಲ್ಲಿ ಕುಲವನರಸುವುದೆ ತಪ್ಪು, ಕುಲ ಕಸುಬುಗಳೆ ...ಪಾದವು ಎಂಬುದಕ್ಕೆ ಇತಿಹಾಸ ಸಾಕ್ಷಿ. ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹಾರ ...ಸುದು ನಿಮ್ನ ವರ್ಗದ ಜನಗಳನ್ನು ಅಪ್ಪಿಕೊಂಡ ಜನಸಮುದಾಯ. ಮಾದಾರ ಚೆನ್ನಯ್ಯನ ಬಾಯ್ತಂಬುಲ ... ಬದುಕುವೆ. ಅವರ ಬೀಳುಡುಗೆಯನ್ನು ತೊಟ್ಟು ಬದುಕುವೆ. ಎಂದ ಕ್ರಾಂತಿಕಾರಿ ಬಸವಣ್ಣನವರು ಕಟ್ಟಿದ ...ಯದಲ್ಲಿ ಪಂಚಾಚಾರ್ಯರಿಗೆ ಏನು ಕೆಲಸ? ಎಂದು ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮಿಗಳು ...ಳುತ್ತಾರೆ.

...ಭಕ್ತನ ಹೃದಯ ಸಿಂಹಾಸನದಲ್ಲಿ ವಿರಾಜಮಾನವಾಗಬೇಕು"

-ಪಂಡಿತಾರಾಧ್ಯ ಸ್ವಾಮೀಜಿ

...ಗೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳು ನಾಡಿನ ಪ್ರಜ್ಞಾವಂತ ಬರಹಗಾರ- ಚಿಂತಕರಲ್ಲಿ ... ಅಡ್ಡಪಲ್ಲಕ್ಕಿ, ಹಾಗೂ ದಸರಾ ದರ್ಬಾರ ಕುರಿತು ಪತ್ರಿಕೆ ಸಂದರ್ಶಿಸಿದಾಗ ಅವರು ಹೇಳಿದ್ದು ಹೀಗೆ:

...ಯಾವುದೇ ಧರ್ಮದ ಗುರು ಇರಬೇಕಾದುದು ಅಡ್ಡಪಲ್ಲಕ್ಕಿಯ ಮೇಲಲ್ಲ. ಆತ ನೆಲೆಗೊಳ್ಳಬೇಕಾದುದು ತನ್ನ ... ಹೃದಯ ಸಿಂಹಾಸನದ ಮೇಲೆ. ಅಲ್ಲೇ ಆತ ವಿರಾಜಮಾನವಾಗಬೇಕು. ವೈಭವದ ಯುಗ ಮುಗಿದು ... ರಾಜಮಹಾರಾಜರು ಅಳಿದುಹೋಗಿದ್ದಾರೆ. ಇಂದು ನಾವು ಪ್ರಜಾಪ್ರಭುತ್ವದ ದಿನಮಾನಗಳಲ್ಲಿ ಬದುಕಿದ್ದೇವೆ. ... [illegible] ಕೂಡ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರುತ್ತದೆ. ಇಂಥ ಮುಂದುವರಿದ ದಿನಮಾನಗಳಲ್ಲಿಯೂ ... [illegible] ಮೆರೆಯಬೇಕೆಂಬುದು ಚೋದ್ಯವೇ ಸರಿ. ಭಕ್ತರು ತಿಳಿಯದೆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳಲು ... [illegible] ಅವರನ್ನು ಅರಿವನ್ನು ಬೆಳೆಸಬೇಕು. ಅರಿವನ್ನು ಕೊಡುವವನು ಗುರುವಾಗಬೇಕೆ ... [illegible] ಗುರುವಾಗುವವನು."

ಹೆಣವಷ್ಟೇ	ಪಲ್ಲಕ್ಕಿ ಏರಿ
ವಿರೋಧಿಸಲಾರದು	ವಕ್ಕರಿಸಿದವನು
ನಾಲ್ವರು ಹೆಗಲ ಮೇಲೆ	ವೀರನೂ ಅಲ್ಲ
ತನ್ನ ಹೊತ್ತೊಯ್ಯುವುದನ್ನು	ಶೈವನೂ ಅಲ್ಲ
* * *	ಜೀವಂತ ಶವ
ಹೊರುವವರು	'ಹಾರ'ಶೈವ!
ಸಾಯುತ್ತಲೇ	* * *
ಇರುತ್ತಾರೆ	ಕಾಲಿದ್ದೂ ನಡೆ
ಹೊರಿಸಿಕೊಳ್ಳುವವರು	ಯಲೊಲ್ಲದವನು
ಅಜೀವ	ಅಂಗ [illegible] ಲಿಂಗ
[illegible]	[illegible]
* * *	ಪಶು

● ಪಿ.ಕೆ. ಮಾಲಿನಗೌಡರ್

ಸಮುದ್ರ ಮಥನ, ನಾನಾ ವಿಚಾರಮಂಥನ

ಪುರಾಣಗಳನ್ನು ರಚನೆ ಮಾಡಿರುವವರು ಮಾತ್ರ ಪುರಾಣಿಕರಲ್ಲ, ಪುರಾಣಗಳನ್ನು ಹೇಳುತ್ತಾ ಬರುವವರೂ ಪುರಾಣಿಕರೇ. ಈ ಎರಡೂ ಬಗೆಯ ಪುರಾಣಿಕರನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ಆಯಾ ಕಾಲಘಟ್ಟದ ಪ್ರಕಾರ ಪುರಾಣವನ್ನು ರಚನೆ ಮಾಡಿ, ಅದರಲ್ಲಿ ತಮ್ಮ ಆಸಕ್ತಿ, ಭಕ್ತಿ, ಅಭಿರುಚಿಗಳ ಲೇಪ ಕೊಟ್ಟು ಪುರಾಣದ ದಾಖಲು ಮಾಡಿರುವ ಪುರಾಣಿಕರು ಒಂದು ಬಗೆಯವಾದರೆ, ಇಂದಿಗೂ ಆ ಪುರಾಣಗಳ ಕಥೆಗಳನ್ನು ಜನರಿಗೆ ಯಾವುದೇ ಮಾಧ್ಯಮದಿಂದ ಹೇಳುವಾಗ, ತಮ್ಮ ಆಸಕ್ತಿ ಅಭಿರುಚಿಗಳಿಗೆ ತಕ್ಕಂತೆ ಪ್ರಸ್ತುತ ಪಡಿಸುತ್ತಾ ಹೋಗುತ್ತಾರೆ. ಚಲನಚಿತ್ರಗಳಲ್ಲಾಗಲಿ ಅಥವಾ ಹರಿಕಥೆಗಳಲ್ಲಾಗಲಿ ದೇವತೆಗಳು ಅಥವಾ ಋಷಿಗಳು ಆಡಿದ್ದಾರೆಂದು ತೋರ್ಪಡಿಸುವ ಸಂಭಾಷಣೆಗಳನ್ನು ನಾವು ಗಮನಿಸಿದರೆ, ಆಯಾ ಪುರಾಣಿಕರ ಪಕ್ಷಪಾತದ ಬುದ್ಧಿ, ರಾಜಕೀಯ ಮನೋವೃತ್ತಿ, ಸಂಕುಚಿತ ಅಥವಾ ಜಿಜ್ಞಾಸುವಿನಿಂದ ಕೂಡಿದ ವೈಚಾರಿಕ ಪ್ರವೃತ್ತಿಗಳು ಕಾಣುತ್ತವೆ.

ಸಮುದ್ರ ಮಥನದ ಕಥೆಯನ್ನು ಗಮನಿಸಿದರೆ ನಾನಾವಿಚಾರಗಳು ಬೆಳಕಿಗೆ ಬರುತ್ತವೆ. ಅಸುರರ ಭೀತಿಗೆ ಅಮೃತವನ್ನು ಉಳಿಸಿಕೊಳ್ಳಲು ಅದನ್ನು ಇಂದ್ರನು ಸಮುದ್ರದಲ್ಲಿ ಅಡಗಿಸಿಡುತ್ತಾನೆ. ಕಾಲಾನುಕ್ರಮದಲ್ಲಿ ಅದನ್ನು ಮತ್ತೆ ಪಡೆಯುವ ಅವಶ್ಯಕತೆ ಬಂದಾಗ ಅದು ಸಮುದ್ರದಲ್ಲಿ ಕಳೆದುಹೋಗಿದ್ದು, ಸಮುದ್ರರಾಜನು ಅಸಹಾಯಕತೆಯಿಂದ ಕೈ ಚೆಲ್ಲುತ್ತಾನೆ. ಆದರೆ ಸಮುದ್ರವನ್ನು ಕಡೆಗೋಲು ಮತ್ತು ಹಗ್ಗವನ್ನು ಬಳಸಿ ಕಡೆದರೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ, ಸಮುದ್ರದ ನೀರಿನಲ್ಲಿ ಬೆರೆತುಹೋಗಿರುವ ಅಮೃತವು ಹೊರಗೆ ಬಂದೀತೆಂದು ಸಮುದ್ರರಾಜನೇ ಸೂಚಿಸುವನು.


ಆದರೆ ಅಷ್ಟು ದೊಡ್ಡ ಸಮುದ್ರವನ್ನು ಕಡೆಯುವುದಾದರೂ ಹೇಗೆ?

ಮಂದರ ಪರ್ವತವನ್ನೇ ಕಡೆಗೋಲಾಗಿ, ವಾಸುಕಿ ಸರ್ಪವನ್ನೇ ಹಗ್ಗವನ್ನಾಗಿ ಸಮುದ್ರವನ್ನು ಕಡೆಯಲು ಹೋದರೂ, ಈ ದೇವತೆಗಳ ಬಲವು ಸಾಲದು. ಅದಕ್ಕಾಗಿ ಅವರು ರಾಕ್ಷಸರ ಬಲವನ್ನು ನೆರವಿಗೆ ತೆಗೆದುಕೊಳ್ಳಲು ಆಲೋಚಿಸಿದರು.

ಅಮರತ್ವವನ್ನು ನೀಡುವಂತಹ ಅಮೃತದ ಮೇಲೆ ಎಲ್ಲರಿಗೂ ಬಯಕೆಯೇ. ಆದ್ದರಿಂದ ದೇವತೆಗಳು ತಮ್ಮ ಸಮುದ್ರಮಥನದಲ್ಲಿ ನೆರವಾದ ಪಕ್ಷದಲ್ಲಿ ರಾಕ್ಷಸರಿಗೂ ಅಮೃತವನ್ನು ಕೊಡುತ್ತೇವೆ ಎಂದು ಮಾತುಕೊಟ್ಟು, ಅವರನ್ನೂ ಈ ಮಥನ ಕಾರ್ಯಕ್ಕೆ ಉಪಕ್ರಮಿಸಿದರು.

ಸಮುದ್ರದಲ್ಲಿ ಮಂದರ ಪರ್ವತವನ್ನು ನಿಲ್ಲಿಸಲಾಯಿತು. ಅದಕ್ಕೆ ವಾಸುಕಿ ಸರ್ಪವನ್ನು ಹಗ್ಗದಂತೆ ಸುತ್ತಲಾಯಿತು. ಬಾಲದ ಭಾಗವನ್ನು ಆಯ್ದುಕೊಂಡರು ದೇವತೆಗಳು. ಉಳಿದಂತೆ ತಲೆಯ ಕಡೆಯ ಭಾಗವನ್ನು ರಾಕ್ಷಸರು ಹಿಡಿದರು. ಕಡೆಯುವಿಕೆ ಪ್ರಾರಂಭವಾಯಿತು. ಆಳವಾದ ಸಮುದ್ರದಲ್ಲಿ ಮಂದರ ಪರ್ವತಕ್ಕೆ ನಿಲ್ಲಲು ಸಾಧ್ಯವಿಲ್ಲದೇ ಮುಳುಗತೊಡಗಿ ಮಥನದ ಕಾರ್ಯಕ್ಕೆ ತೊಡಕುಂಟಾದಾಗ, ಮಹಾವಿಷ್ಣುವು ಕೂರ್ಮಾವತಾರವನ್ನು ತಾಳಿ, ತನ್ನ ಬೆನ್ನಿನ ಮೇಲೆ ಆ ಪರ್ವತವನ್ನು ಹೊರುವನು. ಆಮೆಯು ನೀರಿನಲ್ಲಿ ತೇಲುವ ಜೀವಚರವಾದ್ದರಿಂದ ಅದರ ಬೆನ್ನಿನ ಮೇಲೆ ಪರ್ವತವು ಬೀಳದಂತೆ ನಿಂತು ಮಥನದ ಕಾರ್ಯವು ಮುಂದುವರೆಯಿತು. ನಂತರ ಎದುರಾದ ಮತ್ತೊಂದು ತೊಡಕೆಂದರೆ ದೇವ-ದಾನವರ ಹಿಡಿತಕ್ಕೆ ಸಿಕ್ಕಿ, ಮಥನಕ್ಕೆ ಹಗ್ಗವಾಗಿ ಬಳಕೆಯಾಗಿ ಬಳಲಿದ ವಾಸುಕಿ ಆಯಾಸದಿಂದ ತನ್ನ ಉಸಿರನ್ನು ಹೊಮ್ಮಿಸಿದಾಗ, ವಿಷಾನಿಲವು ಹೊರಹೊಮ್ಮಿ ಲೋಕವೆಲ್ಲಾ ಬಳಲಿತು. ಭೋಪಾಲ್‌ನಲ್ಲಿ ವಿಷಾನಿಲದ ದುರಂತವಾದಂತೆ ಇಡೀ ಲೋಕವೇ ತತ್ತರಿಸಿತು. ಆಗ ವಿಷದ ಸರ್ಪಗಳನ್ನೇ ಆಭರಣವಾಗಿ ಹೊಂದಿರುವಂತಹ ಮಹಾದೇವನಾದ ಶಿವನು ಈ ವಿಷದ ವಿಷಯದಲ್ಲಿ ಮಧ್ಯೆ ಪ್ರವೇಶಿಸಿ ಅದನ್ನು ಆಘ್ರೋಶನ ತೆಗೆದುಕೊಂಡು ವಿಷಾನಿಲದ ದುರಂತವನ್ನು ತಪ್ಪಿಸಿದ. ಆದಾಗ್ಯೂ ಆ ವಿಷವು ಅವನ ದೇಹವನ್ನು ಪ್ರವೇಶಿಸಿ ಇನ್ನೇನೋ ಆಪತ್ತು ಸಂಭವಿಸದಂತೆ ಪಾರ್ವತಿಯು ಶಿವನು ವಿಷಪೋಶನ ತೆಗೆದುಕೊಂಡ ಕೂಡಲೇ ಕಂಠವನ್ನು ಹಿಡಿದು, ಅದು ಅಲ್ಲಿಯೇ ನಿಲ್ಲುವಂತೆ ಮಾಡಿ, ದೇಹಕ್ಕಿಳಿಯದಂತೆ ನೋಡಿಕೊಂಡು, ಅವನು ನೀಲಕಂಠ, ವಿಷಕಂಠನಾದರೂ ಲೋಕಕ್ಕೆ ಮಂಗಳವನ್ನುಂಟು ಮಾಡಿದಂತಹ ಶ್ರೀಕಂಠನಾದ.

ಸಮುದ್ರ ಮಥನದ ಕಾರ್ಯ ಮುಂದುವರೆಯಿತು. ವಿಷೋದ್ಭವದ ಗಂಡಾತರ ತೀರಿದ ಬಳಿಕ, ಮುಂದಿನದು ಅದ್ಭುತ. ಲಕ್ಷ್ಮಿ ಎಂಬ ವರದಾತೆ ಸುರಕನ್ಯೆ, ಚಂದ್ರನೆಂಬ ಗ್ರಹ, ಉಚ್ಚೈಶ್ರಸ್ಸು ಎಂಬ ಕುದುರೆ, ಐರಾವತವೆಂಬ ಆನೆ, ಕಲ್ಪವೃಕ್ಷವೆಂಬ ಬೇಡಿದ್ದನ್ನು ಕೊಡುವ ಮರ, ಕಾಮಧೇನು ಎಂಬ ಕಾಮಿಸಿದ್ದನ್ನೆಲ್ಲಾ ಕೊಡುವಂಥ ಹಸು, ಅನೇಕ ಔಷಧೀಯ ಗಿಡ ಮೂಲಿಕೆಗಳು; ಇತ್ಯಾದಿ ಜೀವ-ವಸ್ತುಗಳೆಲ್ಲಾ ಉದ್ಭವಿಸಿದವು. ಆಗ ಹುಟ್ಟಿದಂತಹ ಎಲ್ಲಾ ವಸ್ತುಗಳು ಒಳಿತಿನ ವರಗಳನ್ನೇ ನೀಡುವಂತಹ ಅದ್ಭುತವಾದ ವಸ್ತುಗಳೇ. ಅವುಗಳನ್ನೆಲ್ಲಾ ದೇವತೆಗಳು ಹಂಚಿಕೊಂಡರು. ಈ ಅದ್ಭುತ ವರದಾಯಕ ವಸ್ತುಗಳ ಉಗಮದ ನಂತರ ಉದ್ಭವಿಸಿದವನು ಧನ್ವಂತರಿ. ತನ್ನ ಕೈಯಲ್ಲಿ ಅಮೃತದ ಭಾಂಡವನ್ನೇ ಹಿಡಿದುಕೊಂಡು ಹೊರಹೊಮ್ಮಿದ. ಅಮೃತ ಹೊಮ್ಮಿತು ಎಂದು ತಿಳಿದ ಕೂಡಲೇ ರಾಕ್ಷಸರು ಮತ್ತು ದೇವತೆಗಳು ಅದಕ್ಕಾಗಿ ಹೊಡೆದಾಡಿಕೊಳ್ಳಲು ಆರಂಭಿಸಿದರು. ವಾಸ್ತವದಲ್ಲಿ ದೇವತೆಗಳು ಮಾತುಕೊಟ್ಟಂತೆ ರಾಕ್ಷಸರಿಗೆ ಅಮೃತ ಹಂಚಲೇಬೇಕಾದ ಬದ್ಧತೆಯಿತ್ತು, ಆದರೆ ರಾಕ್ಷಸರು ಲೋಕಕಂಟಕರೂ, ದುಷ್ಟರೂ ಆಗಿರುವ ಕಾರಣದಿಂದ, ಅಪಾತ್ರರಾದ ಅವರಿಗೆ ಅಮೃತವು ದೊರಕಬಾರದು, ಹಾಗೊಂದು ವೇಳೆ ದೊರಕಿದರೆ, ರಾಕ್ಷಸರು ಅಮರರಾಗಿ ಲೋಕವನ್ನು ತಮ್ಮ ಅಸುರೀಪ್ರವೃತ್ತಿಯಿಂದ ನಾಶ ಮಾಡುತ್ತಾರೆಂದು ದೇವತೆಗಳಲ್ಲಿ ಹಿರಿಯರು ತುರ್ತು ಸಭೆ ನಡೆಸಿ, ವಿಷ್ಣುವು ಮತ್ತೆ ನೆರವಿಗೆ ಬರುತ್ತಾನೆ. ಮೋಹಿನಿಯ ಅವತಾರವೆತ್ತುವ ಮಹಾವಿಷ್ಣುವು ಅಮೃತ ಭಾಂಡವನ್ನು ಧನ್ವಂತರಿಯಿಂದ ಪಡೆದು ಇಬ್ಬರಿಗೂ ಸಮಾನವಾಗಿ ಹಂಚುವ ವಾಗ್ದಾನ ಮಾಡಿ, ದೇವತೆಗಳನ್ನೂ ದಾನವರನ್ನೂ ಪ್ರತ್ಯೇಕ ಸಾಲುಗಳಲ್ಲಿ ಕೂರಿಸುವನು. ಮೋಹಕವಾಗಿ ತನ್ನ ನಗುವನ್ನು ಅಸುರರಿಗೆ ಬೀರುತ್ತಾ, ರಾಕ್ಷಸರು ಆ ನಗುವಿಗೆ ಮರುಳಾಗಿರುವ ಸಮಯದಲ್ಲೇ ತೆರೆದ ಕೈಗಳಿಂದ ಕುಳಿತಿದ್ದ ದೇವತೆಗಳಿಗೆಲ್ಲಾ ಅಮೃತವನ್ನು ನೀಡಿದ ವಿಷ್ಣು, ದೇವತೆಗಳು ಅಮೃತ ಸೇವಿಸಿ ಅಮರರಾಗುವಂತೆ ಮಾಡಿದ ವಿಷ್ಣುವು, ರಾಕ್ಷಸರಿಗೆ ಅಮೃತ ದಕ್ಕದಂತೆ ಮಾಡಿ ಲೋಕವನ್ನು ಅವರ ಕೇಡುಗಳಿಂದ ರಕ್ಷಿಸಿದ್ದು...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಮುದ್ರ ಮಥನದ ಕಥೆ.

ಮುಂದೆ ಎರಡು ಉಪಕಥೆಗಳು ಸೇರ್ಪಡೆಯಾಗುತ್ತವೆ.

ಒಂದು: ರಾಕ್ಷಸರಲ್ಲಿ ಮಹಾವಿಷ್ಣುವಿನ ಮೋಹಿನಿ ಅವತಾರದ ಈ ಸಂಚಿನ ವಾಸನೆ ಬಡಿದ ಒಬ್ಬ ರಾಕ್ಷಸನು ದೇವತೆಯಂತೆಯೇ ವೇಷಧಾರಿಯಾಗಿ ಅಮೃತಾಪೇಕ್ಷಿಯಾಗಿ ದೇವತೆಗಳ ಸಾಲಲ್ಲಿ ಕೂರುತ್ತಾನೆ. ವಿಷ್ಣುವು ರಾಕ್ಷಸರ ಕಡೆಗೆ ಮೋಹಕ ಮುಗುಳ್ನಗೆ ಬೀರುತ್ತಾ ಇದ್ದುದ್ದರಿಂದ ಇತ್ತ ದೇವತಾ ವೇಷಧಾರಿಯಾದ ರಾಕ್ಷಸನ ಗಮನಿಸಲು ಸಾಧ್ಯವಾಗಲಿಲ್ಲ, ಆದರೆ, ಸೂರ್ಯ ಮತ್ತು ಚಂದ್ರರು ಅದನ್ನು ಗುರುತಿಸಿ ಕೂಗಿ ಕಳ್ಳನನ್ನು ಹಿಡಿದುಬಿಟ್ಟರು. ಅಷ್ಟರಲ್ಲಿ ದೇವತಾ ವೇಷಿ ರಾಕ್ಷಸ ಅಮೃತ ಕುಡಿದಾಗಿತ್ತು, ಆದರೂ ವಿಷ್ಣು ಬಿಡಲಿಲ್ಲ, ತನ್ನ ಅಸುರಾರಿ ಮಹಾಚಕ್ರದಿಂದ ರಾಕ್ಷಸನ ತಲೆಯನ್ನು ಕತ್ತರಿಸಿದ. ಈಗಾಗಲೇ ಅಮೃತ ಕುಡಿದಿದ್ದನಾದ್ದರಿಂದ ತಲೆಯೂ ಮತ್ತು ಮುಂಡವೂ ಬೇರ್ಪಟ್ಟರೂ ಹಾಗೆಯೇ ಉಳಿಯಿತು. ಅವರೇ ರಾಹು ಕೇತುಗಳಾಗಿ ತಮ್ಮ ಕಳ್ಳತನವನ್ನು ಹಿಡಿದುಕೊಟ್ಟ ಸೂರ್ಯ ಮತ್ತು ಚಂದ್ರರನ್ನು ಅಟ್ಟಿಸಿಕೊಂಡು ಹೋಗಿ ಆಗಾಗ್ಗೆ ಹಿಡಿಯುತ್ತಾರೆ. ಅವನ್ನೇ ನಾವು ಸೂರ್ಯ ಮತ್ತು ಚಂದ್ರ ಗ್ರಹಣಗಳಾಗಿ ಈಗಲೂ ನೋಡುತ್ತೇವೆ.



ಎರಡನೆಯ ಉಪಕಥೆ:

ದೇವತೆಗಳಿಗೆ ಅಮೃತ ದೊರಕಲು ಮೋಹಿನಿ ರೂಪದ ವಿಷ್ಣುವನ್ನು ಶಿವನು ನೋಡುತ್ತಾನೆ. ಕಾಮದೇವನನ್ನೇ ಸುಟ್ಟವನು, ಪಾರ್ವತಿಯ ಅಪೂರ್ವ ಲಾವಣ್ಯಕ್ಕೆ ಸೋಲದ ಶಿವನು ಪುರುಷನಾದ ವಿಷ್ಣುವು ಸ್ತ್ರೀಯಾದ ರೂಪಕ್ಕೆ ಮನಸೋತು ಬೆಂಬತ್ತುತ್ತಾನೆ. ನಂತರ ಅವನನ್ನು ಬಿಡದೇ ಕೂಡುತ್ತಾನೆ. ಅದರಿಂದ ಹುಟ್ಟಿದವನೇ ಸ್ವಾಮಿ ಅಯ್ಯಪ್ಪ, ಹರಿ-ಹರ ಸುತ ಅಯ್ಯಪ್ಪ ಮುಂದೆ ರಾಜಶೇಖರನ ಅರಮನೆಯಲ್ಲಿ ಅವನ ಸಾಕುಮಗನಾಗಿ, ಪಂದಳ ರಾಜಕುಮಾರನಾಗಿ, ಮಹಿಷಿಯನ್ನು ಕೊಲ್ಲುವ ಲೋಕ ರಕ್ಷಕನಾಗಿ ಮುಂದುವರೆದಿದ್ದು ಮುಂದಿನ ಕಥೆ.

ಈ ಸಮುದ್ರ ಮಥನದ ಕಥೆ ಒಂದು ಸುಂದರವಾದ ಕಾಲ್ಪನಿಕ ಕಥೆಯನ್ನಷ್ಟಾಗಿ ನಮ್ಮ ವರ್ಣಚಿತ್ರಗಳಲ್ಲಿ, ಸಂಗೀತ, ನೃತ್ಯ, ನಾಟಕ ಮತ್ತಿತರ ಪ್ರದರ್ಶಕ ಕಲೆಗಳಲ್ಲಿ ಕಂಡು ಸುಮ್ಮನಾಗಿಬಿಡುವಷ್ಟಿದ್ದರೆ ತಲೆನೋವೇ ಇರುತ್ತಿರಲಿಲ್ಲ. ನನಗೆ ಈಗಲೂ ಮ್ಯೂಸಿಕ್ ಟುಡೇಯವರು ಹೊರತಂದಿರುವ ಸಂತೂರ್ ವಾದಕ ಪಂಡಿತ್ ಶಿವಕುಮಾರ್ ಶರ್ಮರವರ 'ವಾಟರ್'ನಲ್ಲಿ ಸಮುದ್ರಮಥನದ ಒಂದು ಸಂಗೀತ ಸಂಯೋಜನೆ ಬಹು ಅಚ್ಚುಮೆಚ್ಚು. ಬಿ.ಕೆ.ಎಸ್.ವರ್ಮರವರ ಸಮುದ್ರ ಮಥನದ ವರ್ಣಚಿತ್ರದಂತೆ ಜಗತ್ತಿನಲ್ಲಿ ಅನೇಕ ಕಲಾಕೃತಿಗಳು ಅದ್ಭುತವಾಗಿ ಕಲಾ ಶ್ರೀಮಂತಿಕೆಯನ್ನು ಮೆರೆದಿವೆ. ಇತರರಂತೆ ನಾನೂ ಕಲಾ ರಸಿಕನಾಗಿ ಅವನ್ನು ಆಸ್ವಾದಿಸಿದ್ದೇನೆ. ಕುಂಬಳಕಾಯನ್ನು ರಥವನ್ನಾಗಿ ಮಾಡುವ, ಇಲಿಗಳನ್ನು ಕುದುರೆಗಳನ್ನಾಗಿ ಮಾಡುವ ದೇವತೆ ಚಿಂದಿ ಬಟ್ಟೆಯನ್ನೇ ಅದ್ಭುತ ವಸ್ತ್ರವನ್ನಾಗಿ ಮಾಡಿ ರಾತ್ರಿಯ ರಾಜೌತಣಕ್ಕೆ ಸಿಂಡ್ರೆಲಾಳನ್ನು ಕಳುಹಿಸಿವ ಫೇರಿಟೇಲ್‌ಗಳನ್ನು ಆಸ್ವಾದಿಸಿ ಸುಖಿಸುವ ನನಗೆ ಸಮುದ್ರದಲ್ಲಿ ಪರ್ವತವನ್ನು ತಂದಿರಿಸುವುದು, ಪಾಪದ ಸರ್ಪ ಎನಿಸಿದರೂ, ಅದೇ ಹಗ್ಗವಾಗಿ ಬರಲು ಒಪ್ಪಿ ತನ್ನ ಸೇವೆ ಸಲ್ಲಿಸುವುದು, ಸಮುದ್ರವನ್ನು ಮಜ್ಜಿಗೆ ಕಡೆದಂತೆ ಕಡೆಯುವುದು, ಅದರಲ್ಲಿ ಬೆಣ್ಣೆ ಬಂದಂತೆ ಅನೇಕ ಅದ್ಭುತ ವಸ್ತುಗಳು ಮತ್ತು ಅಮೃತಭಾಂಡದೊಡನೆ ಧನ್ವಂತರಿ ಹುಟ್ಟಿ ಬರುವುದು; ಏನೂ ಅಭ್ಯಂತರವಿಲ್ಲ. ಆದರೆ, ಸಾಮಾನ್ಯ ಮನುಷ್ಯನಾಗಿ, ಸಾಮಾನ್ಯ ಮಾನವತೆಯನ್ನು, ಸಾಮಾನ್ಯ ಪ್ರಜ್ಞೆಯನ್ನು ಪರಿಗಣಿಸುವ ನನಗೆ ಕೆಲವು ಅಂಶಗಳು ಬೆಚ್ಚಿ ಬೀಳಿಸುತ್ತವೆ.

1. ಕಳೆದು, ಕರಗಿಹೋಗಿರುವ ಅಮೃತವನ್ನು ತಮ್ಮೊಬ್ಬರಿಂದ ಪಡೆಯಲು ಸಾಧ್ಯವಿಲ್ಲ ಎಂದು ತೋರಿದಾಗ, ದೇವತೆಗಳು ತಮ್ಮ ಶತ್ರುಗಳಾದವರ ಹತ್ತಿರ ಅಮೃತದ ಆಮಿಷ ಒಡ್ಡಿ, ಸ್ವಾಭಿಮಾನ ಬಿಟ್ಟು ಅವರ ಬಳಿ ಹಲ್ಲು ಕಿರಿಯುವುದು.

2. ಹಾಗೆ ಒಪ್ಪಿ ಬಂದ ರಾಕ್ಷಸರನ್ನು (ಮುಂದಾಗುವ ಅನಾಹುತವನ್ನು ಊಹಿಸಿಯೇ) ಸರ್ಪದ ತಲೆಯ ಭಾಗಕ್ಕೆ ಬಿಟ್ಟು, ತಾವು ಬಾಲದ ಭಾಗವ ಹಿಡಿಯುವುದು.

3. ಶಿವ ವಿಷವನ್ನುಂಡಾದ ಮೇಲೆ ಉದ್ಭವಿಸಿದ ಎಲ್ಲಾ ವಸ್ತುಗಳನ್ ರಾಕ್ಷಸರು ಈ ಮಹತ್ತರ ಕಾರ್ಯದಲ್ಲಿ ಭಾಗವಹಿಸಿದ್ದರೂ ದೇವತೆಗ ಹಂಚಿಕೊಂಡಿದ್ದು.

4. ಕ್ಲೈಮ್ಯಾಕ್ಸ್‌ನಲ್ಲಿ ಅಮೃತ ಬಂದಾದ ಮೇಲೆ, ಕೊಟ್ಟ ಮಾತಿನ ರಾಕ್ಷಸರ ಜೊತೆಗೆ ಹಂಚಿಕೊಳ್ಳದೇ ಅವರಿಗೆ ಸಿಗಲೇಬಾರದೆಂದು ಕುತಂತ್ರವ ರೂಪಿಸುವುದು.

ಇದು ನನಗಾದ ಮೌಲ್ಯಾಘಾತ!

ದೇವತೆಗಳೆಂದರೆ ಮಾತು ತಪ್ಪುವವರು, ಕುತಂತ್ರಿಗಳು, ಸಮಯಸಾಧ ಎಂದು ತೋರುವ ಕಥೆಯೇ ಇದು? ಮೋಹಿನಿಯ ವಿಷಯಕ್ಕೆ ಬಂ ಇನ್ನೂ ಅಪಹಾಸ್ಯಕ್ಕೀಡುಮಾಡಲು ಅವಿವೇಕದ ಸಂಗತಿಗಳು ಮತ್ತಷ್ಟಿವೆ.

ಬರಿಯ ವೇಷವನ್ನಷ್ಟೇ ವಿಷ್ಣು ಬದಲಿಸಿದ್ದನೆಂದರೆ ಅದು ನಿಮ್ಮ ಅವಿವೇ ಊಹೆ. ವೇಷ ಬದಲಿಸುವುದೆಂದರೆ, ಬಟ್ಟೆಯೊಳಗಿನ ಲಿಂಗ, ದೇಹದೊಳ ಹಾರ್ಮೋನುಗಳು, ಮಗುವನ್ನು ಹೆರಲು ಅಗತ್ಯವಿರುವ ಅಂಗಾಂಗವ ಬದಲಿಸುವುದೇ? ವೈಪರೀತ್ಯಗಳೊಂದಿಗೆ ಗಂಡು ಹೆಣ್ಣಾದರೆ ಖೋಜ ಎನ್ನುತ್ತೆ ನಿಜಸ್ಥಿತಿ ಅರಿತಿದ್ದರೂ ಶಿವನು ಮೋಹಿನಿಯೆಂಬ ವಿಷ್ಣುವನ್ನು ಮೋಹಿಸ ಹಿಂದೆ ಬಿದ್ದನೇ? ಹಾಗೆ ಹಿಂದೆ ಬಿದ್ದರೂ ಹೇಗೆ ಭೋಗಿಸಿದನೋ? ಮಗು ಎಲ್ಲಿಂದ ಹುಟ್ಟಿತೋ?

ಛೇ! ಹೀಗೆಲ್ಲಾ ಲೌಕಿಕವಾಗಿ, ಕೆಳಮಟ್ಟದಲ್ಲಿ ನಾವು ಯೋಚಿಸಬಾರ ಪಾಯಸದಿಂದ, ಸೂರ್ಯನ ಕಿರಣದಿಂದ, ಮಂತ್ರದಿಂದ, ಮಾವಿನ ಹಣ್ಣಿನಿಂದ ಮಕ್ಕಳನ್ನು ಹೆರುವ ಪೌರಾಣಿಕ ಸಂಸ್ಕೃತಿಯಿರುವ ದೇಶ ನಮ್ಮದು. ಹಾಗ ಮಗುವು ಹೇಗಾದರೂ ಹುಟ್ಟಬಹುದು. ಹುಟ್ಟಿ ಬಂದಿದ್ದೇ ಮುಖ್ಯ ಹೇಗಾದ ಹುಟ್ಟಿಕೊಳ್ಳಲಿ. ಆದರೆ, ಸಮುದ್ರ ಮಥನದ ಕಥೆಯು ಅನೇಕ ಚಿಂತನೆಗಳ ವಿಚಾರಗಳಿಗೆ ಕಾರಣವಾಗುತ್ತದೆ.

ಮಾಧ್ವರಿಗೆ ಹರಿಯೇ ಸರ್ವೋತ್ತಮ. ಮಾಧ್ವ ಪರಂಪರೆಯಿಂದ ಬಂದಂ ಪುರಾಣದ ಕಥೆಗಳು, ಜನಪ್ರಿಯವಾದಂತಹ ಕಥೆಗಳಿಗೂ ಹರಿ ಸರ್ವೋತ್ತಮದ ಪಕ್ಷಪಾತ ಅಭಿಮಾನದ ಲೇಪ ಹಚ್ಚುತ್ತಾರೆ. ಮಾಧ್ವ ಮತ್ತು ವೈಷ್ಣವರು ಇದೇ ಸಮುದ್ರ ಮಥನದ ಕಥೆಯನ್ನು ಹೇಳುವಾ ಕೂರ್ಮಾವತಾರ ತಾಳುವ ವಿಷ್ಣು ತಾನೇ ಎಲ್ಲಾ ಕೀರ್ತಿಯನ್ನೂ ಹೊಂದ ಇಚ್ಛಿಸದೇ ಶಿವನಿಗೆ ವಿಷವನ್ನು ಧರಿಸುವ ಶಕ್ತಿಯನ್ನು ಕೊಟ್ಟು, ವಿಷ ಕುಡಿಯ ಅನುಗ್ರಹಿಸುತ್ತಾನೆ. ವಿಷ್ಣುವಿನ ಭಕ್ತರಿಗೆ ಆನೆಯೊಂದು ಅಟ್ಟಿಸಿಕೊಂಡು ಬಂದ ಜೀವ ಉಳಿಸಿಕೊಳ್ಳಲೂ ಶಿವನ ದೇವಾಲಯವನ್ನು ಹೊಕ್ಕಬಾರದು ಎಂಬ ಶೈವ ಶತ್ರುತ್ವ. ಶೈವ ಮತ್ತು ವೈಷ್ಣವರ ನಡುವಿನ ಶತ್ರುತ್ವವು ಇತಿಹಾ ತಿಳಿಯದಿರುವುದೇನಲ್ಲ, ಅದರ ಚರ್ಚೆಗೆ ಈ ಲೇಖನದಲ್ಲಿ ಸ್ಥಳವೂ ಇ

ದೇವತೆಗಳ ಕಾರ್ಯವಾಸಿ ಪ್ರವೃತ್ತಿ, ದುರಾಸೆ, ವಾಗ್ದಾನ ಭಂಗ ಮ ಕುಯುಕ್ತಿ, ವಿಷ್ಣುವಿನ ಕೀಳುದರ್ಜೆಯ ನಾಟಕ ಮತ್ತು ಅವನ ಲಿಂಗಾಂಗ ಪರಿವರ್ತನೆಯ ಸಿಲ್ಲಿ ಅಂಶಗಳನ್ನು ಬದಿಗಿಟ್ಟು ಅಥವಾ ಪೂರ್ತಿ ಮರೆ ಸಮುದ್ರ ಮಥನದ ಕಥೆಯನ್ನು ಒಂದು ಸಾಂಕೇತಿಕವಾಗಿ ನೋಡಲು ಸಾ

ಇಡೀ ಅಸ್ತಿತ್ವದ ತಿರುಳು ಮತ್ತು ಹರವನ್ನೇ ಅಮೂರ್ತವಾದ ಅಮ ಅಥವಾ ಅಮೃತತ್ವವೆಂದು ಸಂಕೇತಿಸುವುದಾದರೆ, ತರ್ಕ, ವಿಚಾರ, ಚಿ ಆಲೋಚನೆಗಳಿಂದಲೇ ಕೂಡಿರುವ ಮನಸ್ಸೇ ಸಮುದ್ರ. ಆಳವಾದ ಇ ಮೇಲೆ ಪ್ರಶಾಂತ, ಒಳಗೆ ಪ್ರಕ್ಷುಬ್ಧ ಇದರಲ್ಲಿ ಅಮೃತತ್ವವು ಕಳೆದುಹೋಗಿರುವು ಸ್ಥಿತ್ಯಾಧಿಪತಿ ವಿಷ್ಣು ಕೂರ್ಮವಾಗುವುದೆಂದರೆ, ಆಮೆಯು ತನ್ನ ಎ ಇಂದ್ರಿಯಗಳನ್ನು ಒಳಕ್ಕೆಳೆದುಕೊಂಡು, ತನ್ನ ಒಳಗಿನ ಮೃದುತ್ವವನ್ನು ಚಿಪ್ಪಿ ಜೋಪಾನ ಮಾಡಿಕೊಳ್ಳುತ್ತದೆ. ಹಾಗೆಯೇ ಮನವೇ ಮೊದಲಾದ ಇಂದ್ರಿಯಗ ಹರಿಯ ಬಿಡದೇ ನಿಯಂತ್ರಣದಲ್ಲಿಟ್ಟುಕೊಂಡರೆ ಸಂಕಲ್ಪವನ್ನು ಹೊರ ಸದೃಢತೆ ಉಂಟಾಗುತ್ತದೆ. ಮನುಷ್ಯನ ನಿಯಂತ್ರಣಾ ಸ್ಥಿತಿಯೇ ತನ್ನ ಮ ದೃಢ ಸಂಕಲ್ಪವನ್ನು ಹೊರಲು ಸಾಧ್ಯ. ಮಂದರ ಪರ್ವತವೇ ಮಹಾಸಂಕ ಅದು ಕಾಲಘಟ್ಟಗಳ ಸಂಚಲನದಲ್ಲಿ ಬಂಧಿತವಾಗಿರುತ್ತದೆ. ಸರ್ಪವು ಕಾ ಸಂಕೇತ. ನಮ್ಮದೇ ದ್ವಂದ್ವ ಗುಣಗಳು ದೇವತೆಗಳನ್ನೂ ಮತ್ತು ರಾಕ್ಷಸರ ಪ್ರತಿನಿಧಿಸುತ್ತವೆ. ಒಳಿತು-ಕೆಡುಕು, ಕಪ್ಪು ಮತ್ತು ಬಿಳಿ, ಯಿನ್ ಮ ಯಾಂಗ್; ಈ ದ್ವಂದ್ವ ಗುಣಗಳ ಸತತ ಸಂಘರ್ಷಣೆಯಿಂದ ಅಮ ಸಾಕ್ಷಾತ್ಕಾರದ ಪ್ರಕ್ರಿಯೆಯಲ್ಲಿ ಮೊದಲು ಎದುರಾಗುವುದು ಸಂಕಷ್ಟಗ ಪ್ರಾಣವನ್ನೇ ಕಳೆದುಕೊಳ್ಳಬಹುದಾದಂತಹ ಅವಘಡಗಳು. ಅವುಗಳನ್ನು ದೂರ ಅವುಗಳಿಂದ ತಪ್ಪಿಸಿಕೊಳ್ಳದೇ ಸಹಜವಾಗಿ ಎದುರಾಗುವಂತವು ಎಂ ಸ್ವೀಕರಿಸಿದ್ದೇ ಆದಲ್ಲಿ, ಪ್ರಕೃತಿಯೇ ಅದರ ವಿಷಯವನ್ನು ಗಮನಿಸಿಕೊಳ್ಳುತ್ತ ಪ್ರಕೃತಿಯಾದ ಪಾರ್ವತಿಯು ಶಿವನನ್ನು ಉಳಿಸಿದಂತೆ. ಇಷ್ಟಾದನಂತರ ಎಲ್ಲ ಲಾಭವೇ. (ಅಕಲ್ಟ್ ಸೈನ್ಸ್ ಕಡೆಗೆ ಲಕ್ಷ್ಯ ಕೊಟ್ಟರೆ) ಅಸ್ತಿತ್ವದಲ್ಲಿರುವ ಶಕ್ತಿ ತರಂಗಗಳು, ನಾವು ಲಕ್ಷ್ಯಗೊಟ್ಟು ಕೇಂದ್ರೀಕರಿಸಿದ ಶಕ್ತಿಗೆ ಅನುಗುಣವಾ ನಮಗೆ ಬೇಕಾದುದನ್ನೇ, ಒಳಿತಾಗುವುದನ್ನೇ ನಮ್ಮ ಕಡೆಗೆ ಆಕರ್ಷಿಸುತ್ತ ಸಮುದ್ರ ಮಥನದಲ್ಲಿ ಉದ್ಭವಿಸಿದ ಅನೇಕ ಅದ್ಭುತ ವಸ್ತುಗಳಂತೆ. ಅ ತಂತ್ರ ಶಾಸ್ತ್ರದಲ್ಲಿ ಅಥವಾ ಅಕಲ್ಟ್ ಸೈನ್ಸ್‌ನಲ್ಲಿ ಹೇಳಬಹುದಾದ ಸಿದ್ಧಿಗ ನಂತರ ಸಿಕ್ಕ ಭೋಗಾಂಶಗಳಿಗೆ ನೇತು ಬೀಳದೇ, ಅವುಗಳ ಪಾಡಿಗೆ ಅವುಗಳ ಬಿಟ್ಟು ಆಂತರಿಕ ಅಥವಾ ಆಧ್ಯಾತ್ಮಿಕ ಮಂಥನವನ್ನು ಮುಂದುವರಿಸಿದ ನಮ್ಮ ಅಸ್ತಿತ್ವದ ಗಮ್ಯವಾದ ಮಹಾಸ್ತಿತ್ವದ ಕೇಂದ್ರವಾದ, ಬಿಂದುವಾದ ಅಮ ಅಥವಾ ಅಮೃತತ್ವ ಲಭ್ಯ.

...ಹೀಗೆ ಹೇಳಿ, ಒಂದು ಹಂತಕ್ಕೆ ಸಮುದ್ರ ಮಥನದಂತಹ ಮಾಮಿ ಕಥೆಯ ಮರ್ಯಾದೆ ಉಳಿಸಬಹುದು.

ಆದರೆ, ಅದರ ಮುಂದುವರಿದ ಭಾಗ?


ಪೌರಾಣಿಕವಾಗಿ ಅವರು ಸೂಚಿಸುವ ರಾಕ್ಷಸರು, ಅಸುರರು ಯಾರ ಅವರೊಡನೆ ಸುರರು ಎನಿಸಿಕೊಳ್ಳುವವರಿಗೇಕೆ ದ್ವೇಷ ಮತ್ತು ಸಂಘರ್ಷ ಸುರರು ಮತ್ತು ಅಸುರರು ಯಾರೆಂದು ಸ್ಪಷ್ಟವಾಗಿ ತಿಳಿಯುವ ಪ್ರಯ ಮಾಡೋಣ ಮುಂದಿನ ಭಾಗದಲ್ಲಿ.

(ಮುಂದುವರೆಯುವುದು)

ನಾಡಹಬ್ಬದ ಹೆಸರಲ್ಲಿ ದೈವವನ್ನು ಹೇರುವುದು ನ್ಯಾಯವಲ್ಲ

ಪ್ರೊ. ಜಿ.ಎಚ್.ನಾಯಕ್

2010ನೇ ಸಾಲಿನ ಪಂಪ ಪ್ರಶಸ್ತಿಯನ್ನು ಪಡೆದ ಪ್ರೊ. ಜಿ.ಎಚ್.ನಾಯಕ ಪ್ರಾಮಾಣಿಕತೆಗೆ, ನಿಲುವಿಗೆ, ಖಚಿತ ಅಭಿಪ್ರಾಯಕ್ಕೆ ಹೆಸರಾದವರು. ಅವರ ನಿಲುವನ್ನು ಒಪ್ಪದವರೂ ಅವರ ಪ್ರಾಮಾಣಿಕತೆಯನ್ನು ಶಂಕಿಸಲಾರರು. ಅಧ್ಯಾಪಕರಾಗಿ, ಸಂಸ್ಕೃತಿಯ ನಿಜವಾದ ಚಿಂತಕರಾಗಿ, ಕನ್ನಡ ಸಾಹಿತ್ಯದ ಆಳಅಗಲಗಳನ್ನು ನಿಖರವಾಗಿ ತಿಳಿದ ವಿಮರ್ಶಕರಾಗಿ, ಅನೇಕ ಸಾಮಾಜಿಕ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮೀರಾ ನಾಯಕ ಅವರೊಂದಿಗೆ ಮೈಸೂರಿನಲ್ಲಿ ಅರ್ಥಪೂರ್ಣವಾಗಿ ಬದುಕುತ್ತಿರುವವರು ಜಿ.ಎಚ್.ನಾಯಕ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ...ರ್ಣೆಯವರಾದ ಗೋವಿಂದರಾಯ ಹಮ್ಮಣ್ಣ ನಾಯಕ (ಜನನ: 18 ಸೆಪ್ಟೆಂಬರ್ 1935) ಅವರಿಗೆ ವಿ.ಎಂ. ಇನಾಂದಾರ್ ವಿಮರ್ಶೆ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯ ಪ್ರಶಸ್ತಿ, ಜಿ.ಎಸ್.ಶಿವರುದ್ರಪ್ಪ ವಿಮರ್ಶೆ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ದೊರೆತಿವೆ. ಅಮೆರಿಕ, ಇಂಗ್ಲೆಂಡ್ ಮತ್ತು ಚೀನಾಗಳಲ್ಲಿ ನಾಯಕರು ಸರ್ಕಾರದ ಅತಿಥಿಯಾಗಿ ಪ್ರವಾಸ ಮಾಡಿದ್ದಾರೆ. ಸಮಕಾಲೀನ, ಅನಿವಾರ್ಯ, ನಿರಪೇಕ್ಷ, ನಿಜದನಿ, ಸಕಾಲಿಕ, ಗುಣಗೌರವ, ...ಚಂದ್ರ ಕಾವ್ಯ: ಓದು, ವಿಮರ್ಶೆ, ದಲಿತ ಹೋರಾಟ: ಗಂಭೀರ ಸವಾಲುಗಳು, ಸ್ಥಿತಿಪ್ರಜ್ಞೆ, ... ಮತ್ತೆ ಪಂಪ, ಸಾಹಿತ್ಯ ಸಮೀಕ್ಷೆ, ಉತ್ತರಾರ್ಧ ಪ್ರಕಟವಾಗಿರುವ ವಿಮರ್ಶೆಯ ಕೃತಿಗಳು. ...ವೆ ಅವರ ಸಮಗ್ರ ಕೃತಿಗಳನ್ನೊಳಗೊಂಡ ...ಲ್ಯ ಮಾರ್ಗ' ಕೂಡ ಪ್ರಕಟವಾಗಿದೆ. ಇವರ ...ವು ಸಂಪಾದಿತ ಕೃತಿಗಳೂ ಮನ್ನಣೆಗೆ ...ವಾಗಿವೆ.



ಕರ್ನಾಟಕ ಸರ್ಕಾರ ಕೊಡುತ್ತಿರುವ ಪ್ರಶಸ್ತಿಗಳಲ್ಲಿ ... ಪ್ರಶಸ್ತಿ ಪ್ರಮುಖವಾದ ಪ್ರಶಸ್ತಿ. ಅದಕ್ಕೊಂದು ...ಯಿದೆ; ಗೌರವವಿದೆ. ಪಂಪ ಪ್ರಶಸ್ತಿ ದೊರೆತವರ ... ಮತ್ತು ಸಾಧನೆಯನ್ನು ಕರ್ನಾಟಕದ ಜನ ...ಭಾವಿಸುವ ಕ್ರಮದಲ್ಲಿಯೇ ಈ ಅಂಶಗಳು ...ಕಾಣಿಸುತ್ತವೆ. ಈ ಮಹತ್ವದ ಪ್ರಶಸ್ತಿಯನ್ನು ...ಮಾಡಲು ಪ್ರತಿ ವರ್ಷ ಒಂದು ಪರಿಣತರ ಸಮಿತಿ ...ತ್ತದೆ. ಈ ಸಮಿತಿ ಆಯ್ಕೆಮಾಡಿದ ವ್ಯಕ್ತಿಗೆ ಸರ್ಕಾರ ... ಪ್ರಶಸ್ತಿಯನ್ನು ನೀಡಿ ಜನತೆಯ ಗೌರವವನ್ನು ...ಸುತ್ತದೆ. ಅನೇಕ ವರ್ಷಗಳಿಂದ ಇದೊಂದು ...ದಾಯದಂತೆ ನಡೆದುಕೊಂಡು ಬಂದಿದೆ.

1987ರಲ್ಲಿ ಕರ್ನಾಟಕ ಸರ್ಕಾರ ಈ ಪ್ರಶಸ್ತಿಯನ್ನು ...ತು. 1996ರ ವರೆಗೆ ಅತ್ಯುತ್ತಮ ಕನ್ನಡ ಕೃತಿಗೆ ...ಲಾಗಿದ್ದ ಈ ಪ್ರಶಸ್ತಿ ಮುಂದೆ ತನ್ನ ನಿಯಮವನ್ನು ...ಯಿಸಿತು. ಕೃತಿಗಳ ಬದಲು ವ್ಯಕ್ತಿಗಳನ್ನು ಅವರ ...ಮಾನದ ಸಾಧನೆಯ ಆಧಾರದ ಮೇಲೆ ಪರಿಗಣಿಸಿ ... ವರ್ಷ ಸೃಜನಶೀಲಕ್ಕೆ, ಮರುವರ್ಷ ಸೃಜನೇತರ ...ಕ್ಕೆ ಪ್ರಶಸ್ತಿ ಸಲ್ಲುತ್ತದೆ. ಪಂಪ ಪ್ರಶಸ್ತಿಯನ್ನು ಪಡೆದ ...ಲಿಗರು- ಕುವೆಂಪು; ಅವರ 'ಶ್ರೀರಾಮಾಯಣ ...ನಂ' ಕೃತಿಗೆ ಈ ಪ್ರಶಸ್ತಿ ದೊರಕಿತು. ತೀನಂಶ್ರೀ, ...ತ, ಭೂಸ್ನೂರಮಠ, ಪುತಿನ, ಮೂರ್ತಿ ರಾವ್, ..., ಸೇಡಿಯಾಪು, ಕೆಎಸ್‌ನ, ಕಲ್ಬುರ್ಗಿ, ಜಿಎಸ್ಎಸ್, ...ಗೌ, ಕಣವಿ, ಎಲ್.ಬಸವರಾಜು, ತೇಜಸ್ವಿ, ...ನಂದಮೂರ್ತಿ, ಕಂಬಾರ, ನಾಗೇಗೌಡ, ಭೈರಪ್ಪ, ...ರ್, ಚಿತ್ತಾಲ, ವೆಂಕಟಾಚಲಶಾಸ್ತ್ರಿ ಅವರಿಗೆ ಈ ... ಸಂದಿದೆ. 2010ನೇ ಸಾಲಿಗೆ ಪ್ರೊ. ಜಿ.ಎಚ್.ನಾಯಕ ... 2011ನೇ ಸಾಲಿಗೆ ಬರಗೂರು ರಾಮಚಂದ್ರಪ್ಪ ...ಯಾದರು. ಬರಗೂರು ಅವರಿಗೆ ಈಗಾಗಲೇ ಪ್ರಶಸ್ತಿ ...ನವಾಗಿದೆ. ಆದರೆ ಪ್ರೊ.ನಾಯಕರ ಪಂಪ ಪ್ರಶಸ್ತಿ ...ನ ವಿವಾದಕ್ಕೆ ಕಾರಣವಾಗಿದೆ. ಈ ವಿವಾದಕ್ಕೆ ಬೇರೇನೂ ...ವಾಗದೆ, ಪ್ರಶಸ್ತಿಯ ವಿತರಣೆಗೆ ಸಂಬಂಧಿಸಿದಂತೆ ...ರ ಮತ್ತು ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ...ನಳಿಕೆಯೇ ಕಾರಣವಾಗುತ್ತಿರುವುದು ಒಂದು ...ದಂತೆಯೇ ಕಾಣಿಸುತ್ತಿದೆ.

ಈಗ ಎದ್ದಿರುವ ವಿವಾದವನ್ನೇ ನೋಡಿ. ವಿಮರ್ಶಕ ಜಿ.ಎಚ್.ನಾಯಕರ ಬಗ್ಗೆ ಕನ್ನಡಿಗರು ತೋರಿಸುತ್ತ ...ರುವ ಗೌರವ ದೊಡ್ಡದೇ. ಸಾಹಿತ್ಯ ಕ್ಷೇತ್ರದಲ್ಲಿ, ...ಷವಾಗಿ ಕನ್ನಡ ವಿಮರ್ಶೆಯ ಕ್ಷೇತ್ರದಲ್ಲಿ ತಮ್ಮ ...ಗ್ರಹದ ನಿಲುವು, ಗ್ರಹಿಕೆ, ಒಳನೋಟ, ಪ್ರಾಮಾಣಿಕತೆ ... ದಿಟ್ಟತನಗಳಿಂದ ಪ್ರೊ. ನಾಯಕರು ಕಳೆದ ಐದಾರು ...ಗಳ ಅವಧಿಯಲ್ಲಿ ಮಾಡಿರುವ ಕೆಲಸ ಮತ್ತು ಸಾಹಿತ್ಯ ...ಕ್ಕೆ ನೀಡಿರುವ ಕೊಡುಗೆ ಮಹತ್ವಪೂರ್ಣವಾದದ್ದು. ...ಕರ ಈ ಕೊಡುಗೆ ಕನ್ನಡ ವಿಮರ್ಶೆಯ ಪರಿಧಿಯನ್ನು ...ಸಿದೆ ಎಂಬುದರಲ್ಲಿ ಯಾವ ಅನುಮಾನವೂ ...ರದು. ನವ್ಯ ವಿಮರ್ಶಕರಾಗಿ ಗುರುತಿಸಲ್ಪಟ್ಟ ...ಕರು, ಕನ್ನಡ ಸಾಹಿತ್ಯ ಪರಂಪರೆಗೆ ಎದುರಾದ ಕ್ರಮ ... ಕುತೂಹಲಕಾರಿಯಾಗಿದೆ. ಕನ್ನಡದ ಆದಿಕವಿ ...ನನ್ನು ಕುರಿತು ನಾಯಕರು ಬರೆದಿರುವ ಲೇಖನಗಳು ...ಸಾತಿಗೆ ಪುರಾವೆ ಒದಗಿಸುತ್ತವೆ. ಪಂಪನನ್ನು ಕುರಿತ ...ಕರ ಲೇಖನಗಳ ಸಂಖ್ಯೆ ಹೆಚ್ಚಿಲ್ಲ, ಆದರೆ ಈ ...ನಗಳ ಮೂಲಕ ನಾಯಕರು ಎತ್ತಿರುವ ಪ್ರಶ್ನೆಗಳು ... ಬೆಲೆಯುಳ್ಳವು. ಪಂಪನನ್ನು ಈವರೆಗೆ ಗ್ರಹಿಸಿರುವ ... ಪರಂಪರೆಗೇ ಎದುರಾಗಿ ನಿಂತು ತಮ್ಮ ನಿಲುವನ್ನು ...ಕೊಂಡಿರುವ ರೀತಿ, ಹೊಸ ಒಳನೋಟಗಳನ್ನು ...ಟ್ಟಿರುವ ಬಗೆ ನಾಯಕರ ಸಾಮರ್ಥ್ಯ, ಪ್ರತಿಭೆಗಳನ್ನು ...ಸುತ್ತವೆ. ಇದನ್ನು ಗಣನೆಗೆ ತೆಗೆದುಕೊಂಡೇ ...ಡಪ್ಪ ಬೋರ ಪಾಟೀಲ ಅವರ ಅಧ್ಯಕ್ಷತೆಯುಳ್ಳ ...ಮಿತಿ, ನಾಯಕರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿತು.

ಇದು ಅರ್ಹರಿಗೆ ಸಂದ ಗೌರವ ಎಂದು ಕನ್ನಡ ಸಾಹಿತ್ಯ ಪ್ರೇಮಿಗಳು ಮೆಚ್ಚಿಕೊಂಡರು.

ಇದೆಲ್ಲವೂ ಸರಿ. ಆದರೆ ಈ ಪ್ರಶಸ್ತಿಯನ್ನು ಗೌರವಯುತವಾಗಿ ವಿತರಿಸುವಲ್ಲಿ ಸರ್ಕಾರ, ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಡವಿದ್ದು ಅನಗತ್ಯ ಗೊಂದಲವನ್ನು ಹುಟ್ಟುಹಾಕಿತು. ಅಷ್ಟೇ ಅಲ್ಲ, ಯಾವ ಪ್ರಶಸ್ತಿಗೂ ಹಲುಬದೆ, ತಮ್ಮ ಬರಹ, ಬದುಕು, ಮೌಲ್ಯಗಳನ್ನು ಪ್ರಾಮಾಣಿಕ ನೆಲೆಯಲ್ಲಿ ಕಟ್ಟಿಕೊಂಡು ಬಂದಿರುವ ಪ್ರೊ. ನಾಯಕರಿಗೆ ಈ ಪ್ರಶಸ್ತಿ ಸಂತೋಷವನ್ನು ತರುವ ಬದಲು ನೋವನ್ನು ಉಂಟುಮಾಡಿತು.

ಆದದ್ದಾದರೂ ಏನು?

2010ನೇ ಸಾಲಿನ ಪ್ರಶಸ್ತಿಗೆ ಪ್ರೊ. ನಾಯಕರನ್ನು ಸಮಿತಿ ಆಯ್ಕೆ ಮಾಡಿದ್ದು 2012 ರಲ್ಲಿ. (2012ರ ಮೇ 14 ರಂದು) ಮಾಧ್ಯಮಗಳು ತಕ್ಷಣವೇ ಈ ಸುದ್ದಿಯನ್ನು ಪ್ರಕಟಿಸಿದವು. ಸುದ್ದಿ ಪ್ರಕಟವಾಗುತ್ತಿದ್ದಂತೆಯೇ ನಾಯಕರ ಮಿತ್ರರು, ಸಾಹಿತ್ಯಪ್ರೇಮಿಗಳು, ಬಂಧುಬಳಗದವರು, ಶಿಷ್ಯರು ಹೀಗೆ ನಿತ್ಯವೂ ಹಲವರ ಫೋನುಗಳು ಬರುವುದು ಆರಂಭವಾಯಿತು. ಆದರೆ ಸರ್ಕಾರದಿಂದ ಅಧಿಕೃತ ಮಾಹಿತಿಯೇ ಇಲ್ಲದ ಕಾರಣ (ಈ ಸಂಗತಿ ತಿಳಿದದ್ದು 2012ರ ಜೂನ್ ಕೊನೆಯ ವಾರದಲ್ಲಿ) ನಾಯಕರು ಅನಗತ್ಯ ಮುಜುಗರವನ್ನು ಅನುಭವಿಸಬೇಕಾಯಿತು. ಈ ವಿಳಂಬದಂತೆಯೇ ಪ್ರಶಸ್ತಿ ಪ್ರದಾನವೂ ಆಮೆ ನಡಿಗೆಯನ್ನೇ ಅನುಸರಿಸಿತು.

2012ರ ನವೆಂಬರ್ 1 ರಂದು ಪಂಪನ ಹುಟ್ಟಿದ ಊರು ಅಣ್ಣಿಗೇರಿಯಲ್ಲಿ (ಧಾರವಾಡ ಜಿಲ್ಲೆ) ಸಭಾಭವನವೊಂದನ್ನು ಆಗಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಿದರು. ಅಲ್ಲಿಯೇ ಪಂಪ ಪ್ರಶಸ್ತಿಯನ್ನು ಪ್ರದಾನಮಾಡಿದ್ದರೂ, ಅದಕ್ಕೊಂದು ಮಹತ್ವ ಒದಗಿಬರುತ್ತಿತ್ತು. ಆದರೆ ಅದೇನೂ ಮಾಡದೆ ಸರ್ಕಾರ ದಿವ್ಯ ಮೌನವನ್ನು ವಹಿಸಿತು.

ಬನವಾಸಿಯಲ್ಲಿ ನಡೆಯುವ ಕದಂಬೋತ್ಸವದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು, ಎಂದು ಸಂಸ್ಕೃತಿ ಇಲಾಖೆ ನಾಯಕರಿಗೆ ತಿಳಿಸಲು ಇನ್ನೆಷ್ಟೋ ತಿಂಗಳು ಬೇಕಾದವು ತಮ್ಮ ತವರು ಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಪ್ರಶಸ್ತಿ ಪ್ರದಾನವಾಗುತ್ತದೆಂಬ ಸಮಾಧಾನ ಮತ್ತು ಸಂತೋಷವನ್ನು ನಾಯಕರು ಸಹಜವಾಗಿಯೇ ಅನುಭವಿಸಿದರು. ಆದರೆ ಕದಂಬೋತ್ಸವವೇ ನಡೆಯಲಿಲ್ಲ.

ರಾಜ್ಯ ವಿಧಾನ ಸಭೆಗೆ ಚುನಾವಣೆ ಯಾವುದೇ ಕ್ಷಣದಲ್ಲಿ ಘೋಷಣೆಯಾಗಿಬಿಡಬಹುದು ಎಂಬ ಆತಂಕ ಆರಂಭವಾಗುತ್ತಿದ್ದಂತೆಯೇ ಭಾರತೀಯ ಜನತಾ ಪಕ್ಷದ ಸರ್ಕಾರ ಪ್ರಶಸ್ತಿ ಪ್ರದಾನಕ್ಕೆ ಮುಂದಾಯಿತು. ಎಲ್ಲ ಪ್ರಶಸ್ತಿಗಳನ್ನೂ ಒಂದೇ ದಿನದಲ್ಲಿ ಮತ್ತು ಒಂದೇ ವೇದಿಕೆಯಲ್ಲಿ ವಿತರಿಸಿ ಮೆರೆಯಬೇಕೆಂದುಕೊಂಡ ಸರ್ಕಾರ ತರಾತುರಿಯಲ್ಲಿ ಈ ಸಮಾರಂಭಕ್ಕೆ ಸೂಚನೆ ನೀಡಿತು. ಅದರಂತೆ 2013ರ ಮಾರ್ಚ್ 21 ರಂದು ಪ್ರಶಸ್ತಿಗಳನ್ನು ಬೆಂಗಳೂರಿನಲ್ಲಿ ಪ್ರದಾನ ಮಾಡಲು ನಿರ್ಧರಿಸಲಾಯಿತು.

ಈ ಮಾಹಿತಿಯನ್ನು ತಿಳಿಸಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ತಂತಿ ಸಂದೇಶ ನಾಯಕರಿಗೆ ಕಳುಹಿಸಿದ್ದು ಮಾರ್ಚ್ 19ರಂದು; ಅದರ ಮರುದಿನವೇ ಅಧಿಕೃತ ಪತ್ರವೂ ಇಲಾಖೆಯಿಂದ ಬಂತು. ಜೊತೆಗೆ ದೂರವಾಣಿ ಕರೆ. ನಾಳೆಯೇ ಪ್ರಶಸ್ತಿ ವಿತರಣೆ, ಬಂದುಬಿಡಿ ಎನ್ನುವ ಗಡಿಬಿಡಿ. ಬೇಸರದಿಂದ ನಾಯಕರು ಕೊಟ್ಟ ಉತ್ತರ: 'ಬಟ್ಟೆಯನ್ನು ಇಸ್ತ್ರಿ ಮಾಡಿಸಿಕೊಳ್ಳುವುದಕ್ಕಾದರೂ ಟೈಂ ಬೇಡವೇ?'

ನಾಯಕರು ಕೊಟ್ಟ ಉತ್ತರ ತಮಾಷೆಯಂತೆ ಕಂಡರೂ, ಅದರಲ್ಲಿ ಘನತೆಯುಳ್ಳ ಲೇಖಕನೊಬ್ಬನ ಸಾತ್ವಿಕ ಕೋಪವಿತ್ತು. ನೊಂದ ನಾಯಕರು ಆ ಸಮಾರಂಭಕ್ಕೆ ಹೋಗಲಿಲ್ಲ.


ಹೊಸ ಸರ್ಕಾರ ಬಂತು. ಸೆಕ್ಯೂಲರ್ ತತ್ವವನ್ನು ಗೌರವಿಸುವ, ಸಮಾಜವಾದಿ ಹಿನ್ನೆಲೆಯಿಂದ ರಾಜಕಾರಣಕ್ಕೆ ಬಂದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದರು. ಕಲಾವಿದೆ ಉಮಾಶ್ರೀ ಅವರೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಸ್ತುವಾರಿಯನ್ನು ವಹಿಸಿಕೊಂಡರು. ಆದರೇನು? ಇಲಾಖೆಯ ಗೊಂದಲಗಳು ಮತ್ತೂ ಮುಂದುವರಿದವು. ಪ್ರೊ. ನಾಯಕರ ಮೊಮ್ಮಗಳ ಮದುವೆಗೆ ಅವರ ಮನೆ ಸುಣ್ಣಬಣ್ಣ ಬಳಿದುಕೊಳ್ಳುತ್ತಿರುವ ಹೊತ್ತಲ್ಲಿ ಮತ್ತು ನಾಯಕರು ಮೈನರ್ ಆಪರೇಷನ್‌ಗೆ ಒಳಗಾಗಿದ್ದ ಸಂದರ್ಭದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 'ನಿಮ್ಮ ಮನೆಗೆ ಬಂದು ಪ್ರಶಸ್ತಿ ವಿತರಣೆ ಮಾಡುತ್ತೇವೆ, ಆಗಬಹುದೇ?' ಎಂದಿತು. ಅದು ಸಾಧ್ಯವಾಗದ ಸನ್ನಿವೇಶ. ನಾಯಕರು 'ಸದ್ಯ ಬೇಡ, ನಾಲ್ಕಾರು ದಿನಗಳ ನಂತರವಾದರೆ ಆಗಬಹುದು' ಎಂದರು. ಮತ್ತೆ ದಿನಗಳು ಸರಿದು ಹೋದವು.

ಈಗ ನಾಡಹಬ್ಬ ದಸರಾದಲ್ಲಿಯೇ ನಿಮಗೆ ಪ್ರಶಸ್ತಿ ವಿತರಿಸುತ್ತೇವೆ, ಆಗಬಹುದೇ? ಎನ್ನುವ ಪ್ರಸ್ತಾಪ ಬಂತು. ನಾಡಹಬ್ಬವನ್ನು ತಾತ್ವಿಕ ನೆಲೆಯಲ್ಲಿ ವಿರೋಧಿಸುತ್ತ ಬಂದ ನಾಯಕರು ಅದೇ ಹಬ್ಬದಲ್ಲಿ ಪ್ರಶಸ್ತಿ ಸ್ವೀಕರಿಸುವುದು ಹೇಗೆ ಸಾಧ್ಯ? ಇದನ್ನೇ ನಾಯಕರು ತಿಳಿಸಿದರು. ಸರ್ಕಾರ ಮತ್ತೆ ಮೌನವಾಗಿದೆ. ಈ ಹಿನ್ನೆಲೆಯಲ್ಲಿ ನಾಯಕರೊಂದಿಗೆ ನಡೆದ ಮಾತುಕತೆ ಇಲ್ಲಿದೆ:

ಪ್ರಶ್ನೆ: ನಿಮ್ಮ ನಿಲುವು ಗೊತ್ತಿದ್ದರೂ ಮತ್ತೆ ಕೇಳುತ್ತಿದ್ದೇನೆ (ಓದುಗರ ದೃಷ್ಟಿಯಿಂದ). ನಾಡಹಬ್ಬವಾದ ಮೈಸೂರು ದಸರಾವನ್ನು ನೀವು ಏಕೆ ವಿರೋಧಿಸುತ್ತಿದ್ದೀರಿ?

ನಾಯಕ: ನನ್ನ ಈ ವಿರೋಧ ಈಗಿನದಲ್ಲ. 1995ರಲ್ಲಿಯೇ ನಾನು ಈ ವಿರೋಧವನ್ನು ವ್ಯಕ್ತಪಡಿಸಿದ್ದೆ. ಮುಂದೆ 1997ರಲ್ಲಿ 'ದಸರಾ ಮಹೋತ್ಸವ ವಿಚಾರ ಸಂಕಿರಣ'ದಲ್ಲಿ ನನ್ನ ಈ ನಿಲುವನ್ನು ಪ್ರಕಟಿಸಿ ಒಂದು ಟಿಪ್ಪಣಿಯನ್ನೂ ಮಂಡಿಸಿದ್ದೆ. ಈ ಟಿಪ್ಪಣಿಯನ್ನೇ ಆಗಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರಿಗೆ 1.8.1997 ರಂದು ಪರಿಶೀಲನೆಗೆಂದು ಕಳುಹಿಸಿದ್ದೆ.

ನಾನು ಸಂಸ್ಕೃತಿ/ಪರಂಪರೆ ವೈವಿಧ್ಯಗಳ ವಿರೋಧಿಯಲ್ಲ. ಪರಂಪರೆ ಎಂಬುದು ಎಂದೋ ಆಗಿಹೋಗಿರುವಂಥದಲ್ಲ; ನಿರಂತರವಾಗಿ ಆಗುವ ಪ್ರಕ್ರಿಯೆ. ತನ್ನ ಇರುವಿಕೆಯ ಅರ್ಥಪೂರ್ಣತೆಯನ್ನು ಸಮರ್ಥಿಸಿಕೊಳ್ಳಲಾಗದ ಯಾವ ಒಂದು ಪರಂಪರೆಯೂ ಉಳಿಯಲಾರದು. ನಮ್ಮ ದೇಶ ಸ್ವತಂತ್ರವಾಗಿ ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಮೇಲೆ ಮಹಾರಾಜರು ಜಂಬೂಸವಾರಿಯಲ್ಲಿ ಹೊರಡುವುದನ್ನು ಸರಕಾರ



• ಜೆ.ಪಿ.ಬಸವರಾಜು

ನ್ಯಾಯವಾಗಿಯೇ ರದ್ದುಮಾಡಿತು. ಆದರೆ ಮಹಾರಾಜರ ಬದಲು ಹಿಂದೆ (ಅಂದರೆ ರಾಜರ ಕಾಲದಲ್ಲಿ) ಇರದಿದ್ದ ಚಾಮುಂಡೇಶ್ವರಿಯ ಜಂಬೂ ಸವಾರಿಯನ್ನು ಸರಕಾರ ಹೊಸದಾಗಿ ಹುಟ್ಟುಹಾಕಿತು.

ದಸರೆ ಖಾಸಗಿ ವ್ಯಕ್ತಿಗಳ ಅಥವಾ ಒಂದು ಜನಸಮುದಾಯದವರ ಖರ್ಚುವೆಚ್ಚದಲ್ಲಿ ನಡೆಯುವ ಹಬ್ಬವಾಗಿಲ್ಲ. ಸರಕಾರವೇ ಯಜಮಾನಿಕೆ ವಹಿಸಿ ದಸರಾವನ್ನು ನಾಡಿನ ಎಲ್ಲ ಜನತೆಯ 'ನಾಡಹಬ್ಬ' ಎಂದು ಘೋಷಿಸಿ ಆಚರಿಸುತ್ತಿದೆ; ಇದು ಯಾವ ದೈವದ ಹಬ್ಬವೂ ಅಲ್ಲ, ಎಲ್ಲ ನಾಡವರ ನಾಡಹಬ್ಬ. ನಮ್ಮ ಸಂವಿಧಾನದ ಪ್ರಕಾರ ಸರಕಾರ ಯಾವ ಜಾತಿಮತಕ್ಕೂ ಸೇರಿದ್ದಲ್ಲ; ಸೇರಿದ್ದಾಗ ಬಾರದು. ಮತಧರ್ಮ ನಿರಪೇಕ್ಷವಾದ ಸಮಾಜವಾದೀ ಸಮಾಜ ನಿರ್ಮಾಣವು ಧ್ಯೇಯೋದ್ದೇಶವಾಗಿರುವ ಸಂವಿಧಾನದ ವಿಧಿ ವಿಧಾನಗಳಂತೆ ಆಡಳಿತ ನಡೆಸುವುದಾಗಿ ಪ್ರಮಾಣವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡವರು ಯಾವುದೇ ಮತಧರ್ಮದವರ ನಂಬಿಕೆಯ ದೈವವನ್ನು ಮೆರವಣಿಗೆಯಲ್ಲಿ ಮೆರೆಸುವುದು ಸಂವಿಧಾನ ಸಮ್ಮತವಾಗುವುದಿಲ್ಲ; ಜನತೆಗೆ ನೀಡಿದ ವಚನವನ್ನು ಪಾಲಿಸಿದಂತೆಯೂ ಆಗುವುದಿಲ್ಲ.

ಸರಕಾರವೇ ಹುಟ್ಟುಹಾಕಿದ, ಚಾಮುಂಡೇಶ್ವರಿಯನ್ನು ಮೆರವಣಿಗೆಯಲ್ಲಿ ಒಯ್ಯುವ ಈ ಹೊಸ ಸಂಪ್ರದಾಯ ಬಹುಸಂಖ್ಯಾತರ ದೈವವನ್ನು ಮೆರೆಸುವುದಾದ್ದರಿಂದ ಚರ್ಚೆಗೆ, ವಿರೋಧಕ್ಕೆ ಬಹಿರಂಗವಾಗಿ ಗುರಿಯಾಗಿಲ್ಲದಿರಬಹುದು. ಇದರ ಬದಲು ಅಥವಾ ಇದರ ಜೊತೆಗೆ ಅಲ್ಪಸಂಖ್ಯಾತರ ದೈವಗಳನ್ನೂ ಜಂಬೂ ಸವಾರಿಯಲ್ಲಿ ಕೊಂಡೊಯ್ದರೆ ಬಹುಸಂಖ್ಯಾತ ಧರ್ಮದ ಸಂಪ್ರದಾಯವಾದಿಗಳ ಪ್ರತಿಕ್ರಿಯೆ ಏನಾಗಿರುತ್ತಿತ್ತು? - ಈ ಪ್ರಶ್ನೆಯನ್ನೂ ತೆರೆದ ಮನಸ್ಸಿನಿಂದ ಕೇಳಿಕೊಳ್ಳುವ ಅಗತ್ಯವಿತ್ತು; ಈಗಲೂ ಇದೆ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ರಾಷ್ಟ್ರೀಯತೆಯ ಹೆಸರಿನಲ್ಲಿ ಭಾರತೀಯರನ್ನೆಲ್ಲ ಒಂದುಗೂಡಿಸುವ ಉದ್ದೇಶದಿಂದ ಗಣೇಶನ ಉತ್ಸವವನ್ನು ರಾಷ್ಟ್ರೀಯ ಉತ್ಸವವೆಂದು ಲೋಕಮಾನ್ಯ ತಿಲಕರು ಹುಟ್ಟುಹಾಕಿದರು. ಕಾಲಕ್ರಮದಲ್ಲಿ ಅದು ಧಾರ್ಮಿಕ ಮೂಲಭೂತವಾದಿಗಳಿಂದ ಆಗಾಗ ಮತೀಯ ಗಲಭೆಗಳಿಗೆ ಕಾರಣವಾಗುತ್ತ ಬಂದದ್ದು ಈಗಲೂ ಅಂಥ ಭಯ ಉಳಿದೇ ಇರುವುದು ಆಧುನಿಕ ಭಾರತದ ಚರಿತ್ರೆಯ ಭಾಗವಾಗಿ ಹೋಗಿದೆ.


ಮಹಾತ್ಮ ಗಾಂಧಿ ರಾಮರಾಜ್ಯದ ಕಲ್ಪನೆಯನ್ನು ಬಿತ್ತಿದ್ದರು. ಆಗ ಅದು ಉನ್ನತ ಮೌಲ್ಯಗಳನ್ನು ಎತ್ತಿಹಿಡಿಯುವ, ಅವುಗಳ ಬಗ್ಗೆ ಅಚಲ ನಿಷ್ಠೆ ತೋರುವ ಧರ್ಮರಾಜ್ಯ ಕಲ್ಪನೆಯನ್ನು ಪ್ರತಿಪಾದಿಸುವ ಸದಾಶಯ ಉಳ್ಳದ್ದಾಗಿತ್ತು. ಈಗ ಮೂಲಭೂತವಾದಿಗಳ ಕೈಗೆ ಸಿಕ್ಕು ಆ ರಾಮ, ಆ ರಾಮರಾಜ್ಯದ ಕಲ್ಪನೆ ಯಾವ ರೂಪ ತಳೆದಿದೆ, ತಳೆಯುತ್ತಿದೆ ಎಂಬ ಬಗ್ಗೆ ಸ್ವಲ್ಪ ಯೋಚಿಸಬೇಕು.

ಚರಿತ್ರೆ ಕಲಿಸಿದ ಇಂಥ ಅಹಿತಕರ ಪಾಠ, ಸೂಚನೆಗಳನ್ನು ಜನತೆ ಮರೆಯಬಾರದು; ಜಾತಿ-ಮತಧರ್ಮ ನಿರಪೇಕ್ಷ (ಸೆಕ್ಯುಲರ್) ಸಮಾಜವಾದೀ ಸಂಸ್ಕೃತಿ ನಿರ್ಮಾಣದ ಹೊಣೆಯಿರುವ ಸರಕಾರ ನಡೆಸುವವರಂತೂ ಮರೆಯಲೇಬಾರದು.

ವಿವಿಧ ದೇಶಗಳಲ್ಲಿ ಭಾರತ ನಡೆಸುತ್ತ ಬಂದಿರುವ 'ಭಾರತ ಉತ್ಸವ'ಕ್ಕೆ ಯಾವುದೇ ಮತಧರ್ಮದ ಸೋಂಕು ಇಲ್ಲ. ಕರ್ನಾಟಕ ಸರಕಾರವೇ ಕರಾವಳಿ ಉತ್ಸವ, ಮಲೆನಾಡು ಉತ್ಸವ ಇತ್ಯಾದಿ ಉತ್ಸವಗಳನ್ನು ಯಾವ ಮತಧರ್ಮದ, ಯಾವ ದೈವದ ಸೋಂಕೂ ಇಲ್ಲದಂತೆ ನಡೆಸುತ್ತಿದೆ. ಜನವರಿ 26ರಂದು ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವಕ್ಕೂ ಯಾವುದೇ ಮತಧರ್ಮದ, ದೈವದ ಸೋಂಕೂ ಇಲ್ಲ. ಈ ಎಲ್ಲ ಉತ್ಸವಗಳಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಇನ್ನೊಂದು ಅಂಶವನ್ನೂ ನಾವು ಮರೆಯಬಾರದು: ಯಾವುದೇ ಒಂದು ಧರ್ಮದಲ್ಲಿ ನಂಬಿಕೆಯಿಟ್ಟು ನಡೆದು ಕೊಳ್ಳುವ ಹಕ್ಕು ಇರುವಂತೆಯೇ, ಯಾವ ಧರ್ಮ, ದೈವದಲ್ಲಿ ನಂಬಿಕೆ ಇಲ್ಲದವರೂ ಈ ದೇಶದಲ್ಲಿ ಸತ್ಪ್ರಜೆಗಳಾಗಿ ಇರುವ ಹಕ್ಕು ಇದೆ. ಅಂಥವರ ಮೇಲೆ ಈ ದೈವದ ಹಬ್ಬವನ್ನು ಹೇರುವುದು ಯಾವ ನ್ಯಾಯ? ಹೀಗೆ ನಂಬಿಕೆ ಇಲ್ಲದವರ ಸಂಖ್ಯೆ ಹೆಚ್ಚಿಲ್ಲದಿರಬಹುದು. ಸಂಖ್ಯೆಯನ್ನು ಪರಿಗಣಿಸಲು ಇದು ಚುನಾವಣೆಯಲ್ಲ, ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ದೈವದಲ್ಲಿ ನಂಬಿಕೆ ಇಲ್ಲದವರ ಮೇಲೆ ನಾಡಹಬ್ಬದ ಹೆಸರಲ್ಲಿ ದೈವವನ್ನು ಹೇರುವುದು ಮಾನವ ಹಕ್ಕುಗಳ ಉಲ್ಲಂಘನೆಯೂ ಆಗುತ್ತದೆ. ಇದನ್ನೂ ಸರ್ಕಾರ ಗಮನಿಸಬೇಕಾಗುತ್ತದೆ.

• ಜೆ.ಪಿ.ಬಸವರಾಜು

(ಸಂದರ್ಶನದ 2ನೇ ಭಾಗ ಮುಂದಿನ ವಾರ)



ಬ್ರಾಹ್ಮಣ್ಯ-ಬ್ರಾಹ್ಮಣಶಾಹಿ-ಹಿಂದೂತ್ವ

'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂದು ಬಣ್ಣಿಸಲಾಗುವ 'ಹಿಂದೂತ್ವ' ಸಿದ್ಧಾಂತ ವಾಸ್ತವವಾಗಿ ಬ್ರಾಹ್ಮಣ್ಯದ ಪ್ರತಿಪಾದನೆಯಾಗಿದೆ. ಇದರ ಪ್ರತಿಪಾದಕರು 'ಹಿಂದೂತ್ವ' ಹಿಂದೂ ಧರ್ಮದ ಸಾರವಾಗಿದ್ದು ಅಖಂಡ ಆರ್ಯಾವರ್ತ ಹಿಂದೂತ್ವದ ಮೇಲೆ ನಿಂತಿದೆ ಎಂದು ವಾದಿಸುತ್ತಾರೆ.

ಆದರೆ ಈ 'ಹಿಂದೂತ್ವ' ವಾಸ್ತವದಲ್ಲಿ ಜಾತಿ ವ್ಯವಸ್ಥೆಯನ್ನು ಎತ್ತಿ ಹಿಡಿಯುತ್ತದೆ. ಮನುಷ್ಯನ ಹುಟ್ಟಿನಿಂದಲೇ ಆತನ ಜಾತಿಯನ್ನು ನಿರ್ಧರಿಸುವ ಹಾಗೂ ಮೇಲು-ಕೀಳೆಂಬ ಅಸಂಖ್ಯ ಶ್ರೇಣಿಗಳನ್ನು ಹೊಂದಿರುವ ಈ ಹಿಂದೂತ್ವ ಇಡೀ ಸಮಾಜವನ್ನು ಮತ್ತು ದೇಶವನ್ನು ಛಿದ್ರಗೊಳಿಸುವ ತತ್ವವಾಗಿದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಹೀಗೆ ಬಹುಸಂಖ್ಯಾತ ಜನತೆಯನ್ನು ಶೋಷಣೆಗೆ ಒಳಪಡಿಸಿರುವ ಹಿಂದೂತ್ವವು ತನ್ನ ಆಂತರ್ಯದಲ್ಲೇ ಪ್ರಜಾಸತ್ತೆ ವಿರೋಧಿಯಾಗಿದೆ.

ಇಂಥಾ ಕಟು ವಾಸ್ತವವನ್ನು ಮರೆಮಾಚಿ ಬಹುಸಂಖ್ಯಾತರ ಬೆಂಬಲ ಗಳಿಸಿಕೊಳ್ಳಲು 'ಹಿಂದೂ ನಾವೆಲ್ಲಾ ಒಂದು' ಎಂಬ ಪೊಳ್ಳು ಸಿದ್ಧಾಂತವನ್ನು ಹರಿಬಿಟ್ಟಿದ್ದಾರೆ. ಆ ಮೂಲಕ ಹಿಂದೂತ್ವ ಸಿದ್ಧಾಂತವನ್ನು ತಮ್ಮ ರಾಜಕೀಯದ ಅಸ್ತ್ರವನ್ನಾಗಿಸಿಕೊಳ್ಳಲು ಹೊರಟಿದ್ದಾರೆ. ಈಗ ಈ ಹಿಂದೂತ್ವ ಸಿದ್ಧಾಂತವು ಸಮಕಾಲೀನ ಭಾರತದ ಮಹಾನ್ ಬೌದ್ಧಿಕ ಮತ್ತು ರಾಜಕೀಯ ಸವಾಲಾಗಿ ಬೆಳೆದಿದೆ. ಈ ಹಿಂದೂತ್ವವಾದಿಗಳೊಡನೆ ಚರ್ಚೆ ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿಗೆ ದೇಶ ತಲುಪಿದೆ.

ಧರ್ಮದ ಆಧಾರದ ಮೇಲೆ ದೇಶ ಮತ್ತು ಜನತೆಯನ್ನು ಧ್ರುವೀಕರಿಸುವ ರಾಜಕೀಯದಲ್ಲಿ ಹಿಂದೂತ್ವವಾದಿಗಳು ಸಾಕಷ್ಟು ಯಶಸ್ಸು ಸಾಧಿಸಿದ್ದಾರೆಂಬುದು ಆತಂಕದ ಸಂಗತಿ. ಅದರಲ್ಲೂ ಚುನಾವಣೆಗಳ ಹಿನ್ನೆಲೆಯಲ್ಲಿ ಹಿಂದೂತ್ವದ ನಡೆ ಏನು ಎಂಬುದಕ್ಕೆ ಇತ್ತೀಚಿನ ಮುಜಾಫರ್ ನಗರದ ಮತೀಯ ಗಲಭೆಗಳು ದಿಕ್ಸೂಚಿಯಾಗಿದೆ.

ಈ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳಲು ಈ ದೇಶದಲ್ಲಿ ಬ್ರಾಹ್ಮಣ್ಯ-ಬ್ರಾಹ್ಮಣಶಾಹಿ-ಜಾತಿ ಫ್ಯಾಸಿಸಂಅನ್ನು ಅರ್ಥಮಾಡಿಕೊಳ್ಳಬೇಕು. ಇಡೀ ದೇಶದ ಜಾತಿ ವ್ಯವಸ್ಥೆಯ ಮೂರ್ತಿ ಭಂಜಕ ಚಿಂತಕ ಅಂಬೇಡ್ಕರ್ ಅವರೇ ಆಗಿರುವುದರಿಂದ ಅವರ ವಿಚಾರಗಳನ್ನು ಅರಿಯುವುದು ನಮಗೆ ಬಹುಮುಖ್ಯ.

ಅಂಬೇಡ್ಕರ್ ಅವರು 1938ರಲ್ಲಿ ಬ್ರಾಹ್ಮಣವಾದವನ್ನು ವಿಶ್ಲೇಷಿಸಿರುವುದು ಹೀಗೆ:

ಬ್ರಾಹ್ಮಣವಾದವೆಂದರೆ ಒಂದು ಜಾತಿಯಾಗಿ ಬ್ರಾಹ್ಮಣರು ಅನುಭವಿಸುವ ಅಧಿಕಾರ, ಸವಲತ್ತುಗಳು ಮತ್ತು ಹಿತಾಸಕ್ತಿಗಳು ಮಾತ್ರವಲ್ಲ; ಬ್ರಾಹ್ಮಣವಾದವೆಂದರೆ ಸ್ವಾತಂತ್ರ್ಯದ, ಸಮಾನತೆ ಮತ್ತು ಸೋದರತ್ವದ ತಿರುಳನ್ನೇ ನಿರಾಕರಿಸುವುದಾಗಿದೆ. ಈ ನಿರಾಕರಣೆಯ ಮೂಲ ಬ್ರಾಹ್ಮಣರೇ ಆಗಿದ್ದರೂ ಅದು ಸಮಾಜದ ಎಲ್ಲಾ ವರ್ಗಗಳಲ್ಲಿ ವ್ಯಾಪಿಸಿದ್ದು ಅದು ಕೇವಲ ಬ್ರಾಹ್ಮಣರಿಗೆ ಸೀಮಿತವಾಗಿಲ್ಲ. ಅದೀಗ ಎಲ್ಲಾ ವರ್ಗಗಳ ಆಲೋಚನೆ ಮತ್ತು ಕೃತ್ಯಗಳನ್ನು ಹತೋಟಿಯಲ್ಲಿ ಇಡುತ್ತದೆ. ಈ ಬ್ರಾಹ್ಮಣವಾದವು ಕೆಲವೇ ವರ್ಗಗಳಿಗೆ ಉಚ್ಚಸ್ಥಾನವನ್ನು ನೀಡುತ್ತಿರುವುದು ಕಟು ಸತ್ಯ. ಇದು ಇತರ ವರ್ಗಗಳಿಗೆ ಸಮಾನತೆಯ ಆಶಯವನ್ನು ನಿರಾಕರಿಸುತ್ತದೆ. ಈ ವಾದವು ಸಹ ಭೋಜನ ಅಥವಾ ಅಂತರ್ಜಾತಿ ವಿವಾಹಗಳಂತಹ ಸಾಮಾಜಿಕ ಹಕ್ಕುಗಳಿಗೆ ಸೀಮಿತವಾಗಿಲ್ಲ. ಅದು ಸಾಮಾಜಿಕ ಹಕ್ಕುಗಳನ್ನು ಮೀರಿ ನಾಗರಿಕ ಹಕ್ಕುಗಳಿಗೂ ಚಾಚಿದೆ. ಸಾರ್ವಜನಿಕ ಶಾಲೆಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ಸೌಲಭ್ಯಗಳ ಉಪಯೋಗ ಮುಂತಾದ ನಾಗರಿಕ ಹಕ್ಕುಗಳನ್ನು ನಿರಾಕರಿಸುತ್ತದೆ. ಈ ದೇಶದ ಮಿಲಿಯಾಂತರ ಜನತೆಗೆ ಈ ಮೇಲಿನ ನಾಗರಿಕ ಹಕ್ಕುಗಳನ್ನು ನಿರಾಕರಿಸಲಾಗಿದೆ. ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಅವ್ಯಾಹತವಾಗಿ ವ್ಯಾಪಿಸಿರುವ ಬ್ರಾಹ್ಮಣವಾದದ ಪರಿಣಾಮವೇ ಇದು ಎಂದು ಯಾರಿಗಾದರೂ ಸಂಶಯವಿದೆಯೆ? ಈ ಬ್ರಾಹ್ಮಣವಾದ ಸರ್ವವ್ಯಾಪಿಯಾಗಿದ್ದು ಅದು ಆರ್ಥಿಕ ಅವಕಾಶಗಳಲ್ಲೂ ವ್ಯಾಪಿಸಿದೆ. ಇದಕ್ಕೆ ಪರಿಹಾರ ಬ್ರಾಹ್ಮಣವಾದವನ್ನು ಸೈದ್ಧಾಂತಿಕವಾಗಿಯೂ, ರಾಜಕೀಯವಾಗಿಯೂ ವಿರೋಧಿಸುವುದೇ ಹೊರತು ಬ್ರಾಹ್ಮಣರನ್ನು ವಿರೋಧಿಸುವುದಲ್ಲ.

ಭಾರತದಲ್ಲಿ ಬ್ರಾಹ್ಮಣ್ಯದ ವಿಜಯದ ಕಾರಣಗಳನ್ನು ಅಂಬೇಡ್ಕರ್ ಅವರು **"Revolution and Counter revolution in Ancient India"** ಎಂಬ ಅಪೂರ್ಣ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಈ ಬಹುಮುಖ್ಯ ಗ್ರಂಥದಲ್ಲಿ ಅಂಬೇಡ್ಕರ್ ಅವರು ಮನುಸ್ಮೃತಿಯು ಹೇಗೆ ಪ್ರತಿಕ್ರಾಂತಿಯ ಗ್ರಂಥವೆಂದು ಸಾಧಿಸಿದ್ದಾರೆ. ಪುಶ್ಯಮಿತ್ರ ಶೃಂಗನ ನಾಯಕತ್ವದಲ್ಲಿ ಬ್ರಾಹ್ಮಣರ ಕ್ರಾಂತಿಯಿಂದ ಉಂಟಾದ ಅಪಾರ ಹಿಂಸೆಯ ವಿವರಗಳನ್ನು ಮಾತ್ರವಲ್ಲದೆ, ಅದು ಹೇಗೆ ಬೌದ್ಧ ಧರ್ಮವನ್ನು ನಾಶ ಮಾಡಿತು ಹಾಗೂ ಇದರಿಂದಾಗಿ ಹೇಗೆ ಬ್ರಾಹ್ಮಣರಿಗೆ ವಿಶೇಷ ಸೌಲತ್ತುಗಳನ್ನು ದೊರಕಿಸಲಾಗಿದೆ ಎಂಬುದನ್ನು ವಿವರಿಸುತ್ತಾರೆ. ಬೌದ್ಧ ಧರ್ಮದಲ್ಲಿ ಶೂದ್ರರು ಮತ್ತು ಇತರ ಕೆಳಜಾತಿಯವರು ಸಮಾನವಾದ ಭಿಕ್ಕುವಾಗಬಹುದಾದ ಸಾಧ್ಯತೆಯನ್ನು ಅರಿತೇ ಬ್ರಾಹ್ಮಣಶಾಹಿ ಬೌದ್ಧ ಧರ್ಮದ ವಿರುದ್ಧ ತಿರುಗಿ ಬಿದ್ದಿತು ಎಂದು ಪ್ರತಿಪಾದಿಸುತ್ತಾರೆ. ಬ್ರಾಹ್ಮಣಶಾಹಿಯ ವಿಜಯವನ್ನು ಈ ಕೃತಿಯಲ್ಲಿ ಅವರು ಏಳು ಅಂಶಗಳಲ್ಲಿ ವಿವರಿಸಿದ್ದಾರೆ.

1. ಮನುಸ್ಮೃತಿಯು ಬ್ರಾಹ್ಮಣರು ಆಳುವ ವರ್ಗವಾಗುವ ಹಕ್ಕನ್ನು ಸ್ಥಾಪಿಸಿದೆ.
2. ಬ್ರಾಹ್ಮಣರನ್ನು ಸವಲತ್ತುಗಳು ಉಳ್ಳ ವ್ಯಕ್ತಿಗಳ ವರ್ಗವನ್ನಾಗಿಸಿದೆ.
3. ಅದು ವರ್ಣವನ್ನು ಜಾತಿಯನ್ನಾಗಿ ಪರಿವರ್ತಿಸಿತು.
4. ಅದು ವಿವಿಧ ಜಾತಿಗಳ ನಡುವೆ ಸಂಘರ್ಷದ ಮತ್ತು ಸಮಾಜ ವಿರೋಧಿ ಭಾವನೆಗಳನ್ನು ತಂದಿತು.
5. ಇದು ಶೂದ್ರರು ಮತ್ತು ಮಹಿಳೆಯರನ್ನು ಕೀಳಾಗಿಸಿತು.
6. ಇದು ಶ್ರೇಣೀಕೃತ ಅಸಮಾನತೆ ವ್ಯವಸ್ಥೆಯನ್ನು ಗಟ್ಟಿಗೊಳಿಸಿತು.
7. ಸಡಿಲವಾಗಿದ್ದ ಮತ್ತು ಸಾಧಾರಣವಾಗಿದ್ದ ಸಾಮಾಜಿಕ ವ್ಯವಸ್ಥೆಯನ್ನು ಕಾನೂನು ಬದ್ಧ ಮತ್ತು ಜಡವಾದ ಸಾಮಾಜಿಕ ವ್ಯವಸ್ಥೆಯನ್ನಾಗಿ ಪರಿವರ್ತಿಸಿತು.

ಒಟ್ಟಾರೆ ಅಂಬೇಡ್ಕರ್ ಅವರ ಪ್ರಕಾರ ಅಂದಿನ ಬೌದ್ಧರೇ ಅಸ್ಪೃಶ್ಯರಾದರು. ಹಿಂದೂ ಧರ್ಮ ತಿರುಳಾದ ಬ್ರಾಹ್ಮಣ್ಯ-ಬ್ರಾಹ್ಮಣಶಾಹಿ ಮನುಸ್ಮೃತಿಯಲ್ಲಿ ಅಡಕವಾಗಿದೆ ಎಂದು ಸಾಧಿಸುತ್ತಾರೆ.

ಇಂಥಾ ಅಸಮಾನ ಬ್ರಾಹ್ಮಣಶಾಹಿ - ಜಾತಿವಾದದ ವಿರುದ್ಧ ಇತಿಹಾಸದುದ್ದಕ್ಕೂ ಅನೇಕಾನೇಕ ಪ್ರತಿಭಟನಾ ಚಳವಳಿಗಳು ನಡೆದಿವೆ. ಅನೇಕ ಬಾರಿ ಇವುಗಳು ಎಷ್ಟೇ ಉದಾತ್ತ ಆಶಯಗಳನ್ನು ಹೊಂದಿದ್ದರೂ ಇನ್ನೊಂದು ಮತ ಅಥವಾ ಪಂಥಗಳಾಗಿ ಪರ್ಯಾವಸಾನಗೊಂಡಿವೆ. ಆಯಾ ಕಾಲಘಟ್ಟದಲ್ಲಿ ಜಾತಿಯ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಪರ್ಯಾಯ ಮತ್ತು ಉನ್ನತ ಉತ್ಪಾದನಾ ಸಂಬಂಧಗಳನ್ನು ಬೆಳೆಸುವ ವರ್ಗಗಳು ಸೃಷ್ಟಿಯಾಗದಿದ್ದುದೇ ಇದಕ್ಕೆ ಕಾರಣ.

ಯೂರೋಪಿನಲ್ಲಿ ಹೊಸ ಉತ್ಪಾದನಾ ಸಂಬಂಧಗಳನ್ನು ಬೆಳೆಸುವ ಉದ್ದೇಶದಿಂದ ಅಂದಿನ ಬೂರ್ಜ್ವಾವರ್ಗ ಇಡೀ ಸಮಾಜವನ್ನೆ ತನ್ನ ಹತೋಟಿಗೆ ತೆಗೆದುಕೊಂಡು ತನ್ನ ಲಾಭಕ್ಕಾಗಿ ಸಮಾಜವನ್ನು ಆಮೂಲಾಗ್ರವಾಗಿ ಬದಲಾಯಿಸಿತು. ಆದರೆ ಭಾರತದಲ್ಲಿ ವಿಕೃತರೂಪದಲ್ಲಿ ಬೇರುಬಿಟ್ಟಿದ್ದ ಜಾತಿವ್ಯವಸ್ಥೆಯನ್ನು ನಾಶಗೊಳಿಸುವ ಉದ್ದೇಶ ಹೊಂದಿದ ಅಂತಹ ಕ್ರಾಂತಿಕಾರಿ ಬೂರ್ಜ್ವಾವರ್ಗ ರೂಪಗೊಳ್ಳಲೇ ಇಲ್ಲ. ಭಾರತಕ್ಕೆ ಬಂದ ಬ್ರಿಟಿಷ್ ವಸಾಹತುಶಾಹಿಗಳು ಅಂಥಾ ಕ್ರಾಂತಿಕಾರಕ ಮಾರ್ಪಾಟುಗಳನ್ನು ತರಲಿಲ್ಲ. ಬದಲಾಗಿ ಇಲ್ಲಿನ ಬ್ರಾಹ್ಮಣಶಾಹಿ-ಜಾತಿ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಭಾರತದಲ್ಲಿ ತನ್ನ ಆರ್ಥಿಕ, ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಿಕೊಂಡಿತು. ಆದರೆ ಪಾಶ್ಚಿಮಾತ್ಯರ ಉದಾರವಾದಿ ಸಿದ್ಧಾಂತ ಒಂದುಮಟ್ಟಿಗೆ ಭಾರತದಲ್ಲಿ ಪ್ರಜಾಸತ್ತಾತ್ಮಕ ಸೆಲೆಗಳನ್ನು ಉಂಟುಮಾಡಿದ್ದನ್ನೂ ನಾವು ಕಾಣಬಹುದು.

ವಸಾಹತುಶಾಹಿ ಕಾಲದ ಬ್ರಾಹ್ಮಣ್ಯ-ಬ್ರಾಹ್ಮಣಶಾಹಿಯ ವಿರೋಧದ ಪ್ರಮುಖ ಧ್ವನಿ ಮಹಾರಾಷ್ಟ್ರದ ಜೋತಿಬಾ ಫುಲೆಯವರದ್ದು. ಜಾತಿ ಗುಲಾಮಗಿರಿ ವಿರುದ್ಧ ಸ್ತ್ರೀಯರ ಮತ್ತು ದುಡಿಯುವ ಜನರ ವಿದ್ಯಾಭ್ಯಾಸ ಮುಂತಾದ ಕ್ರಾಂತಿಕಾರಿ ಕಾರ್ಯಕ್ರಮಗಳ 'ಸತ್ಯಶೋಧಕ' ಮಂಡಳಿಯನ್ನು ಫುಲೆಯವರು ಸ್ಥಾಪಿಸಿದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಸತ್ಯಶೋಧಕ ಚಳವಳಿಯು ಬ್ರಾಹ್ಮಣ್ಯದ ವಿರುದ್ಧ ಪರ್ಯಾಯ ಸಾಂಸ್ಕೃತಿಕ ಆಚರಣೆ ಮತ್ತು ಮೌಲ್ಯಗಳನ್ನು ಜನರಲ್ಲಿ ಸ್ಥಾಪಿಸಲು ಯತ್ನಿಸಿತು. ಅಂಬೇಡ್ಕರ್ ಅವರ ಜಾತಿ ವಿರೋಧಿ ಹೋರಾಟದ ನೆಲೆ ಸತ್ಯಶೋಧಕ ಚಳವಳಿ ಮತ್ತು ಅ[...] ಭಕ್ತಿ ಪಂಥದ ಸ್ಫೂರ್ತಿಗಳೇ ಆಗಿದ್ದುವು.

ಅಂಬೇಡ್ಕರ್ ಅವರು ಪಾಶ್ಚಿಮಾತ್ಯ ಉದಾರವಾ[...] ಸೈದ್ಧಾಂತಿಕ ಪರಂಪರೆಯಿಂದ ರೂಪಿತವಾಗಿದ್[...] ಜಾನ್‌ಡೀವೇರವರ ವಿದ್ಯಾಭ್ಯಾಸವೇ ಉದ್ಧಾರದ ಮಾರ್ಗವೆ[...] ನಂಬಿಕೆಯಿಂದ ಪ್ರೇರೇಪಿತವಾಗಿತ್ತು. ಅವರು ತಮ[...] ರಾಜಕೀಯ ಜೀವನದ ಪ್ರಾರಂಭದಲ್ಲಿ ನಡೆಸಿ[...] ಹೋರಾಟಗಳು ಹಿಂದೂ ಧರ್ಮೀಯರನ್ನು ಹಕ್ಕುಗಳಿಗ[...] ಒತ್ತಾಯಿಸುವ ಬೇಡಿಕೆಯಾಗಿತ್ತು. ಅಲ್ಪ ಸಮಯದಲ್ಲಿಯ[...] ಅವರು ಈ ಹಿಂದೂ ಧರ್ಮವನ್ನು ಸರಿಪಡಿಸಲು ಸಾಧ್ಯ[...] ಇಲ್ಲ, ಅದಕ್ಕಾಗಿ ತಾನು ಹಿಂದೂ ಆಗಿ ಸಾಯಲ[...] ಎಂದು ಘೋಷಿಸಿದರು. ಅಂಬೇಡ್ಕರ್ ಅವರು ಬಹ[...] ಆಳವಾದ ಅಧ್ಯಯನದ ನಂತರ ಬ್ರಾಹ್ಮಣಶಾಹಿ-ಹಿಂದ[...] ಜಾತಿ ಪದ್ಧತಿಗೆ ಪರ್ಯಾಯವನ್ನು ಇತ್ಯಾತ್ಮಕ (Positiv[...] ಬೌದ್ಧ ಧರ್ಮದಲ್ಲಿ ಕಂಡುಕೊಂಡರು.

ಬೌದ್ಧ ಧರ್ಮಕ್ಕೆ ಅಂಬೇಡ್ಕರ್ ಅವರ ಧರ್ಮಾಂ[...] ಕೇವಲ ಧಾರ್ಮಿಕ ಬದಲಾವಣೆ ಮಾರ್ಗವಲ್ಲ. ಬ[...] ಧರ್ಮದಲ್ಲಿ ಅವರು ಕಮ್ಯುನಿಸಂನ ಸಮಾನತೆ[...] ಮೌಲ್ಯಗಳನ್ನು ಕಾಣುತ್ತಾರೆ, ಹಿಂಸೆ ಇಲ್ಲದೆ ಹ[...] ಸಮಾಜವನ್ನು ತರಬಲ್ಲ ಸಾಧ್ಯತೆಯನ್ನು ನಂಬುತ್ತಾರೆ. ಹೀಗ[...] ಅಂಬೇಡ್ಕರ್ ಅವರ ಧರ್ಮಾಂತರ ಒಂದು ಆರ್ಥಿಕ ಮ[...] ರಾಜಕೀಯ ಕಾರ್ಯಕ್ರಮವೂ ಆಗಿತ್ತು.

ಇತಿಹಾಸದುದ್ದಕ್ಕೂ ಬ್ರಾಹ್ಮಣಶಾಹಿ-ಜಾತಿ ಪ[...] ವಿರುದ್ಧ ನಡೆದ ಎಲ್ಲಾ ಹೋರಾಟಗಳೂ ದೈವ[...] ಭಾವನಾತ್ಮಕ ಮತ್ತು ಹಿಂದೂ ವ್ಯವಸ್ಥೆಯನ್ನು ಸುಧಾ[...] ಮಾಡುವ ಉದ್ದೇಶದಿಂದ ಕೂಡಿದ್ದವು. ಆದರೆ ಅಂಬೇಡ[...] ಅವರು ಬೌದ್ಧ ಧರ್ಮದಲ್ಲಿ ಹೊಸ ಸಾಮಾಜಿಕ, ಆರ್ಥಿ[...] ಮತ್ತು ರಾಜಕೀಯ ಮೌಲ್ಯಗಳನ್ನೂ ಕಂಡುಕೊಳ್ಳುತ್[...]

ಅಂಬೇಡ್ಕರ್ ಅವರ ಸಮಾನತೆಯ ಆಶಯಗ[...] 'ಪ್ರಭುತ್ವ ಮತ್ತು ಅಲ್ಪಸಂಖ್ಯಾತರು' ಎಂಬ ಕೃತಿಯ[...] ಕಾಣಬಹುದು. ಸಂವಿಧಾನದ ಕರಡಿನಲ್ಲಿ ಅವರು ಕೈಗಾ[...] ಮತ್ತು ವ್ಯವಸಾಯವನ್ನು ರಾಷ್ಟ್ರೀಕರಣಗೊಳಿಸಿ, ಪ್ರಭ[...] ಸಮಾಜವಾದವನ್ನು ಜಾರಿಗೊಳಿಸಬೇಕೆಂಬ ಮಹಾ[...] ಕ್ರಾಂತಿಕಾರಿ ಪರ್ಯಾಯ ಒಂದನ್ನು ಆಶಿಸಿದ್ದರು.

ಸಾರಂಶೀಕರಿಸಿ ಹೇಳುವುದಾದರೆ ಅಂಬೇಡ್ಕರ್ ಅ[...] ಜಾತಿವಿನಾಶದ ಪರಿಕಲ್ಪನೆ ಬ್ರಾಹ್ಮಣಶಾಹಿ ಸಿದ್ಧಾಂ[...] ಪರ್ಯಾಯವಾಗಿ ಬೌದ್ಧ ಧರ್ಮವನ್ನು ಆಧರಿಸುವ[...] ಮತ್ತು ಇಂದಿನ ಊಳಿಗಮಾನ್ಯ ಬಂಡವಾಳಶಾಹಿ ವ್ಯವ[...] ಬದಲಾಗಿ ಪ್ರಭುತ್ವ ಸಮಾಜವಾದವವನ್ನು ಪು[...] ರೂಪಿಸುವುದಾಗಿದೆ. ಅಂಬೇಡ್ಕರ್ ಅವರು ಜಾತಿವಿ[...] ಅಥವಾ ಬ್ರಾಹ್ಮಣಶಾಹಿ ನಾಶ ಆಗಬೇಕಾದರೆ [...] ವ್ಯವಸ್ಥೆಯ ಸಿದ್ಧಾಂತ ಮತ್ತು ಉತ್ಪಾದನಾ ಸಂಬಂಧಗ[...] ಬದಲಾಯಿಸಬೇಕೆಂದು ಆರ್ಥೈಸುವುದೇ ಆಗಿದೆ.

● ಡಾ. ವಿ. ಲಕ್ಷ್ಮೀನಾರಾಯಣ್, ಪ್ರ[...]

ನವಮನುವಾದ ಮತ್ತು ಮಹಿಳೆ: ಹೊರಗೆ ಶೃಂಗಾರ, ಒಳಗೆ ರಣರಂಗ

ಒಂದೂವರೆ ಸಾವಿರ ವರ್ಷ ಕೆಳಗೆ ವರ್ಣವ್ಯವಸ್ಥೆಯನ್ನು ಭೇದ ನೀತಿಯನ್ನಾಗಿಸಿ ಸ್ಮೃತಿಯಾಗಿಸಿದ ಮನುವಿನ ಸಾಂಸ್ಕೃತಿಕ ರಾಜಕಾರಣದ ಅಪಾಯ ಗುರುತಿಸುತ್ತ ಬ್ರಾಹ್ಮಣ್ಯವನ್ನು ಮನುವಾದವೆಂದೂ; ಜಾಗತೀಕರಣ ಸೃಷ್ಟಿಸಿದ ನವಬ್ರಾಹ್ಮಣಶಾಹಿಯನ್ನು ನವಮನುವಾದವೆಂದೂ ಕರೆಯಬಯಸುತ್ತೇನೆ.

ಶ್ರೇಣೀಕರಣ ಭಾರತೀಯ ಸಮಾಜದ ದುಷ್ಟ ಲಕ್ಷಣ. ಕನಿಷ್ಠನನ್ನು ಗುರುತಿಸಿ ಮೂಲೆಗೊತ್ತುವುದರಲ್ಲಿಯೇ ತನ್ನ ಶ್ರೇಷ್ಠತೆಯ ಉಳಿವು ಅಡಗಿದೆ ಎಂದು ಪ್ರತಿಪಾದಿಸುವ ಜಾತಿವ್ಯವಸ್ಥೆ ಅದರ ಆತ್ಯಂತಿಕ ಸ್ವರೂಪ. ಮನುಷ್ಯನನ್ನು ಹುಟ್ಟು, ಕಸುಬು, ಬಣ್ಣ, ಲಿಂಗ, ಭಾಷೆಯನ್ನಾಧರಿಸಿ ಶ್ರೇಷ್ಠ-ಕನಿಷ್ಠನೆಂದು ನಿರ್ಧರಿಸುವ ಈ ರ್‍ಯಾಂಕಿಂಗ್ ವ್ಯವಸ್ಥೆ ಕೇವಲ ಸಾಮಾಜಿಕ ವಿಭಾಗೀಕರಣವಷ್ಟೇ ಅಲ್ಲ, ಆಸ್ತಿ ಹಾಗೂ ಅಧಿಕಾರ ಹಂಚಿಕೆಯನ್ನೂ ನಿಯಂತ್ರಿಸುತ್ತದೆ. ಭಾರತೀಯ ಸಮಾಜದ ತಾರತಮ್ಯ ವ್ಯವಸ್ಥೆಗೆ ಮೂಲಸ್ರೋತ್ರವೇ ಮನುವಾದವಾಗಿದೆ. ಇದು ಮಹಿಳಾ ವಿರೋಧಿಯೂ ಆಗಿದೆ. ಸನಾತನ ಸಂಸ್ಕೃತಿಯು ಹೆಣ್ಣನ್ನು ಮಾಯೆಯೆಂದೂ ಕರೆಯುತ್ತದೆ, ಮಾತೆಯೆಂದೂ ಪೂಜಿಸುತ್ತದೆ. ಕಾಮವು ಪುರುಷಾರ್ಥಗಳಲ್ಲೊಂದು ಎಂದು ಗುರುತಿಸುತ್ತಲೇ ಬ್ರಹ್ಮಚರ್ಯ ಉತ್ಕೃಷ್ಟ ಆಧ್ಯಾತ್ಮಿಕ ಸಾಧನೆ ಎನ್ನುತ್ತದೆ. ಹೆಣ್ಣು, ಸಾವು ಮತ್ತು ಕಾಮ ಈ ಮೂರರ ಅನಿಯಂತ್ರಿತ ಗುಣಕ್ಕೆ ಹೆದರಿಯೇ ಧರ್ಮಗಳು ಹುಟ್ಟಿದವು. ಮನುಸ್ಮೃತಿಯಲ್ಲಿರುವಂತಹ ನಿಯಮ, ಕಟ್ಟಳೆಗಳು ರಚನೆಯಾದವು.

ಲಿಂಗ ತಾರತಮ್ಯದ ಮೇಲೆಯೇ ನಿಂತ ಸನಾತನ ಸಾಮಾಜಿಕ ವ್ಯವಸ್ಥೆ ಹಾಗೂ ದುಡ್ಡಿನ ಮಾನದಂಡದಿಂದಲೇ ಮನುಷ್ಯನನ್ನು ಅಳೆಯುವ ಬಂಡವಾಳ ಕೇಂದ್ರಿತ ಹೊಸ ಆರ್ಥಿಕ ವ್ಯವಸ್ಥೆ - ಇವೆರಡರ ನಡುವೆ ಬಹಳ ಸಾಮ್ಯತೆಯಿದೆ. ಮೇಲ್ನೋಟಕ್ಕೆ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಹಂದರಗಳಂತೆ ಇವು ಕಂಡರೂ ಎರಡೂ ಒಂದನ್ನೊಂದು ಪ್ರಭಾವಿಸುತ್ತಾ, ಒಂದರ ನೆರಳಿನಲ್ಲಿ ಇನ್ನೊಂದು ಬೆಳೆಯುವಂತಹ ಮೋಸದ ಭಾಗೀದಾರಿಕೆ ರೂಢಿಸಿಕೊಂಡಿವೆ. ಎರಡೂ ಯಾಜಮಾನ್ಯದ ಕಲ್ಪನೆಯನ್ನೇ ಉಸಿರಾಡುತ್ತವೆ. ಸಂಪತ್ತು ಉತ್ಪಾದಿಸುವುದು, ಅದನ್ನು ಉಳಿಸಿ ಬೆಳೆಸಿಕೊಳ್ಳಲು ಯಾವ ದಾರಿ ಹಿಡಿಯಲೂ ಸಿದ್ಧರಾಗುವುದನ್ನೇ 'ಎಬಿಲಿಟಿ' ಎನ್ನುತ್ತವೆ. ಧರ್ಮ, ಸಂಸ್ಕೃತಿ, ಮನುಷ್ಯ ಸ್ವಭಾವ, ದೌರ್ಬಲ್ಯಗಳನ್ನೆಲ್ಲ ಗುರುತಿಸಿ ಗಳಿಕೆಯ ದಾಳವಾಗಿ ಬಳಸಿಕೊಳ್ಳುತ್ತವೆ. ಅಧಿಕಾರ ಮತ್ತು ಸಂಪನ್ಮೂಲಹೀನನಾಗಿ ಅಂಚಿನಲ್ಲಿರುವವ ಕಾಯಂಅಂಚಿನಲ್ಲಿಯೇ ಇರುವಂತೆ ವ್ಯವಸ್ಥೆಯ ಮೇಲೆ ಹಿಡಿತ ಸ್ಥಾಪಿಸುತ್ತವೆ. ಏನೂ ಆಶ್ಚರ್ಯವಿಲ್ಲ, ಜೀವವಿರೋಧಿ ದೇಶೀ ಮನುವಾದ ಮತ್ತು ಜಾಗತೀಕರಣ ಎಂಬ ಜಾಗತಿಕ ಮನುವಾದ ಈ ಎರಡು ಬಾಯಿಯ ಖಡ್ಗಕ್ಕೆ ನೇರ ಬಲಿಯಾಗುವವಳು ಹೆಣ್ಣೇ ಆಗಿದ್ದಾಳೆ.

ಆಧುನಿಕತೆ ಎಲ್ಲೆಲ್ಲೋ ಪ್ರವೇಶಿಸಿರಬಹುದು. ಆದರೆ ಮಹಿಳೆಯ ಕುರಿತು, ಅವಳ ಅಪೇಕ್ಷಿತ ಗುಣಸ್ವಭಾವ, ಜವಾಬ್ದಾರಿಗಳ ಕುರಿತ ಗ್ರಹಿಕೆಯಲ್ಲಿ ಏನೂ ಬದಲಾಗಿಲ್ಲ. ಮನುಸ್ಮೃತಿಯನ್ನು ಓದದೇ, ಅದರ ಹೆಸರೇ ಕೇಳದೇ ಸಾಮಾನ್ಯ ಜ್ಞಾನವೆಂಬಂತೆ ಅದು ಅಂತರ್ಗತವಾಗಿರುವುದು ಇದಕ್ಕೆ ನೇರ ಕಾರಣವಾಗಿದೆ. ಜಾತಿಧರ್ಮವೆನ್ನದೇ ಸಮಾಜದ ಎಲ್ಲ ಸ್ತರಗಳಲ್ಲೂ ಆಧುನಿಕ ಮನುಗಳು ನ್ಯಾಯಾಧೀಶರಾಗಿ, ಪೊಲೀಸರಾಗಿ, ಖಾಪ್ ಪಂಚಾಯ್ತಿಯ ಮುಖ್ಯರಾಗಿ, ಫತ್ವಾ ಹೊರಡಿಸುವ ಗುರುಗಳಾಗಿ, ರಾಜಕೀಯ ನಾಯಕರಾಗಿ ಅವತಾರವೆತ್ತುತ್ತಿದ್ದಾರೆ. ಒಂದೆಡೆ ಸಮಾನ ಅವಕಾಶ ಎನ್ನುವ ಆಧುನಿಕ ಸಮಾಜ ವ್ಯವಸ್ಥೆ ಮತ್ತೊಂದೆಡೆ ಹೆಣ್ತನದ ಜವಾಬ್ದಾರಿ ಹೇರುವ ಕೌಟುಂಬಿಕ ವ್ಯವಸ್ಥೆ - ಈ ಎರಡರ ನಡುವೆ ಸೃಷ್ಟಿಯಾಗಿರುವ ವೈರುಧ್ಯ ಉಲ್ಬಣಗೊಳ್ಳುತ್ತಿರುವ ನವಮನುವಾದವನ್ನು ಜೀವಂತ ಇಟ್ಟಿದೆ.

ಜಾಗತೀಕರಣ ಹಾಗೂ ಆಧುನಿಕತೆಗಳು ಬೆಳೆಸಿದ ಮಾರುಕಟ್ಟೆ ತಾತ್ವಿಕತೆಯ ಎದುರು ಎಲ್ಲ ಬಗೆಯ ತಾರತಮ್ಯಗಳು ಅಳಿದು ಅವಕಾಶಗಳ ರೂಪದಲ್ಲಿ ಮಹಿಳೆ ಬಿಡುಗಡೆ ಪಡೆಯಬಹುದು ಎಂಬ ಅಭಿಪ್ರಾಯವಿತ್ತು. ಆದರೆ ಆ ಕನಸು ಹುಸಿಯಾಗಿದೆ. ಮಾರುಕಟ್ಟೆಯು ತಾನಷ್ಟೇ ಹೆಣ್ಣನ್ನು ಸರಕಾಗಿ ನೋಡುವುದಿಲ್ಲ, ಗ್ರಾಹಕರಿಗೂ ಅದನ್ನು ಕಲಿಸಿದೆ. ಜಾಹೀರಾತುಗಳಲ್ಲಿ, ದಿನನಿತ್ಯದ ಬಳಕೆಯಲ್ಲಿ ಬಳಸಲ್ಪಡುವ ಭಾಷೆ ಗಮನಿಸಿದಲ್ಲಿ ಇದು ವೇದ್ಯವಾಗುತ್ತದೆ. ಮಹಿಳೆಯ ಅನನ್ಯತೆಯನ್ನು ಗೌರವಿಸುವುದಾಗಿ ಹೇಳಿಕೊಳ್ಳುತ್ತ ಮುಖದ ಕ್ರೀಂ, ಸೆಂಟಿನ ಪರಿಮಳ, ಸೋಪು, ಕಾಲೊಡಕು ಕಾಣದಂತಹ ಕೇರ್, ನೈಲ್ ಪಾಲಿಶ್, ಲಿಪ್‌ಸ್ಟಿಕ್ ಎಲ್ಲವೂ ಮಹಿಳೆಯರಿಗೆಂದು ಬೇರೆಬೇರೆಯೇ ತಯಾರಾಗುತ್ತಿವೆ. ಅಂತರರಾಷ್ಟ್ರೀಯ ಸುಂದರಿಯರನ್ನು ಗುರುತಿಸುವ ಎಂತೆಂಥದೋ ಸ್ಪರ್ಧೆಗಳು ನಡೆಯುತ್ತವೆ. ಸಣ್ಣಪುಟ್ಟ ಊರುಗಳ ಶಾಲಾಕಾಲೇಜುಗಳಲ್ಲೂ ಫ್ಯಾಷನ್ ಷೋ ನಡೆಯುತ್ತದೆ.

ಎಲ್ಲ ಕಾಳಜಿಯೂ ಅವಳನ್ನು ಆಹ್ಲಾದಕರವಾಗಿಸಲಿಕ್ಕೆ ಮಾತ್ರ. ಕಾಸ್ಮೆಟಿಕ್ ಕಂಪನಿಗಳು ಅವಳ ಸ್ತನಗಾತ್ರ, ರೂಪದ ಬಗ್ಗೆ ವಹಿಸುವ ಕಾಳಜಿಯನ್ನು ಸ್ತನಕ್ಯಾನ್ಸರಿನ ಅರಿವು ಮೂಡಿಸಲು ಬಳಸುವುದಿಲ್ಲ. ಗರ್ಭಿಣಿಯಾದಾಗ ಹೊಟ್ಟೆ ಮೇಲೆ ಗೆರೆ ಬೀಳದಂತೆ ಏನು ಮಾಡಬೇಕೆಂದು ಬೋಧಿಸುವ ಅವು ಜನನ ನಿಯಂತ್ರಣ, ಗರ್ಭ ನಿರೋಧಕಗಳ ಕುರಿತು ಮಾತನಾಡುವುದಿಲ್ಲ. ಕಣ್ಣಿನ ಚಂದ ಹೆಚ್ಚಿಸಲು ಥರಾವರಿ ಆಯ್ಕೆಗಳನ್ನು ನೀಡುತ್ತವೆಯೇ ಹೊರತು ನಲವತ್ತು ವರ್ಷಕ್ಕೆ ಬರುವ ದೃಷ್ಟಿದೋಷದ ಬಗೆಗೆ ಮಾಹಿತಿ ನೀಡುವುದಿಲ್ಲ. ಹೆಣ್ಣೆಂಬ ಅನನ್ಯತೆ ತರುವ ಸಮಸ್ಯೆಗಳ ಬಗೆಗೆ ಮೌನವಾಗಿದ್ದು ಮಾರ್ಕೆಟ್ ಮಾಡಬಹು[...] ಹೆಣ್ತನವನ್ನಷ್ಟೇ ವಿಜೃಂಭಿಸುತ್ತವೆ. ಇಂಥ ಹೆಣ್ತನದ [...] ವ್ಯಾಖ್ಯಾನಗಳಿಗೆ ಮರುಳಾಗಿ ಮಹಿಳೆಯರು ಸ[...] ನಿರ್ಮಿತ ಚೌಕಟ್ಟಿನೊಳಗೆ ಸಂಭ್ರಮದಿಂದ ಭಾಗವಹಿ[...] ಅದೇ 'ಭಾರತೀಯ ನಾರಿಯ ಅನನ್ಯತೆ' [...] ವೈಭವೀಕರಿಸುತ್ತಾರೆ. ನವಮನುವಾದವು ಆಧುನಿಕ[...] ಪೋಷಾಕನ್ನು ಜನರಿಗೆ ಹೊಲಿದು ಕೊಡು[...] ಸನಾತನವಾದದ ರಕ್ತದಾನವನ್ನೂ ಮಾಡುತ್ತಲಿದೆ. ಏಕಕಾ[...] ಹೆಣ್ಣನ್ನು ಸರಕಾಗಿಯೂ, ಗ್ರಾಹಕಳಾಗಿಯೂ ನೋ[...] ಸಾಧ್ಯವಾಗುವ ನವಮನುವಾದದ ದ್ವಂದ್ವ ಅಜೆಂಡಾ[...] ಈ ತಾತ್ವಿಕತೆ ಪೋಷಿಸುತ್ತಿದೆ.


ಉತ್ಪಾದಕ-ತಯಾರಕರ ನಡುವಿನ ದಲ್ಲಾಳಿಯಾಗಿ[...] ಮಾಧ್ಯಮವೂ ಇದನ್ನು ಬೆಂಬಲಿಸುತ್ತಿದೆ. ಸುದ್ದಿಗಳ [...] ಪ್ರಕಟಣಾ ಸ್ಥಳ, ವರದಿ ಮಾಡುವ ರೀತಿಗಳು ಮಾಧ್[...] ಆದ್ಯತೆಗಳನ್ನು ಜಾಹೀರು ಮಾಡುತ್ತವೆ. ಕೈಬೆರಳೆಣಿಕೆ[...] ಮಹಿಳೆಯರಷ್ಟೇ ಸುದ್ದಿಮನೆಯ ಉನ್ನತ ಸ್ಥಾನದ[...] ಮಾಧ್ಯಮ ಸಂಪೂರ್ಣ ಪುರುಷಮಯ[...] ಮುಂದುವರೆದಿದೆ.

ನವ ಮನುವಾದದ ಆರ್ಥಿಕ ವ್ಯವಸ್ಥೆಯ[...] ಹುನ್ನಾರಗಳಲ್ಲಿ ಎದ್ದು ಕಾಣುವ ವಂಚನೆಯ[...] ಆಧ್ಯಾತ್ಮವನ್ನೂ ಮಾರುಕಟ್ಟೆಯ ಸರಕಾಗಿಸಿರು[...] ಪುರೋಹಿತಶಾಹಿ-ಕಾರ್ಪೋರೇಟ್-ಆಳುವವ[...] ನಡುವಿನ ಒಳಒಪ್ಪಂದಗಳು ಇಂದು ಢಾಳಾಗಿ [...] ಕಾಣುತ್ತಿವೆ. ಹೈಟೆಕ್ ಕಾರು, ವಿಮಾನದಲ್ಲಿ ತಿರು[...] ಬಾದಾಮಿ ತಿನ್ನುತ್ತ ಆರ್ಟ್ ಆಫ್ ಲಿವಿಂಗ್ ಕ[...] ಕಾರ್ಪೋರೇಟ್ ಗುರೂಜಿಗಳು, ನಿತ್ಯಾನಂದ ಸ್ವಾ[...] ಮಾರಿಗೊಬ್ಬರು ಮೊಳಕ್ಕೊಬ್ಬರು ಇದ್ದಾರೆ. ಇಂಥ[...] ಸರ್ಕಾರ ನೂರಾರು ಎಕರೆ ಭೂಮಿಯನ್ನು ಲೀಸ್ [...]

ಸಂಸ್ಕೃತ ಮತ್ತು ಬ್ರಾಹ್ಮಣ್ಯ

ಮಾಜಿ ಮುಖ್ಯಮಂತ್ರಿ ದಿವಂಗತ ಗುಂಡೂರಾವ್ ಸರಿಯಾದ ಸ್ಥಾನಮಾನವನ್ನು ಕಲ್ಪಿಸಲು ಕನ್ನಡಕ್ಕೆ ರ್ಯಾಗಿದ್ದ ಸಂಸ್ಕೃತ ಭಾಷೆಯ ಸ್ಥಾನವನ್ನು ಸಲು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಜಿ ಲಪತಿ, ಸಂಸ್ಕೃತವನ್ನು ಬಲ್ಲ ಬ್ರಾಹ್ಮಣರಾದ ಪ್ರೊ. ಗೋಕಾಕ್ ಅವರನ್ನು ನೇಮಿಸಿದರು. ಅವರು ವಾಗಿ ಅಧ್ಯಯನ ನಡೆಸಿ ತಮ್ಮ ವರದಿಯಲ್ಲಿ ರು, 'ಸಂಸ್ಕೃತ ಒಂದು ಶಾಸ್ತ್ರೀಯ ಭಾಷೆ ಹಾಗೂ ಧನೆಗೆ ಉಪಯೋಗವಾಗುವ ಭಾಷೆ' ದಿನನಿತ್ಯದ ದಲ್ಲಿ ಸಂಸ್ಕೃತಕ್ಕೆ ಸ್ಥಾನವಿಲ್ಲ, ಏಕೆಂದರೆ ಅದು ಈಗಿನ ಭಾಷೆಯಲ್ಲ. ವ್ಯಾವಹಾರಿಕವಾಗಿ ಅದನ್ನು ಈಗ ಸಾಧ್ಯವಿಲ್ಲ. ಆದ್ದರಿಂದ ಕನ್ನಡ ಭಾಷೆಯನ್ನು ಮಾಡತಕ್ಕದ್ದು. ಅದರಿಂದ ರಾಜ್ಯಕ್ಕೂ ಹಿತ ಮತ್ತು ಉಪಯುಕ್ತ. ಈ ವರದಿ ನೀಡಿದ್ದೇ ತಡ, ಪರಿವಾರದವರು ತತ್ತರಿಸಿ ಹೋದರು. ಅವರು ಧಿಸುವ ಹಿಂದೂ ಐಕ್ಯತೆ ಎಂದರೆ ಪ್ರಪಂಚದಾದ್ಯಂತ ಬ್ರಾಹ್ಮಣರ ಹಿತರಕ್ಷಣೆ (ಚತುಃ ಸಾಗರ ಪರ್ಯಂತ ಬ್ರಾಹ್ಮಣ ಹಿತಾಯಚ) ಸಂಸ್ಕೃತ ಬ್ರಾಹ್ಮಣ್ಯದ ಆತ್ಮ ದೆ ಬ್ರಾಹ್ಮಣಿಕೆ ಇಲ್ಲ. ಅದರ ಅಳಿವು. ಹೀಗಾಗಿ ಭಾಷೆ ವಿನಾಶದ ಅಂಚಿಗೆ ನಿಂತಿದೆ ಎಂದಾಯಿತು. ಉಳಿಸಬೇಕಾದರೆ ಇದು ಜನಸಾಮಾನ್ಯರ ಭಾಷೆ ಬಿಂಬಿಸಬೇಕು. ಆಗ ಅವರಿಗೆ ಸಿಕ್ಕಿದ್ದೇ ಶಿವಮೊಗ್ಗದ ರುವ ಮತ್ತೂರು ಎಂಬ ಗ್ರಾಮ. ಅಲ್ಲಿ ವಾಸಿಸುವ ರು ಮನೆಯಲ್ಲಿ ಹಾಗೂ ಹೊರಗೆ ಸಂಸ್ಕೃತ ನಾಡುವ ಪದ್ಧತಿ ಬೆಳೆಸಿಕೊಂಡಿದ್ದಾರೆ. ಕೋರ್ಟ್‌ನಲ್ಲಿ ಇದನ್ನೇ ಆಧಾರವಾಗಿ ಇಟ್ಟುಕೊಂಡು ಆಡುಭಾಷೆಯಾಗಿ ಉಳಿದಿದೆ ಎಂದು ವಾದಿಸಿದರು. ವರೆಗೆ ಕರ್ನಾಟಕದಲ್ಲಿ ಲಿಂಗಾಯತ ಮಠಗಳಲ್ಲಿ ಸ್ವಾಮಿಗಳು ಸಂಸ್ಕೃತ ಓದುವ ಅವಕಾಶ ಕೊಟ್ಟಿದ್ದರು. ಶಿವಪೂಜೆಗೆ ಬಳಸುವ ರುದ್ರಸೂಕ್ತ) ಶಿವಸ್ತುತಿ ಮುಂತಾದವು ಬರಲಿ ಎಂಬ ದಿಂದ. ಹೀಗೆ ಕಲಿತವರನ್ನು ವೈದಿಕರು ಬಹಳ ವಾಗಿ ಕಾಣುತ್ತಿದ್ದರು. ಸಂಸ್ಕೃತ ಭಾಷೆ ಈ ದೇಶದಲ್ಲಿ ಮಾನ್ಯರ ಭಾಷೆಯಾಗಿರಲಿಲ್ಲ. ಸಂಸ್ಕೃತ ಗಳಲ್ಲಿಯೂ ಸಹ ಸ್ತ್ರೀ ಮತ್ತು ಶೂದ್ರರು ಪುರಾತನ ಭಾಷೆಯಾದ ಪ್ರಾಕೃತದಲ್ಲಿ ಮಾತನಾಡಬೇಕೆ ಹೊರತು ಕೃತದಲ್ಲಿ ಅಲ್ಲ. ಭಗವಾನ್ ಬುದ್ಧ ಪ್ರಚಾರ ಮಾಡುವಾಗ ಆಗಿನ ಜನಸಾಮಾನ್ಯರ ಯಾದ ಪಾಲಿ ಭಾಷೆಯಲ್ಲಿ ಬೋಧಿಸಿದನೇ ತು ಸಂಸ್ಕೃತದಲ್ಲಿ ಅಲ್ಲ.

ಅವನು ಸ್ವತಃ ರಾಜವಂಶದಲ್ಲಿ ಹುಟ್ಟಿದ್ದರಿಂದ ಚೆನ್ನಾಗಿ ತಿಳಿದಿದ್ದನು. ಪುರೋಹಿತಶಾಹಿಗಳ ವಾಗಿ ಬೌದ್ಧಧರ್ಮ ಇದ್ದುದರಿಂದ ಅವನು ಜದ ಕೆಳವರ್ಗದವರು ಮಾತನಾಡುತ್ತಿದ್ದ ಭಾಷೆಯನ್ನು ಬಳಸಿದನು. ದೀನದಲಿತರ ರವೇ ಬುದ್ಧನ ಗುರಿಯಾಗಿತ್ತು, ಬ್ರಾಹ್ಮಣ್ಯದ ದ್ಧವಾಗಿರುವ ಜೈನ ಧರ್ಮದ ರ್ಥಂಕರರೆಲ್ಲರೂ ತಮ್ಮ ಕಾಲದಲ್ಲಿ



ಶೂದ್ರವರ್ಣದವರು ಮಾತನಾಡುತ್ತಿದ್ದ ಪ್ರಾಕೃತ ಭಾಷೆಯಲ್ಲಿ ಬೋಧಿಸಿದ್ದರು. ಹೀಗೆ ಸಂಸ್ಕೃತ ಶೂದ್ರರನ್ನು ಮುಟ್ಟಿಸಿಕೊಂಡೇ ಇರಲಿಲ್ಲ. ಡಾ. ಅಂಬೇಡ್ಕರ್ ಸಂಸ್ಕೃತವನ್ನು ಕಲಿಯಬೇಕೆಂದು ಬ್ರಾಹ್ಮಣ ಪಂಡಿತರನ್ನು ಕೇಳಿಕೊಂಡಾಗ ಅವರು ಯಾವ ಕಾರಣಕ್ಕೂ ಒಪ್ಪಲಿಲ್ಲ. ಇಲ್ಲಿಯವರೆಗೆ ಶೂದ್ರರಿಗೆ ಕಲಿಸಿಲ್ಲ, ಇನ್ನು ದಲಿತನಿಗೆ ಕಲಿಸುವುದು ಹೇಗೆ ಎಂಬುದು ಅವರ ವಾದ. ಇದಕ್ಕೆ ಅವರು ಕೊಡುತ್ತಿದ್ದ ಕಾರಣವೆಂದರೆ ಸ್ಮೃತಿ ಶಾಸ್ತ್ರದ ಪ್ರಕಾರ ಸೇವಾಧರ್ಮವೇ ಶೂದ್ರರ ಕರ್ತವ್ಯ-ಎಂದರೆ ಮೇಲುವರ್ಣದವರ ಗುಲಾಮರಾಗಿರುವುದು. ಗುಲಾಮರಿಗೇಕೆ ದೇವಭಾಷೆ? ಗೋಕಾಕ್ ವರದಿ ಕಡ್ಡಾಯ ಮಾಡಿದರೆ ತಮ್ಮ ಭಾಷೆಗೆ ಉಳಿಗಾಲ ಇಲ್ಲವೆಂದು ತಿಳಿದ ಪುರೋಹಿತಶಾಹಿಗಳು ಕಂಡಕಂಡಲ್ಲಿ ಸಂಸ್ಕೃತ ಶಿಬಿರಗಳನ್ನು ಪ್ರಾರಂಭಿಸಿದರು. ಶೂದ್ರ ವರ್ಗದವರಿಗೆ ಸಂಸ್ಕೃತದ ಅಮಲು ಹಿಡಿಯುವಂತೆ ಮಾಡಿದರು. ಇದರಿಂದ ಶೂದ್ರರೇನು ಸಂಸ್ಕೃತ ಪಂಡಿತರಾಗಲಿಲ್ಲ. ಬ್ರಾಹ್ಮಣ ಪಂಡಿತರಿಗಿಂತ 1/10 ಅಂಶ ಸಂಸ್ಕೃತ ಕಲಿತ, ಶೂದ್ರರಿಗೆ ಪಂಡಿತ ಎಂಬ ಬಿರುದು ಕೊಟ್ಟು ಪ್ರೋತ್ಸಾಹಿಸಿದರು. ಇದಕ್ಕಿಂತ ಹೆಚ್ಚಾಗಿ ಶಾಲಾಪಠ್ಯದಲ್ಲಿ ಸಂಸ್ಕೃತ ಒಂದು ಭಾಷೆಯಾಗಿ ಓದಿಸುವ ಕ್ರಮ ಪ್ರಾರಂಭವಾಯಿತು. ಇದರಿಂದಾಗಿ ಕನ್ನಡ ಭಾಷೆ ತನ್ನ ನೆಲೆದಲ್ಲೇ ನಿಧಾನವಾಗಿ ಕುಸಿಯತೊಡಗಿತು. ಹೇಗೆಂದರೆ ಸಂಸ್ಕೃತ ಆಡುಭಾಷೆ ಅಲ್ಲವಾದ್ದರಿಂದ ವಿದ್ಯಾರ್ಥಿಗಳು ನೂರು ಅಂಕದ ಪ್ರಶ್ನೆ ಪತ್ರಿಕೆಯಲ್ಲಿ 70 ಅಂಕ ಉತ್ತರವನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಬಹುದು. ಉಳಿದ 30 ಅಂಕದಷ್ಟು ಸಂಸ್ಕೃತದಲ್ಲಿ ಬರೆಯಬೇಕು. ಇದನ್ನು ಹೇಗೆ ವಿಂಗಡಿಸಿದ್ದಾರೆ ಎಂದರೆ ಒಂದೇ ಪದ ಬಳಸಿ ಬರೆಯಲು 10 ಅಂಕಗಳು (ವ್ಯಾಕರಣ), ಭಾಷಾಂತರಕ್ಕೆ 10 ಅಂಕಗಳು, ಅದು (ಕನ್ನಡದಿಂದ ಅಥವಾ ಇಂಗ್ಲಿಷ್‌ನಿಂದ ಸಂಸ್ಕೃತ) ಒಂದೇ ವಾಕ್ಯದಲ್ಲಿ ಸಂಸ್ಕೃತದಲ್ಲಿ ಉತ್ತರಿಸಲು 10 ಅಂಕಗಳು, ಈ ವಾಕ್ಯಗಳನ್ನು ವಿದ್ಯಾರ್ಥಿಗಳು ಬಾಯಿಪಾಠ ಮಾಡಿದ್ದರೆ ಬರೆಯಬಹುದು. ಈಗಿನ ಮಕ್ಕಳೆಲ್ಲರೂ ಹೆಚ್ಚಾಗಿ ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದರಿಂದ ಅವರು 70 ಅಂಕಗಳಿಗೆ ಇಂಗ್ಲಿಷ್‌ನಲ್ಲಿಯೇ ಉತ್ತರಿಸುತ್ತಾರೆ.

ಇವರು ಕನ್ನಡ ಕಲಿಯುವುದು ಎಲ್ಲಿ ಬಂತು? ಹೀಗೆ ಇಂಗ್ಲಿಷ್‌ನಲ್ಲಿ ಬರೆಯುವ ಸಂಖ್ಯೆ ಶೇ. 80 ರಷ್ಟು, ಇನ್ನು ಕನ್ನಡದಲ್ಲಿ 70 ಅಂಕಗಳಿಗೆ ಉತ್ತರಿಸುವ ವಿದ್ಯಾರ್ಥಿಗಳೆಂದರೆ ಶೇ. 20 ರಷ್ಟು. ಈ ವಿದ್ಯಾರ್ಥಿಗಳು ಯಾರೆಂದರೆ ಕಾರ್ಪೋರೇಷನ್ ಅಥವಾ ಸರ್ಕಾರಿ ಶಾಲೆಯ ಕನ್ನಡ ಮಾಧ್ಯಮದಿಂದ ಬಂದವರು. ಹೀಗಾಗಿ ರಾಜ್ಯದ ಶೇ. 80 ರಷ್ಟು ಮಕ್ಕಳು ಸಂಸ್ಕೃತ ತೆಗೆದುಕೊಂಡು ಇಂಗ್ಲಿಷ್‌ನಲ್ಲಿ ಬರೆದು ಪಾಸಾಗುತ್ತಾರೆ. ಅವರು ಸಂಸ್ಕೃತದಲ್ಲಿ ಗಳಿಸುವ ಅಂಕ ಬೋನಸ್ ಆಗಿರುತ್ತದೆ. ಹೀಗಾಗಿ ಶೇ. 80 ರಷ್ಟು ವಿದ್ಯಾರ್ಥಿಗಳು ಒಂದು ವರ್ಷಕ್ಕೆ ಕನ್ನಡ ಓದುವ ಅವಕಾಶವೇ ಇಲ್ಲವಾಗಿದೆ. ಇದರ ಪರಿಣಾಮ ಕನ್ನಡ ಈಗ ಸಾಹಿತ್ಯದ ಭಾಷೆಯಾಗಿ ಉಳಿದಿಲ್ಲ, ಆಡು ಭಾಷೆಯಾಗಿ ಉಳಿದಿದೆ. ಕಾರಣ ಸಂಸ್ಕೃತದ ಪ್ರಭಾವ ಬ್ರಾಹ್ಮಣರ ಭಾಷೆ ಉಳಿಸುವ ಸಲುವಾಗಿ ಕನ್ನಡ ಭಾಷೆ ಈಗ ನಿಧಾನವಾಗಿ ಅವಿಯಾಗಿ ಹೋಗುತ್ತಿದೆ. ಇದರ ಅರಿವು ಶೂದ್ರ ಜನತೆಗೆ ಆಗಿಲ್ಲ, ತಮ್ಮ ಮಕ್ಕಳು sanskrit ತೆಗೆದುಕೊಂಡಿದ್ದಾರೆಂದು ಹೆಮ್ಮೆಯಿಂದ ಹೇಳುತ್ತಾರೆ. ಇದರಿಂದಾಗಿ ಹಿಂದುಳಿದ ವರ್ಗದವರು ಬ್ರಾಹ್ಮಣೀಕರಣಕ್ಕೆ ಒಳಗಾಗಿ ತಮ್ಮ ಆಚಾರ ಪದ್ಧತಿಗಳನ್ನು ಬಿಟ್ಟು ನವಬ್ರಾಹ್ಮಣರಾಗಿ ಪರಿವರ್ತನೆಯಾಗುತ್ತಿದ್ದಾರೆ ಹಾಗೂ ತಮ್ಮ ಗುಂಡಿಯನ್ನ ತಾವೇ ತೋಡಿಕೊಳ್ಳುವುದಲ್ಲದೆ, ಕನ್ನಡದ ಕತ್ತನ್ನೂ ಒತ್ತಿ ಹಿಡಿದ್ದಾರೆ.

● ಪ್ರೊ. ಲಕ್ಷ್ಮೀನಾರಾಯಣ, ಬೆಂಗಳೂರು

ಬ್ರಾಹ್ಮಣ್ಯ ಅಂದು... ...ಇಂದು



ಅವರ ಬೋಧನೆಗಳನ್ನು ಪ್ರಚಾರಪಡಿಸಲು ಶಾಲೆಯ ತೆರೆಯಲು ಅನುಮತಿ ನೀಡುತ್ತದೆ. ನರೇಂದ್ರ ದಿಗೆ ಅಸಾರಾಂ ಬಾಪು ರಾಜಗುರುವಾಗಿದ್ದನ್ನು ಮಾಡಿಕೊಳ್ಳಬಹುದು. ಆದರೆ ಮಹಿಳೆಯಲ್ಲಿ ಎಚ್ಚೆತ್ತ ನ್ನೂ ಹುಟ್ಟಿಸದೇ ಹೌದಮ್ಮಗಳಾಗಿಸುವ, ತಮ್ಮ ತೃಷೆಗಾಗಿ ಭಕ್ತೆಯರನ್ನು ಬಳಸಿಕೊಳ್ಳುವ ಇವರ ಗಳು ಜೀವವಿರೋಧಿ ಮಾತ್ರವಲ್ಲ, ಳಾವಿರೋಧಿಯೂ ಆಗಿವೆ. ಸನಾತನವಾದ ಧಿಸುವ ಈ ಬಾಪು, ಗುರುಗಳನ್ನು ಜಾರ್ಜ್ ಆರ್ವೆಲ್ ವಂತೆ, 'ಅಲ್ಲವೆಂದು ಪ್ರೂವ್ ಆಗುವವರೆಗೆ ಧಿಗಳೆಂದೇ ಪರಿಗಣಿಸಬೇಕಾಗಿದೆ.

ಮಾರುಕಟ್ಟೆ, ನಗರೀಕರಣ, ಪ್ರವಾಸೋದ್ಯಮ ಇವೆಲ್ಲ ವಾಟಕೆಗೆ ಹೊಸ ರೂಪ, ಆಯಾಮ ತ್ತಿರುವಾಗಲೇ ಅತ್ಯಾಚಾರ ಪ್ರಕರಣಗಳು ದಿನೇದಿನೇ ತ್ತಿವೆ. ಅವಳದಲ್ಲದ ತಪ್ಪಿಗೆ ಜೀವಮಾನವಿಡೀ ವಂತೆ ಮಾಡುವ ಅತ್ಯಾಚಾರವೆಂಬ ಅಪರಾಧದ ಆಧುನಿಕ ಸಮಾಜದ ಪ್ರತಿಕ್ರಿಯೆಗಳಾದರೋ ದಿಗ್ಭ್ರಮೆ ಡಿಸುವಂತಿವೆ. 'ಎಂಜಿ ರೋಡಿನಲ್ಲಿ ಓಡಾಡುವ ಗಿಯರ ವೇಷಭೂಷಣಗಳನ್ನು ನೋಡಿದರೆ ಈಗ ಚಾರವಾಗುತ್ತಿರುವವರ ಸಂಖ್ಯೆ ತುಂಬ ಕಮ್ಮಿ' ಎಂದು ಮಠಾಧೀಶರು ಪ್ರತಿಕ್ರಿಯಿಸಿದರು! ಈ ಲೋಕದ ಗಳೆಲ್ಲ ಎಂಜಿ ರೋಡಿನಲ್ಲೇ ಇರುವರೆಂದು ಅವರು ದಂತಿದೆ. ಅಪ್ರಾಪ್ತ ವಯಸ್ಕಳನ್ನು ಅತ್ಯಾಚಾರ ಮಾಡಿದ ಪ ಎದುರಿಸುತ್ತ ಈಗ ಜೈಲಿನಲ್ಲಿರುವ ಒಬ್ಬ ರೇಪಿಸ್ಟ್ 'ಅತ್ಯಾಚಾರಿಗಳ ಕಾಲಿಗೆ ಬಿದ್ದು ಅವರನ್ನು ಅಣ್ಣಾ ಬಿಟ್ಟುಬಿಡುತ್ತಿದ್ದರು' ಎಂದು ದೆಹಲಿ ಘಟನೆಯ ಕೊಟ್ಟಿದ್ದರು. 'ಈಗ ನಡೆಯುತ್ತಿರುವ ಕೊಲೆ, ಆಕ್ಸಿಡೆಂಟ್ ಮತ್ತಿತರ ಕ್ರೈಂಗಳಿಗೆ ಹೋಲಿಸಿದರೆ ತುಂಬ ಕಮ್ಮಿ ನಡೆಯುತ್ತಿವೆ. ಮಹಿಳಾ ಸಂಘಟನೆಗಳು [illegible]

ಎಂದವರು ಮತ್ತೊಬ್ಬರು. ರೇಪ್ ಕೇಸುಗಳ ಬಗ್ಗೆ ಪ್ರತಿಕ್ರಿಯಿಸುತ್ತ 'ಈಗ ಹುಡುಗರಿಗೆ ಪರಿಶುದ್ಧ ಕನ್ಯೆಯರು ಸಿಗುವುದೇ ಕಷ್ಟ. ಹಾಗೆ ನೋಡಿದರೆ ಬಾಲ್ಯವಿವಾಹ ಒಂದು ಉತ್ತಮ ಪದ್ಧತಿಯಾಗಿತ್ತು' ಎಂದರು ಮಗದೊಬ್ಬರು. ಅಮ್ಮನ ಎದೆಹಾಲು ಕುಡಿದು ಬೆಳೆದದ್ದು ಎಲ್ಲರಿಗೂ ಮರೆತುಹೋಯಿತೇ ಎಂಬ ಅನುಮಾನ ಕಾಡುವಂತೆ ಆಧುನಿಕ ಮತ್ತು ತರುಣ ಸನಾತನಿಗಳನ್ನು ನವಮನುವಾದ ಸೃಷ್ಟಿ ಮಾಡುತ್ತಿದೆ.

ಸೋಲು ಹೆಣ್ಣಿನ ಗುಣ, ಗಂಡು ಎಂದೂ ಸೋಲಬಾರದು. ಪ್ರೇಮ, ಪರೀಕ್ಷೆ, ವ್ಯವಹಾರ, ಸಂಬಂಧ - ಯಾವುದೇ ಇರಲಿ, 'ಪುರುಷತ್ವ' ಸಾಬೀತುಪಡಿಸಲು ಗಂಡು ಗೆಲ್ಲಲೇಬೇಕಾದ ಅನಿವಾರ್ಯತೆಯನ್ನು ಅತಿರಂಜಿತವಾಗಿ ಬಿಂಬಿಸಿ ಸದಾ ಅವರು ತುದಿಗಾಲ ಮೇಲೆ ನಿಲ್ಲುವಂತೆ ಮಾಡಲಾಗಿದೆ. ಇದೇ ಅತಿ ಪೊಸೆಸಿವ್‌ನೆಸ್‌ಗೆ ಕಾರಣವಾಗುತ್ತ ಪುರುಷರನ್ನು ಕ್ರೌರ್ಯಕ್ಕೆಳಸುವಂತೆ, ಹಿಂಸಾ ಪ್ರವೃತ್ತಿ ಬೆಳೆಸಿಕೊಳ್ಳುವಂತೆ ಮಾಡುತ್ತಿದೆ. ಹೊರಜಗತ್ತಿಗೆ ತೆರೆದುಕೊಂಡವಳೆದುರಿನ ಆಯ್ಕೆಗಳು, ಆರ್ಥಿಕ ಸ್ವಾತಂತ್ರ್ಯ ಹಾಗೂ ಅದು ತಂದುಕೊಡುವ ಸ್ವಾವಲಂಬನೆಯಲ್ಲಿ ಎಲ್ಲಿ ಕೈತಪ್ಪಿ ಹೋದಾಳೋ ಎಂಬ ಭಯ ಪುರುಷ ಜಗತ್ತನ್ನು ಆಳುತ್ತ ಸಮಾಜ ಗಂಡಾಳಿಕೆಯದೇ ಆಗಿ ಮುಂದುವರೆದಿದೆ.

ಇವೆಲ್ಲ ನವಮನುವಾದ ಗುಟ್ಟಾಗಿ ಎಲ್ಲೆಲ್ಲೋ ಒಳಸುಳಿ ನಡೆಸುತ್ತಿರುವ ಸಂಚಿನಿಂದಾಗಿಯೇ ಎಂಬ ಅನುಮಾನ ಮೂಡುತ್ತಿದೆ. ದೃಷ್ಟಿ ಮುಮ್ಮುಖಿ ವಾಗಿದ್ದೂ ಚಲಿಸುವ ಪಾದಗಳ ಚಲನೆ ಹಿಮ್ಮುಖಿ ವಾಗುವಂತೆ ಮಾಡುತ್ತಿರುವುದು ಯಾವುದು ಎಂಬ ಪ್ರಶ್ನೆ ಏಳುತ್ತಿದೆ..



● ಡಾ. ಎಚ್.ಎಸ್.ಅನುಪಮಾ

ಮಕ್ಕಳಿವರೇನಮ್ಮ...!

ಪಠ್ಯಪುಸ್ತಕಗಳ ಬ್ರಾಹ್ಮಣೀಕರಣ, ಕೇಸರೀಕರಣಗಳ ವಿರುದ್ಧ ತಾವೆಲ್ಲಾ ಆಂದೋಲನ ಎಬ್ಬಿಸಿದ್ದೀರಿ. ಅಷ್ಟು ಸಾಲದು. ಬ್ರಾಹ್ಮಣೀಕರಣ ಪಠ್ಯಗಳಿಗೆ ಸೀಮಿತವಾಗಿಲ್ಲ. ಸಾಹಿತ್ಯದ ಕೇಸರೀಕರಣ ಭೈರಪ್ಪ, ಚಿ.ಮೂ.ಗಳಿಗೆ ಕಾದು ಕುಳಿತಿಲ್ಲ. ಮಕ್ಕಳ ಸಾಹಿತ್ಯದಲ್ಲಿ ಆದರ್ಶ ಎನಿಸಿಕೊಂಡಿರುವ 'ಪಂಚತಂತ್ರ', 'ಅಕಬರ-ಬೀರಬಲ' ಮತ್ತು 'ತೆನಾಲಿರಾಮ'ನ ಕಥೆಗಳಲ್ಲಿ ಬ್ರಾಹ್ಮಣ್ಯದ ಮಡಿ ಪಂಚೆಯನ್ನು ಹಾಸಿ ಹರಡಲಾಗಿದೆ.

ಕೃಷ್ಣದೇವರಾಯನ ಕಾಲ ಎಂದರೆ ವೈದಿಕಶಾಹಿ, ಗರ್ಭಗುಡಿ ಸಂಸ್ಕೃತಿಗಳ ಪಾಲಿನ ಸುವರ್ಣಯುಗವಷ್ಟೆ. ತೆನಾಲಿರಾಮನೂ ಓರ್ವ ಬ್ರಾಹ್ಮಣ. ಕ್ಷೌರಿಕನೊಬ್ಬ ತನ್ನ ಬುದ್ಧಿವಂತಿಕೆಯಿಂದ ರಾಜನ ಗಮನ ಸೆಳೆಯುತ್ತಲೆ, ರಾಮ ನಡುಬೀದಿಯಲ್ಲಿ ಕರಿನಾಯಿಯನ್ನು ತೊಳೆಯುತ್ತಾ 'ಕ್ಷೌರಿಕ ಮಂತ್ರಿಯಾಗುವುದಾದರೆ ಕರೀ ನಾಯಿ ಬಿಳೀನಾಯಿ ಏಕೆ ಆಗಬಾರದು?' ಎಂದು ಕೇಳುತ್ತಾನೆ. ಅಂದರೆ ವಿದ್ಯೆ ಅಧಿಕಾರಗಳು ಬ್ರಾಹ್ಮಣರ ಕಪಿಮುಷ್ಟಿಯಿಂದ ಜಾರಕೂಡದು.

ಬೀರಬಲನು ಮೊಗಲ್ ಸಾಮ್ರಾಟ ಅಕಬರನಿಗೆ ಅಷ್ಟು ನಿಕಟವಾಗಿದ್ದರೂ ಇಸ್ಲಾಂ ಧರ್ಮ, ಸಂಸ್ಕೃತಿಗಳನ್ನು ಗೌರವಿಸಿದ್ದು ಕಡಿಮೆ. 'ಮುಸ್ಲಿಂ ಬ್ರಾಹ್ಮಣನಾಗಲು ಸಾಧ್ಯವೇ?' ಎಂದು ಅಕಬರನನ್ನೇ ಹಂಗಿಸುತ್ತಾನೆ. ಹಂದಿ ಕೂದಲಿನ ನೆಪದಲ್ಲಿ ಮುಸಲ್ಮಾನರೊಂದಿಗೆ ಔತಣಕೂಟದಲ್ಲಿ ಭಾಗವಹಿಸದೇ ಎದ್ದು ಹೋಗುತ್ತಾನೆ.

ತೆನಾಲಿರಾಮನ ಕಥೆಯಲ್ಲಿ 'ಪೂಜ್ಯಗೋವಿ'ನ ಚರ್ಮದಿಂದ ಮಾಡಿದ ಹಾವುಗೆಗಳನ್ನು ಬ್ರಾಹ್ಮಣರು ಮೆಟ್ಟುವುದು ಸರಿಯೆ ಎಂಬ ಚರ್ಚೆ ಬರುತ್ತದೆ. 'ಬ್ರಾಹ್ಮಣರ ಪಾದಗಳು ಪುಣ್ಯಕ್ಷೇತ್ರಗಳಷ್ಟೇ ಪವಿತ್ರವಾದವು' ಎಂದು ರಾಮ ಬೊಂಕುತ್ತಾನೆ. ಹಸು ಚರ್ಮದ ಚಪ್ಪಲಿಗಳನ್ನು ಮೆಟ್ಟುವ ಮೂಲಕ ಬ್ರಾಹ್ಮಣರು ಹಸುಗಳಿಗೆ ಮೋಕ್ಷ ಕಾಣಿಸುತ್ತಾರಂತೆ. ಯಾವತ್ತೂ ಕೆಸರು, ಕಲ್ಲು, ಮುಳ್ಳು ತುಳಿಯದ ಬ್ರಾಹ್ಮಣರ ಕೋಳಿಕಾಲುಗಳನ್ನು ತೊಳೆದು ನೀರು ಕುಡಿಯುವಂತೆ ಇತರ ಸಮುದಾಯಗಳಿಗೆ ಸೂಚಿಸಿದಂತಾಗಲಿಲ್ಲವೆ?

'ಪಂಚತಂತ್ರ'ದಲ್ಲಂತೂ ಬ್ರಾಹ್ಮಣ ಎಂದರೆ ದಯಾಳು, ಮೇಧಾವಿ, ಅಮಾಯಕ ಎಂದು ಆ ವರ್ಗವನ್ನು ಬಿಂಬಿಸಲಾಗಿದೆ. ಪಾಪ, ಪಶುಪಕ್ಷಿ, ಕ್ರಿಮಿಕೀಟಗಳಿಗೂ ಸಂಸ್ಕೃತ ಹೆಸರುಗಳು. ಅವಕ್ಕೂ ಮನುಷ್ಯರಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಅಂತರ ತಿಳಿದಿರುತ್ತದೆ.

'ಎರಡು ಗಿಳಿಗಳ ಕಥೆ' ನೋಡಿ. ಋಷ್ಯಾಶ್ರಮದಲ್ಲಿ ಬೆಳೆದ ಗಿಳಿ ರಮೇಶ್ ಅರವಿಂದ್ ತರಹಾನೋ, ಬೇಡನ ಮನೆಯಲ್ಲಿ ಬೆಳೆದ ಗಿಳಿ ದರ್ಶನ್ ತರಹಾನೋ ಮಾತನಾಡುತ್ತದೆ. ಋಷ್ಯಾಶ್ರಮದ ಹವನಹೋಮದ ಹೊಗೆ ಹಾಯಿಸುತ್ತಾ, ಗೋಪೂಜೆ, ಹುಲಿ-ಜಿಂಕೆಗಳ ಸಹಬಾಳ್ವೆಯಂಥ ಅಪ್ರಾಕೃತಿಕ ನಿಯಮಗಳನ್ನು ಎತ್ತಿ ಹಿಡಿಯುತ್ತಾ, ಉದ್ದಕ್ಕೂ ಬ್ರಾಹ್ಮಣ ಪಾರಮ್ಯ, ದೇಗುಲನಿರ್ಮಾಣ, ವಿಗ್ರಹಾರಾಧನೆ, ರಾಜನ ಕಾಲು ನೆಕ್ಕುವ ಗಲೀಜುತನ, ಚತುರ್ವರ್ಣ ಅಸಹ್ಯಗಳನ್ನೆಲ್ಲಾ ಭಾರತೀಯ ಸಂಸ್ಕೃತಿ-ಮೌಲ್ಯಗಳೆಂದು ಬಿಂಬಿಸಿರುವ ಈ ಸೋಕಾಲ್ಡ್ ಮಕ್ಕಳ ಸಾಹಿತ್ಯವನ್ನು ಬಹುಶಃ ಮನು ಎಂಬ ಪಾತಕಿಯ ಮಕ್ಕಳೇ ಬರೆದಿರಬೇಕು. ಇವನ್ನು ಜೀರ್ಣಿಸಿಕೊಂಡ ಮಕ್ಕಳು ಪುರೋಹಿತಶಾಹಿಯ ಪಲ್ಲಕ್ಕಿ ಹೊರುವ, ಅನ್ಯಧರ್ಮೀಯರನ್ನು ಮತ್ತು ದಲಿತರನ್ನು ಕೊಚ್ಚಿಕೊಲ್ಲುವ ಬ್ರಾಹ್ಮಣ ಗುಲಾಮರಾಗಿ ತಯಾರಾಗುತ್ತಾರೆ. ಆಗ 'ಮಕ್ಕಳಿವರೇನಮ್ಮ' ಎಂದು ತಲೆ ಚಚ್ಚಿಕೊಳ್ಳುವ ಬದಲು ಈಗಲೇ ಈ ವಿಷಕಾರಕ ಸಸ್ಯಗಳನ್ನು ಕಿತ್ತೆಸೆಯಬೇಕಲ್ಲವೇ?

● ಕೆ.ವಿ. ಚಂದ್ರ ಜ್ಯೋತಿ

ಪರಿಷ್ಕರಿತ ಹಾರೈಕೆ

ಬ್ರಹ್ಮ ಜ್ಞಾನ ಹೊಂದಿದ ಬ್ರಾಹ್ಮಣ
ಪುರದ ಹಿತ ಬಯಸುವ ಪುರೋಹಿತ
ಜ್ಞಾನದ ಬೆಳಕನ್ನು ಕೊಡುವ ನಿಜ ವಿಪ್ರರುಗಳ
ಮನದಾಳದ ಹಾರೈಕೆ
ಸರ್ವೇ ಜನಾ.... ಇಂದಿಗೂ ಜೀವಂತ
ಆದೂ ಉಗ್ರ ಬ್ರಾಹ್ಮಣ್ಯದ ಕಣ್ಮಣಿ
ಗೋಡ್ಸೆ ಮೆರೆಯುತ್ತಿರುವ ಈ ಕಾಲದ ನಡುವಿನಲಿ..!!
ಭಟ್ಟ, ಕಾರಂತ, ಮುತಾಲಿಕಾದಿ
ಹಾಲಾಹಲಗಳ ಮಧುವಿನಲಿ..!!?
ಸರ್ವೇ ಜನಾಃ ಸುಖಿನೋ ಭವಂತು..
ಸರ್ವೇ ಜನಾಃ ಸುಖಿ 'No' ಭವಂತು...



ಸಂಸ್ಕೃತಕ್ಕೆ [illegible]
ಇದೇ [illegible] ಬ್ರಾಹ್ಮಣ್ಯದ [illegible]

● ಆರ್.ಎಸ್.ಪಿ

ಬ್ರಾಹ್ಮಣ್ಯ ಅಂದು... ...ಇಂದು

ಭಾರತದ ಆಡಳಿತಯಂತ್ರದಲ್ಲಿ ಬ್ರಾಹ್ಮಣವಾದ

ನಮ್ಮ ಸಂವಿಧಾನದ ಆಶಯಗಳು ಈಡೇರಬೇಕಿದ್ದರೆ ದೇಶದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮೊದಲಾದ ವಿವಿಧ ರಂಗಗಳು ನಮ್ಮ ಸಮಾಜದ ಬಹುಸಂಸ್ಕೃತಿಯನ್ನು, ವೈವಿಧ್ಯತೆಯನ್ನು ಪ್ರತಿಬಿಂಬಿಸಬೇಕು. ಆದರೆ ಒಂದು ಪ್ರಬಲ ಜನವರ್ಗ ಇದನ್ನು ವಿರೋಧಿಸುತ್ತಾ ಅಡ್ಡಗಾಲು ಹಾಕುತ್ತಲೇ ಬಂದಿದೆ. ಇವರೇ ಏಕಜಾತಿ, ಏಕಧರ್ಮ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಬ್ರಾಹ್ಮಣವಾದಿಗಳು. ದೇಶ ಮತ್ತು ಧರ್ಮರಕ್ಷಕರ ಪಾತ್ರವನ್ನು ತಮಗೆ ತಾವೇ ಕೊಟ್ಟುಕೊಂಡವರು. ಭಾರತೀಯ ಸಮಾಜವನ್ನು ನಿರಂತರವಾಗಿ ಆಳುವ ಹಕ್ಕು ಕೇವಲ ತಮ್ಮದೆಂದು ವಾದಿಸುವವರು. ಬ್ರಾಹ್ಮಣವಾದಿಗಳು ಮನುಸ್ಮೃತಿ; ಮೂಢನಂಬಿಕೆ; ವಿಕೃತ ಚರಿತ್ರೆ; ಅನ್ಯ ಧರ್ಮ, ಪಂಥಗಳ ಮೇಲೆ ದಬ್ಬಾಳಿಕೆ ಇತ್ಯಾದಿಗಳ ಮೂಲಕ ಇಲ್ಲಿನ ಸಾಮಾಜಿಕ ಜೀವನದ ಮೇಲೆ ಬಹುತೇಕ ಸಂಪೂರ್ಣ ಆಧಿಪತ್ಯ ಸ್ಥಾಪಿಸುತ್ತ ಬಂದಿದ್ದಾರೆ. ಹಾಗೆ ನೋಡಿದರೆ ಬ್ರಾಹ್ಮಣ ವರ್ಗದಲ್ಲಿ ಬ್ರಾಹ್ಮಣವಾದಿಗಳ ಸಂಖ್ಯೆ ತೀರಾ ಚಿಕ್ಕದು. ಆದರೂ ಅನೇಕ ಬ್ರಾಹ್ಮಣೇತರ ಜನರನ್ನೂ ತಮ್ಮ ಗುಂಪಿಗೆ ಸೆಳೆದುಕೊಂಡಿರುವುದರ ಫಲವಾಗಿ ದೊಡ್ಡದಾಗಿ ಬೆಳೆದಿದ್ದಾರೆ.

ಭಾರತದಲ್ಲಿ ಧರ್ಮ ಹಾಗೂ ರಾಜಕಾರಣಗಳ ನಡುವಿನ ಅವಿನಾಭಾವ ಸಂಬಂಧ ಇಂದು ನಿನ್ನೆಯದಲ್ಲ. ಅನಾದಿಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಆರಂಭದ ನಾಯಕ ವ್ಯವಸ್ಥೆಯಲ್ಲಿ ವೈದಿಕ ಬ್ರಾಹ್ಮಣ ಪುರೋಹಿತರು ಮುಖ್ಯ ಸ್ಥಾನದಲ್ಲಿದ್ದರು. ಮುಂದೆ ರಾಜಪ್ರಭುತ್ವದ ಕಾಲದಲ್ಲಿ ಆಸ್ಥಾನ ಪುರೋಹಿತ, ಮಂತ್ರಿಗಳ ಸ್ಥಾನಗಳನ್ನು ಪಡೆದುಕೊಂಡರಲ್ಲದೆ ಬೇಹುಗಾರ, ಗೂಢಚಾರರಾಗಿಯೂ ಕಾರ್ಯನಿರ್ವಹಿಸಿದರು. ನಂತರ ಮುಸಲ್ಮಾನ ಅರಸರ ಆಳ್ವಿಕೆಯಲ್ಲೂ ಧರ್ಮ, ರಾಜಕಾರಣಗಳ ಮೈತ್ರಿಯನ್ನು ಕಾಣಬಹುದು. ಚಿಸ್ತಿ ಪಂಥದ ಪೋಷಕರಾಗಿದ್ದ ಮುಸ್ಲಿಂ ದೊರೆಗಳು ಪದೇಪದೇ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ಸಾಧುಸಂತರ ಆಶೀರ್ವಾದ ಪಡೆದುಕೊಳ್ಳುತ್ತಿದ್ದರು. ತರುವಾಯ ದೇಶವನ್ನಾಳಿದ ಬ್ರಿಟಿಷರು ರಾಜ್ಯಾಡಳಿತದಿಂದ ಧರ್ಮವನ್ನು ದೂರವಿಡುವ ನೀತಿಯನ್ನು ಅನುಸರಿಸಿದರು. ಆದೇ ವೇಳೆ ಭಾರತೀಯ ಸಮಾಜವನ್ನು ಧರ್ಮದ ನೆಲೆಯಲ್ಲಿ ಒಡೆಯಲೆತ್ನಿಸಿದವರೂ ಅವರೇ. ಬ್ರಿಟಿಷರ ಕಾಲದಲ್ಲಿ ಬ್ರಾಹ್ಮಣರು ಆಡಳಿತದ ಪ್ರಮುಖ ಸ್ಥಾನಗಳನ್ನು ಆಕ್ರಮಿಸಿಕೊಂಡರಾದರೂ ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪಕ್ಕೆ ಅವಕಾಶವಿರಲಿಲ್ಲ. 19ನೇ ಶತಮಾನದ ಉತ್ತರಾರ್ಧದಲ್ಲಿ ಜ್ಯೋತಿಬಾ ಫುಲೆ, ರಾಮಸ್ವಾಮಿ ಪೆರಿಯರ್ ಮತ್ತು ನಾರಾಯಣ ಗುರುಗಳಂಥವರು ಆರಂಭಿಸಿದ ಸಾಮಾಜಿಕ ಸುಧಾರಣಾ ಚಳವಳಿ ಬ್ರಾಹ್ಮಣವಾದಿಗಳಿಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಿತು. 19ನೇ ಶತಮಾನ ಕೊನೆಗಾಗುವಾಗ ಚಳವಳಿ ದೇಶದ ಇತರೆಡೆಗಳಿಗೂ ವ್ಯಾಪಿಸಲಾರಂಭಿಸಿತು. ಈ ಬೆಳವಣಿಗೆಗಳಿಂದ ಬ್ರಾಹ್ಮಣವಾದಿಗಳು ಭಾರೀ ಆತಂಕಕ್ಕೊಳಗಾದರು. ತಮ್ಮ ಹಿಂದಿನ ಪ್ರಾಬಲ್ಯವನ್ನು ಮರುಸ್ಥಾಪಿಸಲೋಸುಗ ಕಾರ್ಯವ್ಯೂಹವೊಂದನ್ನು ಹೆಣೆದರು. ಆ ಸನ್ನಿವೇಶದಲ್ಲಿ ಹುಟ್ಟಿಕೊಂಡ ಹಿಂದೂತ್ವ ಸಿದ್ಧಾಂತ ಇಂದು ಇಡೀ ದೇಶವನ್ನು ಗ್ರಾಸಿಸಿಸುತ್ತ ಕೊಂಡೊಯ್ಯುತ್ತಿದೆ.

ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಡಿಯಲ್ಲಿ ರಾಜ್ಯಾಡಳಿತವನ್ನು ಧರ್ಮಾತೀತವಾಗಿರಿಸಲು ನಿರ್ಧರಿಸಲಾಯಿತಾದರೂ ಅದೀಗ ಬರಬರುತ್ತಾ ರಾಯನ ಕುದುರೆ ಕತ್ತೆಯಂತಾಗಿದೆ. ಭಾರತದ ಸೆಕ್ಯೂಲರ್ ಆಗಸವನ್ನು ಬ್ರಾಹ್ಮಣವಾದದ ದಟ್ಟ ಕಾರ್ಮೋಡಗಳು ಆವರಿಸಿಕೊಳ್ಳುತ್ತಿವೆ. ಜಾತ್ಯತೀತತೆಯ ತೆಳ್ಳನೆಯ ಪರದೆಯ ಹಿಂದೆ ಭಾರತದ ಸಾರ್ವಜನಿಕ ವಲಯಗಳ ಹಿಂದೂಕರಣ (ಅರ್ಥಾತ್ ಬ್ರಾಹ್ಮಣೀಕರಣ) ವ್ಯಾಪಕವಾಗಿ ನಡೆಯುತ್ತಿದೆ. ವಾಸ್ತವಾಂಶ ಏನೆಂದರೆ ಸ್ವಾತಂತ್ರ್ಯಾನಂತರದ ಸರಕಾರಗಳು ಈ ದೇಶದಲ್ಲಿರುವ ವಿವಿಧ ಮತಧರ್ಮಗಳಿಗೆ ಸಮಾನ ಗೌರವ ತೋರುವ ಗುಣವನ್ನು ಅಥವಾ ತಾಟಸ್ಥದ ಧೋರಣೆಯನ್ನು ಅಳವಡಿಸಿಕೊಂಡೇ ಇಲ್ಲ, ಬದಲಿಗೆ ಜಾತ್ಯತೀತತೆಯ ತತ್ವಗಳಿಗೆ ಎಳ್ಳುನೀರು ಬಿಟ್ಟು ಹಿಂದೂ ಧರ್ಮಕ್ಕೇ ಹೆಚ್ಚು ಒತ್ತು ನೀಡಿ ಅದನ್ನೇ ರಾಷ್ಟ್ರ ಧರ್ಮವೆಂದು ಬಿಂಬಿಸಲಾಗುತ್ತಿದೆ.

ದೇಶದ ರಾಜಕಾರಣದ ಮೇಲೆ ಬ್ರಾಹ್ಮಣವಾದಿ ಶಕ್ತಿಗಳ ಪ್ರಭಾವ ವರ್ಧಿಸುತ್ತಿರುವುದನ್ನು ಸರಕಾರದ ಅಂಕಿಅಂಶಗಳೆ ಬಹಿರಂಗಪಡಿಸುತ್ತವೆ. ಸ್ವತಂತ್ರ ಭಾರತದ ಸಾರ್ವಜನಿಕ ಸೇವಾವಲಯದಲ್ಲಿ ಅರ್ಥಾತ್ ಅಧಿಕಾರಶಾಹಿಯಲ್ಲಿ (ಉಪಕಾರ್ಯದರ್ಶಿ ಹಾಗೂ ಮೇಲಿನ ಹುದ್ದೆಗಳು) ಕಾಯಸ್ಥರು, ಮುಸ್ಲಿಮರ ಮತ್ತು ಕ್ರೈಸ್ತರ ಪ್ರಾತಿನಿಧ್ಯ ಕಮ್ಮಿಯಾಗಿ ತೀರಾ ಕೆಳಮಟ್ಟಕ್ಕಿಳಿದಿದ್ದರೆ ಬ್ರಾಹ್ಮಣ ಅಧಿಕಾರಿಗಳ ಸಂಖ್ಯೆಯಲ್ಲಿ ಅಪಾರ ಏರಿಕೆಯಾಗಿದ್ದು ಅದು ಶೇಕಡಾ 70ಕ್ಕೂ ಅಧಿಕವಿದೆ. ಒಂದು ವ್ಯವಸ್ಥಿತ ತಂತ್ರಗಾರಿಕೆಯ ಫಲವಾಗಿ ಬ್ಯೂರೊಕ್ರಸಿ, ಭದ್ರತಾ ಪಡೆಗಳು, ಪೊಲೀಸ್ ಮತ್ತು ಗುಪ್ತಚರ ಇಲಾಖೆಗಳಲ್ಲಿ ಬ್ರಾಹ್ಮಣವಾದಿಗಳು ತೂರಿಕೊಂಡಿದ್ದಾರೆ.

ಈ ತ್ರಿಮೂರ್ತಿಗಳ ಕೂಟಕ್ಕೆ ಈಗ ಕೆಲವು ಮಾಧ್ಯಮಗಳೂ ಸೇರ್ಪಡೆಗೊಂಡಿವೆ. ಇದು ಹೇಗೆಂದರೆ ಇವತ್ತಿನ ದಿನಗಳಲ್ಲಿ ಅನೇಕ ಉದ್ಯಮಪತಿಗಳು ಮಾಧ್ಯಮಪತಿಗಳೂ ಆಗಿದ್ದಾರೆ; ಮಾಧ್ಯಮಪತಿಗಳಲ್ಲಿ ಉದ್ಯಮಪತಿಗಳೂ ಇದ್ದಾರೆ. ಪರಿಣಾಮವಾಗಿ ಬ್ರಾಹ್ಮಣವಾದಿಗಳಿಗೆ ಮಾಧ್ಯಮರಂಗದ ಆಯಕಟ್ಟಿನ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲು ಸಾಧ್ಯವಾಗಿದೆ. ಅವರು ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ, ಮಾಧ್ಯಮರಂಗದಲ್ಲಿ ಭದ್ರವಾಗಿ ತಳವೂರಿರುವ ಬ್ರಾಹ್ಮಣವಾದಿಗಳು ಇಂದು ಸರಕಾರ, ರಾಜಕಾರಣಿ, ಅಧಿಕಾರಶಾಹಿ, ಪೊಲೀಸ್, ವಾಣಿಜ್ಯೋದ್ಯಮಿ ಮುಂತಾದವರನ್ನು ನಿಯಂತ್ರಿಸಬಲ್ಲರು.

ಭಾರತದಲ್ಲಿ ಮತ್ತೊಮ್ಮೆ ಗರಿಗೆದರಿರುವ ಧರ್ಮ, ರಾಜಕಾರಣಗಳ ಮೈತ್ರಿಕೂಟಕ್ಕೆ ಕಾರ್ಪೋರೇಟ್ ವಲಯದ ಪ್ರವೇಶ ದೊಡ್ಡಮಟ್ಟದಲ್ಲಿ ನಡೆದಿದೆ. ಜಾಗತೀಕರಣದ ಪ್ರಕ್ರಿಯೆ ನಿರ್ಮಿಸಿಕೊಟ್ಟಿರುವ ಒಂದು ಪೂರಕ ವಾತಾವರಣದಲ್ಲಿ ಪ್ರಭುತ್ವ, ಕಾರ್ಪೋರೇಟ್ ಮತ್ತು ಧರ್ಮಗಳ ಈ ಕೂಡಿಕೆ ಸೊಂಪಾಗಿ ಬೆಳೆಯುತ್ತಿದೆ. ಇಂದು ದೇಶದ ಆಗುಹೋಗುಗಳನ್ನು ಹೆಚ್ಚುಕಮ್ಮಿ ಸಂಪೂರ್ಣವಾಗಿ ನಿಯಂತ್ರಿಸುತ್ತಿರುವ ಈ ತ್ರಿಮೂರ್ತಿಗಳ ಒಕ್ಕೂಟದಲ್ಲಿ ಬ್ರಾಹ್ಮಣವಾದಿಗಳದ್ದೆ ಮೇಲುಗೈ ಎಂಬುದನ್ನು ಗಮನಿಸಬೇಕು. ಈ ಅಪವಿತ್ರ ಮೈತ್ರಿಯ ಕತೆಯನ್ನು ಬಯಲಾಗುತ್ತಿರುವ ನೂರಾರು ಹಗರಣಗಳು ಹೇಳುತ್ತವೆ. ಟಿವಿ ವಾಹಿನಿಗಳಲ್ಲಿ ಹೆಚ್ಚಿರುವ ನಂಬಿಕೆ ಹಾಗೂ ಮೂಢನಂಬಿಕೆಯ ಕಾರ್ಯಕ್ರಮಗಳು ಹೇಳುತ್ತವೆ; ಜ್ಯೋತಿಷಿ, ವಾಸ್ತುತಜ್ಞರ ಭರಾಟೆಗಳು ಹೇಳುತ್ತವೆ. ಆಧುನಿಕ ಜಗದ್ಗುರುಗಳ ಕಾರುಭಾರುಗಳು ಹೇಳುತ್ತವೆ.

• ಕಾರ್ಪೋರೇಟ್‌ಗಳು ಮಠಮಂದಿರಗಳ ಜೀರ್ಣೋದ್ಧಾರ, ಬ್ರಹ್ಮಕಲಶದಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತಿವೆ. ಸಾಂಪ್ರದಾಯಿಕ ಹಿಂದೂ ಹಬ್ಬಗಳಿಗೆ ಹೊಸ ರೂಪು ಕೊಟ್ಟು ಜನಪ್ರಿಯಗೊಳಿಸಲಾಗುತ್ತಿದೆ. ಉದಾಹರಣೆಗೆ

• ಫೋರ್ಡ್ ಮೋಟರ್ ಸಂಸ್ಥೆ ಪಶ್ಚಿಮ ಬಂಗಾಳದ ಮಾಯಾಪುರದಲ್ಲಿರುವ ಹರೇಕೃಷ್ಣ ಮಂದಿರದ ನಿರ್ಮಾಣದಲ್ಲಿ ಪಾಲ್ಗೊಂಡಿದೆ.

• ತಮಿಳ್ನಾಡಿನಲ್ಲಿ ಮಂದಿರಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಟಿವಿಎಸ್ ಗುಂಪು ಸಕ್ರಿಯವಾಗಿ ಭಾಗಿಯಾಗಿದೆ.

ಪರಿಣಾಮವಾಗಿ ದೇವಾಲಯಗಳಿಗೆ ಭೇಟಿ ನೀಡುವ ಭಕ್ತರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗುತ್ತಿದೆ. ಇದರೊಂದಿಗೆ ಹೆಚ್ಚುತ್ತಿರುವ ಧಾರ್ಮಿಕ ಪ್ರವಾಸಗಳು ಮೂರೂ ಹಿತಾಸಕ್ತಗಳ ಪಾಲಿಗೆ ಬಹುದೊಡ್ಡ ಲಾಭದಾಯಕ ಉದ್ಯಮವಾಗಿಬಿಟ್ಟಿದೆ. ಜಮ್ಮುಕಾಶ್ಮೀರದ ವೈಷ್ಣೋದೇವಿ, ಗುಜರಾತಿನ ಶಬರಿ ಕುಂಭ, ಮಕರ ಸಂಕ್ರಾಂತಿ, ನವರಾತ್ರಿ ಉತ್ಸವ, ಮೈಸೂರು ದಸರಾ, ಶಬರಿಮಲೆಯ ಮಕರವಿಳಕ್ಕು ಮುಂತಾದ ಅನೇಕಾನೇಕ ನಿದರ್ಶನಗಳನ್ನು ಕೊಡಬಹುದು.

ಇನ್ನು ತಾವು ಧರ್ಮರಕ್ಷಕರೆಂದು ಭಾವಿಸಿಕೊಂಡಿರುವ ರಾಜಕಾರಣಿ, ಉದ್ಯಮಪತಿಗಳು ಮತ್ತು ಅವರ ಒಲೈಕೆಗೆ ನಿಂತಿರುವ ಧಾರ್ಮಿಕ ಗುರುಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ರವಿಶಂಕರ, ರಾಮದೇವ, ಆಸಾರಾಮ್, ಮಹೇಶ ಯೋಗಿ, ಅಮೃತಾನಂದಮಯಿ, ಚಿನ್ಮಯಾನಂದ



ಮುಂತಾದ ಸ್ವಘೋಷಿತ ದೇವಮಾನವರು ಮತ್ತು ಮಠಮಂದಿರಗಳು ಅಣಬೆಗಳ ಮಾದರಿಯಲ್ಲಿ ಅಸಂಖ್ಯಾತ ಗುರುಕುಲ, "ಡೀಮ್ಡ್" ವಿಶ್ವವಿದ್ಯಾನಿಲಯ, ಛತ್ರ, ಹೈಟೆಕ್ ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಿಸಿ ನಡೆಸುತ್ತಿದ್ದಾರೆ. ಸರಕಾರ ಇವುಗಳಿಗೆ ಒಂದೋ ಉಚಿತವಾಗಿ ಇಲ್ಲಾ ಕಮ್ಮಿ ಬೆಲೆಗೆ ಭೂಮಿ ಒದಗಿಸುತ್ತದೆ ಮಾತ್ರವಲ್ಲದೆ ತೆರಿಗೆ ವಿನಾಯಿತಿ/ರಿಯಾಯಿತಿ ಮತ್ತಿತರ ಸವಲತ್ತುಗಳನ್ನೂ ಕೊಡಮಾಡುತ್ತದೆ. ಸಾಲದ್ದಕ್ಕೆ ದೇಶವಿದೇಶಗಳಲ್ಲಿರುವ ಉದ್ಯಮಪತಿ ಮತ್ತಿತರ ಶಿಷ್ಯರುಗಳಿಂದ ಉದಾರ ಧನಸಹಾಯ ಹರಿದುಬರುತ್ತದೆ. ಒಂದೆರಡು ಉದಾಹರಣೆಗಳು:

• ರವಿಶಂಕರ ಸ್ವಾಮಿಯ "ಆರ್ಟ್ ಆಫ್ ಲಿವಿಂಗ್" ಮುಖ್ಯವಾಗಿ ಐಟಿ, ಬಿಟಿಗಳ ಮಧ್ಯಮವರ್ಗದ ಜನರನ್ನು ಗುರಿಯಾಗಿಸಿರುವ ಮಿಲಿಯಾಂತರ ಡಾಲರ್‌ಗಳ ಉದ್ಯಮ. ಈತನ ಆಶ್ರಮ ಮತ್ತು ಅದರ ಸುತ್ತಮುತ್ತಲಿನ ಭೂಮಿಯನ್ನು ಸರಕಾರದಿಂದ 99 ವರ್ಷಗಳ ಲೀಸಿಗೆ ಪಡೆಯಲಾಗಿದೆ. ಅಲ್ಲದೆ ಒರಿಸ್ಸಾ ಸರಕಾರ ಅಗ್ಗ ದರದಲ್ಲಿ ಒದಗಿಸಿದ 200 ಎಕರೆ ಜಮೀನಿನಲ್ಲಿ ಸ್ಥಾಪಿಸಲಾಗುವ "ಶ್ರೀಶ್ರೀ ಆರ್ಟ್ ಆಫ್ ಲಿವಿಂಗ್ ವಿಶ್ವವಿದ್ಯಾನಿಲಯ"ದಲ್ಲಿ ವಿಜ್ಞಾನ, ತಂತ್ರಜ್ಞಾನದ ಕೋರ್ಸುಗಳ ಜೊತೆಗೆ ಭಗವದ್ಗೀತೆ, ವೇದಾಂತ, ಯೋಗ ಮುಂತಾದ ವಿಷಯಗಳನ್ನೂ ಕಲಿಸಲಾಗುವುದಂತೆ.

• ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ವ್ಯಾಪಕವಾಗಿ ಹರಡುವುದಕ್ಕಾಗಿ ಆರೆಸ್ಸೆಸ್ ನಿರ್ಮಿಸಲು ಹೊರಟಿರುವ "ಕೇಶವ ವಿದ್ಯಾಪೀಠ ವಿಶ್ವವಿದ್ಯಾನಿಲಯ"ಕ್ಕೆ ರಾಜಸ್ಥಾನ ಸರಕಾರ 2300 ಎಕರೆಗಳಷ್ಟು ಜಾಗ ಮಂಜೂರು ಮಾಡಿದೆ. ಅಲ್ಲಿ ಕಾಲೇಜು' ಮಟ್ಟದಲ್ಲಿ ವೈದಿಕ ವಿಜ್ಞಾನಗಳನ್ನು ಕಲಿಸಲಾಗುವುದಂತೆ.

• ಮಿಲಿಯಾಧಿಪತಿ ಬಾಬಾ ರಾಮದೇವನಿಗೆ ಮಧ್ಯ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳು ದಾನವಾಗಿ ಕೊಟ್ಟಿರುವ ಎಕರೆಗಟ್ಟಲೆ ಭೂಮಿಗಳಲ್ಲಿ ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗುತ್ತಿದೆ. ಆತನ "ಪತಾಂಜಲಿ ಯೋಗ ಪೀಠ"ಕ್ಕೆ ಅನಿಲ್ ಅಗರ್‌ವಾಲ್, ಹಿಂದೂಜಾ ಸೋದರರು, ಲಕ್ಷ್ಮಿ ಮಿತ್ತಲ್ ಮುಂತಾದ ಉದ್ಯಮಪತಿಗಳು ಉದಾರ ಧನಸಹಾಯ ನೀಡಿದ್ದಾರೆ.

ಮಧ್ಯಯುಗದಲ್ಲಿ ಐರೋಪ್ಯ ದೇಶಗಳ ರಾಜ್ಯಾಡಳಿತದಲ್ಲಿ ಚರ್ಚಿನ ಹಸ್ತಕ್ಷೇಪ ನಡೆಯುತ್ತಿತ್ತು, ಅದು ಮಿತಿಮೀರಿದಾಗ ಒಂದು ಹಂತದಲ್ಲಿ ಪ್ರಭುತ್ವ ಮತ್ತು ಧರ್ಮದ ಮಧ್ಯೆ ಸಂಘರ್ಷ ತಲೆದೋರಿತು. ಅಂತಿಮವಾಗಿ 16[illegible] ಶತಮಾನದಲ್ಲಿ ನಡೆದ ಮತಸುಧಾರಣೆ ವ್ಯಾಪಕ ಬದಲಾವಣೆಗೆ ಕಾರಣವಾಯಿತು. ಮತಸುಧಾರಣೆಯ ಕ್ರಾಂತಿಯ ನಂತರದ ಬೌದ್ಧಿಕ ಸ್ವಾತಂತ್ರ್ಯ ಮತ್ತೆ ಚಿಗುರಿ, ವೈಚಾರಿಕತೆ ಬೆಳೆದು ಕುರುಡು ನಂಬಿಕೆ ಮತ್ತು ಕುರುಡು ಸಿದ್ಧಾಂತಗಳು ಅಳಿದು ಆಧುನಿಕತೆಯ ದಿಕ್ಕಿನಲ್ಲಿ ದಾಪುಗಾಲಿಟ್ಟ ಯುರೋಪ್ ಅಂದು ಮುಂದಿಟ್ಟ ಹೆಜ್ಜೆಯನ್ನು ಇದುವರೆಗೆ ಹಿಂದೆಗೆದುಕೊಂಡಿಲ್ಲ.

ಅದೇ ಭಾರತದಲ್ಲಾದರೆ ಬುದ್ಧ ಮಹಾವೀರ, ಬಸವ[illegible] ಜ್ಯೋತಿಬಾ ಫುಲೆ, ರಾಮಸ್ವಾಮಿ ಪೆರಿಯರ್, ನಾರಾಯಣ ಗುರು ಮುಂತಾದವರಿಂದ ಅನೇಕ ಚಳವಳಿಗಳು ನಡೆದಿವೆಯಾದರೂ ಪ್ರತಿಬಾರಿಯೂ ಬ್ರಾಹ್ಮಣವಾದ ಅವುಗಳನ್ನು ಮೆಟ್ಟಿನಿಂತು ತಾನೇ ವಿಜೃಂಭಿಸಿದೆ. ಬ್ರಾಹ್ಮಣವಾದ ಭಾರತದ ಸಕಲ ಸಾಧನೆಗಳನ್ನು ಹಿಂದೂ ಧರ್ಮದೊಂದಿಗೆ ಬೆಸೆಯುತ್ತದೆ. ಅನ್ಯ ಜಾತಿ, ಅನ್ಯ ಧರ್ಮೀಯರ ಕೊಡುಗೆಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತದೆ. ಸತ್ಯ ಏನೆಂದರೆ ಭಾರತ ಇಂದು ಏನಾಗಿದೆಯೋ ಅದು ಕೇವಲ "ಹಿಂದೂ ಬುದ್ಧಿಶಕ್ತಿ" ಒಂದರಿಂದಲೇ ಆಗಿರುವುದಲ್ಲ. ನಾಸ್ತಿಕರನ್ನೂ ಒಳಗೊಂಡು ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಭಾರತೀಯರೆಲ್ಲರೂ ಅದಕ್ಕಾಗಿ ಹೋರಾಟ ಮಾಡಿದ್ದಾರೆ, ಶ್ರಮ ಪಟ್ಟಿದ್ದಾರೆ, ತ್ಯಾಗ ಮಾಡಿದ್ದಾರೆ. ಭಾರತೀಯ ಸಮಾಜವನ್ನು ಬ್ರಾಹ್ಮಣವಾದದ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸದ ಹೊರತು ಭಾರತದ ಸಮಗ್ರ ಅಭಿವೃದ್ಧಿ ಅಥವಾ ಸರ್ವೋದಯ ಅಸಾಧ್ಯ.

(ಹೆಚ್ಚಿನ ವಿವರಗಳಿಗೆ ಓದಿ: *The Go[illegible] Market* - ಮೀರಾ ನಂದ[illegible])


• ಸುರೇಶ್ ಭಟ್ ಬಾಕ್ರಬೈಲ್

ಬ್ರಾಹ್ಮಣ್ಯಕ್ಕೆ ಹಿಂದೂತ್ವದ ಮುಖವಾಡ

ಬ್ರಾಹ್ಮಣ್ಯ ಎಂಬುದು ಜೀವವಿರೋಧಿ ಸಿದ್ಧಾಂತ. ಪ್ರಜ್ಞಾವಂತರಲ್ಲಿ ಈ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಬ್ರಾಹ್ಮಣ್ಯ ಬಿಕ್ಕಟ್ಟಿನ ಸುಳಿಗೆ ಸಿಲುಕಿದಾಗಲೆಲ್ಲ ಮುಖವಾಡವನ್ನು ಧರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಇಂದಿಗೂ ಅದೇ ಚಾಳಿ ಮುಂದುವರೆಸಿದೆ. ಬ್ರಾಹ್ಮಣ್ಯದ ಹುನ್ನಾರದ ಬಗ್ಗೆ ಬಸವಣ್ಣನವರಿಂದ ಹಿಡಿದು ಡಾ.ಅಂಬೇಡ್ಕರ್‌ವರೆಗೆ ನಾನಾ ಸಮಾಜ ಚಿಂತಕರು, ವಿದ್ವಾಂಸರು ವಿಶ್ಲೇಷಣೆ ಮಾಡುತ್ತಲೇ ಬಂದಿದ್ದಾರೆ. ಆದರೆ ವಿಮರ್ಶೆಗಳು ಎಷ್ಟೇ ಬರಲಿ, ಆದರೆ ಈ ಮನುಷ್ಯ ವಿರೋಧಿ ಸಿದ್ಧಾಂತ ಮರುಜನ್ಮ ಪಡೆಯುತ್ತಲೇ ಇದೆ. ಅಂತಲೇ ಅದರ ವಿರುದ್ಧ ನಿರಂತರ ಸಂಘರ್ಷ ಅಗತ್ಯವಾಗಿದೆ.

ಗೌತಮ ಬುದ್ಧನನ್ನು ಮುಗಿಸಿ ಆತ ಸ್ಥಾಪಿಸಿದ ಧರ್ಮವನ್ನು ಈ ದೇಶದಿಂದ ಓಡಿಸಿದ ಕುಖ್ಯಾತಿ ಬ್ರಾಹ್ಮಣ್ಯಕ್ಕಿದೆ. ಛತ್ರಪತಿ ಶಿವಾಜಿ ಬದುಕಿದ್ದಾಗ ಆತ ಪಟ್ಟಾಭಿಷೇಕ ಮಾಡಿಕೊಳ್ಳದಂತೆ ಚಿತ್ರಹಿಂಸೆ ನೀಡಿದ ಬ್ರಾಹ್ಮಣ್ಯ ನಂತರ ಆತನನ್ನು ಹಿಂದೂ ಸಾಮ್ರಾಟನೆಂದು ವಿಜೃಂಭಿಸಿ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ. ಅಂತಲೇ ಸ್ವಾಮಿ ವಿವೇಕಾನಂದರು ಪುರೋಹಿತಶಾಹಿಯನ್ನು ಕಂಡರೆ ಉರಿದು ಬೀಳುತ್ತಿದ್ದರು. ಬಸವಣ್ಣನವರು ಬ್ರಾಹ್ಮಣ್ಯವನ್ನೇ ಧಿಕ್ಕರಿಸಿ ಜನಿವಾರ ಹರಿದು ಒಗೆದು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಮಾರ್ಗ ಹೇಳಿದರು. ಚಾರ್ವಾಕರು ಸೇರಿದಂತೆ ಪುರೋಹಿತಶಾಹಿ ವಿರುದ್ಧ ಸಿಡಿದೆದ್ದ ಚಿಂತನೆಗಳನ್ನು ಬ್ರಾಹ್ಮಣ್ಯ ಅತ್ಯಂತ ವ್ಯವಸ್ಥಿತವಾಗಿ ನಾಶ ಮಾಡುತ್ತ ಬಂದಿದೆ.

ಈಗ ಬ್ರಾಹ್ಮಣ್ಯ ಹಿಂದೂತ್ವದ ಮುಖವಾಡ




ಹಾಕಿಕೊಂಡು ಬಂದಿದೆ. ಪುಣೆಯ ಪೇಶ್ವೆ ಸಾಮ್ರಾಜ್ಯ ಕುಸಿದು ಬಿದ್ದನಂತರ ಜ್ಯೋತಿಬಾ ಫುಲೆ, ಶಾಹು ಮಹಾರಾಜ್, ಆಗರಕರ್ ಅಂತಹವರು ಮನುವಾದದ ದಾಸ್ಯದ ಬೇರುಗಳನ್ನು ಕತ್ತರಿಸಿ ಹಾಕಲು ಸುತ್ತಿಗೆ ಹಿಡಿದು ನಿಂತಾಗ ಬ್ರಾಹ್ಮಣ್ಯ ಬಿಕ್ಕಟ್ಟಿನ ಸುಳಿಗೆ ಸಿಲುಕಿತು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಸ್ವಾಭಿಮಾನದ ಬಾವುಟ ಎತ್ತಿಹಿಡಿದು ಬ್ರಾಹ್ಮಣ್ಯದ ಹುಳುಕುಗಳನ್ನು ಬಯಲಿಗೆ ಎಳೆಯತೊಡಗಿದಾಗ, ಅಂದರೆ ಕಳೆದ ಶತಮಾನದ 2[illegible] ದಶಕದಲ್ಲಿ ನಾಗಪುರದಲ್ಲಿ ಬ್ರಾಹ್ಮಣ್ಯದ ರಕ್ಷಣೆಗಾಗಿ ರಾಷ್ಟ್ರೀಯ ಸ್ವಯಂ-ಸೇವಕ ಸಂಘ (ಆರ್‌ಎಸ್‌ಎಸ್) ಜನ್ಮತಾಳಿತು.

ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳಬೇಕೆಂದರೆ ಬರೀ ಬ್ರಾಹ್ಮಣರಷ್ಟೇ ಚಡಪಡಿಸಿದರೆ ಸಾಲದು, ಶೂದ್ರ ಸಮುದಾಯವನ್ನು ಹಿಂದೂತ್ವದ ಗೂಟಕ್ಕೆ ಕಟ್ಟಿ ಹಾಕಿದರೆ ಬ್ರಾಹ್ಮಣ್ಯವನ್ನು ಕಾಪಾಡಬಹುದು ಎಂದು ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರ ಒಂದು ಗುಂಪು ಸಾಂಸ್ಕೃತಿಕ ರಾಷ್ಟ್ರವಾದದ ಸಿದ್ಧಾಂತದ ಹೆಸರಿನಲ್ಲಿ ಆರ್‌ಎಸ್‌ಎಸ್ ಎಂಬ ಜೀವ ವಿರೋಧಿ ಸಂಸ್ಥೆಯನ್ನು ಸ್ಥಾಪಿಸಿತು. ಇದಕ್ಕೆ ಸೈದ್ಧಾಂತಿಕ ಅಡಿಪಾಯವಾಗಿ ಮನುವಾದವನ್ನು ಮಾತ್ರ ಬಳಸಿಕೊಂಡರೆ ಸಾಲದು, ಇಟಲಿಯ ಮುಸಲೋನಿಯ ಫ್ಯಾಸಿಸಂ ಮತ್ತು ಜರ್ಮನಿಯ ಹಿಟ್ಲರ್‌ನ ನಾಜಿವಾದದ ಜನಾಂಗದ್ವೇಷಿ ಸಿದ್ಧಾಂತಗಳನ್ನು ಮಿಶ್ರಣ ಮಾಡಬೇಕೆಂದು ಹುನ್ನಾರ ನಡೆಸಿತು. ಇದರ ಭಾಗವಾಗಿ ಆರ್‌ಎಸ್‌ಎಸ್ ಸ್ಥಾಪಕರಲ್ಲಿ ಒಬ್ಬರಾದ ಡಾ. ಮುಂಜೆ ಸ್ವತಃ ಜರ್ಮನಿ ಮತ್ತು ಇಟಲಿಗೆ ಹೋಗಿ ಹಿಟ್ಲರ್ ಮತ್ತು ಮುಸಲೋನಿ ಅವರನ್ನು ಭೇಟಿಯಾಗಿ ಅಲ್ಲಿಂದ ತಂದ ಎರವಲು ಸಿದ್ಧಾಂತಗಳಿಗೆ ಮನುವಾದದ ಸ್ಪರ್ಶ ನೀಡಿದರು.

ಹಿಂದೂರಾಷ್ಟ್ರ ಸ್ಥಾಪನೆ ಗುರಿ ಹೊಂದಿದ ಆರ್‌ಎಸ್‌ಎಸ್ ದಲಿತರು ಮತ್ತು ಹಿಂದುಳಿದವರನ್ನು ಅಪ್ಪಿಕೊಂಡಂತೆ ನಟಿಸಿ ಮುಸಲ್ಮಾನರು ಮತ್ತು ಕ್ರೈಸ್ತರ ವಿರುದ್ಧ ಎತ್ತಿಕಟ್ಟಿ[illegible]

ಬ್ರಾಹ್ಮಣ್ಯವನ್ನು ವಿರೋಧಿಸಿದ್ದ ಶರಣರ ಚಳವಳಿ



2600 ವರ್ಷಗಳ ಹಿಂದೆ ಚಾತುರ್ವರ್ಣಗಳು ...ಟ್ಟಿಗೊಳ್ಳುವ ಸಂದರ್ಭದಲ್ಲೇ ಅವುಗಳ ಗಂಡಾಂತರಕಾರಿ ...ರಿಣಾಮದ ಬಗ್ಗೆ ಗೌತಮಬುದ್ಧ ನೀಡಿದ ಎಚ್ಚರಿಕೆ ...ಫಲಪ್ರದವಾಗಲಿಲ್ಲ. ನಂತರದ ಬೆಳವಣಿಗೆಯಲ್ಲಿ ...ವರ್ಣೀಯರು ತಮ್ಮ ವರ್ಣಗಳನ್ನು ಶ್ರೇಷ್ಠತೆಯ ಮತ್ತು ...ಶೋಷಣೆಯ ಮೂಲ ಮಾಡಿಕೊಳ್ಳುವುದರಲ್ಲಿ ...ಲೀನರಾದರು. ಶೂದ್ರ ವರ್ಣದ ಬಹುಜನ ಸಮುದಾಯ ಇವರ ಕುತಂತ್ರಕ್ಕೆ ಬಲಿಯಾಯಿತು. ...ದರ ದುಷ್ಪರಿಣಾಮವೇ ಮನುಸ್ಮೃತಿ ಮತ್ತು ಮನುವಾದಿಗಳ ಉದಯ. ಮನುಸ್ಮೃತಿಯು ಶೂದ್ರ ಮತ್ತು ಅಸ್ಪೃಶ್ಯ ಕಾಯಕಜೀವಿಗಳನ್ನು ರಸಾತಳಕ್ಕೆ ...ಟ್ಟಿತು. ಅಸ್ಪೃಶ್ಯರನ್ನು ಪ್ರಾಣಿಪ್ರಪಂಚದಲ್ಲಿ ಒಯ್ದು ...ಸಿತು.

ಹೀಗಾಗಿ ಇಡೀ ಭರತಖಂಡದ ಮಾನಸಿಕ, ...ತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ವಾಸ್ಥ್ಯ ...ಹಾಗೆಟ್ಟಿತು. ಇವೆಲ್ಲವುಗಳ ಆರೋಗ್ಯ ಕಾಪಾಡುವುದೇ ಬಸವಣ್ಣನವರ ಗುರಿಯಾಗಿತ್ತು. 'ಬ್ರಾಹ್ಮಣೋ ಧರ್ಮ ...ಮೂಲಃ' ಎಂದು ಮನುಸ್ಮೃತಿ ಹೇಳಿತ್ತು. ಆದರೆ ...ದಯವೇ ಧರ್ಮದ ಮೂಲ' ಎಂದು ಬಸವಣ್ಣನವರು ತಿಳಿಸಿದರು.


'ಕುಲವನರಸುವರೆ ಶರಣರಲ್ಲಿ, ಜಾತಿಸಂಕರವಾದಬಳಿಕ?' ಎಂದು ಬಸವಣ್ಣನವರು ...ಶ್ನಿಸಿದರು. ಬಹುದೇವರುಗಳನ್ನು ಅಲ್ಲಗಳೆದು ಏಕದೇವೋಪಾಸನೆಗೆ ಒತ್ತುಕೊಟ್ಟರು. ಆ ಏಕದೇವನ ...ಮುಹು ಆದಂಥ ಇಷ್ಟಲಿಂಗದ ಪೂಜೆಯನ್ನು ಯಾವುದೇ ...ರ್ಚಲ್ಲದೆ ಮಾಡುವ ಕ್ರಮವನ್ನು ಹೇಳಿಕೊಟ್ಟರು. ಇಷ್ಟಲಿಂಗ ದೀಕ್ಷೆಯ ಮೂಲಕ ಹಲವು ಹದಿನೆಂಟು ಜಾತಿಗಳನ್ನೆಲ್ಲ ಒಂದುಗೂಡಿಸಿದರು. ರಕ್ತಸಂಬಂಧಕ್ಕೆ ಅವಕಾಶ ...ಸುವುದರ ಮೂಲಕ ಶರಣ ಸಂಕುಲ ಸ್ಥಾಪಿಸಿ ಜಾತಿಗಳ ನಿರ್ಮೂಲನ ಮಾಡಿದರು.

ಶರಣರು ಅವರ ಮಾತುಗಳನ್ನು ಪಾಲಿಸಿದ್ದರಿಂದಲೇ ವಚನಗಳಂಥ ವಿಶಿಷ್ಟವಾದ ವಿಶ್ವಪ್ರಜ್ಞೆಯ ದುಡಿಯುವ ...ರ್ಗದ ಸಾಹಿತ್ಯ ನಿರ್ಮಾಣವಾಯಿತು. ಮಾನವತಾ ವಿರೋಧಿ ಸಿದ್ಧಾಂತವಾದ ಬ್ರಾಹ್ಮಣ್ಯದ ವಿರುದ್ಧ ವಿವಿಧ ಶರಣರು ರಚಿಸಿದ ಹಲವು ವಚನಗಳನ್ನು ಮತ್ತು ಅವುಗಳ ಅರ್ಥವನ್ನು ಇಲ್ಲಿ ಆಯ್ಕೆ ಮಾಡಿಕೊಡಲಾಗಿದೆ.

"...ಲ್ಲಿಯ ಹಾಕಿ ನೆಲ್ಲವ ತುಳಿದು
...ಬ್ಬಿಯ ಸಿಕ್ಕಿಸುವ ಕಳ್ಳನಂತೆ
...ಗದ್ವೈತವ ಕಲಿತು
...ಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
...ತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
...ದೇತರ ನುಡಿ? ಮಾತಿನ ಮ್ಮರೆ
...ರವ್ವೈರಿ ಮಾರೇಶ್ವರ."

– ನಗೆಯ ಮಾರಿತಂದೆ

...ಬಲೆಬೀಸಿ ಕಾಳುಹಾಕಿ ಗುಬ್ಬಿಗಳನ್ನು ಹಿಡಿಯುವ ...ಗೂ ಗಾಳ ಹಾಕಿ ಮೀನು ಹಿಡಿಯುವ ಎರಡು ಚಿತ್ರಣಗಳೊಂದಿಗೆ ನಗೆಯ ಮಾರಿ ತಂದೆ ವಾಗದ್ವೈತದ ಹಿಂದಿರುವ ಮೋಸದಾಟವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಹಕ್ಕಿಗೆ ಹಾಕುವ ಧಾನ್ಯ ಮತ್ತು ಮೀನಿಗೆ ಹಾಕುವ ಆಹಾರ ಅವುಗಳನ್ನು ಬದುಕಿಸಲಿಕ್ಕಲ್ಲ, ಸಾಯಿಸಲಿಕ್ಕೆ! ಸಂಸ್ಕೃತವೆಂಬ ಮಾತಿನಂಗಡಿಯ ಸರಕಿನಿಂದ ಈ ಮೋಸವನ್ನು ಸಾಧಿಸಲಾಗಿದೆ. ಅದೇತರದ ಮಾತು?





ಅದು ಸತ್ಯವನ್ನು ಮರೆಮಾಚುವಂಥದ್ದು ಎಂದು ನಗೆಯ ಮಾರಿತಂದೆ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಅನುಭವದಿಂದ ಕೂಡಿದ ಈ ಪ್ರಜ್ಞೆಯೊಂದಿಗೆ ವಚನಕಾರರು ಅನುಭಾವದ ಮೆಟ್ಟಿಲೇರಿದ್ದಾರೆ.

"ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೋ?
ಹಗಲು ಕಾಣದ ಗೂಗೆ ಇರುಳಾಯಿತ್ತೆಂದರೆ, ಜಗಕ್ಕೆ
ಇರುಳಪ್ಪುದೆ?
ಹೋಮದ ನೇಮದಲ್ಲಿ ಹೋತವ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು, ಕೂಡಲ
ಸಂಗಮದೇವಾ?"

–ಬಸವಣ್ಣ

ಶರಣರು ವ್ಯರ್ಥ ವಾಗ್ಯುದ್ಧಕ್ಕೆ ಇಳಿಯುವವರಲ್ಲ. ತಲೆಸುತ್ತುವ ಇಟ್ಟಿಯ ಹಣ್ಣನ್ನು ತಿಂದು ತನ್ನ ಮುಂದಿರುವುದೆಲ್ಲ ತಿರುಗುತ್ತಿದೆ ಎಂದು ಹೇಳುವ ನರಿಯ ಹಾಗೆ ನಾಮ ಬಡಿದುಕೊಂಡ ದ್ವಿಜರು ಹೇಳುತ್ತಾರೆ. ಗೂಬೆಗೆ ಹಗಲೆಂದರೆ ಆಗದು. ಅದು 'ಕತ್ತಲಾಯಿತು' ಎಂದರೆ ಕತ್ತಲಾಗುವುದೆ? ಹೀಗೆ ಇಲ್ಲದ್ದನ್ನು ಇರುವ ಹಾಗೆ ಹೇಳುತ್ತ ಭ್ರಮೆಯ ಸೃಷ್ಟಿಸುವ ವೈದಿಕ ಸಾಹಿತ್ಯದಿಂದ ಪ್ರಭಾವಿತರಾದ ದ್ವಿಜರು ಯಜ್ಞಕ್ಕೆ ಬಲಿ ಕೊಟ್ಟ ಹೋತವನ್ನು ತಿಂದು ಉಪದೇಶ ಮಾಡುವವರು. ಇಂಥವರೇ ಹೊಲೆಯರು. (ಮನುಸ್ಮೃತಿಯ ಒತ್ತಡದಿಂದಾಗಿ ಹೊಲಗೇರಿಯಲ್ಲಿ ಉಳಿದವರು ಹೊಲೆಯರಲ್ಲ) ಹೀಗೆ ಬಸವಣ್ಣನವರು ತಮ್ಮ ಕಾಲದ ವಾಸ್ತವವನ್ನು ವಚನದಲ್ಲಿ ದಾಖಲಿಸಿದ್ದಾರೆ. ಇಂಥ ವಿತಂಡವಾದಿಗಳ ಜೊತೆ ವಾಗ್ವಾದ ಮಾಡಿ ಗೆಲ್ಲುವುದು ಕೂಡ ವ್ಯರ್ಥ ಎಂದು ಸೂಚಿಸಿದ್ದಾರೆ.

"ವೇದಂಗಳ ಹಿಂದೆ ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು."

– ಆದಯ್ಯ

ವೇದಾಗಮಗಳ ಸಂಸ್ಕೃತಿಯು ಶಬ್ದಜಾಲಗಳ ಸಂಸ್ಕೃತಿಯೇ ಆಗಿದೆ. ಈ ಶಬ್ದಜಾಲಗಳಲ್ಲಿ ಅಸಮಾನತೆ, ಜಾತಿ, ಅಸ್ಪೃಶ್ಯತೆ ಮತ್ತು ಅರ್ಧ ಜಗತ್ತನ್ನು ಪ್ರತಿನಿಧಿಸುವ ಹೆಣ್ಣಿನ ವ್ಯಕ್ತಿತ್ವವನ್ನು ಹಿಡಿದಿಡಲಾಗಿದೆ. ಕಾಯಕ ಜೀವಿಗಳು ಈ ಶಬ್ದಜಾಲಗಳಿಗೆ ಸಿಲುಕಿ ಬಳಲಬಾರದು. ವೇದ, ಶಾಸ್ತ್ರ ಪುರಾಣ, ಆಗಮಗಳಿಗೆ ಮೋಹಗೊಂಡು ತಮ್ಮತನವನ್ನು ಕಳೆದುಕೊಳ್ಳಬಾರದು ಎಂಬುದು ಆದಯ್ಯನವರ ಆಶಯವಾಗಿದೆ.

"ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ.
ಶಾಸ್ತ್ರದವರನೊಲ್ಲದೆ ಶಿವರಾತ್ರಿಯ ಸಂಕಣ್ಣಂಗೊಲಿದ.
ಆಗಮದವರನೊಲ್ಲದೆ ತೆಲುಗು ಜೊಮ್ಮಯ್ಯಂಗೊಲಿದ,
ಪುರಾಣಕರ್ಮಿಗಳೆಂಬ ವಿಶಿಷ್ಟಬ್ರಹ್ಮರನೊಲ್ಲದೆ
ಉದ್ಭಟಯ್ಯಂಗೊಲಿದ
ಅಣ್ಣಾ ಕೇಳಾ ಸೋಜಿಗವಃ ದಾಸ ದುಗ್ಗಳೆಯರಿಗೊಲಿದ
ಮುಕ್ಕಣ್ಣ ಸೊಡ್ಡಳ, ಹಾರುವಣ್ಣಗಳಿಗೆ ಹೇಸಿ
ಕದವನಿಕ್ಕಿಗೊಂಡನು."

–ಸೊಡ್ಡಳ ಬಾಚರಸ

ದೇವರು ಕೂಡ ದುಡಿಯುವವರ, ಹಿಂದುಳಿದವರ, ಅಸ್ಪೃಶ್ಯರ ಮತ್ತು ಮಹಿಳೆಯರ ಪರವಾಗಿ ಇದ್ದಾನೆ. ದೇವರು ಯಾರನ್ನು ತಿರಸ್ಕರಿಸುವನು ಮತ್ತು ಯಾರನ್ನು ಪುರಸ್ಕರಿಸುವನು ಎಂಬುದನ್ನು ಸೊಡ್ಡಳ ಬಾಚರಸರು ಸ್ಪಷ್ಟಪಡಿಸಿದ್ದಾರೆ.

"ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ
ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ.
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು."

–ಅಲ್ಲಮಪ್ರಭು

ಅಜ್ಞಾನವೆಂಬ ತೊಟ್ಟಿಲಲ್ಲಿ ಜ್ಞಾನವನ್ನು ಮಲಗಿಸುವುದರ ಮೂಲಕ ಅದನ್ನು ಹಾಗೇ ನಿಷ್ಕ್ರಿಯಗೊಳಿಸಿ ಇಡಲಾಗಿದೆ. ಸಕಲವೇದಶಾಸ್ತ್ರಗಳು ಈ ಅಜ್ಞಾನದ ತೊಟ್ಟಿಲನ್ನು ಗಟ್ಟಿಯಾಗಿ ಹಿಡಿದುಕೊಂಡಿವೆ. ಭ್ರಾಂತಿ ಎಂಬ ತಾಯಿ ವಾಸ್ತವವನ್ನು ಮರೆಸುವ ಜೋಗುಳವಾಡುತ್ತ ಆ ಶಿಶುರೂಪಿ ಜ್ಞಾನವನ್ನು ಮಲಗಿಸುತ್ತಲೇ ಇದ್ದಾಳೆ. ವೇದಶಾಸ್ತ್ರಗಳನ್ನು ನಿಷ್ಕ್ರಿಯ ಮಾಡುವುದರ ಮೂಲಕ ಅಜ್ಞಾನವನ್ನು ಹೋಗಲಾಡಿಸಿ ಭ್ರಾಂತಿಯಿಂದ ಹೊರಗೆ ಬಂದನಂತರವೇ ಸರ್ವಸಮ್ಮತದ ನಿಜಾದ್ವೈತದಿಂದ ಕೂಡಿದ ಜ್ಞಾನವೆಂಬ ಗುಹೇಶ್ವರನ ಕಾಣಲು ಸಾಧ್ಯ ಎಂಬುದನ್ನು ಅಲ್ಲಮಪ್ರಭುಗಳು ಮಾರ್ಮಿಕವಾಗಿ ನುಡಿದಿದ್ದಾರೆ.

"ಕುಲದಲಧಿಕನು ಹೊಲಗೇರಿಯಲ್ಲಿ ಮನೆಯ ಕಟ್ಟಿದಡೆ
ಕುಲ ಕೆಡದಿಪ್ಪ ಪರಿಯ ನೋಡಾ!
ಅವನ ಕುಲದವರೆಲ್ಲರೂ ಮುಖ ನೋಡಲೊಲ್ಲದಡೆ
ಕುಲವುಳ್ಳವರೆಲ್ಲರೂ ಕೈವಿಡಿದರು.
ಕುಲಗೆಟ್ಟವನೆಂದು ತಿಳಿದು ವಿಚಾರಿಸಲು
ಹೊಲೆಗೆಟ್ಟು ಹೋಗಿತ್ತು ಕಾಣಾ ಗುಹೇಶ್ವರಾ."

–ಅಲ್ಲಮಪ್ರಭು

ಕುಲದಲಧಿಕವೆನಿಸಿಕೊಂಡಾತ ಆ ಭ್ರಮೆಯಿಂದ ಹೊರಬಂದು ಅಸ್ಪೃಶ್ಯರ ಜೊತೆ ಸೇರಿ ಕೆಳಜಾತೀಕರಣಕ್ಕೆ ಒಳಗಾದಾಗ ನಿಜಮಾನವನಾಗುವನು. ಆ ಮೂಲಕ ಕುಲಜನಾಗುವನು. ಆಗ ಮೇಲ್ಜಾತಿಯ ಭ್ರಮೆಯುಳ್ಳ ಅವನ ಕುಲದವರು ಅವನಿಂದ ವಿಮುಖರಾಗುವರು. ಶರಣರ ಪ್ರಕಾರ ಕುಲಜರಾದ ಅಸ್ಪೃಶ್ಯರು ಮತ್ತು ಇತರ ಕಾಯಕಜೀವಿಗಳು ಆತನನ್ನು ಬೆಂಬಲಿಸಿದ ಕಾರಣ ಭ್ರಮೆಯ ಮೇಲುಕೀಳು ಹೊಲೆಗೆಟ್ಟುಹೋಯಿತು ಎಂದು ಅಲ್ಲಮಪ್ರಭುಗಳು ಕೆಳಜಾತೀಕರಣದ ಮೂಲಕ ಮೇಲ್ಜಾತಿಯವರನ್ನು ಶುದ್ಧಗೊಳಿಸುತ್ತಾರೆ.

"ನಾನು ಘನ ತಾನು ಘನವೆಂಬ ಹಿರಿಯರುಂಟೆ ಜಗದೊಳಗೆ
ಹಿರಿಯರ ಹಿರಿತನ ಹಿಂದೇನಾಯಿತು?
ಹಿರಿದು ಕಿರಿದೆಂಬ ಶಬ್ದವಡಗಿದಡೆ
ಆತನೇ ಶರಣ ಗುಹೇಶ್ವರ."

–ಅಲ್ಲಮಪ್ರಭು

ಜಾತಿಗಳ ನಿರ್ನಾಮ ಮಾಡಿ ನಿರ್ಜಾತಿ ವ್ಯವಸ್ಥೆಗೆ ನಾಂದಿ ಹಾಡುತ್ತಾರೆ. ಜಾತಿ ಮತ್ತು ಅಸ್ಪೃಶ್ಯತೆ ಇಲ್ಲದ ಮತ್ತು ಸರ್ವಸಮ್ಮತದಿಂದ ಕೂಡಿದ ಸಮಾಜವೇ ಶರಣ ಸಮಾಜ ಎಂಬುದನ್ನು ಅಲ್ಲಮಪ್ರಭುಗಳು ಸೂಚಿಸುತ್ತಾರೆ.

"ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು
ಕಿರಿಯನೆ?
ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ
ಹಿರಿಯತನ."

– ಬಸವಣ್ಣ

ಮಾನವನು ಭೂಮಿಯ ಮೇಲೆ ಬದುಕಲು ಸಾಧ್ಯವಾಗುವಂಥ ಕೆಲಸ ಕಾರ್ಯಗಳನ್ನು ಕಾಯಕಜೀವಿಗಳು ಮಾಡುತ್ತಾರೆ. ಆದರೆ ಅವರ ಜ್ಞಾನಕ್ಕೆ ಬೆಲೆ ಸಿಗುತ್ತಿಲ್ಲ. ಜ್ಞಾನವನ್ನು ಕ್ರಿಯೆಗೆ ಇಳಿಸುವವರಿಗಿಂತ ಜ್ಞಾನದ ಕುರಿತು ಮಾತನಾಡುವವರೇ ಈ ಸಮಾಜದಲ್ಲಿ ಸಕಲ ಸೌಲಭ್ಯಗಳನ್ನು ಪಡೆಯುತ್ತಾರೆ.

ಬೀದಿಯಲ್ಲಿ ಅದ್ಭುತವಾಗಿ ನರ್ತಿಸುತ್ತ ಜನಮನವನ್ನು ಸೂರೆಗೊಳ್ಳುವ ನರ್ತಕಿ, ಬಾಣವನ್ನು ಪ್ರಯೋಗಿಸುವ ಗುರಿಕಾರ, ವಾಕ್ಚಾತುರ್ಯದಿಂದ ಜನರನ್ನು ನಗೆಗಡಲಲ್ಲಿ ಮುಳುಗಿಸುವ ಹಾಸ್ಯಗಾರ ಮತ್ತು ದೈಹಿಕ ಕಸರತ್ತಿನೊಂದಿಗೆ ಜಾಣ್ಮೆಯನ್ನು ಪ್ರದರ್ಶಿಸುತ್ತ ಬದುಕಿನ ಸಮತೋಲನ ತತ್ತ್ವವನ್ನು ಸಾರುವ ಡೊಂಬ ಅದು ಹೇಗೆ ಕಿರಿಯರಾಗುತ್ತಾರೆ ಎಂಬುದು ಬಸವಣ್ಣನವರ ಸವಾಲಾಗಿದೆ.

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಓದಿದವರು ಮತ್ತು ಶಿವನ ಆರಾಧನೆಗೆ ಸಂಬಂಧಿಸಿದ ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ, ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ ಶಾಂತ, ಸರ್ವೋಕ್ತ ಪಾರಮೇಶ್ವರ, ಕಿರಣ ಹಾಗೂ ವಾತೂಲ ಎಂಬ 28 ಆಗಮಗಳನ್ನು ಓದಿದವರು ಅದು ಹೇಗೆ ದೊಡ್ಡವರಾಗುತ್ತಾರೆ? ಕವಿಗಳು, ಕಾವ್ಯವನ್ನು ರಾಗಬದ್ಧವಾಗಿ ಓದುವ ಗಮಕಿಗಳು, ವ್ಯಾಖ್ಯಾನಕಾರರು ಮತ್ತು ವಾಕ್ಪಟುಗಳು ಅದು ಹೇಗೆ ದೊಡ್ಡವರಾಗುತ್ತಾರೆ? ಬದುಕುವ ಕಲೆಯನ್ನು ಕಲಿತ ಡೊಂಬರು ಮುಂತಾದವರು ಅದು ಹೇಗೆ ಸಣ್ಣವರಾಗುತ್ತಾರೆ? ಎಂಬುವು ಬಸವಣ್ಣನವರು ಸಮಾಜದ ಮುಂದೆ ಇಟ್ಟ ಪ್ರಶ್ನೆಗಳಾಗಿವೆ.

ಶರಣರಿಗೆ ಮೂಢನಂಬಿಕೆ ಎಂಬುದು ಅಸಹನೀಯವಾದುದು. ಅವರು ಯಾವುದೇ ಸಂದರ್ಭದಲ್ಲೂ ಮೂಢನಂಬಿಕೆಯನ್ನು ತಿರಸ್ಕರಿಸುತ್ತಾರೆ. ಕಾಯಕದ ಮೂಲಕ ಮಾತ್ರ ಬದುಕುವ ಛಲವುಳ್ಳವರ ಬಳಿ ಮೂಢನಂಬಿಕೆಗಳು ಸುಳಿಯಲಾರರು.

ಶೋಷಣೆಯ ಮೂಲವಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಕಾಯಕಸಿದ್ಧಾಂತದ ಮೂಲಕ ವಿರೋಧಿಸಿದರು. ಕರ್ಮ ಎನ್ನುವುದು ನಮ್ಮ ಮನದೊಳಗಿನ ಕತ್ತಲೆ. ಅದನ್ನು ಇಷ್ಟಲಿಂಗವೆಂಬ ನಮ್ಮೊಳಗಿನ ಅರಿವಿನ ಬೆಳಕಿನ ಮೂಲಕ ಇಲ್ಲವಾಗಿಸಬೇಕು ಎಂಬುದೇ ಬಸವಣ್ಣನವರ ಸದಾಶಯವಾಗಿದೆ.


ಬಸವಾದಿ ಶರಣರು ರಾಹುಕಾಲ, ಗುಳಿಕಕಾಲ, ಶುಭಗಳಿಗೆ, ಅಶುಭಗಳಿಗೆ, ಶನಿವಾರ ಕೇಡು, ಶುಕ್ರವಾರ ಲಾಭ ಎಂಬ ಮೂಢನಂಬಿಕೆಗಳನ್ನು ಸಾರುವ ಪಂಚಾಂಗವನ್ನು ವಿರೋಧಿಸಿದರು. ಮಂತ್ರ, ತಂತ್ರ, ತಾಯಿತ, ವಾಸ್ತು, ವಾರ, ತಿಥಿ, ನಕ್ಷತ್ರಗಳಿಗೂ ನಮ್ಮ ಬದುಕಿಗೂ ಯಾವುದೇ ಸಂಬಂಧ ಇಲ್ಲವೆಂದು 850 ವರ್ಷಗಳ ಹಿಂದೆಯೆ ಸಾರಿದರು.



● ರಂಜಾನ್ ದರ್ಗಾ

– ('ನನ್ನೊಳಗೆ ಬಹುಗಳ ಆಗಲಿರುವ ಬಹುನಾದ ದೇವರು' ಎಂಬ ಕೃತಿಯಿಂದ)

...ಆರ್‌ಎಸ್‌ಎಸ್‌ನ ಎರಡನೇ ಸರಸಂಘ ...ಲಕ ಎಂ.ಎಸ್.ಗೋಳ್ವಲ್ಕರ್ ತಮ್ಮ ...ಸ್ತಕವೊಂದರಲ್ಲಿ ಹಿಂದೂತ್ವದ ಪ್ರಧಾನ ...ಗಳು ಮುಸಲ್ಮಾನರು, ಕ್ರೈಸ್ತರು ಮತ್ತು ...ಮ್ಯುನಿಸ್ಟರು ಎಂದು ಸ್ಪಷ್ಟವಾಗಿ ...ರೆದಿದ್ದಾರೆ, ಸಮಾಜವಾದ ನಮ್ಮ ...ಶಕ್ಕೆ ಪರಕೀಯವಾದದ್ದು ಎಂದು ಇದೆ ...ಸ್ತಕದಲ್ಲಿ ಪ್ರತಿಪಾದಿಸಿದ್ದಾರೆ.


ಗೋಳ್ವಲ್ಕರ್


ಕೋಸಾಂಬಿ


...ಈಗ ಹಿಂದೂತ್ವದ ಮುಖವಾಡ ...ಕಿ ರಾಜಕೀಯ ಅಧಿಕಾರ ಸೂತ್ರ ...ಯಲು ಆರ್‌ಎಸ್‌ಎಸ್ ಸಜ್ಜಾಗಿ ...ದೆ. ಇದಕ್ಕಾಗಿ ಹಿಂದೆ ಜನಸಂಘ ...ಬ ಪಕ್ಷವನ್ನು ಹುಟ್ಟು ಹಾಕಿ, ಅದನ್ನು ...ತಾಪಕ್ಷದಲ್ಲಿ ವಿಲೀನಗೊಳಿಸಿದಂತೆ ...ಕ ಮಾಡಿ ನಂತರ ಬಿಜೆಪಿ ಎಂಬ ...ಕ ಪಕ್ಷವನ್ನು ಕಟ್ಟಿ ಕೇಂದ್ರದ ಅಧಿಕಾರ ...ತ್ರ ಹಿಡಿಯುವಲ್ಲಿ ಯಶಸ್ವಿಯಾಗಿತ್ತು ...ದಲ್ಲಿ ವಾಜಪೇಯಿ ಸರ್ಕಾರವಿದ್ದಾಗ ...ಪುಸ್ತಕಗಳ ಬ್ರಾಹ್ಮಣೀಕರಣ ಮತ್ತು ...ಜ್ಯೋತಿಷ್ಯಶಾಸ್ತ್ರ ಮಂತ್ರ ...ಕರ್ಮಗಳಿಗಾಗಿ ಡಿಗ್ರಿ ಕೋರ್ಸ್‌ಗಳನ್ನು ಆರಂಭಿಸಿತು. ...ಮೀಸಲಾತಿಯಿಂದಾಗಿ ವಿದ್ಯಾವಂತರಾಗಿರುವ ಶೂದ್ರ ...ದಾಯದಲ್ಲೂ ಮೂಢನಂಬಿಕೆ ಮತ್ತು ಕಂದಾಚಾರವನ್ನು ...ದ ತರಗಾದಾಗಿ ಅನೇಕರು ಸತ್ಯನಾರಾಯಣಪೂಜೆ ... ಲಕ್ಷ್ಮೀಪೂಜೆ ಮಾಡಿ ಪುರೋಹಿತರನ್ನು ಕರೆದು ದಕ್ಷಿಣೆಯನ್ನು ನೀಡುವ ಸ್ಥಿತಿಗೆ ತಂದು ನಿಲ್ಲಿಸಿದೆ.

ಈಗ ಮತ್ತೆ ಇದೇ ಪುರೋಹಿತಶಾಹಿ ನರೇಂದ್ರ ಮೋದಿಯ ಮುಖವಾಡ ತೊಟ್ಟು ತನ್ನ ಅಜೆಂಡಾ ಜಾರಿಗೆ ತರಲು ಹೊರಟಿದೆ. ಈ ಹುನ್ನಾರಕ್ಕೆ ಕಾರ್ಪೊರೇಟ್ ಬಂಡವಾಳಶಾಹಿಗಳು ಕೈಗೂಡಿಸಿದ್ದಾರೆ. ಈ ವಂಚನೆಗೆ ಶೂದ್ರ ಸಮುದಾಯ ಬಲಿಯಾದರೆ ಮತ್ತೆ ದೇಶದಲ್ಲಿ ಶ್ರೇಣೀಕೃತ ಸಮಾಜ ವ್ಯವಸ್ಥೆ ತರುವ ಸಂಚು ನಡೆಯದೇ ಇರಲಾರದು.

ಬ್ರಾಹ್ಮಣ್ಯವೆಂದರೆ ಬ್ರಾಹ್ಮಣರಲ್ಲ. ಬ್ರಾಹ್ಮಣರಲ್ಲೂ ಜಾತಿವ್ಯವಸ್ಥೆಯನ್ನು ಧಿಕ್ಕರಿಸಿದ ಬಸವಣ್ಣ, ಶಂ.ಬಾ.ಜೋಶಿ, ನಂಬೂದ್ರಿಪಾದ್, ಸರದೇಸಾಯಿ, ಮಧು ಲಿಮಯೆ, ಡಿ.ಡಿ.ಕೋಸಾಂಬಿ, ಅನಂತಮೂರ್ತಿ, ಹೀಗೆ ಅನೇಕರು ಮನುಷ್ಯನ ಏಳಿಗೆಗಾಗಿ ಸೆಣಸಿದ್ದಾರೆ–ಸೆಣಸುತ್ತಿದ್ದಾರೆ. ಬ್ರಾಹ್ಮಣ್ಯವೆಂದರೆ ಅದೊಂದು ಜೀವವಿರೋಧಿ ಸಿದ್ಧಾಂತ. ಎಲ್ಲಾ ಬ್ರಾಹ್ಮಣರು ಅದನ್ನು ಒಪ್ಪಿದ್ದಾರೆಂದು ಅರ್ಥವಲ್ಲ. ಅಂತಲೇ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಎಲ್ಲರನ್ನೂ ದ್ವೇಷಿಸ ಬೇಕಾಗಿಲ್ಲ. ನಮ್ಮ ವಿರೋಧ ಇರುವುದು ಮನುಷ್ಯ ವಿರೋಧಿಯಾದ ಫ್ಯಾಸಿಸ್ಟ್ ಸಿದ್ಧಾಂತ 'ಬ್ರಾಹ್ಮಣ್ಯ'ಕ್ಕೆ.



● ಸನತ್‌ಕುಮಾರ ಬೆಳಗಲಿ




ಶೂದ್ರರ ಅಸಹಾಯಕತೆಯನ್ನು ಬ್ರಾಹ್ಮಣ್ಯ ತಮ್ಮ ಖಯಾಲಿಗಳಿಗೆ ಬಳಸಿಕೊಳ್ಳುತ್ತಿತ್ತು

ಅಪ್ಪ ಅರಣ್ಯ ಇಲಾಖೆಯ ಉದ್ಯೋಗಿಯಾಗಿದ್ದುದರಿಂದ ಊರೂರಿಗೆ ಅಲೆಯುತ್ತಾ ನಾವು ಕುಂದಾಪುರ ತಾಲೂಕಿನ ಶಂಕರನಾರಾಯಣ ತಲುಪಿ ಅಲ್ಲಿ ಸುಮಾರು 11 ವರ್ಷಗಳನ್ನು ಕಳೆದಿದ್ದೆವು. ನಾವಲ್ಲಿಗೆ ತಲುಪಿದ 1967ನೇ ಇಸವಿಗಾಗಲೇ ಸಬ್‌ರಿಜಿಸ್ಟ್ರಾರ್ ಕಚೇರಿ, ಪೋಲೀಸ್ ಠಾಣೆ, ಬ್ಯಾಂಕು, ಸಹಕಾರಿ ಸಂಘ, ದೂರವಾಣಿ ವಿನಿಮಯ ಕೇಂದ್ರ, ಆಸ್ಪತ್ರೆ, ಜಾನುವಾರು ಆಸ್ಪತ್ರೆ, ಶಾಲಾ ಕಾಲೇಜುಗಳು ಹೀಗೆ ಸಕಲ ಸೌಲಭ್ಯಗಳನ್ನು ಹೊಂದಿದ್ದ ಆ ಊರು ಯಾವುದೇ ತಾಲೂಕು ಕೇಂದ್ರಕ್ಕೆ ಕಡಿಮೆ ಇರದಷ್ಟು ಆಧುನಿಕವಾಗಿತ್ತು. ಆಧುನಿಕವಾಗಿದ್ದುದು ಸವಲತ್ತುಗಳ ವಿಚಾರದಲ್ಲಿ ಮಾತ್ರ ಎಂಬುದಕ್ಕೆ ಪುರಾವೆಯೆಂಬಂತೆ ಜಾತಿತಾರತಮ್ಯ ಸಂಬಂಧಿತ ಮನಸ್ಥಿತಿ ಮಾತ್ರ ಓಬೀರಾಯನ ಕಾಲದ್ದಾಗಿತ್ತು. ಬ್ರಾಹ್ಮಣ್ಯದ ವಿಕಾರಗಳನ್ನು ಎಲ್ಲೆಲ್ಲೂ ಕಾಣಬುದಾಗಿತ್ತು. ಶೂದ್ರರನ್ನು ಬ್ರಾಹ್ಮಣರು ಅತ್ಯಂತ ನಿಕೃಷ್ಟವಾಗಿ ನೋಡುತ್ತಿದ್ದರು. ಶೂದ್ರರು ತಮ್ಮ ಜಾತಿ ಹೆಸರನ್ನು ಹೇಳಿಕೊಳ್ಳಲು ಅಳುಕುವ ಪರಿಸ್ಥಿತಿ ಇತ್ತು. ಶಾಲೆಗಳಲ್ಲಿ ಬ್ರಾಹ್ಮಣ ಶಿಕ್ಷಕರು ಶೂದ್ರ ವಿದ್ಯಾರ್ಥಿಗಳ ಹೆಸರು ಹಿಡಿದು ಅವಮಾನಿಸುತ್ತಿದ್ದರು.

ಊರಿನ ಬಹುತೇಕ ಬ್ರಾಹ್ಮಣ ಸಮುದಾಯದವರು ಭಾರೀ ಭೂಮಾಲೀಕರಾಗಿದ್ದು (ಆಗಿನ್ನೂ ಭೂಸುಧಾರಣಾ ಕಾಯಿದೆ ಜಾರಿಯಾಗಿರಲಿಲ್ಲ) ಅವರ ಜಮೀನುಗಳಲ್ಲಿ ಭೂರಹಿತ ಶೂದ್ರರು ಜೀತ ಮಾಡುತ್ತಿದ್ದರು. ತೀರಾ ಬಡತನದಲ್ಲಿದ್ದ ಆ ಶೂದ್ರರ ದುಡಿಮೆಯಿಂದಲೇ ಬ್ರಾಹ್ಮಣ ಭೂಮಾಲೀಕರ ಸರ್ವವೂ ನಡೆಯಬೇಕಿದ್ದರೂ ಅವರ ಬಗ್ಗೆ ಅವರ ಶ್ರಮದ ಬಗ್ಗೆ ಒಂದಿಷ್ಟೂ ಗೌರವವಿರಲಿಲ್ಲ. ಶೂದ್ರ ವಯೋವೃದ್ಧನನ್ನೂ ಕೂಡಾ ಬ್ರಾಹ್ಮಣ ಮಾಣಿ 'ನೀನು' ಎಂದು ಏಕವಚನದಲ್ಲೇ ಕರೆಯುತ್ತಿದ್ದ. ಬ್ರಾಹ್ಮಣ ಮಾಣಿಯನ್ನು ಶೂದ್ರ ವಯೋವೃದ್ಧನೂ 'ನೀವು' ಎಂದು ಗೌರವದಿಂದ ಸಂಬೋಧಿಸುತ್ತಿದ್ದ. ಬಡತನದ ಕಾರಣವಾಗಿ ಶೂದ್ರರ ಮನೆಗಳಲ್ಲಿ ಸದಾಕಾಲವೂ ಇರುತ್ತಿದ್ದ ವಿಶೇಷ ಖಾದ್ಯವೆಂದರೆ ಗಂಜಿ ಮಾತ್ರ. ಆದರೆ ಬ್ರಾಹ್ಮಣರ ಮನೆಗಳಲ್ಲಿ ಭೂರಿಭೋಜನ ಕಾರ್ಯಕ್ರಮಗಳು ಸಂತರ್ಪಣೆಗಳು ಆಗಾಗ ನಡೆಯುತ್ತಿದ್ದವು. ಅಲ್ಲಿ ಏನಾದರೂ ವಿಶೇಷವಾದುದು ಸಿಗಬಹುದೇನೋ ಎಂದು ಶೂದ್ರರು ಜೊಲ್ಲು ಸುರಿಸುತ್ತಾ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಬ್ರಾಹ್ಮಣರು ತಿಂದು ತೇಗಿದ ಬಳಿಕ, ಸೆಗಣಿ ಸಾರಿಸಿದ ಅಂಗಳದ ಮೂಲೆಯಲ್ಲಿ ಎಲೆ ಹಾಕಿ ಅಳಿದುಳಿದುದನ್ನು ಶೂದ್ರರಿಗೆ ಬಡಿಸಲಾಗುತ್ತಿತ್ತು. ಇನ್ನು ಪರಿಶಿಷ್ಟ ಜಾತಿಗೆ ಸೇರಿದ ಕೂಸಾಳರ ಕತೆ ಹೇಳುವುದೇ ಬೇಡ. ಎಂಜಲು ಎಲೆಯಲ್ಲಿದ್ದುದನ್ನು ಹೆಕ್ಕಿ ತಿನ್ನುವುದಷ್ಟೇ ಅವರ ವಿಶೇಷ ಭೋಜನ ಭಾಗ್ಯ.

ನಾವು ಬಾಡಿಗೆಗಿದ್ದ ಹುಲ್ಲಿನ ಗುಡಿಸಲಿನ ಮಾಲೀಕ ಶಂಭು ಶಾಸ್ತ್ರಿಗಳ ಮನೆಯಲ್ಲಿ ಸಂತರ್ಪಣೆ ಇದ್ದಾಗ ನಮಗೂ 'ಉದಾರ' ಕರೆ ಬರುತ್ತಿತ್ತು. ಸರಕಾರಿ ನೌಕರರ ಮನೆಯವರೆಂದು ನಮಗೇನೂ ವಿನಾಯಿತಿ ಯಿರಲಿಲ್ಲ. ಎಷ್ಟಾದರೂ ನಾವು ಶೂದ್ರರಲ್ಲವೇ? ಸೆಗಣಿ ಧೂಳಿನ ಅಂಗಳದ ಮೂಲೆಯಲ್ಲಿಯೇ ನಮಗೂ ಬಾಳೆಲೆ ಬೀಳುತ್ತಿತ್ತು. ವರ್ಷಕ್ಕೊಮ್ಮೆಯೂ ಪಾಯಸ ಮತ್ತಿತರ ವಿಶೇಷ ತಿಂಡಿ ತಿನ್ನಲಾಗದಂಥ ಬಡತನದ ದಿನಗಳಲ್ಲಿ ನಮಗದು ಅಂತಹ ಅವಮಾನವೆಂದೇನೂ ಅನಿಸುತ್ತಿರಲಿಲ್ಲ. ಅಲ್ಲಿ ಸಿಗಬಹುದಾದ ಖಾದ್ಯಗಳಿಗಾಗಿ ಆಸೆ ಪಡುತ್ತಿದ್ದೆವು. ಉಂಡ ಜಾಗಕ್ಕೆ ಸೆಗಣಿ ಹಾಕಿ ಸ್ವಚ್ಛಗೊಳಿಸುವ ವಿಚಾರದಲ್ಲಿಯೂ ನಮಗೆ ವಿನಾಯಿತಿ ಇರಲಿಲ್ಲ. ಅಮ್ಮ (ಫಾರೆಸ್ಟರರ ಹೆಂಡತಿ) ಅದೇನೂ ಅವಮಾನವೇ ಅಲ್ಲ ಎಂಬಂತೆ ಆ ಕೆಲಸವನ್ನು ಮಾಡಿ ಮುಗಿಸುತ್ತಿದ್ದಳು.

ಎಲ್ಲೆಲ್ಲೂ ಮಡಿ, ಮೈಲಿಗೆ, ಅಸ್ಪೃಶ್ಯತಾ ಆಚರಣೆಯ ಪರಾಕಾಷ್ಠೆ. ಆದರೆ ಮುಟ್ಟುವುದಕಷ್ಟೇ ಈ ಸಂಪ್ರದಾಯ ಅಡ್ಡಿ ಬರುತ್ತಿತ್ತೇ ಹೊರತು ಶೂದ್ರ ಹೆಂಗಸರೊಂದಿಗೆ ಮಲಗುವುದಕ್ಕಲ್ಲ. ಶೂದ್ರ ಹೆಂಗಸರೊಂದಿಗಿನ ಅಕ್ರಮ ಸಂಬಂಧಗಳು ಮಾಮೂಲಿಯಾಗಿದ್ದವು. ಶೂದ್ರರ ಬಡತನವನ್ನು, ಅಸಹಾಯಕತೆಯನ್ನು ಬ್ರಾಹ್ಮಣರು ತಮ್ಮ ಖಯಾಲಿಗಳಿಗೆ ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದರು. ಶ್ರೀನಿವಾಸ ಆಚಾರ್ ಎಂಬ ಮಹಾಧನಿಕ ಬ್ರಾಹ್ಮಣನಿಗೆ ಅವಿವಾಹಿತ ಶೂದ್ರ ತರುಣಿಯೊಬ್ಬಳಲ್ಲಿ ಹುಟ್ಟಿದ ಮಗುವೊಂದನ್ನು ಆಕೆ ಯಾವ ಸಂಕೋಚವೂ ಇಲ್ಲದೆ ಸಾಕುತ್ತಿದ್ದಳು. ಅದು ಆಚಾರ್‌ರ ಮಗು ಎಂಬುದು ಊರಿಗೇ ಗೊತ್ತಿತ್ತು. ಅವರೂ ಆಗಾಗ ಆಕೆಯನ್ನು ಭೇಟಿಯಾಗಿ ಹೊಟ್ಟೆಬಟ್ಟೆಗೆ ಕಡಿಮೆಯಾಗದಂತೆ ನೋಡಿಕೊಳ್ಳುತ್ತಿದ್ದರು ಕೂಡಾ! ವಿವಾಹಬಾಹಿರ ಸಂಬಂಧಗಳ ಬಗ್ಗೆ ಈ ಕಾಲದಲ್ಲಿ ನಿಂತು ನಾವು ಅದೇನೋ ಮಹಾ ಪ್ರಳಯವಾಯಿತೇನೋ ಎಂಬಂತೆ ಗುಲ್ಲೆಬ್ಬಿಸುತ್ತಿರುತ್ತೇವೆ. ಆದರೆ ನಾನು ಉಲ್ಲೇಖಿಸಿದ ಆ ಊರಿನಲ್ಲಿ ನಾಲ್ಕು ದಶಕಗಳ ಹಿಂದಿನ ಆ ದಿನಗಳಲ್ಲಿಯೇ ಅದೆಲ್ಲ ಮಾಮೂಲು ಸಂಗತಿಯಾಗಿತ್ತು. ಆ ವಿಚಾರದಲ್ಲಿ 'ಏಕಪತ್ನೀ ವ್ರತಸ್ಥ ಶ್ರೀರಾಮಚಂದ್ರ'ರನ್ನು ಹುಡುಕುವುದು ಅಲ್ಲಿ ತುಂಬಾ ಕಷ್ಟದ ಕೆಲಸವಾಗಿತ್ತು. ನಂದಗೋಳಿ ಭಟ್ಟರು ರಾಮಕೃಷ್ಣ ಅಡಿಗರ ಹೆಂಡತಿಯೊಂದಿಗೆ ಗಂಡಹೆಂಡತಿಯರಂತೆಯೇ ಓಡಾಡಿಕೊಂಡಿದ್ದರು. ಇದರ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಳ್ಳದ ಅಡಿಗರು ತಮ್ಮ ಹೆಂಡತಿಯನ್ನು ಭಟ್ಟರಿಗೆ ಉದಾರವಾಗಿ ಬಿಟ್ಟುಕೊಟ್ಟು ಇನ್ನೊಂದೆಡೆಯಲ್ಲಿ ಬೇಟೆಯಾಡುತ್ತಿದ್ದರು. ಇದೆಲ್ಲ ಅಲ್ಲಿ ವಿವಾದದ ಸಂಗತಿಯಾಗಿರಲಿಲ್ಲ. ಒಂದು ತೆರನಾದ 'ಲಿವಿಂಗ್




ಟುಗೆದರ್' ಅಲ್ಲಿ ಆಗಲೇ ಚಾಲ್ತಿಯಲ್ಲಿತ್ತು. ಈ ಅರ್ಥದಲ್ಲೂ ಅದೊಂದು 'ಅತ್ಯಂತ ಮುಂದುವರಿದ' ಊರಾಗಿತ್ತು ಎನ್ನಲಡ್ಡಿಯಿಲ್ಲ.

ಬ್ರಾಹ್ಮಣ್ಯವನ್ನು ನರನಾಡಿಗಳ ತುಂಬ ತುಂಬಿಸಿಕೊಂಡು ಕುರುಡರಾಗಿದ್ದ ಕೆಲವರು ನಡೆಸುತ್ತಿದ್ದ ಮಡಿಮೈಲಿಗೆ, ಅಸ್ಪೃಶ್ಯತಾ ಆಚರಣೆ ಒಮ್ಮೊಮ್ಮೆ ತೀರಾ ಹಾಸ್ಯಾಸ್ಪದವಾಗಿರುತ್ತಿತ್ತು. ನಾನು ಐದನೇ ತರಗತಿಯಲ್ಲಿ ಓದುತ್ತಿದ್ದ 1972ನೇ ಇಸವಿಯ ದಿನಗಳವು. ಅಲ್ಲಿನ ಸರಕಾರಿ ಪ್ರಾಥಮಿಕ ಶಾಲೆಗೆ ಶ್ರೀನಿವಾಸ ಮುಚ್ಚಿಂತಾಯ ಎಂಬವರು ಮುಖ್ಯೋಪಾಧ್ಯಾಯರಾಗಿ ಬಂದಿದ್ದರು. ಶಿಕ್ಷಕನಾಗಿ ಮಕ್ಕಳಲ್ಲಿ ಜಾತೀಯ ತಾರತಮ್ಯದ ವಿರುದ್ಧ ಭಾವನೆಯನ್ನು ಮೂಡಿಸಬೇಕಾಗಿದ್ದ ಅದೇ ವ್ಯಕ್ತಿ ಮಡಿ ಮೈಲಿಗೆಯಲ್ಲಿ ಸಂಪೂರ್ಣ ಮುಳುಗಿಹೋಗಿದ್ದರು; ತಾನಿರುವುದು ಮನೆಯಲ್ಲಿ ಅಲ್ಲ, ಶಾಲೆಯಲ್ಲಿ ಎಂಬುದನ್ನೂ ಮರೆತಿದ್ದರು. ನನಗಾ ಐತಿಹಾಸಿಕ ಕಾದಂಬರಿಗಳನ್ನು ಓದುವ ವಿಪರೀತ ಹುಚ್ಚು ಹೇಗಾದರೂ ಶಾಲೆಯ ಗ್ರಂಥಾಲಯದಿಂದ ಒಂದ ಕಾದಂಬರಿಯನ್ನು ಮನೆಗೊಯ್ದು ಓದಬೇಕು ಎಂಬ ತುಡಿತ. ನನ್ನ ತುಡಿತವನ್ನು ದುರುಪಯೋ ಪಡಿಸಿಕೊಳ್ಳುತ್ತಿದ್ದ ಮುಖ್ಯೋಪಾಧ್ಯಾಯರು, 'ಶಾಲೆಯ ಕಿಟಕಿಬಾಗಿಲುಗಳನ್ನು ಮುಚ್ಚಿ ಬೀಗ ಹಾಕಿ ಬಂದ ನಿನಗೆ ಒಂದು ಕಾದಂಬರಿ ಕೊಡುತ್ತೇನೆ' ಎಂದ ಆಮಿಷದಿಂದ ಕೂಡಿದ ಷರತ್ತು ಹಾಕುತ್ತಿದ್ದರು. ಅ ನಾಲ್ಕರಿಂದ ಏಳನೆ ತರಗತಿಯವರೆಗೆ ಒಂದೆಡೆ ಇದ್ದ ಒಂದರಿಂದ ಮೂರನೆಯ ತರಗತಿಯವರೆಗಿನ ಕೊಠಡಿಗ ಫರ್ಲಾಂಗು ದೂರದಲ್ಲಿದ್ದವು. ಶಾಲೆಗೆ ಜವಾನ ಇಲ್ಲದಿ ಕಾಲವದು. ಕಾದಂಬರಿಯ ಆಸೆಯಿಂದ, ಶಾ ಮುಗಿದಬಳಿಕ ನಾನು ಜವಾನನ ಕೆಲಸ ಮಾಡಿ ಬೀ ಹಾಕಿ ಬರುತ್ತಿದ್ದೆ. ಬೀಗದ ಕೀ ಕೊಡಲು ಹೋದಾ 'ಅದನ್ನು ಅಲ್ಲಿಡು' ಎಂದು ಜಗಲಿಯನ್ನು ತೋರಿ ಅದರ ಮೇಲೆ ನೀರನ್ನು ಚಿಮುಕಿಸಿ ಶುದ್ಧೀಕರಿ ಎತ್ತಿಕೊಳ್ಳುತ್ತಿದ್ದರು. ಅದೇ ಶಾಲೆಯಲ್ಲಿ ನನ್ನಣ್ಣನ ಓದುತ್ತಿದ್ದ. ಆತನ ಬಳಿಯಲ್ಲಿ ಒಮ್ಮೆ ಹಾಜರಿಪಟ್ಟಿಯನ ತರಲು ಹೇಳಿ ಅದನ್ನು ಸ್ವೀಕರಿಸುವ ಮುನ್ನ ನಳ್ಳಿಯಿಂ ಅದರ ಮೇಲೆ ಕೊಂಚ ನೀರಿನ ಹನಿ ಚಿಮುಕಿ ಶುದ್ಧೀಕರಿಸಲು ಹೇಳಿದ್ದರು. ನನ್ನಣ್ಣ ಆಗಲೇ ಮಹಾ ಕ್ರಾಂತಿಕಾರಿ. ಮುಚ್ಚಿಂತಾಯರು ಹೇಳಿದ ಕೆಲಸವ ಕೊಂಚ ಹೆಚ್ಚೇ ಶ್ರದ್ಧೆಯಿಂದ ಮಾಡಿದ ಅ ಹಾಜರಿಪಟ್ಟಿಯ ಪುಟಪುಟಕ್ಕೂ ಧಾರಾಳ ನೀರು ಸುರಿ ಅದನ್ನು ಸಂಪೂರ್ಣ ಶುದ್ಧೀಕರಿಸಿ ತಂದು ಕೊಟ್ಟ ಬಾಲ್‌ಪೆನ್ ಇನ್ನೂ ಬಳಕೆಗೆ ಬಂದಿರದ ಕಾಲವಲ್ಲವೇ? ಹಾಜರಿಪಟ್ಟಿಯಲ್ಲಿದ್ದ ಒಂದಕ್ಷರವೂ ಓದುವುದಕ್ಕೆ ಯೋಗ್ಯವಾಗುವಂತೆ ಉಳಿದಿರಲಿಲ್ಲ. ಈ ಘಟನೆಯ ಬಳಿಕ ಮುಚ್ಚಿಂತಾಯರು ಪ್ರಾಯಶಃ ಹಾಜರು ಪಟ್ಟಿಯನ್ನು ಶುದ್ಧೀಕರಿಸಲು ಯಾರಿಗೂ ಹೇಳಿರಲಿಕ್ಕಿಲ್ಲ.




• ಶ್ರೀನಿವಾಸ ಕಾರ್ಕಳ, ಮಂಗಳೂ



ನಟಿ ಆರತಿ ಬಗ್ಗೆ ಮೆಚ್ಚುಗೆ ಆಯಿತು

ಗೌರಿ ಬರೆದ 'ನೀವರಿಯದ ಆರತಿ' ಲೇಖನ ಓದಿ ಆರತಿಯವರ 'ರೀಲ್ ಲೈಫ್ ಹಾಗೂ ರಿಯಲ್ ಲೈಫ್' ನಡುವಿನ ಅಂತರದ ಅರಿವಾಯಿತು.



ಚಲನಚಿತ್ರಗಳಲ್ಲಿ ನಟಿಸುವುದನ್ನು ಬಿಟ್ಟ ನಂತರ ಆರತಿಯವರನ್ನು ನೋಡಿದ ಜನ ತುಂಬಾ ಕಡಿಮೆ. ಜನ ಅವರು ನಟಿಸಿದ್ದ ಸಿನಿಮಾ ನೋಡುವುದು ಬೇಡ ಬದಲಾಗಿ ಅವರ ವೈಯಕ್ತಿಕ ಸಾಧನೆಯ ಸಿನಿಮಾ ನೋಡುವಂತಾಗಲಿ. ಅದಕ್ಕೆ ಪೂರಕವಾಗಿ ಆರತಿಯವರು ತಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿ. ಸಮಾಜ ಅವರಿಂದ ಇನ್ನಷ್ಟು ಪ್ರೇರಣೆ ಪಡೆಯುವಂತಾಗಲಿ. ತಮ್ಮ ವೈಯಕ್ತಿಕ ಜೀವನಕ್ಕೆ ಧಕ್ಕೆ ಬಾರದ ಹಾಗೆ ಬದುಕಿನಲ್ಲಿ ಎದುರಾಗುವ ಏಳು-ಬೀಳುಗಳನ್ನು ಆರತಿಯವರು ಎದುರಿಸುವಂತಾಗಲಿ. ಏಕೆಂದರೆ ಜೀವನ ಮೂರು ತಾಸುಗಳಲ್ಲಿ ಮುಗಿಯುವಂತಹ ಸಿನಿಮಾ ಅಲ್ಲ.

- ಪ್ರೊ.ಎಂ.ಬಿ.ಪಾಟೀಲ, ರಾಮದುರ್ಗ


'ಲಂಚ್ ಬಾಕ್ಸ್' ಚೆನ್ನಾಗಿತ್ತು

'ದಿ ಲಂಚ್ ಬಾಕ್' ಸಿನಿಮಾ ಬಗ್ಗೆ ಗೌರಿ ಲಂಕೇಶ್ ಬರೆದ 'ಕಂಡಹಾಗೆ' ತುಂಬಾ ಚೆನ್ನಾಗಿತ್ತು. ಆದರೆ ಅದರ ಕ್ಲೈಮ್ಯಾಕ್ಸ್ ಬಗ್ಗೆಯೂ ಬರೆದಿದ್ದರೆ ನಮಗೂ ಲಂಚ್ ಮಾಡಿದಹಾಗೆ ಅನ್ನಿಸುತ್ತಿತ್ತು.

- ಯೂಸುಫ್, ಬಬಲೇಶ್ವರ

ಪತಿ ಪೀಡಕರೂ ಈ ಸಮಾಜದ ಉತ್ಪನ್ನಗಳೆ

ಗೌರಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ರಾಜಲಕ್ಷ್ಮಿ ಅಂಕಲಗಿಯವರ ಅಂಕಣ ಮತ್ತು ಅದಕ್ಕೆ ಪೂರಕವಾಗಿ, ಪ್ರತಿಯಾಗಿ ಬಂದ ಪ್ರತಿಕ್ರಿಯೆಗಳು ಗಮನಾರ್ಹವಾದವುಗಳೆ. ಕಳೆದೆರಡು ದಶಕಗಳಿಂದ ಮಹಿಳಾ ಚಳವಳಿಯಲ್ಲಿ ಕಾರ್ಯಕರ್ತೆಯಾಗಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ನನಗೂ ಆಗಾಗ ರಾಜಲಕ್ಷ್ಮಿಯವರು ಪ್ರಸ್ತಾಪಿಸಿರುವಂತಹ ಘಟನೆಗಳು ಎದುರಾಗಿದ್ದಿವೆ. ಮಹಿಳಾಪರ ಕಾನೂನುಗಳನ್ನು ದುರುಪಯೋಗಪಡಿಸಿಕೊಳ್ಳಲು ಹವಣಿಸಿದ ಪ್ರಸಂಗಗಳು ಎದುರಾಗಿವೆ. ಮಡದಿಯ ಕುಟುಂಬದವರ ಕ್ರೌರ್ಯಕ್ಕೆ ಮಾರಣಾಂತಿಕ ಹಲ್ಲೆಗೊಳಗಾದ ಅಮಾಯಕರೊಬ್ಬರ ರಕ್ಷಣೆಗೆ ನಮ್ಮ ಮಹಿಳಾ ಸಂಘಟನೆಯೆ ಶ್ರಮಿಸಿದ ಉದಾಹರಣೆಯಿದೆ. ಸೊಸೆಯರು ತಂದೊಡ್ಡುವ ಹಿಂಸೆಗೆ ಇಡಿಯಾಗಿ ನಲುಗುವ ಪ್ರಜ್ಞಾವಂತ ಕುಟುಂಬಗಳೂ ನಮ್ಮೆದುರಲ್ಲಿವೆ. ಮಹಿಳಾ ಸಮಾನತೆಗಾಗಿ ಕೆಲಸ ಮಾಡುವ ನಮ್ಮಂತವರ ಕುಟುಂಬಗಳಲ್ಲೇ ಸಂಭವಿಸುವ ಎಷ್ಟೋ ಘಟನಾವಳಿಗಳು ಹಲವು ಬಾರಿ ನಮ್ಮನ್ನು ಬೆಚ್ಚಿಬೀಳಿಸಿದ್ದೂ ಇದೆ. ಇವುಗಳೆಲ್ಲವೂ ಪ್ರತಿನಿತ್ಯ ಮಹಿಳೆಯರ ಮೇಲೆ ಪುರುಷರು ನಡೆಸುವ ಪರಾಕ್ರಮಗಳಿಗೆ ಹೋಲಿಕೆ ನೀಡಬಹುದಾದಷ್ಟು ಸಂಖ್ಯೆಯಲ್ಲಿಲ್ಲ ಎನ್ನುವಾಗಲೇ ಇಂದಿನ ಸಮಾಜ ಗೌಣಗೊಳಿಸಿ ಬಿಡಬಹುದಾದ ಬಿಡಿ ಪ್ರಕರಣಗಳಿವು ಎಂದು ಸರಳೀಕರಿಸುವುದು ಸಾಧುವಲ್ಲ. ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳು ಲಿಂಗಸಮಾನತೆಯನ್ನಿರಲಿ ಮಹಿಳೆಯರ ಹಿತವನ್ನೂ ಕಾಪಾಡುತ್ತಿಲ್ಲ, ಪುರುಷರ ಒಳಿತನ್ನೂ ಬಯಸುತ್ತಿಲ್ಲ ಬದಲಿಗೆ ಸಮಾಜದಲ್ಲಿ ಬಡವ ಶ್ರೀಮಂತರ ಅಂತರ ಹೆಚ್ಚುತ್ತಿರು ಪ್ರಕಾರದಲ್ಲಿಯೇ ಪುರುಷ ಮತ್ತು ಮಹಿಳೆಯ ನಡುವಿ ಅಂತರವನ್ನೂ ಹೆಚ್ಚಿಸುತ್ತಿವೆ ಎಂಬುದನ್ನು ಈ ಪ್ರಕರಣಗ ನಿರೂಪಿಸುತ್ತಿವೆ. ಪ್ರಾರಂಭಕ್ಕೆ ಕೊಳ್ಳುಬಾಕ ಸಂಸ್ಕೃತಿ ಕಡೆಗೆ ಪುರುಷ ಸಮೂಹವನ್ನು ಆಕರ್ಷಿಸಿದ ಈ ನ ಉದಾರೀಕರಣದ ಸ್ಥಿತ್ಯಂತರಗಳು ನಿಧಾನವ ಮಹಿಳೆಯರನ್ನು ತೆಕ್ಕೆಯೊಳಗೆ ಸೆಳೆದುಕೊಳ್ಳುತ್ತಿವೆ. ಮೊದ ದೇಶ, ನಂತರ ಕುಟುಂಬ, ಆನಂತರ ನಾನು ಎನ್ ಸಮಷ್ಟಿಪ್ರಜ್ಞೆಯನ್ನು ಜನತೆಯಲ್ಲಿ ಜಾಗೃತಗೊಳಿಸ ಪ್ರಯತ್ನಿಸಿದ್ದ ಸ್ವಾತಂತ್ರ್ಯ ಚಳವಳಿಗಳ ಸಂದರ್ಭವಿ ಸಂಪೂರ್ಣ ಅಪ್ರಸ್ತುತವಾಗುವ ಸನ್ನಿವೇಶ ಎದುರಾಗಿ ನನ್ನ ಹಿತ ಮೊದಲು, ನಂತರ ಕುಟುಂಬ, ಆಮೇ ದೇಶ-ಕೋಶ ಎನ್ನುವ ಪ್ರಸ್ತುತ ಮಾರುಕಟ್ಟೆ ಸಿದ್ಧಾಂ ಪುರುಷ ಮಹಿಳೆಯರಾದಿಯಾಗಿ ಎಲ್ಲರ ಸರಕುಗಳಾಗಿದ್ದಾಗಿದೆ. ನನ್ನ ಹಿತ ಮೊದ ಎನ್ನುವ ಉದಾರೀಕರಣ ಕೃಪಾಪೋ ವಲಯದಲ್ಲಿ ಇಂದಿನ ಟಿ.ವಿ ಧಾರಾವಾಹಿ ಬಿಂಬಿಸುವಂತಹ ಶ್ರಮರಹಿತ ಸುಖಜೀ ನಡೆಸಲು ಮಹಿಳೆಯರೂ ಹಲವು ದಾರಿಗಳ ಹುಡುಕುತ್ತಿದ್ದಾರೆ. (ಸುಖಜೀವನದ ಹ ಪುರುಷರಿಗೆ ಯಾವತ್ತೂ ಇದ್ದೇ ಇದೆ) ವಿಭಾಗದಲ್ಲಿ ಅವರಿಗೆ ಮೊದ ಹೊಳೆಯುತ್ತಿರುವ ಸಂಗತಿ ಎಂದರೆ ಗಂ ಕುಟುಂಬದವರಿಂದ ಗಂಡನ ಬೇರ್ಪಡಿಸಿಕೊಂಡು ತನ್ನದೇ ಆದ ಕುಟುಂಬದಲ್ಲಿ ತಾನು ಹಾಯಾಗಿರುವುದು.



…ಗಿಟಾರ್ ನುಡಿಸುವಾಗ ಟೀನೇಜ್ ಫೀಲ್ ಇರೋ ಟ್ಯೂನ್ ಹುಟ್ಟಿಕೊಳ್ಳುತ್ತೆ'

- ಸಂಗೀತ ನಿರ್ದೇಶಕ ಕಿರಣ್ ರವೀಂದ್ರನಾಥ್

ಸಂದರ್ಶನ



…ಪ್ರಶ್ನೆ: ನಿಮ್ಮ ಕುಟುಂಬದ ಬಗ್ಗೆ ಹೇಳ್ತೀರಾ?

…ಕಿರಣ್: ತಂದೆ ನಿವೃತ್ತ ಕೆ.ಎ.ಎಸ್. ಅಧಿಕಾರಿ. ತಾಯಿ …ಣಿ. ಊರು ಚಿತ್ರದುರ್ಗದ ಸೊಂಡೆಕೆರೆ. ಸದ್ಯಕ್ಕೆ …ಗಳೂರಿನಲ್ಲಿ ವಾಸ.

…ಪ್ರಶ್ನೆ: ಸಂಗೀತದ ಬಗ್ಗೆ ಆಸಕ್ತಿ ಬಂದಿದ್ದು ಹೇಗೆ?

…ಕಿರಣ್: ನನ್ನ ತಾಯಿಯ ತಾಯಿ ಮೂಲತಃ …ಣಾಸಿಯವರು. ಅವರು ಸಿತಾರ್ ನುಡಿಸುತ್ತಿದ್ದರು. … ತಾಯಿ ಕೂಡ ಹಿಂದೂಸ್ತಾನಿ ಸಂಗೀತ ಕಲಿತಿದ್ದಾರೆ. …ರಿಂದಾಗಿ ಬಾಲ್ಯದಿಂದಲೇ ಸಂಗೀತದ ಕಡೆ ಆಸಕ್ತಿ …ತು.

…ಪ್ರಶ್ನೆ: ನಿಮ್ಮ ಆರಂಭಿಕ ಸಂಗೀತದ ಗುರುಗಳು ಯಾರು?

…ಕಿರಣ್: ರಾಜಬಾವು ಸೊಂಟಕ್ಕಿ ಅಂತ ಒಬ್ಬರಿದ್ದರು. …ರು ಕೂಡ ವಾರಣಾಸಿಯವರೇ. ಮೊದಲು ಅವರಿಂದ …ದೂಸ್ತಾನಿ ಸಂಗೀತದ ಬಗ್ಗೆ ಒಂದಿಷ್ಟು ಪ್ರಾಥಮಿಕ … ಪಡೆದುಕೊಂಡೆ. ಆನಂತರ, ರಘುಪತಿ ಹೆಗಡೆಯವರ …ಬಳಿ ಹೆಚ್ಚು ಕಾಲ ಕಲಿತೆ. ಅವರಿಂದ ಹಿಂದೂಸ್ತಾನಿ …ಗೀತದ ಮೂಲಸ್ವರೂಪಗಳನ್ನು ಕಲಿಯಲು, …ದುಕೊಳ್ಳಲು ಸಾಧ್ಯವಾಯಿತು.

…ಪ್ರಶ್ನೆ: ಪಾಶ್ಚಾತ್ಯ ಸಂಗೀತದ ಕಡೆ ಆಸಕ್ತಿ ಇರಲಿಲ್ಲವೇ?

…ಕಿರಣ್: ಖಂಡಿತ ಇತ್ತು. 'ಬೆಂಗಳೂರು ಸ್ಕೂಲ್ … ಮ್ಯೂಸಿಕ್' ಎಂಬ ಸಂಸ್ಥೆಯಲ್ಲಿ ಗಿಟಾರ್ ಕಲಿಯಲು …ಕೊಂಡೆ. ಹಮೀದ್ ಮತ್ತು ವಿಕ್ಟರ್ ನನಗೆ ವೆಸ್ಟರ್ನ್ …ಮ್ಯೂಸಿಕ್ ಹೇಳಿಕೊಟ್ಟ ಗುರುಗಳು. ನಿಜ ಹೇಳಬೇಕೆಂದರೆ …ಟಾರ್ ಸ್ಟ್ರಿಂಗ್ಸ್ ಹಿಡಿಯೋದು ಹೇಗೆ ಅನ್ನೋದು ಅಲ್ಲಿಯೇ …ತ್ತಾಗಿದ್ದು.

…ಪ್ರಶ್ನೆ: ಸಿನಿಮಾರಂಗದ ಪ್ರವೇಶ ಹೇಗಾಯ್ತು?

…ಕಿರಣ್: ಹಂಸಲೇಖಾರ ಹತ್ತಿರ ಸ್ವಲ್ಪಕಾಲ ಶಿಷ್ಯವೃತ್ತಿ …ಡೆದೆ. ಒಂದು ಹಾಡನ್ನು ಹೇಗೆ ಕಂಪೋಸ್ ಮಾಡಬೇಕು, …ಸ್ ಅಂದರೆ ಏನು ಅನ್ನೋದು ಹಂಸಲೇಖಾರಿಂದ …ಮಕೊಂಡೆ. ಅವರು ಸಾಂಗ್ ಕಂಪೋಸ್ ಮಾಡುವಾಗ …ವಾಗಿ ಎಲ್ಲವನ್ನೂ ಗಮನಿಸುತ್ತಿದ್ದೆ. ಯಾವ ಮೂಡ್ …ೀ ಹಾಡಿಗೆ ಯಾವ ರಾಗ ಬಳಸಿ ಟ್ಯೂನ್ ಹಾಕುತ್ತಾರೆ? …ಕೆ ಆ ರಾಗವನ್ನೇ ಆಯ್ಕೆ ಮಾಡಿಕೊಂಡರು? ಕಥೆಯಲ್ಲಿ …ವ ಸನ್ನಿವೇಶಕ್ಕೂ, ಆ ರಾಗದ ಮೂಡ್‌ಗೂ ಹೇಗೆಲ್ಲಾ …ಕ್ ಆಗುತ್ತೆ ಅಂತ ಥಿಂಕ್ ಮಾಡ್ತಿದ್ದೆ. ಹಾಗೆ ನೋಡಿದರೆ, …ರಂಗದಲ್ಲಿ ನನ್ನ ಮೊದಲ ಗುರು ಹಂಸಲೇಖಾ.

…ಪ್ರಶ್ನೆ: ಯಾವ್ಯಾವ ವಾದ್ಯಗಳನ್ನು ನುಡಿಸ್ತೀರಿ? ನಿಮ್ಮಿಷ್ಟದ … ಯಾವುದು?

…ಕಿರಣ್: ಗಿಟಾರ್, ಪಿಯಾನೋ, ಹಾರ್ಮೋನಿಯಂ, …ಕುಲೇಲೆ, ಕಹೋನ್ ಹಾಗೂ ಇನ್ನೂ ಕೆಲವು …ಗಳನ್ನು ನುಡಿಸುತ್ತೇನೆ. ಗಿಟಾರ್ ನುಡಿಸೋಕೆ ತುಂಬಾ …ಪಡ್ತೀನಿ.

…ಪ್ರಶ್ನೆ: ನಿಮ್ಮ ಮೊದಲ ಆಲ್ಬಮ್ ಯಾವುದು? …ವಾಗ ಬಂತು?

ಕಿರಣ್: ನನಗೆ ಇಪ್ಪತ್ನಾಲ್ಕು ವರ್ಷ ವಯಸ್ಸಾದಾಗ ಗೆಳೆಯರೆಲ್ಲರ ಸಹಕಾರದಿಂದ 'ಮೌನ' ಎಂಬ ಒಂದು ಆಲ್ಬಮ್ ಮಾಡಿದ್ದೆ. ಅದರಲ್ಲಿ ಒಟ್ಟು ಆರು ಹಾಡುಗಳಿದ್ದವು. ಶಂಕರ್ ಮಹಾದೇವನ್, ರಾಜೇಶ್ ಕೃಷ್ಣನ್, ಸುಜಾತ (ತಮಿಳು) ಹಾಡಿದ್ದರು. ಆಲ್ಬಮ್ ಏನೋ ರೆಡಿಯಾಯ್ತು. ಆದರೆ ಸಮರ್ಪಕವಾಗಿ ಮಾರ್ಕೆಟಿಂಗ್ ಮಾಡೋಕೆ ಆಗಲಿಲ್ಲ, ಎಲ್ಲ ಕಡೆ ತಲುಪಿಸಲು ಕಷ್ಟವಾಯ್ತು. ಹಾಗಾಗಿ, ನನ್ನ ಮೊದಲ ಆಲ್ಬಮ್ 'ಮೌನ'ವಾಗಿಯೇ ಉಳಿಯಿತು. ಇತ್ತೀಚೆಗಷ್ಟೇ ಗಾಯಕಿ ನಂದಿನಿರಾವ್ ಜೊತೆ ಸೇರಿ 'ಬೃಂದಾವನ' ಎಂಬ ಒಂದು ಕನ್ನಡ ಆಲ್ಬಮ್ ಹಾಗೂ 'ಪ್ರಾರ್ಥನಾ' ಎಂಬ ಹಿಂದಿ ಆಲ್ಬಮ್ ಮಾಡಿದ್ದೇನೆ.

ಪ್ರಶ್ನೆ: ಸಿನಿಮಾ ಸಂಗೀತ ನಿರ್ದೇಶಕ ಆಗಿದ್ದು ಹೇಗೆ? ನಿಮ್ಮ ಮೊದಲ ಸಿನಿಮಾ ಯಾವುದು?

ಕಿರಣ್: 'ಹೌಸ್‌ಫುಲ್' ನನ್ನ ಮೊದಲ ಚಿತ್ರ. ದಿಗಂತ್ ಅದರ ಹೀರೋ. ಆ ಚಿತ್ರಕ್ಕೆ ಕೆಲಸ ಮಾಡುವ ಅವಕಾಶ ಬಂದಿದ್ದು ತೀರಾ ಅನಿರೀಕ್ಷಿತವಾಗಿ. ಚಿತ್ರದ ಹಾಡು ಕೇಳಿದವರೆಲ್ಲಾ ಖುಷಿ ಪಟ್ಟರು. ಮೊದಲ ಚಿತ್ರದ ಹಾಡುಗಳನ್ನು ಎಷ್ಟು ಚೆನ್ನಾಗಿ ಮಾಡಲು ಸಾಧ್ಯವಿತ್ತೋ, ಅಷ್ಟೂ ಎಫರ್ಟ್ ಹಾಕಿ ಮಾಡಿದ್ದೆ. ಅದರ ಪರಿಣಾಮ "ಮನದಲ್ಲಿ ಮುಚ್ಚಿಟ್ಟ ಪ್ರೀತಿ" ಎಂಬ ಹಾಡು ಯೂಟ್ಯೂಬ್‌ನಲ್ಲಿ ಒಂದೇ ವಾರದಲ್ಲಿ ಎರಡು ಲಕ್ಷ ವ್ಯೂಸ್ ಪಡೆದುಕೊಂಡಿತ್ತು. ಎಫ್‌ಎಂ ರೇಡಿಯೋದಲ್ಲೂ ಕೆಲವರು ರಿಕ್ವೆಸ್ಟ್ ಮಾಡಿಕೊಂಡು ಆ ಹಾಡನ್ನು ಕೇಳುತ್ತಿದ್ದರು.

ಪ್ರಶ್ನೆ: 'ಹೌಸ್‌ಫುಲ್' ನಂತರ ಹೊಸ ಹೊಸ ಅವಕಾಶಗಳು ಬಂದವಾ?

ಕಿರಣ್: ಕೆಲವೊಂದಿಷ್ಟು ಬಂದವು. ಅವುಗಳ ಪೈಕಿ 'ಅಘೋರ' ಎಂಬುದು ಒಂದು ಚಿತ್ರ. ಆ ಚಿತ್ರದ ಮೇಲೆ ತುಂಬಾ ಭರವಸೆ ಇಟ್ಟುಕೊಂಡಿದ್ದೇನೆ. ಐದು ಸಾವಿರ ವರ್ಷಗಳ ಹಿಂದಿನ ಕಥೆಯುಳ್ಳ ಸಿನಿಮಾ ಅದು. ಆ ಕಾಲಕ್ಕೆ ಹೊಂದುವಂಥ ಸಂಗೀತ ನೀಡಬೇಕಿತ್ತು. ಆ ಮಟ್ಟಿಗಿನ ಪ್ರಯತ್ನ ಖುಷಿ ಕೊಟ್ಟಿದೆ. ಆ ಚಿತ್ರದ ಶೂಟಿಂಗ್ ಸದ್ಯದಲ್ಲೇ ಶುರುವಾಗಲಿದೆ. ಪ್ರಮುಖ ನಟರ ತಾರಾಗಣ ಇರುತ್ತದೆ. ರಾಜೇಶ್ ಬಲಿಪ ಎಂಬುವವರು ನಿರ್ದೇಶಿಸಲಿದ್ದಾರೆ.

ಉಳಿದಂತೆ, 'ಎಡವಟ್ ಲೈಫ್' ಅನ್ನುವ ಹೊಸಬರ ಸಿನಿಮಾ ಇದೆ. ಅದರ ಚಿತ್ರೀಕರಣ ಮುಗಿದಿದೆ. ಸದ್ಯದಲ್ಲೇ ಹಾಡುಗಳು ಹೊರಬರಲಿವೆ. ರಮೇಶ್ ಅರವಿಂದ್ ಅವರ 'ಪ್ರಿಯಸಖಿ' ಮತ್ತು ಜಗ್ಗೇಶ್ ಅಭಿನಯದ 'ಜೋಕರ್' ಎಂಬ ಸಿನಿಮಾಗಳೂ ಇದೆ. ಎಲ್ಲವೂ ಏಕಕಾಲಕ್ಕೆ ರೆಡಿಯಾಗ್ತಿವೆ. ಹಾಗೇನೆ 'ಕಾಂಚಾಣ' ಅನ್ನುವ ಸಿನಿಮಾಗೆ ರೀರೆಕಾರ್ಡಿಂಗ್ ಮಾಡಿದ್ದೇನೆ.

ಪ್ರಶ್ನೆ: ಒಬ್ಬ ಮ್ಯೂಸಿಕ್ ಡೈರೆಕ್ಟರಾಗಿ ಯಾವ್ ತರಹದ ಹಾಡುಗಳನ್ನು ಕನ್ನಡಿಗರಿಗೆ ಕೊಡುವ ಆಸೆ?

ಕಿರಣ್: ದೇಸಿ ಜೊತೆಗೆ ರಾಕ್, ಜಾಜ್, ಹಿಪಾಪ್, ಲ್ಯಾಟಿನ್ ಅಮೇರಿಕನ್- ಇತರೆ ಎಲ್ಲ ಶೈಲಿಗಳನ್ನೂ ಮಿಕ್ಸ್ ಮಾಡಿ ಹೊಸಬಗೆಯ 'ದೇಸಿ ರಾಕ್ ಸ್ಟೈಲ್' ಹಾಡುಗಳನ್ನು ಕೊಡುವ ಆಸೆ. ಈಗ ನಾನು ವರ್ಕ್ ಮಾಡುತ್ತಿರುವ ಸಿನಿಮಾಗಳಲ್ಲಿ ಅಂತಹ ಪ್ರಯೋಗಗಳನ್ನು ಮಾಡುತ್ತಿದ್ದೇನೆ ಅನ್ನುವ ಸಮಾಧಾನ ಇದೆ.

ಪ್ರಶ್ನೆ: ಹಾಡು ಕಂಪೋಸ್ ಮಾಡುವಾಗ ಯಾವ ಇನ್‌ಸ್ಟ್ರೂಮೆಂಟ್ ನಿಮಗೆ ಕಂಫರ್ಟ್ ಕೊಡುತ್ತದೆ? ಯಾಕೆ?

ಕಿರಣ್: ಗಿಟಾರ್‌ಗೆ ನನ್ನ ಮೊದಲ ಆದ್ಯತೆ. ಗಿಟಾರ್ ನುಡಿಸುತ್ತ ಫೀಲ್ ಮಾಡುವಾಗ ಆ ವೈಬ್ರೇಷನ್ನಿಂದ ತಾಜಾ ತಾಜಾ ತಾರುಣ್ಯದ ಆಲೋಚನೆಗಳು ಬರುತ್ತವೆ. ಆಗ ಟೀನೇಜ್ ಫೀಲ್ ಇರೋ ಹೊಸ ಹೊಸ ಟ್ಯೂನ್‌ಗಳು ಹುಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಹಾಗೇನೆ, ಶಾಸ್ತ್ರೀಯ ಶೈಲಿಯ ಹಾಡು ಬೇಕಾದಾಗ, ಹಾರ್ಮೋನಿಯಂ ಈಸ್ ದಿ ಬೆಸ್ಟ್. ಹಾರ್ಮೋನಿಯಂ ನುಡಿಸುವಾಗ ಸರಾಗವಾಗಿ ನೋಟ್ ಫ್ಲೋ ಆಗೋದ್ರಿಂದ ರಾಗದೆಡೆಗೆ ಏಕಾಗ್ರತೆ ವಹಿಸಲು ಸಾಧ್ಯವಾಗುತ್ತೆ.

ಪ್ರಶ್ನೆ: ನಿಮ್ಮಿಷ್ಟದ ಗಿಟಾರಿಸ್ಟ್ ಯಾರು? ಯಾಕೆ?

ಕಿರಣ್: ಆಸ್ಟ್ರೇಲಿಯಾದ ಟಾಮಿ ಇಮ್ಯಾನ್ಯುಯಲ್ ನನ್ನಿಷ್ಟದ ಗಿಟಾರಿಸ್ಟ್. ಯಾಕೆ ಅಂದರೆ, ಬೇಸ್, ಕಾರ್ಡ್ಸ್ ಹಾಗೂ ಲೀಡ್ಸ್‌ಗಳನ್ನು ಒಂದೇ ಗಿಟಾರ್‌ನಲ್ಲಿ ಒಂದೇ ಫ್ಲೋನಲ್ಲಿ ನುಡಿಸ್ತಾನೆ ಆತ. ಉಳಿದ ಯಾರೇ ಆಗಲಿ ಈ ಮೂರರಲ್ಲಿ ಯಾವುದಾದರು ಒಂದನ್ನು ಮಾತ್ರ ಒಮ್ಮೆಗೆ ನುಡಿಸಲು ಸಾಧ್ಯವಾಗೋದು.

ಪ್ರಶ್ನೆ: ನಿಮಗಿಷ್ಟದ ರಾಗಗಳು ಯಾವುವು?

ಕಿರಣ್: ಪೀಲೂ, ಪೂರಿಯ, ಧನಶ್ರೀ, ಬಾಗೇಶ್ರೀ, ಭೀಮ್ ಪಲಾಸ್, ಎಮನ್, ಭೈರವಿ, ಮಾಲ್ ಕೌನ್ಸ್, ಭೂಪಾಲಿ, ದರ್ಬಾರಿ, ಮುಲ್ತಾನಿ, ತೋಡಿ ಸೇರಿದಂತೆ ಅನೇಕ ಇಷ್ಟದ ರಾಗಗಳಿವೆ. ಒಂದೊಂದು ರಾಗದ ಮೇಲೂ ವರ್ಕ್ ಮಾಡುವಾಗ ಅದರದೇ ಆದ ಕಿಕ್ ಇರುತ್ತೆ, ಅದರದೇ ಆದ ತಲ್ಲೀನತೆ ಇರುತ್ತೆ. ಚಿತ್ರಕಥೆಯಲ್ಲಿನ ಹಾಡಿನ ಸನ್ನಿವೇಶ ಯಾವುದು ಅನ್ನೋದರ ಮೇಲೆ ಯಾವ ರಾಗದಿಂದ ಟ್ಯೂನ್ ಕಂಪೋಸ್ ಮಾಡಬೇಕು ಅಂತ ನಿರ್ಧರಿಸುತ್ತೇನೆ. ಅದಕ್ಕೆ ಬೇಕಾದ ತಯಾರಿ ನಡೆಸುತ್ತೇನೆ. ಟ್ಯೂನ್ ಕಂಪೋಸ್ ಮಾಡಿದ ನಂತರ ಕೀ ಬೋರ್ಡ್ ಪ್ರೋಗ್ರಾಮಿಂಗ್ ಮಾಡುವಾಗಲೂ ಈ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಪ್ರಶ್ನೆ: ನೀವು ಯಾರ್‍ಯಾರ ಹಾಡುಗಳನ್ನು ಕೇಳ್ತೀರಿ?

ಕಿರಣ್: ಗುಲಾಂ ಅಲಿ, ಮೆಹದಿ ಹಸನ್ ಗಜಲುಗಳು, ಕಿಶೋರ್ ಕುಮಾರ್, ಮೊಹಮದ್ ರಫಿ ಹಾಡುಗಳು, ರಾಜಕುಮಾರ್, ಪಿ.ಬಿ.ಶ್ರೀನಿವಾಸ್, ಚಿತ್ರಾ, ಲತಾ ಮಂಗೇಶ್ಕರ್ ಹಾಡಿರುವ ಗೀತೆಗಳು, ಯೂರೋಪಿಯನ್ ಬ್ಯಾಂಡ್ ಹಾಗೂ ಲ್ಯಾಟಿನ್ ಅಮೆರಿಕನ್ ಬ್ಯಾಂಡ್‌ಗಳ ಮ್ಯೂಸಿಕ್. ಹಾಗೇನೆ, ಭೀಮಸೇನ್ ಜೋಷಿ, ರಶೀದ್ ಖಾನ್, ಕಿಶೋರಿ ಅಮೋಣ್ಕರ್, ಸಲಾಮತ್ ಅಲಿಯವರ ಹಿಂದೂಸ್ತಾನಿ ಸಂಗೀತ.

ಪ್ರಶ್ನೆ: ಸಾಂಗ್ ಕಂಪೋಸ್ ಮಾಡಲು ಇಂಥದ್ದೇ ಮೂಡ್ ಅಥವಾ ಇಂಥದ್ದೇ ಜಾಗ ಇರಬೇಕು ಅಂತೇನಾದ್ರೂ ಇದೆಯಾ?

ಕಿರಣ್: ಸಂಜೆಯಿಂದ ಮಧ್ಯರಾತ್ರಿಯವರೆಗೆ ಕೆಲಸ ಮಾಡಲು ಪ್ರಶಸ್ತ ಸಮಯ ನನಗೆ. ಆ ಟೈಮಲ್ಲಿ ಪ್ರಶಾಂತತೆ ಇರುತ್ತೆ. ಅಂಥ ಮೂಡ್‌ನಲ್ಲಿ ಒಳ್ಳೊಳ್ಳೆಯ ಟ್ಯೂನ್‌ಗಳು ಬರ್ತವೆ. ಇಂಥದ್ದೇ ಜಾಗ ಅಂತೇನಿಲ್ಲ, ಯಾವುದೇ ಡಿಸ್ಟರ್ಬೆನ್ಸ್ ಇರಬಾರದು ಅಷ್ಟೇ. ಹೆಚ್ಚಾಗಿ ನನ್ನದೇ ಸ್ಟುಡಿಯೋದಲ್ಲೇ ವರ್ಕ್ ಮಾಡ್ತೀನಿ.

ಪ್ರಶ್ನೆ: ಇತ್ತೀಚೆಗೆ ಅನೇಕ ಸಂಗೀತ ನಿರ್ದೇಶಕರು ಎಲ್ಲೆಲ್ಲಿಂದಲೋ ಟ್ಯೂನ್ಸ್ ಕದಿಯುತ್ತಾರೆ. ನೀವೂ ಹಾಗೇನಾ?


ಕಿರಣ್: ನಾನು ಕದಿಯಲು ಇಷ್ಟಪಡಲ್ಲ, ಹೊಸದನ್ನೇ ಕೊಡಲು ಬಯಸುತ್ತೇನೆ. ಬೇರೆಯವರ ಟ್ಯೂನ್‌ಗಳನ್ನು ಕದಿಯೋದು ಅಂದ್ರೆ ಕಂಡವರ ಮಕ್ಕಳನ್ನು ಕಿಡ್ನಾಪ್ ಮಾಡಿ ತಂದು ನಮ್ಮನೇಲಿ ಇಟ್ಟುಕೊಳ್ಳೋದು ಅಂತ ಭಾವಿಸಿದ್ದೇನೆ. ನನ್ನ ಹಾಡುಗಳಲ್ಲಿ ನನ್ನದೇ ಸಿಗ್ನೇಚರ್ ಇರುವಂತೆ ನೋಡಿಕೊಳ್ಳುವ ಆಸೆ ನನಗೆ.

ಪ್ರಶ್ನೆ: ಕಡೆಯದಾಗಿ, ನೀವು ಸಂಗೀತ ಕ್ಷೇತ್ರಕ್ಕೆ ಬರೋದು ನಿಮ್ಮ ಮನೆಯವರಿಗೆ ಇಷ್ಟವಿತ್ತಾ?

ಕಿರಣ್: ಖಂಡಿತ ಇಷ್ಟವಿರಲಿಲ್ಲ, ನಾನು ಇಂಜಿನಿಯರ್ ಆಗಬೇಕು ಅನ್ನೋದು ಮನೆಯವರ ಕನಸಾಗಿತ್ತು, ನನ್ನಾಸೆಯೂ ಅದೇ ಆಗಿತ್ತು. ವಿಪರ್ಯಾಸವೆಂದರೆ ಇಂಜಿನಿಯರ್ ಆಗಬೇಕಿದ್ದ ನಾನು ಮ್ಯೂಸಿಕ್ ಫೀಲ್ಡಿಗೆ ಬಂದೆ. ಆದರೆ ಯಾವಾಗಲೂ ಕನಕದಾಸರ ಕೀರ್ತನೆಗಳನ್ನು ಹಾಡುತ್ತಾ ಸಿಂಗರ್ ಆಗಬೇಕೆಂದು ಕನಸು ಕಾಣುತ್ತಿದ್ದ ನನ್ನ ತಂಗಿ ಇಂಜಿನಿಯರ್ ಆದಳು!



ಸಂದರ್ಶಕ
ಹೃದಯಶಿವ



…ತಡೆಯಿಲ್ಲದೆ ಅವಕಾಶ ಸಿಕ್ಕಿಬಿಡುವ ಪ್ರಸಂಗಗಳಲ್ಲಿ …ಮು. ಪೊಲೀಸರ ನೆರವಿನ ಅಗತ್ಯ ಬಾರದು. ಇದಕ್ಕೆ …ದ್ದಷ್ಟು ಪ್ರಸಂಗಗಳು ಎದುರಾದಾಗ, ಕೌಟುಂಬಿಕ …ಬ್ದಾರಿಗಳು ತಮ್ಮ ಮೇಲೆ ಇಷ್ಟವಿಲ್ಲದಿದ್ದರೂ …ದಾಗ, ಗಂಡ ತಾನೊಬ್ಬನೆ ಕುಟುಂಬದಿಂದ …ದಾಗ ಒಟ್ಟಿಗೆ ಸೂಚಿಸದಾದಾಗ ಮಹಿಳಾಪರ …ಗಳನ್ನು ಅದನ್ನೂ ಬಳಸಿಕೊಳ್ಳುವ ಸಂದರ್ಭಗಳು …ಗುತ್ತವೆ. ಬಹುಸಂಖ್ಯಾತ ಮಹಿಳೆಯರು ಇದೇ …ಗುತ್ತಿದ್ದರೆ ಈ ಸಮಾಜ ಅಲ್ಲೋಲಕಲ್ಲೋಲ …ತ್ತು, ಎಂದು ಪರಿಗಣಿಸಬೇಕಾದಾಗಲೀ ಈ ಘಟನಾವಳಿಗಳು ಸಂಭವಿಸುತ್ತಲೇ ಇಲ್ಲ ಅಥವಾ ಇವು ವಿರಳಾತಿವಿರಳ ಎಂದು ಘೋಷಿಸಿಬಿಡುವ ಪರಿಸ್ಥಿತಿಯು ಸದ್ಯದ್ದಲ್ಲ. ಹಾಗಿದ್ದರೆ ಕೌಟುಂಬಿಕ ಜವಾಬ್ದಾರಿಯ ಹೊಣೆ ಸಂಪೂರ್ಣ ಮಹಿಳೆಗೆ ಸಂಬಂಧಿಸಿದ್ದೆ? ಆಕೆಯ ಹೊಂದಾಣಿಕೆಯ ಏಕೈಕ ಕಾರಣದಿಂದ ಕುಟುಂಬಗಳು ಸುರಕ್ಷಿತವಾಗಿವೆಯೇ ಎನ್ನುವ ಪ್ರಶ್ನೆಯನ್ನೂ ಸಾಂದರ್ಭಿಕವಾಗಿಯೇ ನೋಡಬೇಕಿದೆ. ಹೆಣ್ಣು ವಿವಾಹವಾಗಿ ಗಂಡಿನ ಮನೆಗೆ ಹೋಗುವ ಸಂಪ್ರದಾಯವಿರುವ ನಮ್ಮ ಸಮಾಜದಲ್ಲಿ ನಾನಾದರೆ ವಿವಾಹವಾಗಿ ಅಪ್ಪ-ಅಮ್ಮನನ್ನು ಬಿಟ್ಟು ಹೊರಬರಬಹುದಾದರೆ ಗಂಡನೇಕೆ ತಾನೂ ಹೊರ ಬರಬಾರದು ಎನ್ನುವ ಪ್ರಶ್ನೆಯನ್ನು ಆಧುನಿಕ ಮಹಿಳೆಯರು ಸಮಾಜದ ಮುಂದಿಡುತ್ತಿದ್ದಾರೆ. ವಿಶೇಷವಾಗಿ ಏಕೈಕ ಪುತ್ರಿ ಅಥವಾ ಪುತ್ರರನ್ನು ಹೊಂದಿರುವ ಕುಟುಂಬಗಳಿಗೆ ಇದು ಸವಾಲಿನ ವಿಷಯವೇ ಆಗಿ ಕಾಡುತ್ತಿದೆ. ನಿಜ ಈ ವಿಚಾರವೂ ಇಂದು ಚರ್ಚೆಗೆ ಅರ್ಹವಾದುದೆ. ಪ್ರಾರಂಭಕ್ಕೆ ವೈಯಕ್ತಿಕ ಅಥವಾ ಕೌಟುಂಬಿಕ ಸಮಸ್ಯೆಗಳಾಗಿ ಮಾತ್ರ ಗೋಚರಿಸುವ ಈ ಸಮಸ್ಯೆಗಳು ಸಾಮಾಜಿಕ ಸವಾಲುಗಳಾಗಿ ಪರಿವರ್ತನೆ ಆಗಲು ಬಹಳ ಸಮಯವೇನು ಹಿಡಿಯಲಾರದು. ಹೀಗಾಗಿ ಈ ಸಮಸ್ಯೆಗೆ ಇಡಿಯಾಗಿ ಸಮಾಜ ಉತ್ತರ ಹುಡುಕಬೇಕೆ ಹೊರತು ವೈಯಕ್ತಿಕ ನೆಲೆಗಳಿಂದಲ್ಲ. ಇದಕ್ಕೆ ಪರಿಹಾರ ಗಂಡು-ಹೆಣ್ಣು ಇಬ್ಬರೂ ಮನೆ ಬಿಡುವುದೂ ಅಲ್ಲ ಅಥವಾ ಹೆತ್ತವರನ್ನೇ ಹೊರಹಾಕುವುದೂ ಅಲ್ಲ. ಯಾವುದೂ ಕೈಗೂಡದಾದಾಗ ಮಹಿಳಾ ಕಾನೂನುಗಳ ದುರ್ಬಳಕೆ ಮಾಡುವುದೂ ಅಲ್ಲ.

ಅದೇ ಸಂದರ್ಭಕ್ಕೆ, ಗಂಡನನ್ನು ಅಥವಾ ಆತನ ಕುಟುಂಬದವರನ್ನೂ ಗೋಳು ಹೊಯ್ದುಕೊಳ್ಳುವ ಮಹಿಳಾ ವರ್ಗವೊಂದು (ಸಣ್ಣಪ್ರಮಾಣದ್ದೇ ಇರಬಹುದು) ಸೃಷ್ಟಿಯಾಗುತ್ತಿರುವುದಕ್ಕೆ ಸೂಕ್ತ ಕಾರಣಗಳನ್ನು ಹುಡುಕುವ ಬದಲಿಗೆ ಈ ಚರ್ಚೆಯೇ ಬೇಡವೆಂದುಬಿಟ್ಟರೆ ಪರಿಹಾರ ಲಭ್ಯವಾಗುವುದೂ ಇಲ್ಲ. ಇಷ್ಟು ಮಾತ್ರ ಧೋರಣೆಯಿಂದಲೇ ಮಹಿಳಾ ಸಮಾನತೆಯನ್ನು ಸ್ಥಾಪಿಸಲೂ ಬರುವುದಿಲ್ಲ. ಪುರುಷರು ನಡೆಸುವ ದಬ್ಬಾಳಿಕೆಗಳಿಗೆ ಎದುರಾಗಿ ವಾದ ಮಂಡಿಸಲು ಈ ಪತಿಪೀಡಕ ಪ್ರಕರಣಗಳನ್ನು ಬಳಸಿಕೊಳ್ಳುವುದು ತೀರಾ ಬಾಲಿಶ ಸಂಗತಿಯಾಗುವುದಾದರೂ ಇವುಗಳಿಂದ ನೋವುಂಡು ನರಳುವ ಕುಟುಂಬಗಳಿಗೊಂದು ಸಾಂತ್ವನ ಹೇಳುವ ಕೆಲಸವನ್ನಾದರು ಸಮಾಜ ಮಾಡಿದರೆ ನಷ್ಟವೇನು ಆಗದು. ಹಿಂಸೆಯಿಂದ ಮುಕ್ತವಾಗಿ ಬದುಕುವ ಹಕ್ಕನ್ನು ನಮ್ಮ ಸಂವಿಧಾನ ಮಹಿಳೆಯರಿಗೂ, ಪುರುಷರಿಗೂ ಇಬ್ಬರಿಗೂ ಕಾಯ್ದಿರಿಸಿದೆ. ಯಾರಿಂದ ಯಾರದೇ ಹಕ್ಕುಗಳು ಮೊಟಕುಗೊಂಡಾಗ ಪ್ರಜ್ಞಾವಂತ ಸಮಾಜ ಅದಕ್ಕೆ ಪ್ರತಿಕ್ರಿಯಿಸುವ, ತಪ್ಪು ದಾರಿ ತುಳಿಯುವವರನ್ನು ಎಚ್ಚರಿಸುವ ಕೆಲಸ ಮಾಡದೇ ಹೋದರೆ ದಗಲ್ಬಾಜಿಕೋರತನಕ್ಕೆ ಲಿಂಗಭೇದವಿಲ್ಲದೆ ಎಲ್ಲರೂ ಕೊಚ್ಚಿಹೋಗಬೇಕಾದ ಸನ್ನಿವೇಶ ಮುಂದೊಂದು ದಿನ ಎದುರಾಗದೇ ಇರದು. ಒಂದು ಮಾತಂತು ಸ್ಪಷ್ಟ. ಪುರುಷರು ನಡೆಸುವ ದಬ್ಬಾಳಿಕೆಗಳಿಗೆ ಮೌನಸಮ್ಮತಿ ನೀಡುವ ಸಮಾಜ ಮಹಿಳೆಯರ ವಿಷಯ ಬಂದಾಗ ಮೈಕೊಡವಿ ನಿಂತರೂ ಲಾಭವಿಲ್ಲ, ಸಮಾನತೆಯ ಹೆಸರಿನಲ್ಲಿ ಪುರುಷರ ಮೇಲೆ ನಡೆಯುವ ಪ್ರತಿಹಿಂಸೆಯನ್ನು ಪರಿವರ್ತನಾ ಹಂತ ಎಂದು ಗೌಣಗೊಳಿಸಿಬಿಟ್ಟರೂ ಪ್ರಯೋಜನವಾಗದು.

- ಎನ್. ಪ್ರಭಾ, ದೊಡ್ಡಬೆಳವಂಗಲ, ದೊಡ್ಡಬಳ್ಳಾಪುರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2050/2011-1

ಪ್ರದೀಪ್ ಅಳಿಯ ಆಫ್ ಕೆ.ಶಿವರಾಂ



'ಜೌಲಿಡೇಸ್', 'ಕೃಷ್ಣನ್ ಲವ್ ಸ್ಟೋರಿ', 'ಚಂಗಾರಿ', 'ಪೆರೋಲ್' ಚಿತ್ರಗಳ ಮೂಲಕ ಬೆಳಕಿಗೆ ಬಂದವರು ನಟ ಪ್ರದೀಪ್. ಈಗ 'ರಂಗನ ಸ್ಟೈಲ್' ಎಂಬ ಚಿತ್ರದ ಮೂಲಕ ಮೈಸೂರಿನ ಬೋಗಾದಿ ಹುಡುಗ ಪ್ರದೀಪ್ ಪೂರ್ಣಪ್ರಮಾಣದ ಹೀರೋ ಆಗುತ್ತಿದ್ದಾರೆ.

ಇದೇ ಹೊತ್ತಿನಲ್ಲಿ ಪ್ರದೀಪ್ ತಮ್ಮ ರಿಯಲ್ ಲೈಫ್‌ನಲ್ಲಿ ಓರ್ವ ಹೀರೋಯಿನ್‌ಳನ್ನು ಹುಡುಕಿಕೊಂಡಿದ್ದಾರೆ! ಯಾರವಳು? ಎಲ್ಲಿಹಳು? ಅನ್ನುವ ಕುತೂಹಲ ನಿಮ್ಮಲ್ಲಿ ಮೂಡುವುದು ಸಹಜ.

ಆಕೆಯ ಹೆಸರು ಇಂಚರ. ಇಪ್ಪತ್ತಾರು ವರ್ಷದ ಕನ್ನಡತಿ.

ಈ ಇಂಚರ ಮತ್ತು ಪ್ರದೀಪ್ ಪರಸ್ಪರ ರಿಯಲ್ಲಾಗಿ ಲವ್ ಮಾಡಿ ಇತ್ತೀಚೆಗಷ್ಟೇ ಗುಟ್ಟಾಗಿ ನಿಶ್ಚಿತಾರ್ಥವನ್ನೂ ಮಾಡಿಕೊಂಡಿದ್ದಾರೆ. ನಿಶ್ಚಿತಾರ್ಥದ ಬಳಿಕ ಕೆಲವೇ ಕೆಲವು ಆಪ್ತರನ್ನು ಕರೆದು ಬಿಡದಿ ಫಾರ್ಮ್ ಹೌಸ್‌ನಲ್ಲಿ ಪಾರ್ಟಿಯನ್ನೂ ಕೊಟ್ಟಿದ್ದಾರೆ. ಸುದೀಪ್ ಹೆಂಡತಿ ಸೇರಿದಂತೆ ಸಿ.ಸಿ.ಎಲ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿದ್ದ ಅನೇಕರು ಹಾಜರಾಗಿ ವಿಶ್ ಮಾಡಿದ್ದಾರೆ. ಆದರೆ, ಮಾಧ್ಯಮದ ಯಾವೊಬ್ಬ ನರಪಿಳ್ಳೆಯನ್ನೂ ಹತ್ತಿರಕ್ಕೆ ಬಿಟ್ಟುಕೊಂಡಿರಲಿಲ್ಲ. ಇದಕ್ಕೆ ಕಾರಣವೂ ಉಂಟು. ಈ ಇಂಚರ ಬೇರೆ ಯಾರೂ ಅಲ್ಲ, 'ಬಾನಲ್ಲೇ ಮಧುಚಂದ್ರಕೆ' ಚಿತ್ರದ ಮೂಲಕ ಕನ್ನಡಿಗರಿಗೆ ಪರಿಚಯವಾದ ನಟ ಕಂ ಐ.ಎ.ಎಸ್. ಆಫೀಸರ್ ಕೆ.ಶಿವರಾಂ ಅವರ ಜ್ಯೇಷ್ಠ ಪುತ್ರಿ ಈಕೆ.

ಇಷ್ಟಕ್ಕೂ, ಇಂಚರಾಳನ್ನು ಪ್ರದೀಪ ಪಟಾಯಿಸಿದ್ದಾದ್ರೂ ಹೇಗೆ? ಈ ಪ್ರಶ್ನೆಗೆ ಬಲ್ಲ ಮೂಲಗಳಿಂದ ಬರುತ್ತಿರುವುದು ಒಂದೇ ಉತ್ತರ: ಫೇಸ್‌ಬುಕ್! ಫೇಸ್‌ಬುಕ್!! ಫೇಸ್‌ಬುಕ್!!!

ಮತ್ತೆ ಯಶ್-ರಾಧಿಕಾ ಜೋಡಿ



'ಮೊಗ್ಗಿನ ಮನಸು' ಮೂಲಕ ಯಶಸ್ವೀ ಜೋಡಿ ಎನಿಸಿಕೊಂಡಿದ್ದ ಯಶ್-ರಾಧಿಕಾ ಪಂಡಿತ್ ಜೋಡಿ ಇತ್ತೀಚೆಗಷ್ಟೇ 'ಡ್ರಾಮಾ'ದಲ್ಲಿ ಮತ್ತೆ ಒಟ್ಟಾಗಿ ಬಣ್ಣ ಹಚ್ಚಿತ್ತು. ಈಗ ಮತ್ತದೇ ಜೋಡಿಯನ್ನು ಹಾಕಿಕೊಂಡು 'ಮಿಸ್ಟರ್ ಅಂಡ್ ಮಿಸ್ಸೆಸ್ ರಾಮಾಚಾರಿ' ಎಂಬ ಚಿತ್ರ ಶುರುವಾಗಲಿದೆ. ವಿತರಕ ಹಾಗೂ ನಿರ್ಮಾಪಕ ಜಯಣ್ಣ ಈ ಚಿತ್ರಕ್ಕೆ ರೊಕ್ಕ ಸುರಿಯಲಿದ್ದಾರಂತೆ.

ಸಹಜವಾಗಿ ಯಶ್-ರಾಧಿಕಾ ಪಂಡಿತ್ ಜೋಡಿಗೆ ಈ ಚಿತ್ರ ತುಂಬಾ ನಿರೀಕ್ಷೆ ಹುಟ್ಟಿಸಿದೆಯಂತೆ. 'ಮೊಗ್ಗಿನ ಮನಸು' ನಂತರ ಅಂತಹ ಹೃದಯಸ್ಪರ್ಶಿ ಪಾತ್ರಗಳಲ್ಲಿ ಯಶ್-ರಾಧಿಕಾ ಪಂಡಿತ್‌ರನ್ನು ತೆರೆಯ ಮೇಲೆ ಕಾಣಬೇಕು ಅನ್ನುವ ಆಸೆ ಪ್ರೇಕ್ಷಕನಿಗೆ ಇದ್ದೇ ಇತ್ತು. ಆದರೆ 'ಮೊಗ್ಗಿನ ಮನಸು' ನಿರ್ದೇಶಕ ಶಶಾಂಕ್ ಈ ಜೋಡಿಯನ್ನು ಬಳಸಿಕೊಂಡಂತೆ 'ಡ್ರಾಮಾ' ನಿರ್ದೇಶಕ ಯೋಗರಾಜ್ ಭಟ್ಟರು ಬಳಸಿಕೊಳ್ಳಲಿಲ್ಲ. ಯಾಕೆಂದರೆ 'ಡ್ರಾಮಾ'ದಲ್ಲಿ ಇವರಿಬ್ಬರಿಗೆ ಪ್ರಮುಖ ಪಾತ್ರಗಳು ಇತ್ತಾದರೂ ಕ್ಲೈಮಾಕ್ಸ್ ಹೊರತುಪಡಿಸಿ ಉಳಿದ ಕಡೆ ಇವರಿಬ್ಬರ ನಟನೆ ಅಷ್ಟಾಗಿ ಕಾಡುವುದಿಲ್ಲವೆಂದೇ ಹೇಳಬೇಕಾಗುತ್ತದೆ.

ಅಂದಹಾಗೆ, 'ಮಿಸ್ಟರ್ ಅಂಡ್ ಮಿಸ್ಸೆಸ್ ರಾಮಾಚಾರಿ' ಚಿತ್ರದ ನಿರ್ದೇಶಕ ಯಾರು ಎಂಬುದೇ ಇನ್ನೂ ನಿಗೂಢವಾಗಿದೆ!

ಮುತ್ತು ನಂಬಿ ದಿಗಂತ್ ಕೆಟ್ಟ



ಕೆನ್ನೆ ಮೇಲೆ ಸಣ್ಣ ಗುಳಿಯುಳ್ಳ ಬಿಳಿ ಹುಡುಗ ದಿಗಂತ್ ಕೇವಲ ಹುಡುಗಿಯರಿಗಷ್ಟೇ ಇಷ್ಟವಲ್ಲ. ಎಲ್ಲಿಯತನಕ ದಿಗಂತ್ ಅನ್ನುವ ಹೆಸರಿಗೆ ಒಳ್ಳೆ ಟಿವಿ ರೈಟ್ಸ್ ಸಿಗುತ್ತೋ ಅಲ್ಲಿಯತನಕ ಗಾಂಧಿನಗರದ ನಿರ್ಮಾಪಕರಿಗೂ ದಿಗಂತ್ ಇಷ್ಟವಾಗುತ್ತಾನೆ.

ಇದನ್ನು ವ್ಯಾಪಾರ ಅನ್ನುತ್ತಾರೆ. ಇಂಥ ವ್ಯಾಪಾರಸ್ಥ ನಿರ್ಮಾಪಕರು ತಮ್ಮ ಚಿತ್ರಗಳಿಗೆ ದಿಗಂತ್‌ನನ್ನು ಹಾಕಿಕೊಳ್ಳಬೇಕೆಂದು ನಿರ್ಧರಿಸಿ ಆತನನ್ನು ಸಂಪರ್ಕಿಸಲು ಮುಂದಾದರೆ ಸೆಂಟರ್‌ನಲ್ಲಿ ಮುತ್ತು ಎಂಬ ಭಯಂಕರ ಆಸಾಮಿಯೊಂದು ಎಡತಾಕುತ್ತದೆ. ಈ ಮುತ್ತು ಎಂಬಾತ ದಿಗಂತ್ ತನ್ನ ಬಳಿ ಸಾಕಿಕೊಂಡಿರುವ ಮ್ಯಾನೇಜರ್ ಅಲ್ಲಲ್ಲ, ಡ್ಯಾಮೇಜರ್!

ಈ ಡ್ಯಾಮೇಜರ್ ಮುತ್ತು ಅಂತಿಂಥ ಕ್ರಿಮಿಯಲ್ಲ. ಈತ ಕೇವಲ ಕಮಿಷನ್ ಆಧರಿಸಿಯೇ ಬದುಕುತ್ತಾನೆಂದರೆ ನೀವು ನಂಬಲೇಬೇಕು. ಯಾಕೆಂದರೆ ಯಾರಾದರೂ ದಿಗಂತ್‌ನನ್ನು ಹಾಕಿಕೊಂಡು ಸಿನಿಮಾ ಮಾಡಬೇಕು ಅಂದರೆ ಈ ಜೀವಿಗೆ ಕಮಿಷನ್ ಕೊಡಲೇಬೇಕು. ಕಮಿಷನ್ ಕೊಡಲಿಲ್ಲ ಅಂದರೆ ಅವರಿಗೆ ದಿಗಂತ್ ಡೇಟ್ಸ್ ಸಿಗಲ್ಲ!!

"ಈಗಾಗಲೇ ಐದಾರು ಸಿನಿಮಾಗಳಿವೆ. ದಿಗಂತ್ ತುಂಬಾ ಬಿಜಿ ಇದ್ದಾರೆ. ಒಂದೆರಡು ವರ್ಷ ಫ್ರೀ ಇಲ್ಲ" ಅಂತಲೇ ಮಾತು ಶುರು ಮಾಡುವ ಈ ಡ್ಯಾಮೇಜರ್, ನಿರ್ಮಾಪಕರ ಜೇಬನ್ನು ನೋಡಿಕೊಂಡು ಡೀಲು ಕುದುರಿಸಲಾರಂಭಿಸುತ್ತದೆ. ದಿಗಂತ್ ಬೇಕೇಬೇಕು ಅಂದರೆ 'ಮುತ್ತು ಮಹಾತ್ಮೆ' ಜೋರಾಗಿ ಸಾಗುತ್ತದೆ. "ನೋಡಿ ಸಾರ್, ನಿಮಗೆ ದಿಗಂತ್ ಡೇಟ್ಸ್ ಬೇಕೇ ಬೇಕು ಅನ್ನೋದಾದ್ರೆ, ದಿಗಂತ್‌ಗೆ ಈಗಿರೋ ಬಿಜಿ ಶೆಡ್ಯೂಲ್‌ನಲ್ಲಿ ಅಡ್ಜಸ್ಟ್ ಮಾಡಬೇಕಾಗುತ್ತೆ, ಅದಕ್ಕೆ ನೀವು ನನ್ನೊಂದಿಗೆ ಮೊದಲು ಅಡ್ಜಸ್ಟ್ ಆಗಬೇಕು. ಅಂದರೆ ದಿಗಂತ್‌ಗೆ ಈಗಿರುವ ರೆಮ್ಯುನರೇಶನ್‌ನಲ್ಲಿ 5-10 ಪರ್ಸೆಂಟ್ ಕಮಿಷನ್‌ಅನ್ನು ನೀವು ನನಗೆ ಕೊಡಬೇಕು. ಬೇಕಾದ್ರೆ ದಿಗಂತ್ ಪೇಮೆಂಟು ಕಮ್ಮಿ ಮಾಡ್ಸೋಣಾ" ಅಂತ ಮುಲಾಜಿಲ್ಲದೆ ಬಾಯಿಬಿಟ್ಟು ಕೇಳುತ್ತಾನೆ ಡ್ಯಾಮೇಜರ್ ಮುತ್ತು!

ದಿಗಂತ್ ಈಗ ಒಂದು ಸಿನಿಮಾಗೆ 25 ರಿಂದ 30 ಲಕ್ಷ ರೂಪಾಯಿ ಚಾರ್ಜ್ ಮಾಡೋದು ಅನ್ನೋದನ್ನು ಇಲ್ಲಿ ಗಮನಿಸಬೇಕು. ಅಂದರೆ, ಬರೋಬ್ಬರಿ ಲಕ್ಷಗಳ ಲೆಕ್ಕದಲ್ಲಿ ಕಮಿಷನ್ ಮುತ್ತು ಜೇಬಿಗಿಳಿಯುತ್ತದೆ!

"ಆಯ್ತಪ್ಪ ನೀನು ಹೇಳಿದಂಗೆ ಆಗ್ಲಿ" ಅಂತ ನಿರ್ಮಾಪಕರು ಒಂದು ಲಕ್ಷವನ್ನೋ, ಎರಡು ಲಕ್ಷವನ್ನೋ ಮುತ್ತು ಕೈಗೆ ತುರುಕಿದರು ಅಂತಿಟ್ಟುಕೊಳ್ಳಿ, ಬಿಜಿ ಇರೋ ದಿಗಂತ್ ದಿಢೀರನೆ ಫ್ರೀ ಆಗಿಬಿಡ್ತಾರೆ! ಮುಂದಿನ ವಾರವೇ ಶೂಟಿಂಗ್ ಶುರು ಮಾಡಬಹುದು. ಶೂಟಿಂಗು ಸುಸೂತ್ರವಾಗಿ ನಡೆಯುತ್ತೆ. ಇಲ್ಲೇ ನೀವು ಅರ್ಥಮಾಡಿಕೊಳ್ಳಬೇಕು ಮುತ್ತು ಎಂಥ ಐನಾತಿ ಆಸಾಮಿ ಅಂತ.

ಮುತ್ತುವಿನ ಜೇಬಿಗೆ ದುಡ್ಡು ಸೇರಿದ ನಂತರ ಒಂದು ಶೆಡ್ಯೂಲಿಗೆ ಹತ್ತರಿಂದ ಹನ್ನೆರಡು ದಿನ ದಿಗಂತ್ ಡೇಟ್ಸ್ ಸಿಗುತ್ತೆ. ಮಧ್ಯದಲ್ಲಿ ಒಂದು ಬ್ರೇಕ್ ತಗೊಂಡು ಸೆಕೆಂಡ್ ಶೆಡ್ಯೂಲ್ ಶುರು ಮಾಡಬೇಕಾಗಿ ಅಂತಾದರೆ ಮತ್ತೆ ಮುತ್ತುವಿನ ಕಿರಿಕ್ ಶುರುವಾಗುತ್ತೆ. ನಿರ್ಮಾಪಕ ಮತ್ತೆ ಮುತ್ತು ಜೊತೆ ಅಡ್ಜಸ್ಟ್ ಮಾಡಿಕೊಂಡರಷ್ಟೇ ದಿಗಂತ್ ಡೇಟ್ಸ್, ಶೂಟಿಂಗು ಗೀಟಿಂಗು ಎಲ್ಲ. ಇಲ್ಲದೇ ಹೋದರೆ ಕೆಲಸ ಮುಂದೆ ಸಾಗಲ್ಲ. ಸಿನಿಮಾ ಮುಗಿದು ಬಿಡುಗಡೆಯಾಗುವವರೆಗೂ ನಿರ್ಮಾಪಕರಿಗೆ ಇದೊಂಥರಾ ನಿಲ್ಲದ ಹಿಂಸೆ ಅರ್ಥಾತ್ ಮುತ್ತು ಟಾರ್ಚರ್!

ಮೊದಲಿನಿಂದಲೂ ಯಾರಾದರು ಫೋನ್ ಕಾಲ್ ಮಾಡಿದರೆ ಅಟೆಂಡ್ ಮಾಡುವ ಅಭ್ಯಾಸ ದಿಗಂತ್‌ಗೆ ಇಲ್ಲ. ಆದ್ದರಿಂದ ಎಲ್ಲರೂ ಮುತ್ತು ನಂಬರ್‌ಗೆ ಅನಿವಾರ್ಯವಾಗಿ ಕರೆ ಮಾಡ್ತಾರೆ. ಅದೇ ಮುತ್ತುಗೆ ಆಮದನಿ ತಂದುಕೊಡುತ್ತಿದೆ.

ತನ್ನೆಲ್ಲ ವ್ಯವಹಾರಗಳನ್ನು ಕರೆಕ್ಟಾಗಿ (?) ನೋಡಿಕೊಳ್ಳುತ್ತಿರುವ ಮುತ್ತುವಿನ ಮೇಲೆ ದಿಗಂತ್ ಕೂಡ ಡಿಪೆಂಡ್ ಆಗಿದ್ದಾರೆ. ಚಿತ್ರರಂಗದಲ್ಲಿ ದಿಗಂತ್‌ಗೆ ಇರುವ ಎಲ್ಲಾ ಕಾಂಟ್ಯಾಕ್ಟನ್ನು ಮೇಂಟೇನ್ ಮಾಡೋದು ಇದೇ ಕಮಿಷನ್ ಏಜೆಂಟ್ ಮುತ್ತು. ಈಗಾಗಲೇ ಫೋರ್‌ಟ್ವೆಂಟಿ ಮುತ್ತು ವಿರುದ್ಧ ಹಲವಾರು ದೂರುಗಳು ದಿಗಂತ್ ಹತ್ತಿರ ಹೋಗಿದ್ರೂ, ದಿಗಂತ್ ಮುತ್ತುಗೆ ವಾರ್ನ್ ಮಾಡಿದ್ದೂ ಆಗಿದೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಮುತ್ತುವಿನ ಆಟಕ್ಕೆ ತಡೆಯಿಲ್ಲ.


ಇಂಥ ಮುತ್ತು ಎಂಬ ಆಸಾಮಿಯಿಂದ ಚಲನಚಿತ್ರ ವಾಣಿಜ್ಯ ಮಂಡಳಿ ದಿಗಂತ್‌ನನ್ನು ಕಾಪಾಡಬೇಕಿದೆ. ಹಾಳಾಗುತ್ತಿರುವ ದಿಗಂತ್‌ನ ಇಮೇಜನ್ನು ಉಳಿಸಬೇಕಿದೆ. ದಿಗಂತ್ ಇನ್ನಾದರೂ ಇಂಥ ಕ್ರಿಮಿಗಳನ್ನು ದೂರವಿಟ್ಟು ತನಗಿರುವ ಅಲ್ಪಸ್ವಲ್ಪ ಮಾರ್ಕೆಟನ್ನಾದರೂ ಉಳಿಸಿಕೊಳ್ಳಲಿ...

ರವಿಚಂದ್ರನ್ ಈಗ ಪರಮಹಂ

'ಗೊಂಬೆಗಳ ಲವ್' ಎಂಬ ಸಿನಿಮಾ ಮೂಲಕ ಚಿತ್ರವಿಮರ್ಶ
ಗಮನ ಸೆಳೆದಿದ್ದ ಯುವ ನಿರ್ದೇಶಕ ಸಂತೋಷ್ ಈಗ ರವಿಚಂದ್ರನ್ ಅ
ಜೊತೆ ಒಂದು ಸಿನಿಮಾ ಮಾಡಲು ತಯಾರಿ ನಡೆಸುತ್ತಿದ್ದಾರೆಂದು
ಇದೆ. ಚಿತ್ರದ ಶೀರ್ಷಿಕೆ 'ಪರಮಹಂಸ'. ರವಿಚಂದ್ರನ್ ಅವರು ಮ
ಹೀರೋ ಆದರೆ ಸೆಕೆಂಡ್ ಹೀರೋ ಆಗಿ 'ಗೊಂಬೆಗಳ ಲವ್' ಚಿ
ನಿರ್ಮಾಪಕ ಅಜಯ್ ರಾಜ್ ಅರಸ್ ನಟಿಸಲಿದ್ದಾರೆ ಎಂಬ ಮಾತುಗ
ಕೇಳಿಬರುತ್ತಿವೆ. ಚಿತ್ರದ ಕಥೆಯ ಬಗ್ಗೆಯಾಗಲಿ, ತಂತ್ರಜ್ಞರ ಬಗ್ಗೆಯಾಗ
ಮಾಹಿತಿಗಳು ಹೊರಬೀಳಬೇಕಿದೆ.

ಅಂದಹಾಗೆ, 'ಗೊಂಬೆಗಳ ಲವ್' ಚಿತ್ರ ಬಿಡುಗಡೆಯಾದಾಗ ರವಿಚಂ
ಆ ಚಿತ್ರವನ್ನು ನೋಡಿ ಮೆಚ್ಚುಗೆಯ ಮಾತುಗಳನ್ನಾಡಿದ್ದರು.

ಮಾಧ್ಯಮಗಳ ಮುಂದು ಅಂದು ರವಿಚಂದ್ರನ್ ಅವರು "'ಗೊಂಬೆ



ಲವ್' ಅಚ್ಚುಕಟ್ಟಾದ ಸಿನಿಮಾ. ಹೀಗೆ ಬಂದು ಹಾಗೆಹೋಗುವ ಹೊ
ಸಿನಿಮಾಗಳ ಪೈಕಿ ಈ ಚಿತ್ರ ನನಗೆ ವಿಶೇಷವಾಗಿ ಕಾಣುತ್ತದೆ. ತಮಿಳುನಾಡ
ಸ್ಟಾರ್‌ಗಳ ಚಿತ್ರಗಳ ಜೊತೆಗೆ ಹೊಸಬರ ಚಿತ್ರಗಳೂ ಸದ್ದು ಮಾಡು
ತಮ್ಮದೇ ಆದ ಛಾಪನ್ನು ಮೂಡಿಸುತ್ತವೆ. ಅದು ನಿಜಕ್ಕೂ ಒಳ್ಳೆಯ ಬೆಳವ
ಕನ್ನಡದಲ್ಲೂ ಅಂತದ್ದು ನಡೆಯಬೇಕಿದೆ. 'ಗೊಂಬೆಗಳ ಲವ್' ಆ ಕ
ಮಾಡಿದೆ. ಒಂದು ಸಿನಿಮಾ ನೋಡುವಾಗ, ಚಿತ್ರದ ತುಂಬಾ ನಿರ್ದೇ
ಕಾಣಬೇಕು. ಆತನ ಐಡಿಯಾಗಳು ಕಾಣಬೇಕು. ಆ ಮಟ್ಟಿಗೆ 'ಗೊಂಬೆ
ಲವ್' ನನ್ನ ನಿರೀಕ್ಷೆಯನ್ನು ಒಂದು ಮಟ್ಟಿಗೆ ಫುಲ್‌ಫಿಲ್ ಮಾಡಿದೆ. ಹೊಸ
ತಂಡ ಒಳ್ಳೆಯ ಸಿನಿಮಾ ಮಾಡಿದೆ" ಎಂದಿದ್ದರು.

ಅಷ್ಟೇ ಅಲ್ಲ, ತಾವೇ ಆ ಚಿತ್ರದ ನಿರ್ದೇಶಕ ಸಂತೋಷ್ ಅವ
ಕರೆದು ತಮಗೆ ಒಂದು ಸಿನಿಮಾ ಮಾಡಿಕೊಡುವಂತೆ ಕೇಳಿಕೊಂಡಿದ
ಇದು ನಿಜಕ್ಕೂ ಅಭಿನಂದನಾರ್ಹ. ಸ್ವತಃ ತಾವೇ ನಿರ್ದೇಶಕರಾಗಿದ್ದರೂ ಹೊಸ
ಪ್ರತಿಭೆಯನ್ನು ಗುರುತಿಸಿ ಅವರ ಬೆನ್ನು ತಟ್ಟಿದ ರವಿಚಂದ್ರನ್ ಚಿತ್ರರಂಗದಲ್ಲಿ
ಇತರರಿಗಿಂತ ವಿಶೇಷವಾಗಿ ಕಾಣಿಸುತ್ತಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com